ಲಂಕೇಶ್

ಸೆಪ್ಟೆಂಬರ್ 8, 2010 ರೂ. 12/-

ವಿರಲ ಹೆಗ್ಗಡೆ
ಮಲೆನಾಡಿನ
ಮಳೆ



ಉಪಚುನಾವಣೆ
ಮಣ್ಣುಮುಕ್ಕಲಿದೆ ಬಿಜೆಪಿ

ಕುವೆಂಪು
ತೇಜಸ್ವಿ ಹೆಸರಲ್ಲಿ
ಶೆಟ್ಟರ್ ಲೂಟಿ

ಭ್ರಷ್ಟ ಮಗನ ಪರ
ಮುದಿ ದೇಜಗೌ

ಗೋವಿಂದರಾಜು ಕೊಲೆ ಯತ್ನ
ಬಾಂಬ್ ನಾಗನ ಕಿಲ್ಲರ್‌ಗ್ಯಾಂಗ್

ಮಂಡ್ಯ: ಕೆಟಿಎಸ್
ರಾಜಕೀಯಕ್ಕೆ
ಒಬ್ಬ ಬಲಿ


ಮಲ್ಲೇಶ್ವರ ನಾಶಕ್ಕೆ
ಮಂತ್ರಿ ಮಾಲ್

ರಕ್ತವನು ಹರಿಸೋ ಹನುಮಂತ!

ಬಿಜೆಪಿ ಷಡ್ಯಂತ್ರ



ಕಷ್ಟ ತಿಂದು ತೆಪ್ಪಗಿರೋನ 'ಓರಾಟ'ಗಾಥೆ!



ಯಂದಿರನ್ ಕೆಡವಲು ತಮಿಳರ ಸಂಚು!

"ಗೋಹತ್ಯೆ, ಸುಪ್ರೀಂ ಕೋರ್ಟು ಮತ್ತು ಸಂವಿಧಾನ"

ಬಿಜೆಪಿ ಹೇಳುತ್ತಿರುವ ಹಸಿಸುಳ್ಳುಗಳು ಮತ್ತು ಅರ್ಧ ಸತ್ಯಗಳು

ಬಿಜೆಪಿ ಪಕ್ಷದ ಪ್ರಣಾಳಿಕೆ, ಸಂವಿಧಾನ ಮತ್ತು ತತ್ವ ಸಿದ್ಧಾಂತಗಳು ನಿಂತಿರುವುದೇ ಹಸಿಸುಳ್ಳುಗಳು ಮತ್ತು ಅರ್ಧಸತ್ಯಗಳ ಮೇಲೆ. ಆದರೆ ಹಿಟ್ಲರನ ಪಕ್ಕಾ ಅನುಯಾಯಿಗಳಾಗಿರುವ ಈ ಆಧುನಿಕ ಫ್ಯಾಸಿಸ್ಟರು ಸುಳ್ಳುಗಳನ್ನೇ ಸಾವಿರ ಬಾರಿ ಪಲುಕುತ್ತಾ ಅದನ್ನೇ ಪರಮಸತ್ಯವೆಂದು ಜನರನ್ನು ನಂಬಿಸಿ ದಾರಿತಪ್ಪಿಸುತ್ತಿದ್ದಾರೆ. ಇವರು ಎಂಥಾ ನೀತಿಹೀನ ಮತ್ತು ಲಜ್ಜೆಗೆಟ್ಟ ಸುಳ್ಳುಕೋರರು ಎಂದರೆ ತಮ್ಮ ಅನುಕೂಲಕ್ಕೆ ತಕ್ಕಂತೆ ಇತಿಹಾಸವನ್ನೂ, ಸಂವಿಧಾನವನ್ನೂ ಮತ್ತು ಕೋರ್ಟುಗಳ ತೀರ್ಮಾನಗಳನ್ನೂ ತಿರುಚಬಲ್ಲರು ಮತ್ತು ಹಸಿಹಸಿ ಸುಳ್ಳುಗಳನ್ನು ಹೇಳಬಲ್ಲರು.

ಇದೀಗ ತಮ್ಮ ಈ ಗೋಬೆಲ್ಸ್ ಶಸ್ತ್ರಾಸ್ತ್ರಗಳನ್ನು ಅವರು ಸಂಪೂರ್ಣ ಗೋಹತ್ಯಾ ನಿಷೇಧಕ್ಕಾಗಿ ನಡೆಸುತ್ತಿರುವ ಪ್ರಚಾರದಲ್ಲಿ ಬಳಸಿಕೊಳ್ಳುತ್ತಿದ್ದಾರೆ. ಕರ್ನಾಟಕ ಜನತೆಯ ಸತತ ಪ್ರತಿರೋಧ ಮತ್ತು ನಿರಂತರ ಹೋರಾಟಕ್ಕೆ ಮಣಿದು ಸಂಪೂರ್ಣ ಗೋಹತ್ಯೆ ನಿಷೇಧಕ್ಕಾಗಿ ಬಿಜೆಪಿ ಸರ್ಕಾರ ತರುತ್ತಿರುವ ಮಸೂದೆಯನ್ನು ರಾಜ್ಯಪಾಲರು "ಶಾಸನವಾಗಲು ಅನರ್ಹವಾಗಿರುವ ಮತ್ತು ದೇಶದ ಜನತೆಯ ಮೂಲಭೂತ ಹಕ್ಕುಗಳಿಗೆ ಚ್ಯುತಿ ತರುವ ಅಂಶಗಳಿವೆ" ಎಂಬ ಟಿಪ್ಪಣಿಯೊಂದಿಗೆ ರಾಷ್ಟ್ರಪತಿಯವರ ಅವಗಾಹನೆಗಾಗಿ ಕಳಿಸಿಕೊಟ್ಟಿದ್ದಾರೆ. ಇದಾಗಿ ವಾರಗಳೇ ಉರುಳಿದ್ದರೂ ಸುಮ್ಮನಿದ್ದ ಬಿಜೆಪಿ ಉಪಚುನಾವಣೆಗಳು ಘೋಷಣೆಯಾದೊಡನೆ ಸತ್ತ ಗೋವನ್ನು ಬಡಿದೆಬ್ಬಿಸಿ ತಮ್ಮ ಚುನಾವಣಾ ಪ್ರಚಾರಕ್ಕೆ ಅಟ್ಟಿಕೊಂಡು ಬರುತ್ತಿದ್ದಾರೆ. ಈ ಮೊದಲು ತಮ್ಮ ಸಾಧನೆಯ ಆಧಾರದ ಮೇಲೆ ಜನರ ಬಳಿ ಹೋಗುತ್ತೇವೆ ಎನ್ನುತ್ತಿದ್ದ ಈ ಕೋಮುವಾದಿಗಳು ತಮ್ಮ ಸಾಧನಾ ಸಮಾವೇಶಕ್ಕೆ ಜನರು ಬರುವುದೇ ಕಷ್ಟ ಎಂಬುದು ಅರ್ಥವಾದೊಡನೆ ಗೋಹತ್ಯೆ ನಿಷೇಧ ಎಂಬ ಕೋಮುವಾದಿ ವಿಷಯವನ್ನೇ ಎಲೆಕ್ಷನ್ ಅಜೆಂಡಾ ಮಾಡುತ್ತಿದ್ದಾರೆ.

ಈ ನಿಟ್ಟಿನಲ್ಲಿ ಸೆಪ್ಟೆಂಬರ್ 1 ರಿಂದ 5ರವರೆಗೆ ರಾಜ್ಯಾದ್ಯಂತ ಹೋರಾಟ ಮತ್ತು ಪ್ರದರ್ಶನಗಳನ್ನೂ ಮತ್ತು ಸೆಪ್ಟೆಂಬರ್ 6 ರಂದು ಬೆಂಗಳೂರಿನಲ್ಲಿ ಬೃಹತ್ ಸಮಾವೇಶವನ್ನೂ ಆಯೋಜಿಸಿದ್ದಾರೆ. ಆ ಮೂಲಕ ಈ ಮಸೂದೆಯನ್ನು ವಿರೋಧಿಸುವ ಪಕ್ಷಗಳು ಹಿಂದೂ ವಿರೋಧಿಗಳೆಂದೂ ಮತ್ತು ತಾವು ಮಾತ್ರ ಹಿಂದೂಪರ ಪಕ್ಷವೆಂದೂ ಪ್ರಚಾರ ಮಾಡುತ್ತಾ ಹಿಂದೂ ಓಟ್ ಬ್ಯಾಂಕನ್ನು ತನ್ನೆಡೆಗೆ ಸೆಳೆದುಕೊಳ್ಳುವ ತನ್ನ ಹಳೆ ತಂತ್ರಕ್ಕೆ ಮರಳಿದೆ. ಆದರೆ ಈ ಪ್ರಚಾರದಲ್ಲಿ ಸಂವಿಧಾನದ ಬಗ್ಗೆ ಮತ್ತು ಕೋರ್ಟು ಹಾಗೂ ಕಾನೂನುಗಳ ಬಗ್ಗೆ ಹತ್ತು ಹಲವು ಸುಳ್ಳುಗಳನ್ನು ಮತ್ತು ಅಪವ್ಯಾಖ್ಯಾನಗಳನ್ನು ಬಿಜೆಪಿ ಮಾಡುತ್ತಿದೆ. ಹೀಗಾಗಿ ಗೋಹತ್ಯೆ ನಿಷೇಧದ ಕುರಿತು ಮತ್ತು ಬಿಜೆಪಿ ನಡೆಸುತ್ತಿರುವ ಪ್ರಚಾರದಲ್ಲಿ ಇರುವ ಹಸಿಸುಳ್ಳುಗಳನ್ನು ಮತ್ತು ಅರ್ಧಸತ್ಯಗಳನ್ನು ಬಯಲುಗೊಳಿಸುವ ತುರ್ತು ಅಗತ್ಯವಿದೆ.

ಮೊದಲನೆಯದಾಗಿ ಸದರಿ ಮಸೂದೆಯನ್ನು "ಗೋಹತ್ಯಾ ನಿಷೇಧ ಮಸೂದೆ" ಎಂದು ಕರೆಯುತ್ತಿರುವುದೇ ತಪ್ಪು. 1964ರಲ್ಲಿ ಕರ್ನಾಟಕ ಸರ್ಕಾರ ಗೋಹತ್ಯೆಯನ್ನು ನಿಷೇಧಿಸಲು ಕಾಯಿದೆಯನ್ನು ಮಾಡಿತ್ತು, ಅದರ ಹೆಸರು **"Karnataka Prevention of Cow slaughter abd Preservation of Cattle Act-1964"** ("ಕರ್ನಾಟಕ ಗೋಹತ್ಯಾ ನಿಷೇಧ ಮತ್ತು ಜಾನುವಾರು ಸಂರಕ್ಷಣಾ ಕಾಯಿದೆ"). ಈ ಕಾಯಿದೆಯ ಪ್ರಕಾರ ಹಸು ಮತ್ತು ಕರುಗಳನ್ನು ಹೊರತುಪಡಿಸಿ 12 ವರ್ಷಕ್ಕೆ ಮೇಲ್ಪಟ್ಟ ದನ, ಗೂಳಿ, ಎಮ್ಮೆ ಮತ್ತು ಕೋಣಗಳನ್ನು ಸೂಕ್ತ ಪರವಾನಗಿಯೊಂದಿಗೆ ಕಡಿಯಬಹುದಾಗಿತ್ತು, ಅಂದರೆ ಸ್ಪಷ್ಟವಾಗಿ ಕಾಣುವಂತೆ 1964ರ ಕಾನೂನಿನಲ್ಲೇ ಗೋಹತ್ಯಾ ನಿಷೇಧದ ಎಲ್ಲಾ ಅಂಶಗಳೂ ಇದ್ದವು. ವಾಸ್ತವವಾಗಿ 1964ರ ಈ ಕಾನೂನೂ ಸಹ ಸಮಸ್ಯಾತ್ಮಕವಾಗಿದ್ದು ಅದನ್ನೇ ಪ್ರಶ್ನಿಸಬೇಕಾದ ಅಗತ್ಯವಿದೆ. ವಿಷಯ ಹೀಗಿರುವಾಗ 2009ರ ಫೆಬ್ರವರಿಯಲ್ಲಿ ಬಿಜೆಪಿ ಸರ್ಕಾರ ಈ ಮೂಲ ಕಾಯಿದೆಗೆ ಕೆಲವು ತಿದ್ದುಪಡಿಗಳನ್ನು ತರಲು ಯತ್ನಿಸಿತು. ಅದರಲ್ಲಿ ಮುಖ್ಯವಾದದ್ದು ಖಾಸಗಿ ವ್ಯಕ್ತಿಗಳನ್ನು ಸಹ ಗೋಹತ್ಯಾ ನಿಷೇಧ ಕಾಯಿದೆಯನ್ನು ಜಾರಿಗೆ ತರಲು ಅಧಿಕೃತವಾಗಿ ನೇಮಿಸುವುದು ಮತ್ತು ಈ ಕಾಯಿದೆಯನ್ವಯ ಜಿಲ್ಲಾ ಕೋರ್ಟೇ ಈ ವಿಷಯದಲ್ಲಿ ಅಂತಿಮ ಅಪೀಲು ಎಂಬುದು ಬಹುಮುಖ್ಯವಾದ ಮತ್ತು ಅತ್ಯಂತ ಅಪಾಯಕಾರಿಯಾದ ತಿದ್ದುಪಡಿಗಳಾಗಿತ್ತು, ಇದರ ವಿರುದ್ಧವೇ ರಾಜ್ಯಾದ್ಯಂತ ಜನವರಿ ಮತ್ತು ಫೆಬ್ರವರಿ ತಿಂಗಳಲ್ಲಿ ಜನತೆ ಹೋರಾಟ ಪ್ರಾರಂಭಿಸಿದ್ದರು. ಇದನ್ನೆಲ್ಲಾ ಗಮನಿಸಿದ ಬಿಜೆಪಿ ಸರ್ಕಾರ ಕಾನೂನು ಪಂಡಿತರ ಸಲಹೆಯನ್ನೂ ತೆಗೆದುಕೊಂಡು 2010ರ ಮಾರ್ಚ್ 4ರಂದು ಈ ತಿದ್ದುಪಡಿ ಮಸೂದೆಯನ್ನೂ ವಾಪಸ್ ತೆಗೆದುಕೊಂಡು ಅದರ ಬದಲಿಗೆ **"Karnataka Prevenetion of Slaughter And Preservation of Cattle Bill- 2010"** ("ಕರ್ನಾಟಕ ಜಾನುವಾರು ಹತ್ಯಾ ಣಿಷೇಧ ಮತ್ತು ಸಂರಕ್ಷಣಾ ಕಾಯಿದೆ-2010") ಎಂಬ ಮಸೂದೆಯನ್ನು ಮಾರ್ಚ್ 10ರಂದು ಸದನದಲ್ಲಿ ಮಂಡಿಸಿತು. ವಿರೋಧ ಪಕ್ಷಗಳ ಒಕ್ಕೊರಲ ವಿರೋಧದ ನಡುವೆಯೂ ಮಾರ್ಚ್ 19ರಂದು ಅದಕ್ಕೆ ಮಂಜೂರಾತಿ ಪಡೆದುಕೊಂಡಿತು. ನಂತರ ಅದನ್ನು ವಿಧಾನ ಪರಿಷತ್ತಿನಲ್ಲೂ ಮಂಡಿಸಲಾಯಿತಾದರೂ ಆಗ ಬಿಜೆಪಿಗೆ ಪರಿಷತ್ತಿನಲ್ಲಿ ಬಹುಮತವಿರಲಿಲ್ಲವಾದ್ದರಿಂದ ಅದನ್ನು ಚರ್ಚೆಗೆ ತರಲಿಲ್ಲ, ಜೂನ್ ತಿಂಗಳಲ್ಲಿ ವಿಧಾನ ಪರಿಷತ್ತಿಗೆ ಚುನಾವಣೆಗಳು ನಡೆದು ಅಲ್ಲಿಯೂ ಬಿಜೆಪಿಗೆ ಬಹುಮತ ಸಿಕ್ಕ ಮೇಲೆ ಸಕಲ ವಿರೋಧದ ನಡುವೆಯೂ ಅಲ್ಲಿಯೂ ಈ ಮಸೂದೆಯನ್ನು ಬಿಜೆಪಿ ಸರ್ಕಾರ ಪಾಸು ಮಾಡಿಸಿಕೊಂಡಿತು.

ಹೀಗಾಗಿ ಈಗ ಬಿಜೆಪಿ ಸರ್ಕಾರ ತರಬೇಕೆಂದಿರುವುದು ಕೇವಲ "ಗೋಹತ್ಯಾ ನಿಷೇಧ" ಮಸೂದೆಯಲ್ಲ, ಬದಲಿಗೆ ಕರ್ನಾಟಕ ಜಾನುವಾರು ಹತ್ಯಾ ನಿಷೇಧ ಮತ್ತು ಸಂರಕ್ಷಣಾ ಕಾಯಿದೆ-2010! ಇಲ್ಲಿ ಜಾನುವಾರು ಎಂದರೆ ಗೋವು ಮಾತ್ರವಲ್ಲ, ಹಸು, ದನ, ಕರುಗಳು ಮತ್ತು ಇವುಗಳ ಜೊತೆಗೆ ಎಮ್ಮೆ, ಕೋಣಗಳನ್ನು ಸೇರಿಸಿ ಜಾನುವಾರು ಎಂದು ಕರೆಯಲಾಗಿದೆ. ಹೀಗಾಗಿ ಇದು ಕೇವಲ ಗೋಹತ್ಯಾ ನಿಷೇಧ ಮಸೂದೆಯಲ್ಲ, ಬದಲಿಗೆ ಎಲ್ಲಾ ಜಾನುವಾರುಗಳ ಹತ್ಯೆಯನ್ನೂ ನಿಷೇಧಿಸುವ ಕಾಯಿದೆಯಾಗಿದೆ. ಮಾತ್ರವಲ್ಲ ಈ ಯಾವುದೇ ಪ್ರಾಣಿಗಳ ಮಾಂಸವನ್ನು ತಿನ್ನುವುದನ್ನೂ ಈ ಮಸೂದೆ ಶಿಕ್ಷಾರ್ಹ ಅಪರಾಧವನ್ನಾಗಿಸುತ್ತದೆ. ಅಂದರೆ ಇದು ಕೇವಲ ಹತ್ಯೆಯನ್ನು ನಿಷೇಧಿಸುವ ಮಸೂದೆಯಲ್ಲ, ಬದಲಿಗೆ ಇಲ್ಲಿ ಜಾನುವಾರು ಎಂದು ಕರೆಯಲ್ಪಡುವ ಯಾವುದೇ ಪ್ರಾಣಿಗಳ ಮಾಂಸವನ್ನು ತಿನ್ನುವುದನ್ನೇ ನಿಷೇಧಿಸುತ್ತದೆ.

ಭಾಗ 1


ಎರಡನೆಯದಾಗಿ ಈ ಮಸೂದೆಯನ್ನು ಬಿಜೆಪಿ ಸರ್ಕಾರ ರೈತರ ಹಿತದೃಷ್ಟಿಯಿಂದಲೇ ತರುತ್ತಿದೆ ಎಂಬುದು ಬಿಜೆಪಿಯ ಬಹುಮುಖ್ಯ ಅಪಪ್ರಚಾರ. ಈ ಜಾನುವಾರು ಸಂರಕ್ಷಣಾ ಮಸೂದೆಯಲ್ಲಿರುವ ಪ್ರತಿ ಕಲಮೂ ರೈತರನ್ನು ಬೀದಿಪಾಲು ಮಾಡುತ್ತದೆ ಮತ್ತು ಜೈಲುಪಾಲು ಮಾಡುತ್ತದೆ.

ಈ ಕಾಯಿದೆಯ ಅತಿಘೋರ ರೈತವಿರೋಧೀ ಅಂಶವು ಮಸೂದೆಯ ಸೆಕ್ಷನ್ (8) ರಲ್ಲಿದೆ. ಅದರ ಪ್ರಕಾರ ಈ ಮಸೂದೆಯು ಕಾನೂನಾದರೆ "ಜಾನುವಾರುಗಳನ್ನು ಕೊಲ್ಲುವ ಉದ್ದೇಶದಿಂದ ಮಾರುವುದು, ಕೊಳ್ಳುವುದು ಅಥವಾ ಪರಭಾರೆ ಮಾಡುವುದುನ್ನು ನಿಷೇಧಿಸುತ್ತದೆ". ಅದನ್ನು ಶಿಕ್ಷಾರ್ಹ



ಕೃಪೆ: ಪ್ರಜಾವಾಣಿ

ಅಪರಾಧವನ್ನಾಗಿಸುತ್ತದೆ. ಅಂದರೆ ಇನ್ನು ಮುಂದೆ ಮುದಿಗೊಡ್ಡಾಗಿರುವ ದನಗಳನ್ನು ಪರಭಾರೆ ಮಾಡುವ ರೈತನೂ ಅಪರಾಧಿಯಾಗಲಿದ್ದಾನೆ. ಏಕೆಂದರೆ ಸೆಕ್ಷನ್ (8)ರ ವಿವರಣೆಯ ಪ್ರಕಾರ ದನಗಳನ್ನು ಕೊಲ್ಲುವ ಉದ್ದೇಶಕ್ಕೆ ಮಾರಿದರೆ ಮಾತ್ರವಲ್ಲ ಆ ದನಗಳನ್ನು ಕೊಲ್ಲುವ ಉದ್ದೇಶಕ್ಕೆ ಕೊಳ್ಳಲಾಗುತ್ತಿದೆ ಎಂದು "ಗೊತ್ತಿದ್ದರೆ, ಅಥವಾ ದನಗಳನ್ನು ಕೊಲ್ಲಲೆಂದೇ ಕೊಳ್ಳಲಾಗುತ್ತಿದೆ ಎಂದು ನಂಬುವ ಕಾರಣವಿದ್ದೂ" ಮಾರಿದರೂ ಸಹ ಈ ಕಾಯಿದೆ ಅದನ್ನು ಶಿಕ್ಷಾರ್ಹ ಅಪರಾಧವನ್ನಾಗಿಸುತ್ತದೆ. ಆದರೆ ರೈತನಿಗೆ ಗೊತ್ತಿದ್ದೂ ಮಾರಿದ್ದಾನೆ ಎಂದು ಮತ್ತು ಕೊಲ್ಲಲೆಂದು ಕೊಳ್ಳಲಾಗುತ್ತಿದೆ ಎಂದು ನಂಬುವ ಕಾರಣವಿತ್ತು ಎಂಬುದನ್ನು ನಿರ್ಧರಿಸುವವರು ಯಾರು? ಅಪರಾಧವನ್ನು ತಡೆಗಟ್ಟಲು ಬರುವ ಸಬ್ ಇನ್‌ಸ್ಪೆಕ್ಟರ್ ಅಥವಾ ಇತರ ಅಧಿಕಾರಿಗಳು! ಅಂದರೆ ಈಗಾಗಲೇ ಆತ್ಮಹತ್ಯೆಯ ಅಂಚಿನಲ್ಲಿರುವ ರೈತನ ಬದುಕು ಪೋಲೀಸ್ ಅಧಿಕಾರಿಗಳ ಮತ್ತು ಸರ್ಕಾರದ ಮರ್ಜಿಗೆ ಬೀಳುತ್ತದೆ.

ಶಿವಸುಂದರ್

ಇದರಿಂದಲೇ ಈ ಪುರೋಹಿತರ ಸರ್ಕಾರಕ್ಕೆ ರೈತ ಬದುಕಿನ ಕಷ್ಟಗಳ ಬಗ್ಗೆ ಕಿಂಚಿತ್ತೂ ಅರಿವಿಲ್ಲವೆಂಬುದು ಗೊತ್ತಾಗುತ್ತದೆ. ಒಂದು ಹಾಲುಕೊಡುವ ಹಸು ಅಥವಾ ಉಳುಮೆಗೆ ಹೆಗಲಾಗುವ ದನ ಎರಡೂ ರೈತನ ಬದುಕನ್ನು ಪೋಷಿಸುತ್ತವೆ. ಆದರೆ ಹಾಲು ಕೊಡದ ಹಸು ಮತ್ತು ಉಳುಮೆಗೆ ಈಡಾಗದ ದನವನ್ನು ಸಾಕುವುದು ಈಗಾಗಲೇ ಸಾಯುತ್ತಾ ಸಾಯುತ್ತಾ ಬದುಕಿರುವ ರೈತನಿಗೆ ಎಷ್ಟು ಹೊರೆಯಾಗುತ್ತದೆಂಬುದರ ಅರಿವೇ ಈ ಸರ್ಕಾರಕ್ಕಿಲ್ಲ. ಸರ್ಕಾರದ ಅಂಕಿಅಂಶಗಳ ಪ್ರಕಾರ ನಮ್ಮ ಹಳ್ಳಿಗಾಡಿನಲ್ಲಿ ಬದುಕುತ್ತಿರುವ ಮುಕ್ಕಾಲುವಾಸಿ ಜನರ ದಿನದ ಸರಾಸರಿ ಆದಾಯ ಕೇವಲ 20 ರೂಪಾಯಿ. ಇದರಲ್ಲಿ ಮನೆಮಂದಿಯೆಲ್ಲಾ ಮೂರುಹೊತ್ತು ಅರೆಹೊಟ್ಟೆ ಊಟಮಾಡಲೂ ಆಗುವುದಿಲ್ಲ, ಇದರ ಜೊತೆಗೆ ಯಾವ ರೀತಿಯಲ್ಲೂ ಉಪಯೋಗವಿಲ್ಲದ ದನ-ಹಸುಗಳನ್ನು ಸಾಕಬೇಕೆಂದರೆ ದಿನಕ್ಕೆ ಏನಿಲ್ಲವೆಂದರೂ 30-50 ರೂ. ಖರ್ಚಾಗುತ್ತದೆ. ಇದನ್ನು ಭರಿಸುವವರು ಯಾರು?

ಅದಕ್ಕಿಂತ ಮುಖ್ಯವಾದದ್ದು ಮತ್ತೊಂದಿದೆ. ಗೊಡ್ಡಾದ ದನ-ಹಸುಗಳನ್ನು ಮಾರದಿದ್ದರೆ ಬೇಸಾಯಕ್ಕೆ ಬೇಕಾದ ಹೊಸ ಜಾನುವಾರುಗಳನ್ನು ಕೊಂಡುಕೊಳ್ಳಲು ರೈತನಿಗೆ ಎಲ್ಲಿಂದ ದುಡ್ಡು ಬರಬೇಕು? ಒಂದು ಕಡೆ ಗೊಡ್ಡಾದ ದನಗಳನ್ನೂ ಸಾಕಬೇಕು, ಮತ್ತೊಂದು ಕಡೆ ಬೇಸಾಯ ಮುಂದುವರೆಸಲೂ ಬೇಕಾದ ಹೊಸ ರಾಸುಗಳನ್ನು ಕೊಳ್ಳಲೂ ಹಣವಿಲ್ಲ, ಈ ಇಕ್ಕಟ್ಟಿನ ಸಂದರ್ಭದಲ್ಲಿ ರೈತ ಒಂದು ವೇಳೆ ದನವನ್ನು ಮಾರಿದರೆ ಅವನನ್ನು ಮುಲಾಜಿಲ್ಲದೆ ಜೈಲಿಗೆ ತ ಎನ್ನುತ್ತದೆ ಈ ಕಾಯಿದೆ!

ಇಷ್ಟು ಮಾತ್ರವಲ್ಲ, ಈ ರಾಜ್ಯದ ಬಹುಪಾಲು ರೈತರು ಕೃಷಿಯೊಂ ಉಪಕಸುಬಾಗಿ ಹೈನುಗಾರಿಕೆಯನ್ನು ಅವಲಂಬಿಸಿದ್ದಾರೆ. ಹೈನುಗಾರಿಕೆಯ ನಾಟಿ ಹಸುಗಳಿಗಿಂತ ಹೆಚ್ಚು ಹಾಲು ಕೊಡುವ ಜರ್ಸಿ ಅಥವಾ ಸಿ ಹಸುಗಳೇ ಮುಖ್ಯ. ಇವುಗಳು ಹಾಲನ್ನು ಕೊಟ್ಟರೂ ಕೊಡದಿದ್ ನಾಟಿ ಹಸುಗಳ ಮೂರುಪಟ್ಟು ಮೇವನ್ನು ತಿನ್ನುತ್ತವೆ. ಎಲ್ಲಿಯತನಕ ಅ ಹಾಲನ್ನು ಕೊಡುತ್ತಿರುತ್ತವೋ ಅಲ್ಲಿಯವರೆಗೆ ಅವುಗಳನ್ನು ಸಾಕುವುದು ಅ ಕಷ್ಟವಲ್ಲ, ಆದರೆ ಒಮ್ಮೆ ಅವು ಗೊಡ್ಡಾದ ನಂತರ ಅವುಗಳು ಮೇ ತಿನ್ನುವ ಪ್ರಮಾಣವೇನೂ ಕಡಿಮೆಯಾಗುವುದಿಲ್ಲ, ಹೀಗಾಗಿ ಆದಾಯವಿ ಇಲ್ಲದಿರಲಿ ರೈತ ಆ ಸೀಮೆಹಸುಗಳನ್ನು ಸಾಕಲೇ ಬೇಕೆಂದರೆ ರೈತಾಪಿ ಕುಟುಂಬದ ಆರ್ಥಿಕತೆಯ ಮೇಲೆ ಎಂಥಾ ದುಷ್ಟ ಪ್ರಭಾವ ಬೀರಬ ದೆಂಬುದನ್ನು ಸರ್ಕಾರ ಯೋಚಿಸಿದೆಯೇ?

ಈ ಸೀಮೆಹಸುಗಳ ಗಂಡುಕರುಗಳು ಬೇಸಾಯದ ಬಳಕೆಗೂ ಬರುವುದಿ ಹಾಲನ್ನೂ ಕೊಡುವುದಿಲ್ಲ, ಮೇವನ್ನು ಮಾತ್ರ ನಾಟಿ ಹಸುಗಳ ಮೂರುಪ ತಿನ್ನುತ್ತಲೇ ಇರುತ್ತವೆ. ಇವನ್ನು ರೈತ ಮಾರದಿದ್ದರೆ ಅವ ಬರುವ ಲಾಭವೆಲ್ಲಾ ಇವುಗಳನ್ನು ಸಾಕಲೆಂದೇ ಖರ್ಚಾಗುತ್ತ ಅಥವಾ ಅದಕ್ಕಿಂತ ಜಾಸ್ತಿಯಾಗುತ್ತದೆ. ಈ ಕಷ್ಟಗಳಿಂದ ತಪ್ಪಿಸಿಕೊಳ್ ರೈತನೇನಾದರೂ ಗಂಡುಕರುವನ್ನು ಮಾರಿದರೆ ಆತನಿಗೆ ಕಾಯಿದೆಯ ಪ್ರಕಾರ ಜೈಲುಶಿಕ್ಷೆ ಕಟ್ಟಿಟ್ಟಬುತ್ತಿ!

ಈ ಮಸೂದೆಯೇನಾದರೂ ಶಾಸನವಾದರೆ ಮೇಲೆ ಹೇ ಯಾವುದೇ ಸಂದರ್ಭದಲ್ಲೂ ರೈತನನ್ನು ಸ್ಥಳೀಯ ಸಬ್ ಇನ್ಸ್‌ಪೆಕ್ ಬಂಧಿಸಬಹುದು. ಈ ಮಸೂದೆಯ ಪ್ರಕಾರ ಇವೆಲ್ಲವೂ ಶಿಕ್ಷಾ ಅಪರಾಧವಾದ್ದರಿಂದ ಅವು ಜಾಮೀನು ರಹಿತ ಅಪರಾಧಗಳಾಗ ಇವುಗಳಿಗೆ ಜಿಲ್ಲಾ ಕೇಂದ್ರಗಳಲ್ಲಿರುವ ಪ್ರಥಮ ದರ್ಜೆ ಜುಡಿಷಿಯ ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲೇ ಜಾಮೀನು ಸಿಗಲು ಸಾ ಅಂದರೆ ಒಮ್ಮೆ ರೈತನನ್ನು ಯಾವುದಾದರೂ ಹಳ್ಳಿಯಲ್ಲಿ ಮೇ ಆರೋಪದಲ್ಲಿ ಬಂಧಿಸಿದರೆ ಅವನನ್ನು ಜಿಲ್ಲಾ ಕೇಂದ್ರಕ್ಕೆ ಕರೆತರಬೇ ಅಂದರೆ ಸುಮ್ಮನೆ ಅನುಮಾನದ ಮೇಲೆ ಬಂಧನವಾದರೂ ಕ ಎರಡು ಮೂರು ದಿನಗಳವರೆಗೆ ಜಾಮೀನು ಸಿಗುವುದಿ ಈಗಾಗಲೇ ಸಂಕಷ್ಟದಲ್ಲಿರುವ ರೈತ ಜಿಲ್ಲಾ ಕೇಂದ್ರದಲ್ಲಿ ವಕೀಲ ದುಬಾರಿ ಫೀಸು ತೆತ್ತು ಜಾಮೀನು ಮಾಡಿಸಿಕೊಳ್ಳಬೇಕು. ಇ ಎಷ್ಟು ರೈತರಿಗೆ ಸಾಧ್ಯ?

ರೈತರ ಕಷ್ಟ ಇಲ್ಲಿಗೇ ಮುಗಿಯಲಿಲ್ಲ, ಈ ಮಸೂದೆ ಅಂಶಗಳು ರೈತನು ಆತ್ಮಹತ್ಯೆ ಮಾಡಿಕೊಳ್ಳುವ ತನಕ ಬಿಡುವ ಕಾಣುವುದಿಲ್ಲ, ಈಗಾಗಲೇ ವಿವರಿಸಿದಂತೆ ರೈತ ಮುದಿಗೊಡ್ಡು ದನಗಳ ಯಾವ ಕಾರಣಕ್ಕೂ ಮಾರುವಂತಿಲ್ಲ, ಹಾಗಿದ್ದರೆ ಅವುಗಳನ್ನು ಏನು ಮಾಡಬೇಕು ಈ ಮಸೂದೆಯ ಸೆಕ್ಷನ್ (18)ರ ಪ್ರಕಾರ ಇಂಥಾ ದನಗಳನ್ನು ನೋಡಿಕೊಳ್ ಸರ್ಕಾರ ಅಥವಾ ಸರ್ಕಾರೇತರ ಸಂಸ್ಥೆ ಆಶ್ರಮಗಳನ್ನು ಸ್ಥಾಪಿಸುತ್ತವೆ. ರೈತ ತಮ್ಮ ಗೊಡ್ಡುದನಗಳನ್ನು ಕಡ್ಡಾಯವಾಗಿ ಈ ಆಶ್ರಮದಲ್ಲೇ ಬಿಡಬೇ ಅಷ್ಟುಮಾತ್ರವಲ್ಲ, ಅವುಗಳನ್ನು ನೋಡಿಕೊಳ್ಳಲು ರೈತ ಸರ್ಕಾರ ಅಥವಾ ಸಂಸ್ಥೆ ನಿಗದಿಪಡಿಸಿದಷ್ಟು ಶುಲ್ಕವನ್ನೂ ಪಾವತಿಸಬೇಕು!

ತಮ್ಮ ಮಕ್ಕಳ ಶಾಲಾ ಫೀಸನ್ನೆ ಪಾವತಿಸಲಾಗದಷ್ಟು ಸಂಕಷ್ಟದಲ್ಲಿರು ರೈತ ಈ ಶುಲ್ಕವನ್ನು ಹೇಗೆ ಭರಿಸಬಲ್ಲ? ಒಂದು ವೇಳೆ ರೈತ ಅ ಶುಲ್ಕವನ್ನು ಪಾವತಿಸಲಾಗದಿದ್ದರೆ ಸರ್ಕಾರದ ಕಣ್ಣಿನಲ್ಲಿ ಆತ ಅಪರಾಧಿಯಾಗುತ್ತ

ಅಕಸ್ಮಾತ್ ರೈತ ಬದುಕಿನ ಬೇಗುದಿ ತಡೆಯದೆ ತನ್ನ ದನಗಳನ್ನು ಮಾ ಬಿಟ್ಟರೆ ಎಷ್ಟು ಶಿಕ್ಷೆ? ಈ ಮಸೂದೆಯ ಸೆಕ್ಷನ್ (12) ಯಾವ ಯ ಅಪರಾಧಕ್ಕೆ ಎಷ್ಟೆಷ್ಟು ಶಿಕ್ಷೆಯೆಂಬುದನ್ನು ನಿಗದಿಪಡಿಸುತ್ತದೆ. ಸೆಕ್ಷನ್ 4ರ ಅ ಜಾನುವಾರು ಹತ್ಯೆ ಮಾಡಿದ ಅಪರಾಧಕ್ಕೆ ಒಂದು ವರ್ಷದಿಂದ ಏ ವರ್ಷದವರೆಗೆ ಜೈಲು ಶಿಕ್ಷೆ ಮತ್ತು 25,000 ರೂ.ಗಳಿಂದ 1,00,0 ರೂ.ವರೆಗೆ ಜುಲ್ಮಾನೆಯನ್ನೂ ವಿಧಿಸಬಹುದಾಗಿದೆ. ಭಯೋತ್ಪಾದನೆ, ಉದ್ ಪೂರ್ವಕ ಕೊಲೆ, ಬಲಾತ್ಕಾರ, ಕಳ್ಳಸಾಗಣೆ, ಭ್ರಷ್ಟಾಚಾರಗಳಿಗೂ ಈ ಪ್ರಮಾಣ ಶಿಕ್ಷೆಯನ್ನು ಇಂಡಿಯನ್ ಪೀನಲ್ ಕೋಡ್ ವಿಧಿಸುವುದಿಲ್ಲ.

ಅದೇ ರೀತಿ ಈ ಮಸೂದೆಯಡಿ ಎಸಗಲಾಗುವ ಇತರ ಅಪರಾಧಗಳ ಅಂದರೆ ದನದ ಸಾ[illegible] ಮಾಡುವುದು, ಹಸು-ದನವನ್ನು ಮಾರ ಮಾಡುವುದು, ದನದ ಮಾಂಸ ತಿನ್ನುವುದು, ತಿನ್ನಲು ಪ್ರೋತ್ಸಾಹಿಸುವು ಹಾಗೂ ಇನ್ನಿತರ ಅಪರಾಧಗಳಿಗೆ - ಒಂದು ವರ್ಷದಿಂದ ಮೂರು ವರ್ಷ ಸಜೆ ಮತ್ತು 10,0[illegible] ರೂ. -25,000 ರೂ.ವರೆಗೆ ಜುಲಾ ವಿಧಿಸಬಹುದಾಗಿದೆ.

ಅಂದರೆ ಸಾರಾಂಶದಲ್ಲಿ ಇದರ ಅರ್ಥವೇನೆಂದರೆ ರೈತ ತನ್ನೆಲ್ಲಾ ಕಷ್ಟವ ನುಂಗಿಕೊಂಡು ಹೇಗಾದರೂ ಬೇಸಾಯದಲ್ಲಿ ಮುಂದುವರೆಯುವುದೇ ದೊ ಅಪರಾಧ. ಹೀಗಾಗಿ ಮಾನ್ಯ ಯಡಿಯೂರಪ್ಪನವರ ಬಿಜೆಪಿ ಸರ್ಕಾರದಲ್ಲಿ ನಾಡಿನ ಎಲ್ಲಾ ರೈತರೂ ಇಂದಲ್ಲ ನಾಳೆ ಜೈಲು ಸೇರುವುದನ್ನು ತಪ್ಪಿಸಲಾಗುವುದಿ ಏಕೆಂದರೆ ಈ ಸರ್ಕಾರಕ್ಕೆ ಕುರುಡು ಕೋಮುದ್ವೇಷ ಬಿಟ್ಟರೆ ಬೇರೆ ಅಜೆಂಡಾ ಇಲ್ಲ, ರೈತನ ಕಷ್ಟ ಅರ್ಥವಾಗುವುದೂ ಇಲ್ಲ, ತಮ್ಮ ಗುಪ್ತ ಕೇ ಅಜೆಂಡಾವನ್ನು ಜಾರಿಗೆ ತರಲು ಈ ಬಿಜೆಪಿ ಸರ್ಕಾರ ಇಡೀ ರೈತ ಸಮುದಾಯವನ್ನೇ ಆತ್ಮಹತ್ಯೆಯತ್ತ ದೂಡುತ್ತಿದೆ ಅಥವಾ ಸೆರೆಮನೆಗೆ ದೂಡುತ್

ಹಸಿರುಶಾಲು ಹೊದ್ದು ಪ್ರಮಾಣ ವಚನ ಸ್ವೀಕರಿಸಿದ ಯಡಿಯೂರ ಸರ್ಕಾರ ರೈತರ ಹಿತವನ್ನು ಕಾಪಾಡುವುದು ಅವರನ್ನು ಜೈಲಿಗೆ ತಳ ಮೂಲಕ. ಇದು ರೈತ ದ್ರೋಹವಲ್ಲದೆ ಮತ್ತಿನ್ನೇನು?

(ಭಾಗ ಎರಡು ಮುಂದಿನ ವಾ

...ಕಲೆತಿರುಕ ಚಾನೆಲ್‌ಗಳ 'ಸಾವಿನ ಆಟ'!



ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

"ಟಿವಿ 24 ಚಾನೆಲ್ಲಾ?"

"ಹೌದು, ಹೇಳಿ."

"ಸಾರ್, ನಾನು ಕ್ಯಾತನಹಳ್ಳಿಯಿಂದ ಮಾತಾಡ್ತಿದೀನಿ. ... ಊರಿನಲ್ಲಿರುವ ಬತ್ತಿದ ಬಾವಿಯಲ್ಲಿ ಚಿಕ್ಕ ಹುಡುಗಿ ...ಳು ಬಿದ್ದುಹೋಗಿದ್ದಾಳೆ. ನೀವು ಕೂಡಲೇ ಬನ್ನಿ ..."

"ಬರ್ತೇವೆ. ಆದರೆ ಒಂದು ಕಂಡೀಷನ್ನು."

"ಏನು ಸಾರ್?"

"ನಾವು ಅಲ್ಲಿಗೆ ಬರುವತನಕ ನೀವು ಆ ...ಡುಗೀನ ಬಾವಿಯಿಂದ ತೆಗೆಯಬಾರದು, ...ತ್ತಾ?"

"ಆಯ್ತು ಸಾರ್. ಬೇಗ ಬನ್ನಿ ಸಾರ್."

...ಇದು ಕಾಲ್ಪನಿಕ ಸಂಭಾಷಣೆ ಅಲ್ಲ, ಬದಲಾಗಿ ...ಹಾಗಲೂ ನಡೆದದ್ದು (ನಾನು ಇಲ್ಲಿನ ಟಿವಿ ...ಲ್ ಮತ್ತು ಹಳ್ಳಿಯ ಹೆಸರನ್ನು ಬದಲಾಯಿಸಿ ... ಅಷ್ಟೇ). ಈ ಪ್ರಕರಣದ ಬಗ್ಗೆ ಆ ಚಾನೆಲ್‌ನ ...ಗನೊಬ್ಬ ನಮಗೆ ಹೇಳಿದಾಗ ನಾವೆಲ್ಲ ...ತಗೊಂಡೆವು; ಆ ಟಿವಿ ಚಾನೆಲ್‌ನವರ ...ನವೀಯ ವರ್ತನೆಯಿಂದ ಮತ್ತು ಅದಕ್ಕೆ ... ಆ ಹಳ್ಳಿ ಯುವಕನ ಅವಿವೇಕತನದಿಂದ.

...ಇವತ್ತು ಹೇಗೆ ಸಹಸ್ರಾರು ಮುಗ್ಧರು ತಮ್ಮ ...ವನ್ನೊಮ್ಮೆ ಟಿವಿ ಪರದೆಯ ಮೇಲೆ ನೋಡಬೇಕೆಂದು ...ಲಿಸುತ್ತಾರೋ, ಹಾಗೆಯೇ ಅವರ ಮುಗ್ಧತೆಯನ್ನು ...ಕೊಂಡು ತಮ್ಮ ಟಿಆರ್‌ಪಿ ರೇಟಿಂಗ್‌ಗಳನ್ನು ...ಕೊಳ್ಳಲು ಸುದ್ದಿ ಚಾನೆಲ್‌ಗಳು ಹಪಹಪಿಸುತ್ತಿರುತ್ತವೆ. ...ರಣಕ್ಕೆ ಬಾವಿಯಲ್ಲಿ ಬಿದ್ದು, ಯಾವ ಕ್ಷಣದಲ್ಲಾದರೂ ...ಪ್ರಾಣ ಕಳೆದುಕೊಳ್ಳಬಹುದಾದ ಆ ಚಿಕ್ಕ ಹುಡುಗಿಯನ್ನು ...ತರಬೇಡಿ ಎಂದು ಟಿವಿ ಚಾನೆಲ್‌ನವನು ಆದೇಶಿಸುತ್ತಾನೆ. ...ಹುಡುಗಿಯ ಕಾರಣಕ್ಕಾದರೂ ತಮ್ಮ ಹಳ್ಳಿ, ತಮ್ಮ ... ಟಿವಿಯಲ್ಲಿ ಪ್ರಸಾರವಾಗುವಂತಾಗಲಿ ಎಂದು ಆ ... ಯುವಕ ಕೂಡ ಒಪ್ಪುತ್ತಾನೆ. ಇಂತಹ ಸ್ವಾರ್ಥದ ...ಟಿಯಲ್ಲಿ ಮಾನವೀಯತೆಯೇ ಸತ್ತು ಹೋಗುತ್ತದೆ.

...ಇಂತಹದ್ದೇ ಎರಡು ಅಮಾನವೀಯ ಪ್ರಕರಣಗಳು ...ವಾರ ಭಾರತದ ಇತರ ಕಡೆಗಳಲ್ಲೂ ನಡೆದಿದೆ. ... ಆಗಸ್ಟ್ 23 ರಂದು ಪಂಜಾಬಿನ ಅಮೃತ್‌ಸರ್‌ನಲ್ಲಿ ...ವರ್ಷ ವಯಸ್ಸಿನ ಅನಕ್ಷರಸ್ಥೆ, ಅನಾಥೆ, ಮನ್‌ಪ್ರೀತ್ ... ಎಂಬಾಕೆ ಜಿಲ್ಲಾ ಡಿಸಿ ಆಫೀಸಿನೆದುರು ಆತ್ಮಾಹುತಿ ...ಕೊಳ್ಳಲು ಯತ್ನಿಸಿದಳು.

...ಏನಾಗಿತ್ತೆಂದರೆ ಅವಳ ತಂದೆ ತಾಯಿ ಬಿಟ್ಟುಹೋಗಿದ್ದ ... ಆಸ್ತಿಯ ಜಾಗವನ್ನು ಕೆಲ ಸಂಬಂಧಿಕರು ಕಬ್ಜಾ ...ಡಿಕೊಂಡಿದ್ದರು. ಅದನ್ನು ತನಗೆ ವಾಪಸ್ ...ಸಬೇಕೆಂದು ಮನ್‌ಪ್ರೀತ್ ಪ್ರಯತ್ನಪಟ್ಟಿದ್ದರೂ ಫಲ ...ರಲಿಲ್ಲ. ಆಗ ಆಕೆಯನ್ನು ಸಂಪರ್ಕಿಸಿದ ...ವಾಗ್ರಾಹಕನೊಬ್ಬ ಅವಳಿಗೆ ಈ ಆತ್ಮಾಹುತಿ ಐಡಿಯಾ ...ನಲ್ಲದೆ, ಆಕೆ ಅಂತಹ ಪ್ರಯತ್ನ ಮಾಡಿದರೆ ಅವಳಿಗೆ ...ಷ್ಟು ಹಣ ಕೊಡುವುದಾಗಿಯೂ ಭರವಸೆ ನೀಡಿದ. ...ಅದರಂತೆ ಡಿಸಿ ಆಫೀಸಿನ ಮುಂದೆ ಹಾಜರಾದ ...ಪ್ರೀತ್ ತನ್ನ ಮೇಲೆ ಪೆಟ್ರೋಲ್ ಸುರಿದುಕೊಂಡಳು. ...ನು ಬೆಂಕಿ ಕಡ್ಡಿಗೀರಿ ತನ್ನ ಮೈಗೆ ಅದನ್ನು ತಾಕಿಸಿಕೊಳ್ಳ... ಇದನ್ನೆಲ್ಲ ಆ ಛಾಯಾಗ್ರಾಹಕ ತನ್ನ ಕ್ಯಾಮೆರಾದಲ್ಲಿ ...ಡಿಯುತ್ತಿರುವಾಗ, ಅಲ್ಲಿಗೆ ಮುಫ್ತಿಯಲ್ಲಿ ಆಗಮಿಸಿದ ...ೀಸರು ಮನ್‌ಪ್ರೀತ್‌ಳನ್ನು ತಡೆದು ಅವಳನ್ನು ...ಸಿದರು. ಆತ್ಮಾಹುತಿ ಮಾಡಿಕೊಳ್ಳುತ್ತಿರುವ ಮನ್‌ಪ್ರೀತ್ ...ಷೋ ತೆಗೆಯಲೆಂದೇ ಅವಳನ್ನು ಇಂತಹ ಕೃತ್ಯಕ್ಕೆ ...ೇಪಿಸಿದ ಈ ಛಾಯಾಗ್ರಾಹಕನಿಗೆ ಈಗ ಪೊಲೀಸರು ...ಕುತ್ತಿದ್ದಾರೆ.

...ಸಾವಿನ ದವಡೆಯಿಂದ ಮನ್‌ಪ್ರೀತ್ ಕ್ಷಣಾರ್ಧದಲ್ಲಿ ...ಪಾದಳು. ಆದರೆ ಕಲ್ಪೇಷ್ ಮಿಸ್ತ್ರಿ ಎಂಬ ಯುವಕ ...ಷ್ಟು ಅದೃಷ್ಟಶಾಲಿ ಆಗಿರಲಿಲ್ಲ. ಗುಜರಾತಿನವನಾದ ...ನ್ ಅದ್ಯಾವುದೋ ಆಸ್ತಿ ಗಲಾಟೆಗೆ ಸಂಬಂಧಿಸಿದಂತೆ ...ೀಸರ ದೌರ್ಜನ್ಯಕ್ಕೆ ಗುರಿಯಾಗಿದ್ದ. ಈ ವಿಚಾರ ...ರಾತಿನ ಟಿವಿ 9 ಸುದ್ದಿ ಚಾನೆಲ್‌ನಲ್ಲಿ ಕೆಲಸ ಮಾಡು... ಮಯೂರ್ ರಾವಲ್ ಮತ್ತು ಕಮಲೇಷ್ ರಾವಲ್ ... ಇಬ್ಬರು ಪತ್ರಕರ್ತರಿಗೆ ಗೊತ್ತಾಯಿತು. ಅವರು ಕಲ್ಪೇಷ್‌ನನ್ನು ಸಂಪರ್ಕಿಸಿ, ಆತನಿಗೆ ಕಾಟ ಕೊಟ್ಟಿದ್ದ ಪೊಲೀಸರ ಠಾಣೆಯ ಮುಂದೆಯೇ ಆತ್ಮಾಹುತಿ ಮಾಡಿಕೊಳ್ಳುವ ಮೂಲಕ ಪ್ರತಿಭಟಿಸಬೇಕೆಂದು ಆತನನ್ನು ಒಪ್ಪಿಸಿದರು.

ಕಳೆದ ಆಗಸ್ಟ್ 21 ರಂದು ಗುಜರಾತಿನ ಅಹಮದಾಬಾದಿನ ಪೊಲೀಸ್ ಠಾಣೆಯೊಂದರ ಮುಂದೆ ಕಲ್ಪೇಷ್ ಆತ್ಮಾಹುತಿಗೆ ಸಿದ್ಧಗೊಳ್ಳುತ್ತಿದ್ದಾಗ ಈ ಪತ್ರಕರ್ತರಿಬ್ಬರೂ ಅದನ್ನು ತಮ್ಮ ಕ್ಯಾಮೆರಾದಲ್ಲಿ ಶೂಟ್





ಮಾಡಿಕೊಳ್ಳುತ್ತಿದ್ದರು. ಈ ವಿಚಿತ್ರ ನಡವಳಿಕೆಯನ್ನು ಕಂಡು ಕಂಗಾಲಾದ ಟೀ ಮಾರುವವನೊಬ್ಬ ಕಲ್ಪೇಷ್‌ನನ್ನು ತಡೆಯಲು ಮುಂದಾದಾಗ ಈ ಪತ್ರಕರ್ತರು "ಸುಮ್ಮನಿರು, ಇದೆಲ್ಲ ನಾಟಕ" ಎಂದು ಹೇಳಿ ಆತನನ್ನು ಸುಮ್ಮನಾಗಿಸಿದರು. ಆನಂತರ ಕಲ್ಪೇಷ್ ಬೆಂಕಿ ಹಚ್ಚಿಕೊಂಡು ಕೂಗಾಡುತ್ತಿದ್ದರೂ ಇವರಿಬ್ಬರು ಆ ದೃಶ್ಯವನ್ನು ತಮ್ಮ ಕ್ಯಾಮೆರಾದಲ್ಲಿ ಸೆರೆಹಿಡಿಯುವುದರಲ್ಲೇ ಮಗ್ನರಾಗಿದ್ದರು. ಕಲ್ಪೇಷ್‌ನ ದೇಹ ಶೇ. 90 ರಷ್ಟು ಸುಟ್ಟು ಹೋಗಿ ಆತ ಸತ್ತೇಹೋದ.

ಆತ್ಮಾಹುತಿ ತರಹದ 'ರೋಚಕ' ದೃಶ್ಯಗಳು `Live' ಆಗಿ ಸಿಗುತ್ತವೆ ಎಂದರೆ ಯಾರನ್ನಾದರೂ ಸಾವಿಗೆ ದೂಡುವಷ್ಟು ಕ್ರೂರಿಗಳಾಗಿದ್ದಾವೆ ಟಿವಿ ಚಾನೆಲ್‌ಗಳು ಎಂದರೆ ತಪ್ಪಾಗಲಾರದು. ಏಕೆಂದರೆ ಇವತ್ತಿನ ಪೈಪೋಟಿ ಯುಗದಲ್ಲಿ ಜನರ ಗಮನ ಸೆಳೆಯುವಂತಹ ದೃಶ್ಯಗಳು `Live' ಆಗಿ, 'ಬ್ರೇಕಿಂಗ್ ನ್ಯೂಸ್' ಆಗಿ ಸಿಕ್ಕರೇನೇ ಚಾನೆಲ್‌ನವರ ಟಿಆರ್‌ಪಿ ರೇಟಿಂಗ್ ಹೆಚ್ಚಾಗುವುದು. ಅಂದ ಹಾಗೆ, ಯಾವುದೇ ಟಿವಿ ಚಾನೆಲ್‌ನ ಟಿಆರ್‌ಪಿ ರೇಟಿಂಗ್ ಆಧರಿಸಿ ಅದಕ್ಕೆ ಯಾವುದೇ ಪ್ರಶಸ್ತಿ ಪುರಸ್ಕಾರ ಸಿಗುವುದಿಲ್ಲ, ಬದಲಾಗಿ ಕಾರ್ಪೊರೇಟ್ ಕಂಪನಿಗಳಿಂದ, ಖಾಸಗಿ ವ್ಯಾಪಾರಸ್ಥರಿಂದ ಚಾನೆಲ್‌ಗಳಿಗೆ ಕೋಟ್ಯಂತರ ರೂಪಾಯಿಗಳ ಜಾಹೀರಾತು ಹರಿದುಬರುತ್ತದೆ.

ಟಿವಿ ಚಾನೆಲ್‌ನವರ ಇಂತಹ ಅಮಾನುಷ ಪೈಪೋಟಿಯನ್ನು ಇತ್ತೀಚೆಗೆ ಬಿಡುಗಡೆಗೊಂಡಿರುವ 'ಪೀಪ್ಲಿ ಲೈವ್' ಎಂಬ ಸಿನಿಮಾ ತೆರೆದಿಡುತ್ತದೆ. ಮೇಲುನೋಟಕ್ಕೆ ಈ ಚಿತ್ರ ರೈತರ ಆತ್ಮಹತ್ಯೆ ಬಗ್ಗೆ ಎಂದೆನಿಸಿದರೂ ಆಳದಲ್ಲಿ ಇದು ಮಾಧ್ಯಮದ ಅಮಾನವೀಯ ವರ್ತನೆ ಕುರಿತ ಚಿತ್ರ.

'ಪೀಪ್ಲಿ ಲೈವ್' (ಇದನ್ನು `people live'! ಎಂದೂ ಅರ್ಥಮಾಡಿಕೊಳ್ಳಬಹುದು) ಚಿತ್ರದ ಕತೆ ಹೀಗಿದೆ: ಪೀಪ್ಲಿ ಎಂಬ ಹಳ್ಳಿಯವರಾದ ಬುಡಿಯಾ ಮತ್ತು ನಾಥ ಎಂಬ ಇಬ್ಬರು ರೈತ ಸಹೋದರರು ಸಾಲ ತೀರಿಸಲಾಗದೆ ತತ್ತರಿಸುತ್ತಿದ್ದಾರೆ. ಸದ್ಯದಲ್ಲೇ ಸಾಲ ಮರುಪಾವತಿಗೆಂದು ಬ್ಯಾಂಕ್‌ನವರು ಇವರ ಭೂಮಿಯನ್ನೂ ಕಬ್ಜ ಮಾಡಿಕೊಳ್ಳಲು ಬರುತ್ತಿದ್ದಾರೆ. ಇದರಿಂದ ಪಾರಾಗಲು ಅವರು ಸ್ಥಳೀಯ ರಾಜಕಾರಣಿಯ ನೆರವು ಕೇಳುತ್ತಾರೆ. ಆತ ಬುಡಿಯಾ ಮತ್ತು ನಾಥನನ್ನು ಲೇವಡಿ ಮಾಡಿ ಓಡಿಸುತ್ತಾನೆ. ಆದರೆ ಅದೇ ಸಂದರ್ಭದಲ್ಲಿ ರಾಜಕಾರಣಿಯ ಬಂಟನೊಬ್ಬ "ಆತ್ಮಹತ್ಯೆ ಮಾಡಿಕೊಂಡರೆ ನಿಮ್ಮ ವಂಶದವರಿಗೆ ಪರಿಹಾರಧನ ಸಿಗುತ್ತದೆ" ಎಂದು ವ್ಯಂಗ್ಯವಾಡುತ್ತಾನೆ.

ಆ ಯೋಚನೆ ಬುಡಿಯಾನ ತಲೆಯಲ್ಲಿ ಬೆಳೆಯುತ್ತಾ ಹೋಗುತ್ತದೆ. ಆದರೆ ಆತ್ಮಹತ್ಯೆಗೆ ಸಿದ್ಧನಿಲ್ಲದ ಬುಡಿಯಾ "ನನಗೆ ವಯಸ್ಸಾಗಿದೆ, ಹೆಂಡತಿ ಮಕ್ಕಳೂ ಇಲ್ಲ, ನಾನು ಆತ್ಮಹತ್ಯೆ ಮಾಡಿಕೊಂಡರೆ ಪರಿಹಾರ ಸಿಗದೇ ಇರಬಹುದು" ಎಂದೆಲ್ಲ ಹಲುಬುತ್ತಾನೆ. ಇದನ್ನು ಕೇಳಿ, ಆತನಿಗಿಂತಲೂ ಚಿಕ್ಕವನಾದ, ಹೆಂಡತಿ ಮತ್ತು ಮೂವರು ಮಕ್ಕಳಿರುವ, ಬುಡಿಯಾನಷ್ಟು ಜಾಣನಲ್ಲದ ನಾಥ "ನೀನು ಆತ್ಮಹತ್ಯೆ ಮಾಡಿಕೋ ಬೇಡ, ನಾನೇ ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ" ಎನ್ನುತ್ತಾನೆ.

ಪರಿಹಾರಧನ ಪಡೆಯಲು ನಾಥ ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ ಎಂದು ಹೇಳುವುದನ್ನು ಸ್ಥಳೀಯ ಪತ್ರಕರ್ತನಾದ ರಾಕೇಶನ ಕಿವಿಗೆ ಬೀಳುತ್ತದೆ. ಅದರ ಬಗ್ಗೆ ಆತ ತನ್ನ ಪತ್ರಿಕೆಯಲ್ಲಿ ವರದಿ ಮಾಡುತ್ತಾನೆ. ಇದೇ ಸಮಯಕ್ಕೆ ಸರಿಯಾಗಿ ಪೀಪ್ಲಿ ಇರುವ ಪ್ರದೇಶದಲ್ಲಿ ಉಪಚುನಾವಣೆ ನಡೆಯುತ್ತಿದೆ. ಆದ್ದರಿಂದ ನಾಥನ ಆತ್ಮಹತ್ಯಾ ಯೋಚನೆಯನ್ನು ರಾಜಕೀಯ ಪಕ್ಷಗಳು ಪರಸ್ಪರ ಹಣೆಯಲು ಉಪಯೋಗಿಸಿಕೊಳ್ಳುತ್ತವೆ. ಈ ಮಧ್ಯೆ ಜಿಲ್ಲಾಡಳಿತವು ನಾಥನನ್ನು ಆತ್ಮಹತ್ಯೆಯಿಂದ ತಡೆಯಲು ಯಾವ ಯೋಜನೆಯಡಿ ಆತನಿಗೆ ನೆರವು ನೀಡಬಹುದು ಎಂದು ಫೈಲ್‌ಗಳನ್ನು ತಡಕಾಡುತ್ತದೆ. ಆದರೆ ರೈತರ ವಾಸ್ತವ ಸಮಸ್ಯೆಗಳಿಗೂ, ರಾಜಕಾರಣಿಗಳು ಮತ್ತು ಅಧಿಕಾರಿಗಳು ಎಲ್ಲೋ ಕೂತು ರೂಪಿಸುವ ಯೋಜನೆಗಳಿಗೂ ಸಂಬಂಧವೇ ಇರುವುದಿಲ್ಲ. ಕೊನೆಗೆ ನಾಥನ ಸಂಸಾರಕ್ಕೆ 'ಲಾಲ್ ಬಹದ್ದೂರ್' ಎಂಬ ಪಂಪ್‌ಸೆಟ್ ಅನ್ನು ನೀಡುವುದಾಗಿ ಜಿಲ್ಲಾಡಳಿತ ನಿರ್ಧರಿಸುತ್ತದೆ. ಬಾವಿಯೇ ಇಲ್ಲದ ನಾಥ ಆ ಪಂಪನ್ನು ಇಟ್ಟುಕೊಂಡು ಮಾಡುವುದೇನನ್ನು? ಆ ಪಂಪ್ ಮಾರಿ ತನ್ನ ಸಾಲವನ್ನು ತೀರಿಸುವುದು ಹೇಗೆ? ಈ ಯಾವ ಪ್ರಶ್ನೆಗಳನ್ನು ಜಿಲ್ಲಾಡಳಿತ ಕೇಳಿಕೊಳ್ಳುವುದಿಲ್ಲ. ಬದಲಾಗಿ ಆ ಪಂಪ್ ಅನ್ನು ನಾಥನಿಗೆ ನೀಡುವ ಅಧಿಕಾರಿ "ಆತ್ಮಹತ್ಯೆ ಮಾಡಿಕೊಳ್ಳಬೇಡ" ಎಂದು ನಾಥನಿಗೆ ಆದೇಶಿಸುತ್ತಾನೆ.

ನಾಥನ ಪರಿಸ್ಥಿತಿ ಬಗ್ಗೆ ಜಿಲ್ಲಾಡಳಿತದಷ್ಟೇ ಕುರುಡಾಗಿರುವ ರಾಜಕಾರಣಿಗಳು ಕೂಡ ಆತನಿಗೆ ಟಿವಿ ಸೆಟ್ ಒಂದನ್ನು ಉಡುಗೊರೆಯಾಗಿ ನೀಡುತ್ತಾರೆ. ಕರೆಂಟ್ ಕೂಡ ಇಲ್ಲದ ನಾಥನ ಮನೆಯಲ್ಲಿ ಆ ಟಿವಿ ಸೆಟ್ ಯಾವ ಪ್ರಯೋಜನಕ್ಕೆ? ರಾಜಕಾರಣಿಗಳ ಪೈಪೋಟಿಯಿಂದಾಗಿ ನಾಥನ ವಿಷಯ ಇಂಗ್ಲಿಷ್ ಟಿವಿ ಚಾನೆಲ್‌ನ ಓರ್ವ ಹಿರಿಯ ವರದಿಗಾರ್ತಿಗೆ ಗೊತ್ತಾಗುತ್ತದೆ. ಆಕೆ ಅಸಹ್ಯಪಡುತ್ತಲೇ ನಾಥನ ಮನೆಗೆ ಆಗಮಿಸಿ ಅವನನ್ನು ಕುರಿತು ವರದಿ ಮಾಡುತ್ತಾಳೆ; ನಾಥ ಮತ್ತು ಬುಡಿಯಾ ತನ್ನ ಕ್ಯಾಮೆರಾ ಮುಂದೆ ಹೇಗೆ ಮಾತನಾಡಬೇಕು, ಹೇಗೆ ನಡೆಯಬೇಕು ಎಂದೆಲ್ಲ ನಿರ್ದೇಶಿಸುತ್ತಾಳೆ.

ಈಕೆ ಪೀಪ್ಲಿಗೆ ಹೋಗಿರುವುದು ಇತರೆ ಚಾನೆಲ್‌ನವರಿಗೂ ಗೊತ್ತಾಗಿ, ಎಲ್ಲರೂ ಟಿಆರ್‌ಪಿ ಪೈಪೋಟಿಗೆ ಬಿದ್ದು ಎಲ್ಲರೂ ತಮ್ಮ ಓಬಿ ವ್ಯಾನ್‌ಗಳಲ್ಲಿ ಪೀಪ್ಲಿಯಲ್ಲಿ ಜಮಾಯಿಸುತ್ತಾರೆ. ನಾಥನ ಬಗ್ಗೆ ಕಂಡಕಂಡವರನ್ನೆಲ್ಲ ಮಾತನಾಡಿಸಿ 'ಲೈವ್' ವರದಿಗಳನ್ನು ಪ್ರಸಾರ ಮಾಡಲಾರಂಭಿಸುತ್ತಾರೆ. ಟಿವಿ ಚಾನೆಲ್‌ನವರ ಹಾವಳಿ ಯಾವ ಮಟ್ಟದ್ದಾಗಿರುತ್ತದೆ ಎಂದರೆ ನಾಥ್ ಬಹಿರ್ದೆಸೆಗೆ ಹೋಗುವುದಕ್ಕೂ ಪೊಲೀಸರ ರಕ್ಷಣೆ ಪಡೆಯಬೇಕಾಗುತ್ತದೆ.



ಹೀಗೆ ಎಲ್ಲಾ ಟಿವಿ ಚಾನೆಲ್‌ಗಳು ಸಂಭವಿಸಲಿರುವ ನಾಥನ ಆತ್ಮಹತ್ಯೆಯತ್ತ ಗಮನ ಹರಿಸಿರುವಾಗ, ಅದೇ ಪೀಪ್ಲಿಯಲ್ಲಿನ ಮಾಧ್ಯಮಗಳ ಗಮನಕ್ಕೂ ಬಾರದೆ, ತನ್ನ ಪಾಡಿಗೆ ತನ್ನ ಹೊಲದಲ್ಲಿ ಗುಂಡಿ ತೋಡುತ್ತಿರುವ ಬಡ ಮುದುಕನೊಬ್ಬ ಪೌಷ್ಟಿಕ ಆಹಾರವಿಲ್ಲದೆ ಸಾವನ್ನಪ್ಪುತ್ತಾನೆ. ಇದು ಸ್ಥಳೀಯ ಪತ್ರಕರ್ತ ರಾಕೇಶನ ಗಮನಕ್ಕೆ ಬಂದು ಅದರ ಬಗ್ಗೆ ಇಂಗ್ಲಿಷ್ ಚಾನೆಲ್‌ನ ಹಿರಿಯ ವರದಿಗಾರ್ತಿಗೆ ತಿಳಿಸುತ್ತಾನೆ. ಆದರೆ ಆಕೆಗೆ ಆಗಲೇ ಸತ್ತಿರುವ ರೈತನನ್ನು ಕಟ್ಟಿಕೊಂಡು ಆಗಬೇಕಾದ್ದೇನೂ ಇಲ್ಲ, ಬದಲಾಗಿ ಸಾಯಲಿರುವ ನಾಥನೇ ಆಕೆಗೆ ಮುಖ್ಯ ಎನ್ನುತ್ತಾಳೆ.

ಈ ಧೋರಣೆಗೆ ಕಾರಣವೂ ಇದೆ. ಅದೇನೆಂದರೆ ಟಿವಿ ಮಾಧ್ಯಮಕ್ಕೆ ನಿಜವಾಗಲೂ ಸಮಸ್ಯೆ ಏನೆಂದು ಅರ್ಥ ಮಾಡಿಕೊಳ್ಳುವ, ತನ್ನ ವೀಕ್ಷಕರಿಗೆ ಅದನ್ನು ತಿಳಿಸಬೇಕೆನ್ನುವ ವ್ಯವಧಾನವಿಲ್ಲ. ಏಕೆಂದರೆ ಅಂತಹ ವ್ಯವಧಾನಕ್ಕೆ ಟಿಆರ್‌ಪಿ ರೇಟಿಂಗ್ ಸಿಗುವುದಿಲ್ಲ. ಆದ್ದರಿಂದಲೇ ಟಿವಿ ಚಾನೆಲ್‌ಗಳಿಗೆ ಬೇಕಿರುವುದು 'ರೋಚಕ'ವಾದ 'ದೃಶ್ಯ'ಗಳು, 'ಬೋರ್' ಹೊಡೆಸುವ ಸಮಸ್ಯೆಯ ವಿಶ್ಲೇಷಣೆಯಲ್ಲ. ಟಿವಿ ಮಾಧ್ಯಮದ ಈ ಅಮಾನವೀಯತೆಯ ಬಗ್ಗೆ ಪತ್ರಕರ್ತ ರಾಕೇಶ್‌ನಲ್ಲಿ ಜಿಗುಪ್ಸೆ ಹುಟ್ಟುತ್ತದೆ.

ಒಂದು ಬೆಳಗ್ಗೆ ಬಹಿರ್ದೆಸೆಗೆ ನಾಥ ಹೋಗಿದ್ದಾಗ ಆತ ನಾಪತ್ತೆಯಾಗುತ್ತಾನೆ. ಮಾಧ್ಯಮಗಳೆಲ್ಲ ಹೌಹಾರುತ್ತವೆ. ಆತನಿಗೇನಾಯಿತು ಎಂದು 'ಲೈವ್' ವರದಿಗಳನ್ನು ಬಿತ್ತರಿಸುತ್ತವೆ. ಒಂದು ಚಾನೆಲ್‌ನ ವರದಿಗಾರನಂತೂ ನಾಥನ ಮಲವನ್ನು ತೋರಿಸಿ ಆತ ನಾಪತ್ತೆಯಾದಾಗ ಅವನ ಮನಃಸ್ಥಿತಿ ಹೇಗಿದ್ದಿರಬಹುದೆಂದು ರಂಜಕವಾಗಿ ವಿಶ್ಲೇಷಿಸುತ್ತಾನೆ!

ಆದರೆ ನಾಥನನ್ನು ಆಡಳಿತಾರೂಢ ರಾಜಕೀಯ ಪಕ್ಷದ ಬಂಟರು ಅಪಹರಿಸಿರುತ್ತಾರೆ. ಚುನಾವಣೆ ನಡೆಯುತ್ತಿರುವ ಸಮಯದಲ್ಲಿ ಆತ ಆತ್ಮಹತ್ಯೆ ಮಾಡಿಕೊಂಡು ತಮ್ಮ ಪಕ್ಷಕ್ಕೆ ಅಪಚಾರ ಮಾಡದಿರಲಿ ಎಂಬ ಕಾರಣಕ್ಕೆ. ಆದರೆ ನಾಥನನ್ನು ಎಲ್ಲಿ ಬಚ್ಚಿಟ್ಟಿದ್ದಾರೆ ಎಂದು ರಾಕೇಶನಿಗೆ ಗೊತ್ತಾಗುತ್ತದೆ. ಆತ ಅಲ್ಲಿಗೆ ಹೋಗಿ ನಾಥನನ್ನು ಬಿಡಿಸಿಕೊಳ್ಳುವ ಯತ್ನದಲ್ಲಿರುವಾಗಲೇ ಅದರ ಬಗ್ಗೆ ಮಾಧ್ಯಮಗಳಿಗೂ ಸುಳಿವು ದೊರೆತು ಅವರೆಲ್ಲರೂ ಆ ಜಾಗಕ್ಕೆ ಧಾವಿಸುತ್ತಾರೆ. ಆಗ ಆಕಸ್ಮಿಕವಾಗಿ ಬೆಂಕಿ ಹತ್ತಿಕೊಂಡು ಆ ದುರಂತದಲ್ಲಿ ಪತ್ರಕರ್ತ ರಾಕೇಶ್ ಸತ್ತು ಹೋಗುತ್ತಾನೆ. ಆದರೆ ಮಾಧ್ಯಮಗಳಿಗೆ ನಾಥನ ಸಾವನ್ನು ತಾವು ದಾಖಲಿಸಿದೆವು ಎಂಬ 'ನೆಮ್ಮದಿ' ಬೇಕು. ಆದ್ದರಿಂದಲೇ ಟಿವಿ ಚಾನೆಲ್‌ಗಳು ಸುಟ್ಟು ಕರಕಲಾಗಿರುವ ಶವ ನಾಥನದ್ದೇ ಎಂದು ವರದಿ ಮಾಡುತ್ತವೆ.

ಮರುಕ್ಷಣವೇ ಎಲ್ಲ ಟಿವಿ ಚಾನೆಲ್‌ಗಳ ಓಬಿ ವ್ಯಾನ್‌ಗಳು ಅಲ್ಲಿಂದ ಪೇರಿ ಕೀಳುತ್ತವೆ. ಅವು ಅಲ್ಲಿದ್ದವು ಎಂಬುದಕ್ಕೆ ಸಾಕ್ಷಿಯಾಗಿ ಬಿಸಿಲಿನಲ್ಲಿ ಮಿಂಚುವ ಪಪ್ಪಾರು(?) ನೀರಿನ ಬಾಟಲಿಗಳು ಮಾತ್ರ ಎಲ್ಲೆಡೆ ಚೆಲ್ಲಾಪಿಲ್ಲಿಯಾಗಿ ಬಿದ್ದಿವೆ. ಮಾಧ್ಯಮಗಳು ಜಾಗ ಖಾಲಿ ಮಾಡಿದ ನಂತರ ಅಲ್ಲಿ ನಿರ್ಮಾಣಗೊಂಡಿದ್ದ ಚಿಕ್ಕಪುಟ್ಟ ಅಂಗಡಿಗಳು, ಸೇರಿಕೊಂಡಿದ್ದ ದೊಂಬರಾಟದವರು, ಜಾತ್ರೆಯ ರಾಟೆಯವರೂ ನಾಪತ್ತೆಯಾಗುತ್ತಾರೆ....


ನಾಥ ಆತ್ಮಹತ್ಯೆ ಮಾಡಿಕೊಂಡ ಎಂದು ನಂಬಿರುವ ಆತನ ಸಹೋದರ ಮತ್ತು ಪತ್ನಿ ಪರಿಹಾರಧನಕ್ಕಾಗಿ ಕಾಯುತ್ತಾರೆ. ಆದರೆ ಅವರಿಗೆ ಪಡಿತರ ಚೀಟಿಯೂ ಸಿಗುವುದಿಲ್ಲ.

ಕೊನೆಯ ದೃಶ್ಯದಲ್ಲಿ ನಾಥ ನಗರವೊಂದರಲ್ಲಿ ಕಟ್ಟಡ ನಿರ್ಮಾಣ ಪ್ರದೇಶದಲ್ಲಿ ಕೂತು ಶೂನ್ಯದತ್ತ ದಿಟ್ಟಿಸುತ್ತಿರುತ್ತಾನೆ.

ಇದೆಲ್ಲದರ ಅರ್ಥ ಇಷ್ಟೇ: ಮನ್‌ಪ್ರೀತ್ ಎಂಬ ಅನಾಥ ಯುವತಿಯಾಗಲಿ, ಕಲ್ಪೇಷ್ ಮಿಸ್ತ್ರಿ ಎಂಬ ಮುಗ್ಧ ಯುವಕನಾಗಲಿ, ನಾಥ ಎಂಬ ಕಾಲ್ಪನಿಕ ರೈತನಾಗಲಿ.... ಇವರೆಲ್ಲ ಅಸಹಾಯಕತೆಯಲ್ಲಿ ಸಿಲುಕಿರುವವರು. ಆದರೆ ಅವರ ಸಮಸ್ಯೆಯನ್ನು ಕೇಳುವ, ಬಗೆಹರಿಸುವ ವ್ಯವಧಾನ ನಮ್ಮ ವ್ಯವಸ್ಥೆಗಿಲ್ಲ.


ಅಂತಹ ಪರಿಸ್ಥಿತಿಯಲ್ಲಿ ಅವರನ್ನು ತಮ್ಮ ಸ್ವಾರ್ಥಕ್ಕೆ ಬಲಿಪಶುಗಳಾಗಿ ಬಳಸಿಕೊಳ್ಳಲು ಟಿವಿ ತರಹದ ಮಾಧ್ಯಮಗಳು ರಣಹದ್ದುಗಳಂತೆ ಕಾಯುತ್ತಿರುತ್ತವೆ. ಅವರು ಬಿತ್ತರಿಸುವ ಇಂತಹ 'ರೋಚಕ' ದೃಶ್ಯಗಳನ್ನು ನೋಡುವ ನಮ್ಮಂತಹವರು ಅವರ ಟಿಆರ್‌ಪಿ ರೇಟಿಂಗ್‌ಗಳನ್ನು ಹೆಚ್ಚಿಸಿ ಅವರ ಈ ಅಮಾನವೀಯತೆಯಲ್ಲಿ ಭಾಗಿ ಆಗುತ್ತೇವೆ. ಜನರನ್ನು ಸಾವಿಗೆ ದೂಡುತ್ತೇವೆ. ನಾವೂ ಆ ಪಾಪವನ್ನು ಕಟ್ಟಿಕೊಳ್ಳುತ್ತೇವೆ......

ಗುಲ್ಬರ್ಗಾ ದಕ್ಷಿಣ: ಮಣ್ಣುಮುಕ್ಕಲಿದೆ ಪಾಪಿ ಬಿಜೆಪಿ



ಚಂದ್ರಶೇಖರ ಪಾಟೀಲ ರೇವೂರ ಅವರ ಅಕಾಲಿಕ ನಿಧನದಿಂದ ತೆರವಾದ ಗುಲ್ಬರ್ಗಾ ದಕ್ಷಿಣ ಮತಕ್ಷೇತ್ರದ ರಾಜಕೀಯ ಚಟುವಟಿಕೆಗಳು ತಾರಕಕ್ಕೆ ಏರುತ್ತಿವೆ. ಎಲ್ಲಾ ಪಕ್ಷಗಳು ತಮ್ಮ ಪಕ್ಷದ ಅಭ್ಯರ್ಥಿಗಳ ಹೆಸರುಗಳನ್ನು ಪ್ರಕಟಿಸುವ ಮೂಲಕ ತಮ್ಮ ಚಾಣಾಕ್ಷತನವನ್ನು ಮೆರೆದಿವೆ. ಬಹುತೇಕ ಜನಸಾಮಾನ್ಯರು ಚಂದ್ರಶೇಖರ ಪಾಟೀಲರ ಪುತ್ರ ದತ್ತಾತ್ರೇಯ ಪಾಟೀಲ ಬಿಜೆಪಿ ಅಭ್ಯರ್ಥಿಯಾಗುತ್ತಾನೆ ಎಂದೇ ಭಾವಿಸಿದ್ದರು. ಆದರೆ ಸ್ಥಳೀಯ ಬಿಜೆಪಿ ಪಕ್ಷದ ಮುಖ್ಯಸ್ಥರೆಲ್ಲರ ಒಲವು ಈ ಕಡೆಗೆ ಇರಲೇ ಇಲ್ಲ, ಚಂದ್ರಶೇಖರ ಪಾಟೀಲ ಬದುಕಿದ್ದಾಗಲೂ ಇವರೊಂದಿಗೆ ಅಂಥ ಅವಿನಾಭಾವ ಸಂಬಂಧಗಳು ಇರಲಿಲ್ಲ. ಚಂದ್ರಶೇಖರ ಪಾಟೀಲ ಮೊದಲಿನಿಂದಲೂ ಅನಂತಕುಮಾರ ಹಾಗೂ ಬಳ್ಳಾರಿಯ ರೆಡ್ಡಿ ಕುಟುಂಬದೊಂದಿಗೆ ತನ್ನನ್ನು ಗುರುತಿಸಿಕೊಂಡದ್ದರಿಂದ ಕಾಗೆ ಕೂರುವುದಕ್ಕೂ ಟೊಂಗೆ ಮುರಿಯುವುದಕ್ಕೂ ಸಮನಾಯಿತು ಎಂಬಂತೆ ಯಡಿಯೂರಪ್ಪ ಕೊನೆಗೆ ತನ್ನ ಮನದ ಮಾತಿಗೆ ಮನ್ನಣೆ ಕೊಟ್ಟು ಪಾಟೀಲ ಕುಟುಂಬಕ್ಕೆ ಟಿಕೆಟ್‌ಗೆ ಕೊಕ್ ನೀಡಿದ್ದಾರೆ.

ಇದರಿಂದ ವ್ಯಗ್ರರಾದ ಬಿಜೆಪಿಯ ಯುವ ಮುಖಂಡರೆಲ್ಲ ಯಡ್ಡಿ ಹಾಗೂ ಈಶ್ವರಪ್ಪನ ಭಾವಚಿತ್ರಕ್ಕೆ ಯರ್ರಾಬಿರ್ರಿಯಾಗಿ ಹೊಡೆಯುವ ಮೂಲಕ ತಮ್ಮ ಸಿಟ್ಟನ್ನು ತೀರಿಸಿಕೊಂಡಿದ್ದಾರೆ; ಮಾತ್ರವಲ್ಲ, ಚಂದ್ರಶೇಖರ ಪಾಟೀಲರ ಮಡದಿ ಶ್ರೀಮತಿ ಅರುಣಾ ಪಾಟೀಲರನ್ನು ಜಾತ್ಯತೀತ ಜನತಾ ದಳದ ಅಭ್ಯರ್ಥಿಯನ್ನಾಗಿ ಕಣಕ್ಕೆ ಧುಮುಕುವಂತೆ ನೋಡಿಕೊಂಡಿದ್ದಾರೆ. 'ಸಹಜವಾಗಿಯೆ ಮಾಗಿದ ಹಣ್ಣು ತಮ್ಮ ಕೈ ಸೇರುತ್ತದೆ ಎಂದಾಗ ಯಾರಾದರೂ ನಿರಾಕರಿಸಲು ಸಾಧ್ಯವೆ' ಎಂಬಂತೆ ಜೆಡಿಎಸ್‌ನ ಪಕ್ಷಾಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ತಮ್ಮ ಪಕ್ಷಕ್ಕೆ ಪಾಟೀಲರ ಕುಟುಂಬವನ್ನು ಆಹ್ವಾನಿಸಿಕೊಳ್ಳುವುದರ ಜೊತೆಗೆ ಅವರಿಗೆ ಪಕ್ಷದ ಟಿಕೆಟ್ ನೀಡಿ ಚುನಾವಣೆ ಮತ್ತಷ್ಟು ರಂಗೇರುವಂತೆ ನೋಡಿಕೊಂಡಿದ್ದಾರೆ. ಸದ್ಯ ವಿಧಾನ ಪರಿಷತ್‌ನ ಸದಸ್ಯರಾಗಿರುವ ಬಿಜೆಪಿಯ ಶಶೀಲ ನಮೋಶಿ ಈ ಹಿಂದೆ ಖಮರುಲ್ ಇಸ್ಲಾಂ ವಿರುದ್ಧ ಸ್ಪರ್ಧಿಸಿ ನಲವತ್ತು ಸಾವಿರಕ್ಕೂ ಅಧಿಕ ಮತಗಳನ್ನು ಪಡೆದುಕೊಂಡು ಎಲ್ಲರ ಗಮನ ಸೆಳೆದಿದ್ದ. ಆಗ ರಾಜ್ಯದಲ್ಲಿ ಕಾಂಗ್ರೆ ಸರಕಾರ ಅಧಿಕಾರದಲ್ಲಿ ಇತ್ತು, ಜೊತೆಗೆ ಬಿಜೆಪಿಯ ಗಾಳಿ ಅಷ್ಟಾಗಿ ಇರಲಿಲ್ಲ, ಈಗ ಕಾಲ ಮೊದಲಿನಂತೆ ಇಲ್ಲ. ರಾಜ್ಯದಲ್ಲಿ ಬಿಜೆಪಿ ಪಕ್ಷ ಆಡಳಿತದ ಚುಕ್ಕಾಣಿ ಹಿಡಿದಿದೆ. ಬಳ್ಳಾರಿಯ ಗಣಿಯ ಧೂಳಿನಿಂದ ಹೇಗೋ ಹೊರಬಂದು ತಮ್ಮ ಪ್ರತಿಷ್ಠೆಗೆ ಎಳ್ಳಷ್ಟು ಕುಂದಾಗಿಲ್ಲ ಎಂದು ಯಡ್ಡಿ ನಿರೂಪಿಸಿಕೊಳ್ಳಬೇಕಾಗಿದೆ. ಹಾಗಾಗಿ ಈ ಚುನಾವಣೆ ಸರಕಾರದ ನೀತಿ ನಿರೂಪಣೆಗಳಿಗೆ ದಿಕ್ಸೂಚಿಯಾಗಲಿದೆ. ಆದ್ದರಿಂದ ಹೇಗಾದರೂ ಸೈ ಗುಲ್ಬರ್ಗಾ ದಕ್ಷಿಣ ಮತಕ್ಷೇತ್ರವನ್ನು ತಮ್ಮ ಪಕ್ಷದ ಬುಟ್ಟಿಗೆ ಹಾಕಿಕೊಳ್ಳಬೇಕೆಂದು ಭರ್ಜರಿ ತಯಾರಿ ನಡೆಸಿದ್ದಾರೆ ಯಡ್ಡಿ.



ನಮೋಶಿ

ಆದರೆ ಸ್ಥಳೀಯ ಬಿಜೆಪಿಯ ಅಮರನಾಥ ಪಾಟೀಲ, ಬಿ.ಜಿ.ಪಾಟೀಲ ಮುಂತಾದವರು ಒಂದೊಂದು ಮುಖವಾಗಿ ಕುಳಿತಿದ್ದಾರೆ. ಮೇಲ್ನೋಟಕ್ಕೆ ಎಲ್ಲರೂ ಒಂದೇ ಎಂದು ಕಾಣಿಸಿಕೊಂಡು ಒಳಗೊಳಗೆ ತಮ್ಮ ಆಟ ಆಡಿದರೆ ನಮೋಶಿ ಗೋತಾ ಹೊಡೆಯುವುದು ಗ್ಯಾರಂಟಿ ಎಂದೇ ಹೇಳಬಹುದು.

ಕಳೆದ ಸಲ ಕಾಂಗ್ರೆಸ್ ಪಕ್ಷದಿಂದ ಪರಾಭವಗೊಂಡಿದ್ದ ಬಸವರಾಜ ಭೀಮಳ್ಳಿ ಎಂಬ ಉದ್ಯಮಿ ಈ ಬಾರಿ ಟಿಕೆಟ್ ಆಕಾಂಕ್ಷಿಯೂ ಆಗಲಿಲ್ಲ ಎಂಬುದು ಈ ಪಕ್ಷದ ಹಣೆಬರಹವನ್ನು ಹೇಳುತ್ತದೆ. ಆದರೂ ತಮ್ಮ ಮತಕ್ಷೇತ್ರದಲ್ಲಿ ತಮ್ಮ ನೆಲೆಯನ್ನು ಕಳೆದುಕೊಂಡಿದ್ದ ವಿಶ್ವನಾಥ ಪಾಟೀಲ ಹೆಬ್ಬಾಳ ಹಾಗೂ ಕೈಲಾಸನಾಥ ಪಾಟೀಲ ಮುಂತಾದವರು ಟಿಕೆಟ್ ಆಕಾಂಕ್ಷಿಗಳಾಗಿದ್ದರು. ಆದರೆ ದಿಢೀರ್ ರಾಜಕೀಯ ನಡೆಗಳು ಕಾಂಗ್ರೆನ ಎಲ್ಲರನ್ನೂ ಬೆಚ್ಚಿಬೀಳಿಸಿವೆ. ಇದನ್ನು ಅವರೆಲ್ಲ ಬಹಿರಂಗವಾಗಿ ಎಲ್ಲೂ ಹೇಳುವಂತಿಲ್ಲ ಆದರೆ ನುಂಗಿ ಕುಳಿತುಕೊಳ್ಳುವಂತೆಯೂ ಇಲ್ಲ ಎಂಬ ಪರಿಸ್ಥಿತಿ ಬಂದೊದಗಿದೆ. ಏಕೆಂದರೆ ಧರ್ಮಸಿಂಗ್ ತಾನು ಇರುವಾಗಲೇ ತಮ್ಮ ಕುಲಪುತ್ರ ಡಾ.ಅಜಯ ಸಿಂಗ್ ರಾಜಕೀಯ ಅಖಾಡದಲ್ಲಿ ಚಾಲ್ತಿ ಪಡೆಯುವಂತೆ ನೋಡಿಕೊಳ್ಳಬೇಕಾಗಿದೆ. ಇದಕ್ಕಾಗಿ ಧರ್ಮ ಸಿಂಗ್ ಯಾವ ಕೆಲಸಕ್ಕೆ ಬೇಕಾದರೂ ಕೈ ಹಾಕಬಲ್ಲ ಮನುಷ್ಯ ಪಕ್ಷಗಿಕ್ಷಗಳ ಎಲ್ಲೆಗಳನ್ನೂ ಮೀರಿ ಧರ್ಮ ಸಿಂಗ್ ತನ್ನ ಕರಾಮತ್ತುಗಳನ್ನು ಪ್ರದರ್ಶಿಸಿದ್ದೇ ಆದರೆ ಅಜಯ ಸಿಂಗ್ ಗುಲ್ಬರ್ಗಾ ದಕ್ಷಿಣ ಮತಕ್ಷೇತ್ರಕ್ಕೆ ಕಾಯಂ ಆಗಿ ಅಂಟಿಕೊಳ್ಳುವ ಸೂಚನೆಗಳಿವೆ.



ಅಜಯ್‌ಸಿಂಗ್

ಹಿಂದೊಮ್ಮೆ ಕಲ್ಯಾಣ ಕರ್ನಾಟಕದಲ್ಲಿ ತನ್ನ ಭದ್ರ ಬುನಾದಿಯನ್ನು ಹಾಕಿದ್ದ ಜೆಡಿಎಸ್ ಇಂದು ನಾಮಾವಶೇಷದ ಹಾದಿಯಲ್ಲಿ ನಿಂತುಕೊಂಡಿದೆ. ಆದರೆ ಅದನ್ನು ತೋರಿಸಿಕೊಳ್ಳುವಂತೆ ಇಲ್ಲ. ಹಾಗಾಗಿ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ 'ಹಿಂದೆ ಜೆಡಿಎಸ್ ಜೊತೆ ಇದ್ದು ಎಲ್ಲಾ ರಾಜಕೀಯ ಲಾಭಗಳನ್ನು ಪಡೆದುಕೊಂಡಿದ್ದ ಆದರೆ ಈಗ ಬೇರೆ ಪಕ್ಷಗಳಲ್ಲಿರುವ ವ್ಯಕ್ತಿಗಳು ತಮ್ಮ ಪಕ್ಷದ ಕ್ಯಾಂಡಿಡೇಟ್‌ನ ಪರವಾಗಿ ಸಹಾನುಭೂತಿಯಿಂದ ಇರಬೇಕು' ಎಂಬ ಇಂಗಿತ ವ್ಯಕ್ತಪಡಿಸಿದ್ದಾರೆ. ಚಂದ್ರಶೇಖರ ಪಾಟೀಲ ರೇವೂರ ಕುಟುಂಬದ ಸದಸ್ಯರು ಹಾಗೂ ಅವರ ಪರವಾಗಿ ನಿಂತಿರುವ ಕೆಲವು ಜನ ಮಾತ್ರ ಶ್ರೀಮತಿ ಅರುಣಾ ಪಾಟೀಲರತ್ತ ವಾಲಿದರೆ ಅದರಿಂದ ಯಾವುದೇ ಪ್ರಯೋಜನವಾಗುವುದಿಲ್ಲ, ಬದಲಾಗಿ ನಾಮಕಾವಸ್ತೆಗೆ ನಿಂತು ಶಶೀಲ್ ನಮೋಶಿಗೆ ಬರಬೇಕಾದ ಮತಗಳ ವಿಭಜನೆಗೆ ದಾರಿ ಮಾಡಿಕೊಟ್ಟಂತಾಗುತ್ತದೆ.

ಆದರೂ ದಿನದಿಂದ ದಿನಕ್ಕೆ, ಕ್ಷಣದಿಂದ ಕ್ಷಣಕ್ಕೆ ಬದಲಾಗುವ ರಾಜಕೀಯ ವಿದ್ಯಮಾನಗಳನ್ನು ಅವಲಂಬಿಸಿ ಮತದಾರ ತನ್ನ ಮತವನ್ನು ಚಲಾಯಿಸುವ ನಿರ್ಣಯ ಮಾಡಿಕೊಂಡಿದ್ದಾನೆ.

ಒಟ್ಟಿನಲ್ಲಿ ಇಲ್ಲಿ ಬಿಜೆಪಿ ಮಣ್ಣು ಮುಕ್ಕುವ ಸಾಧ್ಯತೆಗಳೇ ಜಾಸ್ತಿ ಇವೆ.

ಕರಟಕ ದಮನಕಗಳ ಹುನ್ನಾರಗಳೂ ಗುಲ್ಬರ್ಗಾದ ಚುನಾವಣೆಯೂ


ಕಲ್ಯಾಣ ಕರ್ನಾಟಕದ ಕರಟಕ-ದಮನಕಗಳೆಂದೇ ವಿಖ್ಯಾತಿ ಪಡೆದಿರುವ ಧರ್ಮ ಸಿಂಗ್-ಖರ್ಗೆಯವರು ಕೂಡಿ ಹಾಕಿದ ಲೆಕ್ಕಾಚಾರ ಕೊನೆಗೂ ಫಲಿಸಿದೆ. ಅವರು ಬಯಸಿದಂತೆಯೆ ದೇವೇಗೌಡರು ಗುಲ್ಬರ್ಗಾ ದಕ್ಷಿಣ ಮತಕ್ಷೇತ್ರಕ್ಕೆ ತಮ್ಮ ಪಕ್ಷದ ಅಭ್ಯರ್ಥಿಯನ್ನಾಗಿ ದಿ.ಚಂದ್ರಶೇಖರ ರೇವೂರರ ಮಡದಿ ಶ್ರೀಮತಿ ಅರುಣಾ ಪಾಟೀಲ ರೇವೂರರನ್ನು ಆಯ್ಕೆ ಮಾಡಿದ್ದಾರೆ. ಇದರಿಂದ ಕರಟಕ ದಮನಕಗಳೆರಡೂ ಫುಲ್ ಖುಷಿ ಅನುಭವಿಸುತ್ತಿದ್ದಾರೆ.

ಜೆಡಿಎಸ್ ಪಕ್ಷದ ಅಭ್ಯರ್ಥಿಯ ಆಯ್ಕೆಗೂ ಕಾಂಗ್ರೆಸ್ ಕರಟಕ ದಮನಕಗಳಿಗೂ ಯಾವ ಬಾದರಾಯಣ ಸಂಬಂಧ ಎಂದೆನಿಸಬಹುದು. ವಿಚಿತ್ರ ಹಾಗೂ ಸ್ಪಷ್ಟವಾದ ಸಂಗತಿ ಅಡಗಿರುವುದೇ ಈ ದ್ವಂದ್ವಗಳ ನಡುವೆ.

ಈ ಭಾಗದ ಹಲವಾರು ಜನರು ಬಲ್ಲಂತೆ ಧರ್ಮಸಿಂಗ್ ಹಾಗೂ ಖರ್ಗೆಯವರು ಸ್ವಾತಂತ್ರ್ಯಾ ನಂತರ ಈ ಭಾಗದ ಜನತೆಯ ಜೊತೆಗೆ ಆಡಿದ ಆಟಗಳು, ಹೂಡಿದ ಹುನ್ನಾರಗಳು ಒಂದೆರಡಲ್ಲ. ತಮ್ಮ ಮತಕ್ಷೇತ್ರಗಳಿಂದ ಸತತವಾಗಿ ಏಳೆಂಟುಬಾರಿ ಆಯ್ಕೆಯಾದ ಹಿಂದಿನ ಮಸಲತ್ತುಗಳೆಲ್ಲ ಅಂತರಂಗದ ಸತ್ಯಗಳು. ಇವನ್ನೆಲ್ಲ ಎಂದಿಗೂ ಗೌಪ್ಯವಾಗಿಯೆ ಇಡುವಂತೆ ಮಾಡುವ ಚಾಲಬಾಜಿತನವನ್ನು ಮಾತ್ರ ಅತ್ಯಂತ ಸಮರ್ಥವಾಗಿ ನಿಭಾಯಿಸಬಲ್ಲ ನರಿಬುದ್ಧಿಯವರು ಈ ಇಬ್ಬರು.

ಕಡೂರು: ದತ್ತ ಎದುರು ಕಿತ್ತು ಹೋಗಲಿದೆ ಬಿಜೆಪಿ

ಕೆ.ಎಂ. ಕೃಷ್ಣಮೂರ್ತಿಯವರ ಅಕಾಲಿಕ ಮರಣದಿಂದಾಗಿ ಕಡೂರು ವಿಧಾನಸಭಾ ಕ್ಷೇತ್ರ ಚುನಾವಣೆಗೆ ಎದುರುಗೊಂಡಿದೆ. ಜೆಡಿಎಸ್‌ನಿಂದ ವೈ.ಎಸ್.ವಿ. ದತ್ತಾ, ಕಾಂಗ್ರೆಸ್‌ನಿಂದ ಕೆಂಪರಾಜು ಹಾಗೂ ಬಿಜೆಪಿಯಿಂದ ಡಾ. ವಿಶ್ವನಾಥ್ ಕಣದಲ್ಲಿದ್ದು ತ್ರಿಕೋನ ಸ್ಪರ್ಧೆಯೊಂದು ಚಾಲ್ತಿಯಲ್ಲಿದೆ.




ದತ್ತ

ಕೃಷ್ಣಮೂರ್ತಿಯವರು ಮರೆಯಾಗಿ ಎರಡು ತಿಂಗಳಾಗಿದೆಯಷ್ಟೇ. ಈ ಸೂತಕದ ಛಾಯೆ ಜನರ ಮನಸ್ಸಿನಿಂದ ಇನ್ನೂ ಮರೆಯಾಗಿಲ್ಲ, ಇದನ್ನೇ ಎನ್‌ಕ್ಯಾಷ್ ಮಾಡಿಕೊಳ್ಳುವ ತಂತ್ರಗಾರಿಕೆ ಕಾಂಗ್ರೆಸ್ ಪಾಳೆಯದಲ್ಲಿ ನಡೆದು ಕೃಷ್ಣಮೂರ್ತಿಯವರ ಮಡದಿ ಸುಜಾತಾರ ಹೆಸರು ಕೇಳಿಬಂದಿತ್ತಾದರೂ ಅಂತಿಮವಾಗಿ ಕೆಂಪರಾಜು ಹೆಸರು ಘೋಷಣೆಯಾಯಿತು.

ಕೆಂಪರಾಜು ಕೃಷ್ಣಮೂರ್ತಿಯವರ ಸೋದರ ಹಾಗೂ ಹಾಲಿ ಜಿಲ್ಲಾ ಪಂಚಾಯತ್ ಅಧ್ಯಕ್ಷ. ಈತ ಕೃಷ್ಣಮೂರ್ತಿ ಶಾಸಕರಾಗಿದ್ದಾಗ ಒಂದಷ್ಟು ಕೆಲಸ ಮಾಡಲು ನೆರವಾಗಿದ್ದನೆಂಬ ಮಾನದಂಡದಿಂದಲೇ ಸಿದ್ಧರಾಮಯ್ಯ ಟಿಕೆಟ್ ನೀಡಿದ್ದಾರೆನ್ನಲಾಗಿದೆ. ಆದರೆ ಕ್ಷೇತ್ರಾದ್ಯಂತ 'ಕೆಂಪರಾಜು ತನ್ನ ಅತ್ತಿಗೆಗೆ ಮೋಸ ಮಾಡಿ ಟಿಕೆಟ್ ತಗಂಡೌನೆ' ಅಂತೊಂದು ರೂಮರ್ರು ಹಬ್ಬಿದೆ. ಕೃಷ್ಣಮೂರ್ತಿಯವರ ಅಭಿಮಾನಿ ಬಳಗದಲ್ಲದು ಕೊಂಚಮಟ್ಟಿಗೆ ಆಕ್ರೋಶವಾಗಿಯೂ ಮಡುಗಟ್ಟಿದಂತಿದೆ. ಇದಕ್ಕೆ ಪೂರಕವಾಗಿ ಕಾಂಗ್ರೆಸ್‌ನೊಳಗೇ ತಿಕ್ಕಾಟಗಳೂ ಆರಂಭವಾಗಿವೆ.

ಇನ್ನು ಜೆಡಿಎಸ್ ಅಭ್ಯರ್ಥಿ ದತ್ತಾ ವಿಚಾರಕ್ಕೆ ಬಂದರೆ, ಇವರು ಗೌಡರ ಗರಡಿಯಲ್ಲಿ ಪಳಗಿರುವ ಪ್ರಭಾವಿ. ಈ ಭಾಗದ ಜೆಡಿಎಸ್‌ನ ಎಲ್ಲಾ ಸ್ತರಗಳಲ್ಲೂ ಬೆಂಬಲವಿದೆ. ಭೋಜೇಗೌಡ, ಧರ್ಮೇಗೌಡ ಹಾಗೂ ಜಿಲ್ಲಾಧ್ಯಕ್ಷ ದೇವರಾಜ್ ಮುಂತಾದವರೆಲ್ಲ ಇದೀಗಲೇ ದತ್ತಾ ಪರವಾಗಿ ಅಖಾಡಕ್ಕಿಳಿದಿದ್ದಾರೆ. ಕೃಷ್ಣಮೂರ್ತಿ ಸಹ ಹಿಂದೆ ಜೆಡಿಎಸ್‌ನಲ್ಲಿದ್ದುದರಿಂದ, ದತ್ತಾ ಕೂಡಾ ಕೃಷ್ಣಮೂರ್ತಿಯವರಂತೆಯೆ ಶುದ್ಧ ಚಾರಿತ್ರ್ಯ ಇರುವವರಾದುದರಿಂದ ದತ್ತಾಗೆ ವಿಜಯಲಕ್ಷ್ಮಿ ಒಲಿಯಬಹುದೆಂಬ ಮಾತುಗಳು ಕೇಳಿಬರುತ್ತಿವೆ.

ಬಿಜೆಪಿಯಿಂದ ಕಣಕ್ಕಿಳಿದಿರುವ ಡಾ. ವಿಶ್ವನಾಥ್‌ಗೆ ರಾಜಕೀಯದಲ್ಲಿ ಯಾವ ಅನುಭವಗಳೂ, ಪ್ರಭಾವವೂ ಇಲ್ಲ, ವೃತ್ತಿಯಲ್ಲಿ ವೈದ್ಯನಾಗಿರುವ ಈತ ಹೇಳಿಕೊಳ್ಳುವಂಥ ಜನಪ್ರಿಯತೆಯನ್ನೂ ಪಡೆದುಕೊಂಡಿಲ್ಲ, ವೃತ್ತಿ ಜೀವನದಲ್ಲಿ ಒಂದಿಷ್ಟು ಉಚಿತ ಸಿಜೇರಿಯನ್ ಮಾಡಿದ್ದೇ ಈತನ ಐಡೆಂಟಿಟಿ. ಸಾದರ ಲಿಂಗಾಯತನಾಗಿರುವ ಈತ ತನ್ನ ಜನಾಂಗದವರ ಓಟುಗಳ ಮೇಲೆಯೇ ನಂಬಿಕೆಯಿಟ್ಟುಕೊಂಡಿರುವಂತಿವೆ.



ದಿ.ಕೃಷ್ಣಮೂರ್ತಿ

ಆದರೆ ಮಹತ್ವದ ಬೆಳವಣಿಗೆಯೊಂದರಲ್ಲಿ ಬಿಜೆಪಿಯ ಬಂಡಾಯ ಅಭ್ಯರ್ಥಿಯಾಗಿ ಕಾಮನಕೆರೆ ಶಶಿಧರ್ ಎಂಬಾತ ಕಣಕ್ಕಿಳಿದಿದ್ದಾರೆ. ಈತ ನೊಳಂಬ ಜನಾಂಗದವರು. ಈ ಜನಾಂಗ ಕೂಡಾ ಈ ಭಾಗದಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತದಲ್ಲದೇ ಬಿಜೆಪಿಯವೇ ಆದ ಒಂದಷ್ಟು ಮತಗಳು ಚದುರುವ ಸಾಧ್ಯತೆಗಳೂ ಇವೆ.



ಆಂತರಿಕ ಪರಿಸ್ಥಿತಿಗಳು ಏನೇ ಇದ್ದರೂ ಸಹ ಕಾಂಗ್ರೆಸ್, ಜೆಡಿಎಸ್, ಬಿಜೆಪಿಗಳೆಲ್ಲ ತಂತಮ್ಮ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಳ್ಳಲು ಟೊಂಕಕಟ್ಟಿ ನಿಂತಿವೆ. ಬಿಜೆಪಿ ಪಕ್ಷಕ್ಕಂತೂ ಕಡೂರು ವಿಧಾನಸಭಾ ಕ್ಷೇತ್ರವನ್ನು ಗೆದ್ದುಕೊಂಡರೆ ಇಡೀ ಚಿಕ್ಕಮಗಳೂರಲ್ಲಿ ತನ್ನದೇ ಅಧಿಪತ್ಯ ಎಂಬಂಥ ತಹತಹ ವಿಪರೀತವಾಗಿದೆ. ತನ್ನ ಕ್ಯಾಂಡಿಡೇಟು ತಕ್ಕವನಲ್ಲದಿದ್ದರೂ ಹಣ-ಜಾತಿ ಬಲದಿಂದಲೇ ಗೆದ್ದುಕೊಳ್ಳಲು ತಯಾರಿ ನಡೆಸಿದೆ. ಒಂದು ಮೂಲದ ಪ್ರಕಾರ ಕಡೂರಲ್ಲಿ ಒಂದಿಡೀ ಸರ್ಕಾರವೇ ಜಮೆಯಾಗಿ ಪ್ರಚಾರ ನಡೆಸುವ ಸಾಧ್ಯತೆಯಿದೆ. ಈಶ್ವರಪ್ಪ ಸೊಗಡು ಶಿವಣ್ಣ ಮುಂತಾದವರು ಇದೀಗಲೇ ಕಡೂರಲ್ಲಿ ಠಿಕಾಣಿ ಹೂಡಿಯಾಗಿದೆ.

ಜೆಡಿಎಸ್ ಕೂಡಾ ಈ ಚುನಾವಣೆಯನ್ನು ಪ್ರತಿಷ್ಠೆಯೆಂಬಂತೆಯೇ ಎದುರುಗೊಂಡಿದೆ. ಜೆಡಿಎಸ್ ವರಿಷ್ಠ ದೇವೇಗೌಡರು ಸ್ವತಃ ನಾಲ್ಕು ದಿನಗಳ ಕಾಲ ದತ್ತಾ ಪರ ಪ್ರಚಾರ ನಡೆಸಲಿದ್ದಾರೆ. ಇನ್ನು ಕಾಂಗ್ರೆಸ್ ವತಿಯಿಂದ ಸಿದ್ಧರಾಮಯ್ಯ ಪ್ರಚಾರಕ್ಕೆ ಧುಮುಕುವ ಸಾಧ್ಯತೆಗಳಿವೆ.

ಜಾತಿವಾರು ಲೆಕ್ಕಾಚಾರಕ್ಕೆ ಬಂದರೆ ಕುರುಬ, ಲಿಂಗಾಯತ ಸಮುದಾಯ ಹೆಚ್ಚಿನ ಸಂಖ್ಯೆಯಲ್ಲಿದೆ. ಕೆಂಪರಾಜು ಕುರುಬರಾದರೆ, ಬಿಜೆಪಿ ಅಭ್ಯರ್ಥಿ ವಿಶ್ವನಾಥ್ ಸಾದರ ಲಿಂಗಾಯತ. ಆದರೆ ಕೆಂಪರಾಜು ಕಣಕ್ಕಿಳಿದಿರುವ ಬಗ್ಗೆ ಕಾರ್ಯಕರ್ತರಲ್ಲೇ ವಿರೋಧ ಗೊಂದಲಗಳಿರುವುದರಿಂದ, ಬಿಜೆಪಿ ಕಡೆಯಿಂದ ಬಂಡಾಯ ಅಭ್ಯರ್ಥಿ ಕಣದಲ್ಲಿರುವುದರಿಂದ ದತ್ತಾಗೆ ಗೆಲುವಿನ ಹಾದಿ ಸುಗಮವಾಗುವ ಸಾಧ್ಯತೆಗಳಿವೆ.

ಮೂರೂ ಪಕ್ಷಗಳಿಗೂ ಇದು ಪಕ್ಕಾ ಪ್ರತಿಷ್ಠೆಯ ಚುನಾವಣೆ. ಶತಾಯಗತಾಯ ಗೆಲ್ಲಲೇಬೇಕೆಂಬ ಅಪೇಕ್ಷೆ ಎಲ್ಲರದ್ದಾಗಿದೆ. ಈ ಸಂಬಂಧ ಹಣ-ಹೆಂಡಗಳ ಹರಿದಾಟವೂ ವಿಪರೀತವಾಗಿದೆ. ಇದೆಲ್ಲದರಾಚೆ ಮತದಾರ ಯಾವ ತೀರ್ಪು ಕೊಡುತ್ತಾನೋ ಕಾದುನೋಡಬೇಕಿದೆ.

ಇದೆಲ್ಲ ಏನೇ ಇರಲಿ ಎಂದು ಪಕ್ಕಕ್ಕೆ ಸರಿಸಿ ಧರ್ಮ ...ಂಗ್ ಸತತವಾಗಿ ಆಯ್ಕೆಯಾಗಿ ಬರುತ್ತಿದ್ದ ಜೇವರ್ಗಿ ...ಮತಕ್ಷೇತ್ರದತ್ತ ಒಂದು ಸಲ ಹಣಕಿಹಾಕಿ ನೋಡಿದರೆ ...ತ್ತ ನೋಡಿದರತ್ತ ಧರ್ಮ್ ಸಿಂಗ್‌ರ ಭ್ರಷ್ಟ ಮುಖಗಳು ...ಗೋಚರವಾಗುತ್ತವೆ. ಖರ್ಗೆಯವರು ಈ ಹಿಂದೆ ಪ್ರತಿನಿಧಿಸು...ದ್ದ ಗುರುಮಿಠಕಲ್ ಮತಕ್ಷೇತ್ರದ್ದೂ ಇದೇ ಹಣೆಬರಹ. ...ಸುಮಾರು ಐವತ್ತು ವರ್ಷಗಳ ಕಾಲ ಇವರಿಬ್ಬರು ರಾಜಕೀಯ ...ಮಾಡಿಕೊಂಡು ಬಂದಿದ್ದರೂ ತಮ್ಮ ಹಿಂಬಾಲಕರನ್ನು ...ಅಲಬಡಕರಂತೆ ರೂಪಿಸಿದ್ದಾರೆಯೇ ವಿನಃ ಅವರಲ್ಲಿ ...ಬ್ಬನನ್ನೂ ಸಮರ್ಥ ನಾಯಕನನ್ನಾಗಿ ಬೆಳೆಸಿಲ್ಲ.

ಬದಲಾಗಿ ತಮ್ಮ ಕುಲಪುತ್ರರಾದ ಅಜಯ ಸಿಂಗ್ ...ಹಾಗೂ ಪ್ರಿಯಾಂಕ ಖರ್ಗೆಯವರನ್ನು ತಮ್ಮ ಕಣ್ಣ ...ಮುಂದೆಯೇ ರಾಜಕೀಯ ಅಖಾಡದಲ್ಲಿ ತಮ್ಮಂತೆಯೇ ...ದಸ್ಥಾಯಿ ನಾಯಕರಾಗಿ ಬೆಳೆಯುವಂತೆ ಈಗಾಗಲೇ ...ಮನ್ನಾರಗಳನ್ನು ರೂಪಿಸಿದ್ದಾರೆ. ಧೃತರಾಷ್ಟ್ರನ ಕುರುಡು ...ಪ್ರೀತಿಯನ್ನು ನಂಬಿಕೊಂಡಿರುವ ಈ ನಾಯಕರಿಗೆ ತಮ್ಮ ...ಮನೆಯವರೇ ಆಗಿರುವ ಇನ್ನಿತರ ವ್ಯಕ್ತಿಗಳ ಬಗೆಗೂ ...ಷ್ಟು ವ್ಯಾಮೋಹವಿಲ್ಲ. ಬದಲಾಗಿ ತಮ್ಮ ಕುಲಪುತ್ರನೇ ...ಮ್ಮ ಸ್ಥಾನವನ್ನು ಅಲಂಕರಿಸಿಕೊಂಡಿರಬೇಕು ಎಂಬುದು ...ವರ ಮಹತ್ವಾಕಾಂಕ್ಷೆ.

ಇಂಥ ಹುಚ್ಚುತನಕ್ಕೆ ಬಿದ್ದೇ ಪ್ರಿಯಾಂಕ ಖರ್ಗೆಯನ್ನು ...ಚಿತ್ತಾಪುರ ಮತಕ್ಷೇತ್ರದಲ್ಲಿ ಪ್ರತಿಷ್ಠಾಪಿಸುವ ಹುನ್ನಾರ ...ಹೆಸಿದರೂ ಅದರಲ್ಲಿ ಖರ್ಗೆ ಯಶಸ್ಸು ಕಾಣಲಿಲ್ಲ. ಆದರೆ ...ಧರ್ಮ ಸಿಂಗ್ ಅವರ ಸೂಕ್ಷ್ಮ ನಡೆಗಳನ್ನು ಕಂಡಿರುವ ...ಲ್ಲಿನ ಜನ ಮಾತ್ರ ಏನಕೇನ ಪ್ರಕಾರೇಣ ತನ್ನ ಮಗನನ್ನು ...ಗುಲ್ಬರ್ಗಾ ದಕ್ಷಿಣ ಮತಕ್ಷೇತ್ರದಿಂದ ಗೆಲ್ಲಿಸುವುದಕ್ಕೆ ಸಿಂಗ್ ...ಯಾವುದೇ ಕೀಳುತನಕ್ಕೂ ಇಳಿಯಬಲ್ಲ ಎಂದಾಡಿಕೊಳ್ಳುತ್ತಾರೆ.


ಅಂದಂತೆ ಈಗಾಗಲೇ ದೇವೇ ಗೌಡರೊಂದಿಗೆ ಒಳ ...ಒಪ್ಪಂದ ಮಾಡಿಕೊಂಡಂತೆ ಕಡೂರಿನ ಚುನಾವಣೆಯಲ್ಲಿ ...ಜೆಡಿಎಸ್ ಅಭ್ಯರ್ಥಿ ವೈ.ಎಸ್.ವಿ. ದತ್ತ ಅವರ ಚುನಾವಣೆಯ ...ಸಂಪೂರ್ಣ ಖರ್ಚನ್ನು (ಸುಮಾರು ಮೂರು ಕೋಟಿ ...ರೂ.ಗಳನ್ನು) ಧರ್ಮ ಸಿಂಗ್‌ರೇ ಕೊಡುತ್ತಾರಂತೆ! ಈ ...ಮೂಲಕ ಗುಲ್ಬರ್ಗಾ ದಕ್ಷಿಣ ಮತಕ್ಷೇತ್ರದಲ್ಲಿ ತಮ್ಮ ಮಗನ ...ಗೆಲುವಿಗೆ ಕಾರಣರಾಗುವಂತೆ ಪರೋಕ್ಷ ಆಟ ಆಡಲು ...ಪ್ಲಾನ್ ಹಾಕಿಕೊಂಡು ಕುಳಿತ್ತಿದ್ದಾರೆ ಧರ್ಮ ಸಿಂಗ್.

ದೇವೇಗೌಡ ಮತ್ತು ಧರ್ಮ ಸಿಂಗ್‌ಗಳ ಸ್ವಾರ್ಥದ ...ಕಾರಣಕ್ಕಾಗಿ ಹೋರಾಟಗಾರ ಎಸ್.ಕೆ.ಕಾಂತಾ ಜೆಡಿಎಸ್ ...ಟಿಕೆಟ್ ತಪ್ಪಿಸಿಕೊಂಡಿದ್ದಾರೆ. ಇದು ಕ್ಷೇತ್ರದ ಜನರಿಗಾದ ...ದ್ರೋಹವೇ ಅಲ್ಲವೇ?

• ವಿಶ್ವಾರಾಧ್ಯ ಸತ್ಯಂಪೇಟೆ

Satyampet1969@gmail.com


ಕುವೆಂಪು, ತೇಜಸ್ವಿ ಹೆಸರಲ್ಲಿ ಜಗದೀಶ್ ಶೆಟ್ಟರ್ ದರೋಡೆ!



ಕರ್ನಾಟಕಕ್ಕೆ ಅದೇನು ಕೇಡುಗಾಲ ಬಂತೋ?!


ರಣ ಹಸಿವಿನ ಚೆಡ್ಡಿ ಸಂತತಿಗೆ ಅಧಿಕಾರ ಸಿಕ್ಕಿದ್ದೇ ತಡ, ರಾಜ್ಯ ದಿಕ್ಕು ದಿವಾಳಿಯಾಗುತ್ತಿದೆ! ಒಂದು ಕಡೆ ವಿಕ್ಷಿಪ್ತ ಸಿಎಂ ಯಡ್ಡಿಜೀ, ಮತ್ತೊಂದೆಡೆ ಆತನ ಮಂತ್ರಿ ಹಾಗು ಅಧಿಕಾರಿಗಳು ಕಳ್ಳ ಬೆಕ್ಕಂತೆ ಕಣ್ಣು ಮುಚ್ಚಿಕೊಂಡು 'ಹಾಲು' ಕುಡಿಯುತ್ತಿದ್ದಾರೆ. ಈ ಬರಗೆಟ್ಟ ಬೆಕ್ಕುಗಳ ಹಾವಳಿಗೆ ಬೆಚ್ಚಿ ಬಿದ್ದಿರುವ ಕನ್ನಡನಾಡಿನ ಜನ "ಹಬ್ಬಾ.... ಹಬ್ಬಾ" ಎಂದು ಬಾಯ್ಬಾಯಿ ಬಡಿದುಕೊಳ್ಳುತ್ತಿದ್ದಾರೆ. ಈ ಬೆಕ್ಕುಗಳು ಮಾತ್ರ ತಾವು ಕದ್ದುಮುಕ್ಕುತ್ತಿರುವುದು ಯಾರಿಗೂ ಗೊತ್ತಾಗುತ್ತಿಲ್ಲವೆಂಬ ಭಂಡತನದಲ್ಲಿ ಒಂದೇ ಸಮನೆ ಸ್ವಾಹಾ ಮಾಡುತ್ತಿವೆ....

ಯಾವ್ಯಾವ ಬೋಗಸ್ ಯೋಚನೆ-ಯೋಜನೆಗಳಿಂದ ಸರ್ಕಾರದ ಬೊಕ್ಕಸ ಬರಿದು ಮಾಡಲು ಸಾಧ್ಯವೋ ಅಂಥದ್ದೆಲ್ಲ ಯಡ್ಡಿಯ ಬಕಾಸುರ ಪಡೆ ಜಾರಿಗೊಳಿಸುತ್ತಿವೆ. ಕಿಕ್‌ಬ್ಯಾಕ್-ಪರ್ಸೆಂಟೇಜ್-ಕಮಿಷನ್ ದುರಾಸೆಗೆ ಬಿದ್ದಿರುವ ಮುಖ್ಯಮಂತ್ರಿ, ಇನ್ನಿತರ ಸಚಿವರ ಹಪಾಹಪಿ ಅರ್ಥೈಸಿ ಕೊಂಡಿರುವ ಅಧಿಕಾರಿ ಗಣ ಲಕ್ಷ-ಲಕ್ಷ, ಕೋಟಿ-ಕೋಟಿಗಳ ತರಹೇವಾರಿ ಪ್ಲಾನ್-ಪ್ರಾಜೆಕ್ಟ್‌ಗಳ ಐಡಿಯಾ ಕೊಟ್ಟು ಸಿಕ್ಕಷ್ಟು ಕಬಳಿಸುತ್ತಿದ್ದಾರೆ. ಇಂಥದೊಂದು ಕೋಟ್ಯಾಂತರ ರೂಪಾಯಿಗಳ ಕರ್ಮಕಾಂಡ ಗ್ರಾಮೀಣಾಭಿವೃದ್ಧಿ ಮಂತ್ರಿ ಜಗದೀಶ್ ಶೆಟ್ಟರ್ ದರ್ಬಾರಿನಲ್ಲಿ ವ್ಯವಸ್ಥಿತವಾಗಿ ನಡೆಯುತ್ತಿದೆ!!



ಸ್ಕ್ಯಾಂಡಲ್ ತುಂಬ ಸಿಂಪಲ್.....


ರಾಜ್ಯದ ಪ್ರತಿ ಜಿಲ್ಲೆಯ ಜಿಲ್ಲಾ ಪಂಚಾಯತ್ ಅಧೀನದಲ್ಲಿನ ಹಲವು ಇಲಾಖೆಗಳಿಂದ ಬರೋಬ್ಬರಿ 10,000 ರೂಪಾಯಿಗಳ ಸಾಹಿತ್ಯ ಕೃತಿಗಳ ಖರೀದಿಸಿ ಸಾಹಿತ್ಯ ಸಮಾರಾಧನೆ ಮಾಡಿಸುವ 'ಉದಾತ್ತ' ಯೋಜನೆಯೊಂದು ಕಳೆದ ಮೇ ತಿಂಗಳಲ್ಲಿ ಗ್ರಾಮೀಣಾಭಿವೃದ್ಧಿ ಇಲಾಖೆಗೆ ಹೊಳೆದಿದೆ! ಈ ಕೋಟ್ಯಾಂತರ ರೂಪಾಯಿ ಕಿಕ್‌ಬ್ಯಾಕ್ ಹೊಡೆಯುವ ಪ್ರಾಜೆಕ್ಟ್ ಹೊಳೆದಿದ್ದು ಆ ಇಲಾಖಾ ಮಂತ್ರಿ ಜಗದೀಶ್ ಶೆಟ್ಟರ್‌ಗೋ ಅಥವಾ ಅವರ ಖಾತೆಯ ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಅಧೀನ ಕಾರ್ಯದರ್ಶಿ ಎಂ.ಆರ್. ಬಾಲಕೃಷ್ಣಗೋ ಗೊತ್ತಿಲ್ಲ. ಒಟ್ಟಿನಲ್ಲಿ ಬೆಂಗಳೂರಿನ ಬಹುಮಹಡಿ ಕಟ್ಟಡದಲ್ಲಿರುವ ಗ್ರಾಮೀಣಾಭಿವೃದ್ಧಿ ಇಲಾಖೆಯ ಕಚೇರಿಯಿಂದ ರಾಜ್ಯದ ಎಲ್ಲ ಜಿಪಂಗಳಿಗೆ ಮತ್ತು ಪ್ರತಿ ತಾಲ್ಲೂಕಿನ ಹಲವು ಇಲಾಖೆಗಳಿಗೆ ರಾಷ್ಟ್ರಕವಿ ಕುವೆಂಪು ಮತ್ತು ಪೂರ್ಣಚಂದ್ರ ತೇಜಸ್ವಿ ವಿರಚಿತ 37 ಪುಸ್ತಕಗಳ ಒಂದು ಸೆಟ್ ಖರೀದಿಸುವಂತೆ ತಾಕೀತು ಮಾಡುವಂತೆ ಆದೇಶಿಸುವ ಸುತ್ತೋಲೆ (ಗ್ರಾ ಅಪ 411 ಜಿ ಪಸ 99) 22.5.10 ರಂದು ರವಾನೆಯಾಗಿದೆ!



ಈ ಗೋಲ್‌ಮಾಲ್ ಸುತ್ತೋಲೆ ಅದೆಷ್ಟು ಕಟ್ಟುನಿಟ್ಟಾಗಿ ಯೆಂದರೆ, ಜಿಪಂ ಆಡಳಿತಕ್ಕೆ ಒಳಪಡುವ ಜಿಲ್ಲೆಯ ಎಲ್ಲ ಶಿಕ್ಷಣ ಸಂಸ್ಥೆಗಳು, ಅನ್ನು ಸಾರ್ವಜನಿಕ ಗ್ರಂಥಾಲಯಗಳು, ಗ್ರಾಮ ಪಂಚಾಯ್ತಿಗಳು, ಗ್ರಾಪಂಗಳ ಗ್ರಂಥಾಲಯಗಳು, ಹಿಂದುಳಿದ ವರ್ಗದ, ಅಲ್ಪಸಂಖ್ಯಾತರ, ಪರಿಶಿಷ್ಟ ಜಾತಿ-ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿ ನಿಲಯಗಳು ಈ ಸಾಹಿತ್ಯ ಕೃತಿಗಳ ಸೆಟ್ ಅನ್ನು ಕಡ್ಡಾಯವಾಗಿ ಖರೀದಿಸಲೇ ಬೇಕು. ಈ ಏಜೆನ್ಸಿಗಳ ಮುಖ್ಯಸ್ಥರು ಹಾಗೊಮ್ಮೆ ಸದ್ರಿ ಸೆಟ್ ಖರೀದಿಸದಿದ್ದರೆ ಅವರ ಮೇಲೆ ಶಿಸ್ತು ಕ್ರಮ ಗ್ಯಾರಂಟಿ! ಅಷ್ಟೇ ಅಲ್ಲ ಸಂಬಳಕ್ಕೂ ತಡೆ!!

ಈ ಸುತ್ತೋಲೆ ಪ್ರಕಾರ ಕುವೆಂಪು ಒಬ್ಬರೇ ಅಲ್ಲ ವಿಚಾರವಾದಿ ಕೆ.ಪಿ. ಪೂರ್ಣಚಂದ್ರ ತೇಜಸ್ವಿಯೂ "ಕವಿ." ಅಂಥ ಉದ್ದಾಮ ಜ್ಞಾನವಂತರು ಗ್ರಾಮೀಣಾಭಿವೃದ್ಧಿ ಮಂತ್ರಿ ಮತ್ತವರ ಸಲಹೆಗಾರ ಐಎಎಸ್, ಕೆಎಎಸ್ ಅಧಿಕಾರಿಗಳು ಮತ್ತು ಸಲಹೆಗಾರರು!! ಹಾಗಂತ "ಕವಿ" ತೇಜಸ್ವಿಯವರ "ಗದ್ಯ"ಗಳನ್ನೇ ಖರೀದಿಸುವಂತೆ ಒಂದು ಲಿಸ್ಟ್ ಅನ್ನು ಸಹ ಈ ಪುಸ್ತಕಗಳ ಸರಬರಾಜುದಾರ ಮೂಡ್ಲಪ್ಪ ಎಂಬ ಹೈಕೋರ್ಟ್ ವಕೀಲ ಕಳಿಸಿದ್ದಾರೆ. ಇದೇನೇ ಇರಲಿ; ಈ ಭರ್ಜರಿ ಹತ್ತು ಸಾವಿರ ರೂಪಾಯಿಗಳ ಕುವೆಂಪು-ತೇಜಸ್ವಿ ಪುಸ್ತಕ ಕೊಳ್ಳಲು ಸಂಬಂಧಿಸಿದ ಸಂಸ್ಥೆ-ಇಲಾಖೆಯವರು ಹಣವಿಲ್ಲವೆಂದು ಉದಾಸೀನ ಮಾಡುವಂತಿಲ್ಲ; ಗ್ರಾಪಂ ಶಿಕ್ಷಣ ಸಂಸ್ಥೆ ಮತ್ತು ವಿದ್ಯಾರ್ಥಿನಿಲಯದವರು ಯಾವ ನಿಧಿ ಲಭ್ಯವಿದೆಯೋ ಅದರಿಂದಲೇ ಈ 37 ಪುಸ್ತಕಗಳನ್ನು ಖರೀದಿಸಬೇಕು!

ಹೇಗಾದರೂ ಮಾಡಿ ರಾಜ್ಯದ ಪ್ರತಿ ತಾಲ್ಲೂಕಿನಲ್ಲಿ ನಾಲ್ಕೈದು ಲಕ್ಷದ ವ್ಯವಹಾರ ಕುದುರಿಸುವ ಸ್ಕೆಚ್ ಒಂದನ್ನು ಗ್ರಾಮೀಣಾಭಿವೃದ್ಧಿ ಇಲಾಖೆಯ ಅಡ್ಡಕಸುಬಿಗಳು ಮತ್ತವರ ಜತೆ ಸೇರಿರುವ ಗೋಲ್‌ಮಾಲ್ ವೀರ ಎಚ್.ಪಿ. ಮೂಡ್ಲಪ್ಪನೆಂಬ ಬುಕ್ ಸಪ್ಲೈಯರ್ ಹಾಕಿಕೊಂಡು ಕಾರ್ಯಾಚರಣೆಗೆ ಇಳಿದಿದ್ದಾರೆ. ಜಿಪಂ ಅಧೀನದ ಸಮಾಜ ಕಲ್ಯಾಣ ಇಲಾಖೆ, ಶಿಕ್ಷಣ ಇಲಾಖೆ, ಗ್ರಂಥಾಲಯ ಇಲಾಖೆ ಮತ್ತು ಗ್ರಾಪಂಗಳು ತಮ್ಮಲ್ಲಿರುವ ಯಾವ ನಿಧಿಯಿಂದ ಲಾದರೂ ಅಥವಾ ಜಿಪಂ ಸರ್ಕಾರ ಬಿಡುಗಡೆ ಮಾಡಿರುವ ಅಭಿವೃದ್ಧಿ ನಿಧಿಯಿಂದ ಈ 'ಅಮೂಲ್ಯ' ಸಾಹಿತ್ಯ ಕೃತಿ ಕೊಳ್ಳಬೇಕು. ಇದ್ಯಾವುದೂ ಇಲ್ಲದಿದ್ದರೆ 2515 ಲಕ್ಷ ಶೀರ್ಷಿಕೆಯ ಯೋಜನೇತರ ನಿಧಿಯನ್ನಾದರೂ ಬಳಸಬೇಕು.



ಹಾಗೆಯೇ ಎಲ್ಲ ಶಿಕ್ಷಣ ಸಂಸ್ಥೆಗಳಲ್ಲಿ ಲಭ್ಯವಿರುವ ವೈದ್ಯಕೀಯ, ಭೂದಾನ, ಚಾಲ್ತಿ ನಿಧಿ ಅಥವಾ ಯಾವುದೇ ಸಂಚಿತ ನಿಧಿಯಿಂದ ಹಣ ಡ್ರಾ ಮಾಡಿ ದಗಾಕೋರ ಮೂಡ್ಲಪ್ಪನ ಹುಂಡಿಗೆ ಹಾಕಬೇಕು. ಹಾಗೆಯೇ ಗ್ರಾಪಂನವರು ಸಾರ್ವಜನಿಕರಿಂದ ಸಂಗ್ರಹಿಸಿದ ತೆರಿಗೆ ನಿಧಿಯಲ್ಲಿ ಅಥವಾ ಜಿಪಂ-ಸರಕಾರ ಕೊಟ್ಟಿರುವ ಅಭಿವೃದ್ಧಿ ಫಂಡಿನಿಂದಾದರೂ ಹಣ ತೆಗೆದು ಪುಸ್ತಕ ಕೊಳ್ಳಬೇಕು. ಕೃತಿಗಳನ್ನು ಎಚ್.ಪಿ. ಮೂಡ್ಲಪ್ಪ ಅಡ್ವೋಕೇಟ್ ಹೈಕೋರ್ಟ್, ರಾಜಾಜಿ ನಗರ, ಬೆಂಗಳೂರು ಎಂಬ ಹಲಾಲು ಕೋರನೊಬ್ಬನಿಂದಲೇ ಖರೀದಿಸ ಬೇಕೆಂದು ಸುತ್ತೋಲೆಯಲ್ಲಿ ಆತನ ಪೂರ್ಣ ವಿಳಾಸ ಕೊಡಲಾಗಿದೆ. ಈ ಚೋರ ಮೂಡ್ಲಪ್ಪ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆಯ ಸ್ವಾಹಾಶೂರರು ಜಿಪಂ-ಗ್ರಾಪಂಗಳಿಂದ ಹಣ ಹೊಡೆಯಲು ಅದೆಂಥ ಬುರ್ನಾಸ್ ಹಠಕ್ಕೆ ಬಿದ್ದಿದ್ದಾರೆಂದರೆ, ಸದ್ರಿ ಸುತ್ತೋಲೆ ಸಂಬಂಧಿಸಿದ ಇಲಾಖೆಗಳವರು ಪುಸ್ತಕ ಖರೀದಿಸುವವರೆಗೂ ಜಾರಿಯಲ್ಲಿರುತ್ತದೆಂದು ಎಚ್ಚರಿಸಲಾಗಿದೆ!!

ಇಂಥದೊಂದು 'ಭಯೋತ್ಪಾದಕ' ಸುತ್ತೋಲೆ ಹೊರಡಿಸಿದರೂ ಮೂಡ್ಲಪ್ಪ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆಯ ಪ್ರಭೃತಿಗಳಿಗೆ ನಿರೀಕ್ಷಿತ ದಂಧೆ ಕುದುರಲೇ ಇಲ್ಲ!! ಆಗ ಮತ್ತೆ ಮೂಡ್ಲಪ್ಪನ ಗ್ಯಾಂಗು ಜಿಪಂಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಬೆನ್ನುಬಿದ್ದಿದೆ. ಹೇಗಾದರೂ ಮಾಡಿ ತಾಲ್ಲೂಕು ಮಟ್ಟದಲ್ಲಿ ತಮ್ಮ ಪುಸ್ತಕಗಳ ವ್ಯಾಪಾರ ಮಾಡಿಸುವಂತೆ ಕಾಡತೊಡಗಿದೆ. ಸರ್ಕಾರದ ಒತ್ತಡಕ್ಕೆ ಬೆದರಿಕೆಗೆ ಜಿಪಂ ಸಿಇಓಗಳು ಕಂಗಾಲಾಗಿ ಹೋಗಿದ್ದಾರೆ. ತಾವು ತಲೆ ತಪ್ಪಿಸಿಕೊಳ್ಳಲು ತಾಲ್ಲೂಕು ಪಂಚಾಯ್ತಿಗಳ ಕಾರ್ಯನಿರ್ವಹಣಾಧಿಕಾರಿಗಳಿಗೆ "ಎಚ್ಚರಿಕೆ" ಸುತ್ತೋಲೆ ಹಾಕಿದ್ದಾರೆ. ಅದರಲ್ಲಿ ಗ್ರಾಪಂ ಕಾರ್ಯದರ್ಶಿಗಳು, ಬಿಸಿಎಂ ವಿಸ್ತರಣಾಧಿಕಾರಿಗಳು ಮತ್ತು ಸಮಾಜ ಕಲ್ಯಾಣ ಇಲಾಖಾಧಿಕಾರಿಗಳು ಮೂಡ್ಲಪ್ಪನ ಗ್ಯಾಂಗಿನಿಂದ ಪುಸ್ತಕ ಖರೀದಿಸುವಂತೆ ಕ್ರಮ ಕೈಗೊಳ್ಳುವಂತೆ 'ಆಜ್ಞೆ' ಮಾಡಲಾಗಿತ್ತು. ತಾಪಂ ಇಓಗಳು ಸಂಬಂಧಿಸಿದ ಇಲಾಖೆಗೆ ಈ ದೋಖಾ ಪುಸ್ತಕ ಸೆಟ್ ಖರೀದಿಸದಿದ್ದರೆ ಸಂಬಳ ನಿಲ್ಲಿಸುವ ಬೆದರಿಕೆ ಹಾಕಿದ್ದಾರೆ!

ಗ್ರಾಮೀಣಾಭಿವೃದ್ಧಿ ಇಲಾಖೆಯ ಆಯಕಟ್ಟಿನ ಅಧಿಕಾರಿಗಳ ಸಖ್ಯದ ಮೂಡ್ಲಪ್ಪನ 'ಸಾಹಿತ್ಯ-ಸಂಸ್ಕೃತಿ ಕ್ಷೇತ್ರದಲ್ಲಿ ಜ್ಞಾನಾರ್ಜನೆಗೈವ" ಯೋಜನೆ ಕೊಳ್ಳೆ ಹೊಡೆಯಲೆಂದೇ ರೂಪಿಸಿರುವಂಥದೆಂಬುದು ಅದರ ರೂಪುರೇಷೆ ನೋಡಿದರೆ ಎಂಥವರಿಗೂ ಅರ್ಥವಾಗುತ್ತದೆ. ತನ್ನ ಲೆಟರ್‌ಹೆಡ್‌ನಲ್ಲಿ ಕುವೆಂಪು ಫೋಟೋ ಅಚ್ಚಿಸಿಕೊಂಡಿರುವ ವಂಚಕ ಮೂಡ್ಲಪ್ಪನಿಗಂತೂ ಕುವೆಂಪು- ತೇಜಸ್ವಿ ಪುಸ್ತಕಗಳನ್ನು ನಾಲ್ಕು-ಐದು ಪಟ್ಟು ಹೆಚ್ಚಿಗೆ ರೇಟಿಗೆ ಸರ್ಕಾರಿ ಇಲಾಖೆಗೆ ಪೂರೈಸಿ ವಿಧಾನ ಸೌಧದಲ್ಲಿರುವ ಅಧಿಕಾರಿಗಳಿಗೆ-ಮಂತ್ರಿಗಳಿಗೆ ಕಿಕ್‌ಬ್ಯಾಕ್ ಕೊಡುವುದೇ ಕಸುಬು! ಈಗಾತ ಗ್ರಾಮೀಣಾಭಿವೃದ್ಧಿ ಇಲಾಖೆ ಅಧಿಕಾರಿಗಳನ್ನು ಬುಟ್ಟಿಗೆ ಹಾಕಿಕೊಂಡು ಪಡೆದಿರುವ ಕಾಂಟ್ರಾಕ್ಟ್‌ನಲ್ಲೂ ದೊಡ್ಡ ಮೋಸ-ವಂಚನೆ ನಡೆಯುತ್ತಿದೆ. ಮೂಡ್ಲಪ್ಪ ಒದಗಿಸುತ್ತಿರುವ ಕುವೆಂಪು-ತೇಜಸ್ವಿಯ 37 ಪುಸ್ತಕಗಳ ಒಟ್ಟು ಮೌಲ್ಯ 3258 ರೂ.ಗಳಷ್ಟೇ! ಆದರಾತ ಪಡೆಯುತ್ತಿರುವುದು 10 ಸಾವಿರ ರೂ. ಈ ಪುಸ್ತಕಗಳು 10-15 ಪರ್ಸೆಂಟ್ ಡಿಸ್ಕೌಂಟ್‌ಗೆ ದೊಡ್ಡ-ದೊಡ್ಡ ಪುಸ್ತಕದ ಅಂಗಡಿಗಳಲ್ಲಿ ಸಿಗುತ್ತವೆ. ಅಂದರೆ ಈ ಪುಸ್ತಕಗಳ ಸೆಟ್ ಎರಡರಿಂದ ಎರಡೂವರೆ ಸಾವಿರ ರೂ.ಗಳಿಗೆ ಸಿಗುತ್ತದೆ.

ಕುವೆಂಪು ವಿರಚಿತ 'ಕಾನೂರು ಹೆಗ್ಗಡತಿ' ಕೃತಿ ಬೆಲೆ 300 ರೂ. ಆದರೆ ಮೋಸಗಾರ ಮೂಡ್ಲಪ್ಪ ಮಸಲತ್ತಿನ ಅಧಿಕಾರಿಗಳನ್ನು ಕಟ್ಟಿಕೊಂಡು 800 ರೂ.ಗೆ ಮಾರಿದ್ದಾನೆ! 72 ರೂ. ಮುಖ ಬೆಲೆಯ ತೇಜಸ್ವಿಯ "ಮಿಸ್ಸಿಂಗ್ ಲಿಂಕ್" ಕೃತಿಗೆ 300 ರೂ.! 'ವಿಭೂತಿ ಪೂಜೆ' ಪುಸ್ತಕದ ಬೆಲೆ 60 ರೂ. ಇದು ಮೂಡ್ಲಪ್ಪನ ಪ್ರಕಾರ 300 ರೂ. ಪುಸ್ತಕ. ಇಂಥ ಗೋಲ್‌ಮಾಲ್ ಲೆಕ್ಕ ಹಾಕುತ್ತಾ ಹೋದರೆ ಪ್ರತಿ ಸೆಟ್‌ನಲ್ಲಿ ಮೂಡ್ಲಪ್ಪನ ಬಕಾಸುರ ಬಳಗ ಬರೋಬ್ಬರಿ 6742 ರೂ. ಹೊಡೆದಿರುವುದು ಎದ್ದು ಕಾಣಿಸುತ್ತದೆ!! ರಾಜ್ಯದ ಗ್ರಾಪಂಗಳು, ಸರ್ಕಾರಿ ಹಾಸ್ಟೆಲ್‌ಗಳು, ಶಿಕ್ಷಣ ಸಂಸ್ಥೆಗಳು ಮತ್ತು ಸರ್ಕಾರಿ ಗ್ರಂಥಾಲಯಗಳನ್ನು ಸಣ್ಣ ಅಂದಾಜಿಗೊಳಪಡಿಸಿದರೂ ಸಾಕು, ಈ ಖರೀದಿ 10 ಕೋಟಿ ರೂ. ಕರ್ಮಕಾಂಡವೆಂಬುದು ಖಾತ್ರಿಯಾಗುತ್ತದೆ!

ಇದರಲ್ಲಿ ಗ್ರಾಮೀಣಾಭಿವೃದ್ಧಿ ಮಂತ್ರಿ ಜಗದೀಶ್ ಶೆಟ್ಟರ್‌ಗೆಷ್ಟು? ಸಲಹೆಗಾರ, ಅಧಿಕಾರಿ ಪಂಡಿತರಿಗೆಷ್ಟು? ಮೂಡ್ಲಪ್ಪ ಕಬಳಿಸಿರುವುದೆಷ್ಟು? ಈ ಪಾಲು ಪಕ್ಕಾ ಗೊತ್ತಾಗಬೇಕಿದ್ದರೆ ನಿಷ್ಠುರ ತನಿಖೆಯಿಂದ ಮಾತ್ರ ಸಾಧ್ಯ. ತನಿಖೆ ಮಾಡಿಸುವ ತಾಕತ್ತು ಸಿಎಂ ಯಡ್ಡಿಗಿದೆಯಾ? ಅಂಥ ನೈತಿಕ ಧೈರ್ಯ ಸಿಎಂ ಸಾಹೇಬಗಿರುವುದು ಅನುಮಾನ. ಏಕೆಂದರೆ ಯಡ್ಡಿಜೀಯೇ ಕಳ್ಳರ ಗುರು.

ಚೆಡ್ಡಿ ಕಳ್ಳರಿಂದ ಕರ್ನಾಟಕಕ್ಕೆ ಮುಕ್ತಿಯೆಂದು?

• ನಹುಶ

"ಬುಕ್ಸ್ ತಗೊಂಡ್ರೆ ಸರಿ... ಇಲ್ಲಾಂದ್ರೆ.....!" -ಮೂಡ್ಲಪ್ಪ

ಕುವೆಂಪು-ತೇಜಸ್ವಿಯವರ ಪುಸ್ತಕ ಸರಬರಾಜು ಮಾಡುತ್ತೇನೆ ಎಂದು ಹೊರಟಿರುವ ಈ ಮೂಡ್ಲಪ್ಪ ಓರ್ವ ವಿಚಿತ್ರ ಮನುಷ್ಯ. ಇವನು ಬರಹಗಾರನಲ್ಲ, ಅದು ಹರವಾಗಿಲ್ಲ ಅಂದರೆ ಪುಸ್ತಕ ಪ್ರಕಾಶಕನೂ ಅಲ್ಲ, ವೃತ್ತಿಯಲ್ಲಿ ಹೈಕೋರ್ಟ್ ಲಾಯರ್. ಮನೆ ರಾಜಾಜಿನಗರದಲ್ಲಿದೆ. ಇವನು ಅದ್ಯಾವ ಮಾಯದಲ್ಲೋ ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಪುಸ್ತಕ ಖರೀದಿಸುವಂತೆ ಆರ್ಡರ್ ಮಾಡಿಸಿ, ಎಲ್ಲರಿಗೂ ತಲೆ ತಿನ್ನುತ್ತಿದ್ದಾನೆ. ಇವನ ಮನೆ ನಂಬರ್ 23151876 ಗೆ ಫೋನ್ ಮಾಡಿದರೆ ಸಾಕು ಪ್ರವರ ಶುರುವಾಗುತ್ತದೆ.

"ಯಾರ್ರಿ ನೀವು...ಪುಸ್ತಕದ ರೇಟು ಈಗ 12 ಸಾವಿರ ಆಗುತ್ತೆ, 10 ಪುಸ್ತಕ ಇದೆ. ತಗೊಳ್ಳಿಲ್ಲಾಂದ್ರೆ ನೋಟಿಸ್ ಕೊಡುತ್ತೀನಿ, ಗೊತ್ತಾಯ್ತು 12 ಸಾವಿರಕ್ಕೆ ಡಿ.ಡಿ. ತಗೊಂಡು ನಾಳೆ ಬೆಳಗ್ಗೆ ನಂ ಮನೆಗೆ ಬನ್ನಿ" ಅನ್ನುತ್ತಿರುತ್ತಾನೆ.


ಇಲ್ಲಿನ ಮುಖ್ಯಪ್ರಶ್ನೆ ಏನೆಂದರೆ ಈ ಮೂಡ್ಲಪ್ಪನಿಗೂ ಕುವೆಂಪು-ತೇಜಸ್ವಿಗೂ ಏನು ಸಂಬಂಧ? ತೇಜಸ್ವಿ-ಶ್ರೀರಾಮ್‌ರ ಪುಸ್ತಕ ಪ್ರಕಾಶನದವರಿಗೆ ಈ ಮೂಡ್ಲಪ್ಪನ ಬಗ್ಗೆ ಗೊತ್ತಿದೆಯಾ?

ಇದನ್ನೆಲ್ಲಾ ಸ್ಪಷ್ಟಪಡಿಸುವವರು ಯಾರು?

ಕರವೇ

ಕಷ್ಟ ತಿಂದು ತೆಪ್ಪಗಿರೋನ 'ಓರಾಟ'ಗಾಥೆ!

ಕನ್ನಡಕ್ಕೆ, ಕನ್ನಡಿಗರಿಗೆ ಏನೇ ಸಮಸ್ಯೆಯಾದರೂ ಈತನೊಳಗಿನ ಹೋರಾಟಗಾರ ಎದ್ದು ನಿಂತು ಹೂಂಕರಿಸುತ್ತಾನೆ. ಆದರೆ, ಕರ್ನಾಟಕದ ಗಡಿ ಕಲ್ಲುಗಳನ್ನೇ ಕಿತ್ತು ನಮ್ಮ ರಾಜ್ಯದ ಪ್ರದೇಶವನ್ನು ಆಂಧ್ರದ ಉಡಿ ಸೇರಿಸಿದರಲ್ಲಾ ಬಳ್ಳಾರಿಯ ಪಾಪಿಷ್ಠ ರೆಡ್ಡಿಗಳು? ಈ ವಿಚಾರದಲ್ಲೇಕೆ ನಾರಾಯಣ ಗೌಡನೊಳಗಿನ ಹೋರಾಟಗಾರ ಸತ್ತು ಮಲಗಿದ್ದಾನೆ?



ನಾಡು-ನುಡಿಯ ರಕ್ಷಕರೆಂಬಂತೆ ಪೋಸು ಕೊಡುತ್ತಲೇ ಪಸಂದಾಗಿ ಕೊಬ್ಬಿಹೋಗಿರುವವರ ಲಿಸ್ಟು ದೊಡ್ಡದಿದೆ. ಈ ವಿಚಾರದಲ್ಲಿ ಒಂದು ಸ್ಪರ್ಧೆ ಅಂತ ನಡೆದರೆ ಖಂಡಿತವಾಗಿಯೂ ಕರ್ನಾಟಕ ರಕ್ಷಣಾ ವೇದಿಕೆಯ ರಾಜ್ಯಾಧ್ಯಕ್ಷರೂ, ಕನ್ನಡಮ್ಮನ 'ಏ'ಮ್ಮೆಯ ಪುತ್ರರೂ, ಅಪ್ರತಿಮ 'ಓರಾಟ'ಗಾರರೂ ಆಗಿರುವ ಟಿ.ಎ. ನಾರಾಯಣ ಗೌಡರಿಗೆ ಗೆಲುವು ಖಚಿತ!

ಕನ್ನಡದ ಹೆಸರಲ್ಲಿ ಹೋರಾಟ ನಡೆಸುತ್ತಾ, ಅದನ್ನೇ ದಂಧೆಯಾಗಿಸಿಕೊಂಡು 'ಬುಡ'ದ ಮೇಲೆ ಕಂಟ್ರೋಲ್ ಕಳಕೊಂಡ ಜಾನುವಾರಿನಂತಾಡುವ ನಾರಾಯಣ ಗೌಡನ ಬಗ್ಗೆ ಬರೆಯಲು ಕಾರಣಗಳಿವೆ. ಈ ಆಸಾಮಿ ಕಾವೇರಿ ವಿವಾದದ ಸಂದರ್ಭದಲ್ಲಿ ಶಾಲು ಕೊಡವಿ ಬೀದಿಗಿಳಿಯುತ್ತಾನೆ. ತಮಿಳರ ವಿರುದ್ಧ ಹರಿಹಾಯುವ ಸಂದರ್ಭ ಬಂದಾಗ ವೀರಾಗ್ರಣಿಯಂತೆ ಒದರಾಡುತ್ತಾನೆ. ಹೊಗೇನಕಲ್ ವಿವಾದದ ತಲೆಬುಡ ಅರ್ಥವಾಗದಿದ್ದರೂ ಓಡೋಡಿ ಹೋಗಿ ಧರಣಿ ಕೂರುತ್ತಾನೆ-ಇವುಗಳಲ್ಲಿ ಕೆಲ ಸನ್ನಿವೇಶಗಳು ಕನ್ನಡಿಗರ ಸ್ವಾಭಿಮಾನ ಕೆರಳಿಸುವಂಥವುಗಳು. ಇಂಥವುಗಳನ್ನು ಹಿತಾಸಕ್ತಿಗಳ ನಡುವೆಯೂ ನಾರಾಯಣ ಗೌಡ ಬಳಸಿಕೊಂಡು ಮುಂಚೂಣಿಗೆ ಬಂದಿದ್ದಾರೆ.

ಇರಲಿ, ಮೇಲ್ಕಂಡ ಸಂದರ್ಭಗಳಲ್ಲಿ ನಾರಾಯಣ ಗೌಡ ನೊಬ್ಬ ಅಪ್ರತಿಮ ಹೋರಾಟಗಾರ. ಕನ್ನಡಕ್ಕೆ, ಕನ್ನಡಿಗರಿಗೆ ಏನೇ ಸಮಸ್ಯೆಯಾದರೂ ಈತನೊಳಗಿನ ಹೋರಾಟಗಾರ ಎದ್ದು ನಿಂತು ಹೂಂಕರಿಸುತ್ತಾನೆ. ಆದರೆ, ಕರ್ನಾಟಕದ ಗಡಿ ಕಲ್ಲುಗಳನ್ನೇ ಕಿತ್ತು ನಮ್ಮ ರಾಜ್ಯದ ಪ್ರದೇಶವನ್ನು ಆಂಧ್ರದ ಉಡಿ ಸೇರಿಸಿದರಲ್ಲಾ ಬಳ್ಳಾರಿಯ ಪಾಪಿಷ್ಠ ರೆಡ್ಡಿಗಳು? ಈ ವಿಚಾರದಲ್ಲೇಕೆ ನಾರಾಯಣ ಗೌಡನೊಳಗಿನ ಹೋರಾಟಗಾರ ಸತ್ತು ಮಲಗಿದ್ದಾನೆ?

ನಿಜ, ಬೆಳಗಾವಿ ನಮ್ಮ ನೆಲ. ಅದರ ಮೇಲೆ ಮರಾಠಿಗರು ಅಧಿಪತ್ಯ ಸಾಧಿಸಹೊರಟಿರುವುದು ಕನ್ನಡಿಗರನ್ನು ಕೆಣಕಿದಂತೆ. ಈ ವಿಚಾರದಲ್ಲಿ ನಾರಾಯಣ ಗೌಡ ಕನ್ನಡಿಗರೆಲ್ಲರ ಒಡಲಾಳದ ಆಕ್ರೋಶವನ್ನು ವ್ಯಕ್ತಪಡಿಸಿದ್ದಾನೆ. ಆದರೆ ಈತನಿಗೆ ನಮ್ಮದೇ ಸೌಕರ್ಯ-ಸವಲತ್ತು ಪಡೆದುಕೊಂಡು ತಾಯ್ನೆಲವನ್ನೇ ಆಂಧ್ರಕ್ಕೆ ಧಾರೆಯೆರೆದ ರೆಡ್ಡಿ ಪಡೆ ಯಾಕೆ ಖಳರಂತೆ ಕಾಣಿಸುತ್ತಿಲ್ಲ? ಹಲಾಲುಕೋರರು ನಮ್ಮ ನೆಲದ ಅದಿರನ್ನು ಅಕ್ರಮವಾಗಿ ಸಾಗಿಸಿ ಹಣ ಹೊಡೆದುಕೊಳ್ಳುತ್ತಿದ್ದರೂ ಯಾಕೆ ಅದರ ವಿರುದ್ಧವೊಂದು ಹೇಳಿಕೆಯನ್ನೂ ನೀಡುತ್ತಿಲ್ಲ?

ಬಳ್ಳಾರಿಯ ಒಡಲಲ್ಲಿ ರೆಡ್ಡಿ ಪಡೆ ನಡೆಸುತ್ತಿರುವ ಗೂಂಡಾಗಿರಿ ಗಮನಿಸಿದರೆ ಎಂಥವರಿಗಾದರೂ ಮೇಲ್ಕಂಡ ಪ್ರಶ್ನೆಗಳು ಕಾಡದಿರುವುದಿಲ್ಲ. ಜನಾರ್ದನ ರೆಡ್ಡಿ ಆಂಧ್ರದಿಂದ ಪರವಾನಗಿ ಪಡೆದು 'ಓಬಳಾಪುರಂ' ಹೆಸರಲ್ಲಿ ಮೈನ್ಸ್ ದಂಧೆ ನಡೆಸುತ್ತಿದ್ದಾನೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಅದಿರು ಸಿಗುವ ಪ್ರದೇಶವೆಲ್ಲಾ ಕರ್ನಾಟಕದ ಸರಹದ್ದಿನಲ್ಲಿ ಬರುತ್ತದೆ!

ಆಂಧ್ರ-ಕರ್ನಾಟಕ ಗಡಿಪ್ರದೇಶ ಓಬಳಾಪುರಂನ ಸಂಕಲಮ್ಮನ ಬೆಟ್ಟದ ತುದಿಯಲ್ಲಿ ಹಾದು ಹೋಗುತ್ತದೆ. ಆದರೆ ದುಷ್ಟ ರೆಡ್ಡಿ 2007ರಲ್ಲಿ ಸಂಕಲಮ್ಮನ ದೇವಸ್ಥಾನವನ್ನೇ ಉಡಾಯಿಸಿ ಕೇಕೆ ಹಾಕಿದ. ಈ ರೀತಿ ಭೂಮಾತೆಯನ್ನೇ ಆಂಧ್ರಕ್ಕೆ ಅಡ ಇಟ್ಟು ಯಾವ ಕಾನೂನು- ಕಟ್ಟಲೆಗಳಿಗೂ ಕ್ಯಾರೇ ಅನ್ನದೇ ಹೂಂಕರಿಸಿದ. ಆದರೆ ಕನ್ನಡದ ಕಟ್ಟಾಳು ನಾರಾಯಣ ಗೌಡ ತುಟಿಪಿಟಿಕ್ಕೆನ್ನಲಿಲ್ಲ!

ಇವತ್ತು ಅಕ್ರಮ ಗಣಿಗಾರಿಕೆ ಹೆಸರೆತ್ತಿದರೆ ಸಾಕು 'ನಾನೇನೂ ಮಾಡಿಲ್ಲ' ಅಂತ ನಟಿಸುತ್ತಾನಲ್ಲಾ ಕಳ್ಳ ರೆಡ್ಡಿ? ಇದರ ಹಿಂದೊಂದು ಕರಾಳ ಕಥೆ ಅಡಗಿದೆ. ಇಂದಿಗೂ ಹೊಸಪೇಟೆ, ಸಂಡೂರುಗಳಲ್ಲಿ ಇಪ್ಪತ್ತು ಕಂಪೆನಿಗಳು ಮೈನಿಂಗ್ ನಡೆಸುತ್ತಿವೆ. ಇವುಗಳಲ್ಲಿ ಬಹುತೇಕ ಕಂಪೆನಿಗಳ ಮಾಲೀಕರು ಗೂಂಡಾಗಿರಿ ತಡಕೊಳ್ಳಲಾರದೆ ರೆಡ್ಡಿಗಳಿಗೆ ಲೀಸಿಂಗ್ ಆಧಾರದಡಿ ಬಿಟ್ಟುಕೊಟ್ಟಿದ್ದಾರೆ. ಅವರ ಪಾಲಿಗೆ ಪುಟಗೋಸಿ ಪರ್ಸೆಂಟೇಜ್ ಹಣವಷ್ಟೇ ಉಳಿಯುತ್ತದೆ.

ರೆಡ್ಡಿ ಪಡೆಯ ಭಯಾನಕ ಕೃತ್ಯಗಳಿಗೆ ರೂಪಕದಂತಹುದೊಂದು ಘಟನೆಯನ್ನು ವಿವರಿಸಿದರೆ ಮಾಫಿಯಾದ ಆಳ ಅಗಲ ಅರ್ಥವಾದೀತು. ಸಂಡೂರಿನಲ್ಲಿ ತುಂಬಾ ವರ್ಷದ ಹಿಂದೆ ಲಿಂಗಾಯತ ಮಹಿಳೆಯೊಬ್ಬರಿಗೆ 40 ಎಕರೆಯಲ್ಲಿ ಮೈನಿಂಗ್ ನಡೆಸಲು ಪರವಾನಗಿ ನೀಡಲಾಗಿತ್ತು, ಈಕೆಗೀಗ ಕಣ್ಣು ಕಾಣಿಸುವುದಿಲ್ಲ, ಕಿವಿ ಕೇಳಿಸುವುದಿಲ್ಲ, ಇದನ್ನೇ ಎನ್‌ಕ್ಯಾಶ್ ಮಾಡಿಕೊಂಡ ರೆಡ್ಡಿ ಪಟಾಲಂ ಆ ವೃದ್ಧೆಯ ಬೀಡಾಡಿ ಮಕ್ಕಳಿಗೆ ಮಸ್ಕಾ ಹೊಡೆದು ನಲ್ವತ್ತು ಎಕರೆಯನ್ನು ತಮ್ಮ ಸುಪರ್ದಿಗೆ ತೆಗೆದುಕೊಂಡರು. ನಂತರ ಇನ್ನೂರು ಎಕರೆಗೂ ಹೆಚ್ಚಿನ ಪ್ರದೇಶದಲ್ಲಿ ಭೂಮಿ ಬಗೆದರು. ವಿಪರ್ಯಾಸ ನೋಡಿ. ಈ ಭೂಮಿಯಲ್ಲಿ ಅಕ್ರಮ ನಡೆಸುತ್ತಿರುವುದು ರೆಡ್ಡಿ ಪಡೆ. ಆದರೆ ತನಿಖೆ ಅಂತೇನಾದರೂ ನಡೆದರೆ ಕಟಕಟೆಯಲ್ಲಿ ನಿಲ್ಲುವುದು ಅಸಹಾಯಕ ಮಹಿಳೆ. ಯಾಕೆಂದರೆ ಪರವಾನಗಿ ಆಕೆಯ ಹೆಸರಲ್ಲಿದೆ!

ನಾರಾಯಣಗೌಡನ ಭವ್ಯಬಂಗಲೆ



ಬಳ್ಳಾರಿಯ ಒಡಲ ತುಂಬಾ ರೆಡ್ಡಿ ಪಡೆಯ ಅನಾಚಾರಗಳು ದಂಡಿ ದಂಡಿ ಸಿಗುತ್ತವೆ. ಇವೆಲ್ಲ ಕನ್ನಡದ ಸುಪುತ್ರ ನಾರಾಯಣ ಗೌಡನಿಗೆ ಯಾಕೆ ವಂಚನೆ ಅನ್ನಿಸುತ್ತಿಲ್ಲ?


ಇವು ಪ್ರಮುಖ ಪ್ರಶ್ನೆಗಳು. ಇದರ ಬೆಂಬಿದ್ದರೆ ಹೋರಾಟದ ಪೋಸು ಕೊಡುವ ನಾರಾಯಣ ಗೌಡನ ಡೀಲು-ದೌಲುಗಳು ಜಾಹೀರಾಗುತ್ತವೆ. ಈ ದಗಲ್ಬಾಜಿ ರೆಡ್ಡಿಗಳ ಬಗ್ಗೆ ಈತ ಮೃದು ಧೋರಣೆ ಅನುಸರಿಸುತ್ತಿರುವುದರ ಹಿಂದಿನ ಮರ್ಮಗಳೂ ಬಿಚ್ಚಿಕೊಳ್ಳತೊಡಗುತ್ತವೆ.

ಇದರ ಮೂಲವಿರುವುದು 2006 ರಲ್ಲಿ ಬಳ್ಳಾರಿಯಲ್ಲಿ ನಡೆದ ಸ್ವಾಭಿಮಾನಿ ಕನ್ನಡಿಗರ ಸಮಾವೇಶದಲ್ಲಿ! ಇದು ನಡೆಯುವುದಕ್ಕೂ ಎರಡು ತಿಂಗಳು ಮುಂಚೆ ಖುದ್ದು ನಾರಾಯಣ ಗೌಡನೇ ಬೆಳಗಾವಿಯಲ್ಲಿ ನಡೆಸುವುದಾಗಿ ಘೋಷಿಸಿದ್ದ. ಈ ಸಂಬಂಧ ಬೆಳಗಾವಿಯ ಉದ್ದಗಲದಲ್ಲೂ 'ಗೌರವಾನ್ವಿತ' ಎತ್ತುವಳಿ ಕಾರ್ಯವನ್ನು ಎಗ್ಗಿಲ್ಲದೆ ನಡೆಸಿದ. ಇನ್ನೇನು ಸಮಾವೇಶ ನಡೆದೇ ಬಿಡುತ್ತದೆಂಬುಷ್ಟರಲ್ಲಿ ನಾರಾಯಣ ಗೌಡನ ವಕ್ರದೃಷ್ಟಿ ಬಳ್ಳಾರಿಯತ್ತ ಹೊರಳಿಕೊಂಡಿತು!

ಅದಾಗಲೇ ಮುಖ್ಯಮಂತ್ರಿ ಕುಮಾರಸ್ವಾಮಿ ನೂರೈವತ್ತು ಕೋಟಿಯ ಗಣಿ ಆರೋಪದಲ್ಲಿ ಸಿಲುಕಿಕೊಂಡಿದ್ದರು. ಅನಾಮಿಕ ಜನಾರ್ದನ ರೆಡ್ಡಿ ಆ ಮೂಲಕವೇ ಪ್ರಚಾರ ಪಡೆದಿದ್ದ. ಈ ಬಗ್ಗೆ ತಲಾಶು ನಡೆಸಿದ ನಾರಾಯಣ ಗೌಡನಿಗೆ ರೆಡ್ಡಿಗಳ ಬಳಿ ಯಥೇಚ್ಛ ಹಣವಿರೋದು ಖಚಿತವಾಗಿದೆ. ಈ ಸಂಬಂಧ ರೆಡ್ಡಿಗಳ ಕೋಟೆ ಹೊಕ್ಕು ಡೀಲು ಕುದುರಿಸಿಕೊಂಡ ಈತ ಇದ್ದಕ್ಕಿದ್ದಂತೆ ಸಮಾವೇಶವನ್ನು ಬೆಳಗಾವಿಯಿಂದ ಬಳ್ಳಾರಿಗೆ ಶಿಫ್ಟ್ ಮಾಡಿದ. ಇದರಲ್ಲಿ ಹೆಚ್ಚೂಕಡಿಮೆ ಐವತ್ತು ಲಕ್ಷದ ಡೀಲು ನಡೆದಿರುವ ಗುಮಾನಿಯಿದೆ.

ಇದನ್ನು ಖಂಡಿತವಾಗಿಯೂ ತಳ್ಳಿಹಾಕಲಾಗುವುದಿಲ್ಲ. ಯಾಕೆಂದರೆ, ಆ ಕಾಲದಲ್ಲಿ ಹಡಬೆ ಹಣವಿದ್ದರೂ ಕೂಡಾ ಪ್ರಚಾರಕ್ಕೆ ದಾರಿ ಕಾಣದೆ ದೈನೇಸಿ ಸ್ಥಿತಿಯಲ್ಲಿತ್ತು ರೆಡ್ಡಿ ಗ್ಯಾಂಗ್. ರೆಡ್ಡಿಗಳಿಗೆ ಏಕಕಾಲಕ್ಕೆ ಪ್ರಚಾರ ಮತ್ತು ಭದ್ರತೆ ಎರಡರ ಅವಶ್ಯಕತೆಯೂ ಇತ್ತು. ರಕ್ಷಣಾ ವೇದಿಕೆ ಕಡೆಯಿಂದ ನೆಲ ಬಗೆಯುವ ದಂಧೆಯ ಬಗ್ಗೆ ಅಪಸ್ವರ ಏಳುವುದೂ ಬೇಕಿರಲಿಲ್ಲ. ಇದೆಲ್ಲವನ್ನು ಬಳಸಿಕೊಂಡ ನಾರಾಯಣ ಗೌಡ ಬಳ್ಳಾರಿಯಲ್ಲಿ ಭರ್ಜರಿ ಸಮಾವೇಶ ನಡೆಸಿದ. ಆ ಸಮಾವೇಶದಲ್ಲಿ ಕನ್ನಡ ದ್ರೋಹಿಗಳಾದ ಜನಾರ್ದನ ರೆಡ್ಡಿ, ಶ್ರೀರಾಮುಲುಗಳೆಲ್ಲ ಕನ್ನಡಾಭಿಮಾನಿಗಳಂತೆ ಮೆರೆದಾಡಿದರು.

ನಾರಾಯಣ ಗೌಡ ಹಣ ಬರುವ ಯಾವ ಹಾದಿಯನ್ನೂ ಮಿಸ್ ಮಾಡಿಕೊಳ್ಳುವವನಲ್ಲ. ಈತ ಲಾಗಾಯ್ತಿನಿಂದಲೂ ಅದ್ಯಾವುದೋ ಟೈಟಲ್ಲು ಹೇಳಿ 'ಪತ್ರಿಕೆ ಮಾಡ್ತೀನಿ' ಅಂತ ಪೋಸು ಕೊಡುತ್ತಾ ಎತ್ತುವಳಿ ನಡೆಸಿಕೊಂಡೇ ಬಂದವನು.




ಈ ಹಿಂದೆ 'ಕ್ರಾಂತಿರಂಗ' ಹೆಸರಿನ ಪತ್ರಿಕೆ ತರುವ ಬಗ್ಗೆ ಗುಲ್ಲೆಬ್ಬಿಸಿದ. ಅದಕ್ಕಾಗಿ ಮನಸಾರೆ ಹಣ ವಸೂಲಿ ಮಾಡಿದ. ನಂತರ ಅದರ ಬಗ್ಗೆ ಮಾತಾಡಲಿಲ್ಲ, ಇದಾದ ಕೆಲದಿನಗಳ ಬಳಿಕ 'ಕ್ರಾಂತಿಯುಗ' ಅಂತೊಂದು ಪತ್ರಿಕೆ ಮಾಡುವ ಬಗ್ಗೆ ಗುಲ್ಲೆಬ್ಬಿಸಿದ. ಅದರಲ್ಲೂ ಎತ್ತುವಳಿ ನಡೆಸಿ ತೆಪ್ಪಗಾದ.

ಆದರೀಗ ಕೆಲ ತಿಂಗಳುಗಳಿಂದ 'ಕರವೇ ನಲ್ನುಡಿ' ಹೆಸರಲ್ಲೊಂದು ಪತ್ರಿಕೆ ಹೊರತರಲಾರಂಭಿಸಿರುವ ನಾರಾಯಣ ಗೌಡ ಅದನ್ನ ಎತ್ತುವಳಿಯ ಅಸ್ತ್ರದಂತೆ ಬಳಸಿಕೊಳ್ಳುತ್ತಿದ್ದಾನೆ. ಇದಕ್ಕಾಗಿ ಈತ ಆರಿಸಿಕೊಂಡಿರುವುದು ಜಾಹೀರಾತುಗಳನ್ನು, ಈ ಪತ್ರಿಕೆಯ ಹಿಂಭಾಗದಲ್ಲಿರುವ ಜಾಹೀರಾತು ದರ ವಿವರ ಗಮನಿಸಿದರೆ ನಿಜಕ್ಕೂ ದಿಗಿಲಾಗುತ್ತದೆ.

ಕರವೇ ನಲ್ನುಡಿ ಹಣಬಾಕತನ, ಸ್ವವಿಜೃಂಭಣೆಯ ಅನಾವರಣ!

ಹಿಂಬದಿ ಪುಟಕ್ಕೆ ಒಂದು ಲಕ್ಷ, ಒಳಹೊದಿಕೆಯ ಪುಟಗಳಿಗೆ ಐವತ್ತು ಸಾವಿರ, ಇನ್ನುಳಿದವುಗಳು ಹತ್ತರಿಂದ ನಲವತ್ತು ಸಾವಿರಗಳ ರೇಂಜ್‌ನಲ್ಲಿವೆ! ಇದೊಂದು ರೀತಿಯಲ್ಲಿ ಸಭ್ಯ ದರೋಡೆಯಿದ್ದಂತೆ. ನಾರಾಯಣ ಗೌಡನ ಇತಿಹಾಸ ಬಲ್ಲವರಿಗೆ ಈ ಜಾಹೀರಾತುಗಳ ಮೊತ್ತವನ್ನು ಹೇಗೆ ಪೀಕಿಕೊಳ್ಳಬಹುದೆಂಬ ಕಲ್ಪನೆ ಇದ್ದೇ ಇರುತ್ತದೆ. ಈವರೆಗೆ ಇಂತಿಷ್ಟು ಹಣ ಕೊಡುವಂತೆ ಧಮಕಿಗಳು ಬರುತ್ತಿದ್ದರೆ ಮುಂದಿನ ದಿನಗಳಲ್ಲಿ 'ಮುಚ್ಕೊಂಡು ಜಾಹೀರಾತು ಕೊಡು' ಎಂಬ ಹುಕುಂ ನಾರಾಯಣ ಗೌಡನ ಕಡೆಯಿಂದ ಬರಬಹುದು! ಇದೆಲ್ಲಾ ಹಾಳುಬಿದ್ದೋಗಲಿ, ಪತ್ರಿಕೆಯ ಹೂರಣ, ಆಲೋಚನೆಗಳಾದರೂ ಆರೋಗ್ಯಪೂರಿತವಾಗಿವೆಯಾ ಅಂತ ನೋಡಹೋದರೆ ಖಂಡಿತಾ ನಿರಾಶೆಯಾಗುತ್ತದೆ. ಮುಖಪುಟದಿಂದಲೇ ನಾರಾಯಣ ಗೌಡನ ಸ್ವವಿಜೃಂಭಣೆ, ಆತ್ಮರತಿಯ ತೆವಲುಗಳ ಹೊರತಾಗಿ ಬೇರೇನೂ ಕಾಣಸಿಗುವುದಿಲ್ಲ,

ನಿಜವಾದ ಕಾಳಜಿಯಿದ್ದಿದ್ದರೆ ಈ ಪತ್ರಿಕೆ ಕನ್ನಡದ ದಿಕ್ಕುದೆಸೆ, ಸಮಸ್ಯೆ-ಸವಾಲುಗಳ ಚರ್ಚೆಗೋಸ್ಕರವೇ ಮೀಸಲಿರಬೇಕಿತ್ತು, ಆದರಿದರಲ್ಲಿ ಘನಘೋರ ಯುದ್ಧವೊಂದು ಮುಗಿದ ಬಳಿಕ ಬದುಕುಳಿದ ಯೋಧನೊಬ್ಬ ಆದುದನ್ನು ವಿವರಿಸಬಹುದಾದ ಧಾಟಿಯಲ್ಲಿ ನಾರಾಯಣ ಗೌಡನ ಪ್ರವರಗಳು ದಾಖಲಾಗುತ್ತಿವೆ. ಅಂದರೆ, ನಾರಾಯಣ ಗೌಡ ಮಾಡಿದ ಓರಾಟ, ಭೀಕರ ಭಾಷಣಗಳ ಪ್ರವರಗಳಿಗಷ್ಟೇ ಇದರ ಪುಟಗಳು ಸೀಮಿತವಾಗಿವೆ.



ಇನ್ನೂ ಮುಖ್ಯ ಅಂಶವೆಂದರೆ ಈ ಪತ್ರಿಕೆಗೆ ವಿಶಾಲಾಕ್ಷಿ ಎಂಬಾಕೆಯನ್ನು ಸಂಪಾದಕಿ ಅಂತ ಕೂರಿಸಲಾಗಿದೆ. ಈಕೆ ನಾರಾಯಣ ಗೌಡನ ಹೆಂಡತಿ! ಈಕೆಗೆ ಸಾಹಿತ್ಯದ ಬಗ್ಗೆ, ಪತ್ರಿಕೋದ್ಯಮದ ಬಗ್ಗೆ ಅದೆಂಥ ತಿಳಿವಳಿಕೆಯಿರಲು ಸಾಧ್ಯ? ಇದು ನಾರಾಯಣ ಗೌಡನ ಸ್ವಾರ್ಥಕ್ಕೆ ಪಕ್ಕಾ ಉದಾಹರಣೆ. ಈತನಿಗೆ ನಿಜವಾಗಿಯೂ ಕನ್ನಡ ಪರ ಕಾಳಜಿಯಿದ್ದಿದ್ದರೆ, ಎತ್ತುವಳಿಯ ಗುರಿಯಿಲ್ಲದಿದ್ದರೆ ಯಾರಾದರೂ ಸಾಹಿತಿಯನ್ನು ಸಂಪಾದಕರನ್ನಾಗಿ ಮಾಡಬಹುದಿತ್ತಲ್ಲಾ?

ಕೊಲೆಯಾಯಿತಯ್ಯೋ ಕನ್ನಡ!

ನಾರಾಯಣ ಗೌಡನ ಇತರೆ ಅಧ್ವಾನಗಳೆಲ್ಲ-ಒತ್ತಟ್ಟಿಗಿರಲಿ. ಆತನ ಬಾಯಿಂದ ಹೊರಬರುವ ಭಯಾನಕ 'ಖನ್ನಡ' ನಿಜಕ್ಕೂ ಗಾಬರಿ ಬೀಳಿಸುವಂತಿದೆ. ಕರ್ನಾಟಕದ ಪರಭಾಷಿಕರು, ಆಂಗ್ಲ ವ್ಯಾಮೋಹಿಗಳು ಬೇರೆಬೇರೆ ರೀತಿಯಲ್ಲಿ ಕನ್ನಡವನ್ನು ಕಡೆಗಣಿಸಿದರೆ, ಈ ನಾರಾಯಣ ಗೌಡ ಬಾಯಲ್ಲೇ ಕನ್ನಡವನ್ನು ಅಕ್ಷರಶಃ ಕೊಲೆ ಮಾಡುತ್ತಿದ್ದಾನೆ!

ಈತ ಅತ್ಯಂತ ಚಿಕ್ಕವಯಸ್ಸಿನಲ್ಲೇ ರಾಷ್ಟ್ರಕವಿ ಕುವೆಂಪುರವರ ಕವಿತೆಗಳಿಗೆ ಮಾರುಹೋಗಿದ್ದನಂತೆ. 'ಕನ್ನಡಕ್ಕೆ ಹೋರಾಡು ಕನ್ನಡದ ಕಂದ-ಕನ್ನಡವ ಕಾಪಾಡು ನನ್ನ ಆನಂದ' ಈ ಸಾಲು ನಾರಾಯಣನ ಎದೆಗಿಳಿದು ಅದರ ಸಾಕಾರಕ್ಕೆ ಟೊಂಕ ಕಟ್ಟಿ ನಿಂತನಂತೆ!-ಹೀಗಂತ ಆತನೇ ಬರೆಸಿಕೊಂಡಿದ್ದಾನೆ. ವಿಪರ್ಯಾಸವೆಂದರೆ, ಮೇಲ್ಕಂಡ ಕವಿತೆಯ ಸಾಲುಗಳು ನಾರಾಯಣ ಗೌಡನ ಬಾಯಿಂದ 'ಖನ್ನಡಕೆ ಒರಾಡು ಖನ್ನಡದ ಕಂದ- ಖನ್ನಡವ ಕಾಪಾಡು ನನ್ನ ಹಾನಂದ'! ಅಂತಲೇ ವಿರೂಪಗೊಂಡು ಹೊರಬೀಳುತ್ತವೆ!

ಶಿರಾ ಹಳ್ಳಿಗಾಡಿನಿಂದ ಬಂದವರನ್ನು 'ಅ'ಕಾರ, 'ಹ'ಕಾರಗಳ ವಿಚಾರದಲ್ಲಿ ಸುಶಿಕ್ಷಿತರು ಲೇವಡಿ ಮಾಡುವುದಿದೆ. ಇದು ತಪ್ಪೆಂಬುದು ನಮಗೂ ತಿಳಿದಿದೆ. ಆದರೆ ಕನ್ನಡ ಪರ ಹೋರಾಟಗಾರರಿಗೇ ಸಾಹಿತ್ಯದ ಗಂಧಗಾಳಿ ಇಲ್ಲದಿದ್ದರೆ ಹೇಗೆ? ಅಷ್ಟಕ್ಕೂ ಕನ್ನಡ ಪರ ಹೋರಾಟವೆಂದರೆ ಕೇವಲ ಪರಭಾಷಿಕರ ಮೇಲೇರಿ ಹೋಗುವುದಷ್ಟೇ ಅಲ್ಲ, ನಾಡು-ನುಡಿ ನೆಲದ ರಕ್ಷಣೆಯೂ ಹೌದು.

ಪರಭಾಷಿಕರಿಗೆ ಆಗಾಗ ಕನ್ನಡ ಕಲಿಯದಿದ್ದರೆ ಉಳಿಗಾಲವಿಲ್ಲ ಎಂಬರ್ಥದ ಹುಕುಂ ನಾರಾಯಣನ ಕಡೆಯಿಂದ ರವಾನೆಯಾಗುತ್ತಲೇ ಇರುತ್ತವೆ. ಇದು ಖಂಡಿತವಾಗಿಯೂ ಅವಶ್ಯವಾದುದು. ಆದರೆ ನಾರಾಯಣ ಗೌಡನಿಗೆ ಸ್ವತಃ ಸ್ವಚ್ಛ ಕನ್ನಡ ಕಲಿಯಲು ಏನು ದಾಡಿ?

ಕನ್ನಡ ಪರ ಹೋರಾಟಗಾರನೇ ಕನ್ನಡದ ಕೊಲೆ ಮಾಡುತ್ತಿರುವುದು ವಿಪರ್ಯಾಸವಲ್ಲವೆ?

...ವರಲ್ಲೇ ಲಕ್ಷಾಂತರ ಕಪ್ಪ ತಿಂದು ಬಂದ ನಾರಾಯಣ ಗೌಡ ಈಗ ...ಗಗಳು ಅದೇನೇ ಮಾಡಿದರೂ ಸೊಲ್ಲೆತ್ತದೆ ತೆಪ್ಪಗಿದ್ದಾನೆ!

ಈಗ ನಾರಾಯಣ ಗೌಡ ಮಹಾನ್ ಹೋರಾಟಗಾರನಂತೆ, ಕನ್ನಡದ ...ಕಾಳಿನಂತೆ ಪೋಸು ಕೊಡಬಹುದು. ಆದರೆ ಈತನ ಇತಿಹಾಸ ಇದಕ್ಕೆ ...ರುದ್ಧವಾಗಿದೆ. ಈತನ ಹೋರಾಟಗಳ ಹಿನ್ನೆಲೆಯಲ್ಲಿ ರೆಡ್ಡಿಯೊಂದಿಗೆ ...ಡಿಕೊಂಡಂತಹ ಭೂರಪೂರ ಡೀಲುಗಳಿರುತ್ತವೆ. ಜೊತೆಗೆ ಈತ ತನ್ನ ...ಲಾಗಳಿಂದ ಬರೆಸಿಕೊಳ್ಳುವ ಇವನ ಹಿನ್ನೆಲೆಯಿದೆಯಲ್ಲಾ? ಅದೂ ...ಡಾ ಪಟ್ಟಂಪೂರಾ ಸುಳ್ಳು!

ಈತನೇ ಒಂದು ಕಡೆ 'ನಾರಾಯಣ ಗೌಡರು ಬಾಲ್ಯಾವಸ್ಥೆಯಲ್ಲೇ ...ೋರಾಟಗಾರರು, ಆರ್ಕೆಸ್ಟ್ರಾ ಒಂದರಲ್ಲಿ ತಮಿಳು ಹಾಡು ಹಾಕಿದಾಗ ...ಂತಿಕಾರಿ' ಬಾಲಕ ನಾರಾಯಣ ಗೌಡರು ಪ್ರತಿಭಟಿಸಿ ಜೈಲಿಗೆ ಹೋಗಿ, ...ಟೆಯಲ್ಲೂ ಮಕಮಕ ಉಗಿಸಿಕೊಂಡ ಕ್ರಾಂತಿಕಾರಿ, ಅಂತೆಲ್ಲ ಬಂಬಿಸಿ ...ಡಿದ್ದಾನೆ. ಇದರನ್ವಯ ಮೇಲ್ಕಂಡ ...ತಿ' ಮಾಡಿ ಉಗಿಸಿ ಕೊಂಡ ...ಲಕ ನಾರಾಯಣ ಗೌಡರು ...ೋ ರಾತ್ರಿ ಚಿಂತಿಸಿ, ತಪ್ಪು ...ಡದೆ ಶಿಕ್ಷೆಯಾದುದಕ್ಕೆ ಮಮ್ಮಲ ...ರುಗಿ ಬೆಳಗಾಗೆದ್ದು ಬಾಂಬೆಗೆ ... ಕಿತ್ತನಂತೆ.



... ಆದರೆ, ಹಾಸನ ಜಿಲ್ಲೆ ಅರಸೀಕೆರೆ ...ಲ್ಲೂಕಿನ ಮಾಲೇಕಲ್ ತಿರುಪತಿ ಗ್ರಾಮದ ನಾರಾಯಣ ಗೌಡರ ...ಲೀಲೆ ಬೇರೆಯದಿದೆ. ನಾಲ್ಕನೇ ಇಯತ್ತೆಯಲ್ಲಿ ಲತ್ತೆ ಹೊಡೆದು ...ಡಲೆಯುತ್ತಿದ್ದ ಬಾಲಕ ನಾರಾಯಣ ಗೌಡ ಅದೊಂದು ದಿನ ಮನೆಯ ... ನಡೆದು ಹೋಗುತ್ತಿದ್ದ. ಆಗ ಪಕ್ಕದ ಜಮೀನಿನಲ್ಲಿ ತೊನೆಯುತ್ತಿದ್ದ ...ನ ಮರ ಕಾಣಿಸಿದೆ. ಬಾಲಕ ನಾರಾಯಣ ಗೌಡ ಕಷ್ಟಪಟ್ಟು ...ೀರು ಆಯ್ದು ಬೇಲಿ ಹಾರುವಷ್ಟರಲ್ಲಿ... ಅದರ ಮಾಲೀಕರು ಬಂದು ...ಮಾನ ಬಾರಿಸಿದರು. ಇದರಿಂದ ಅವಮಾನಿತನಾದ ಬಾಲಕ ...ಯಣ ಗೌಡರು ಬಾಂಬೆಯ ಬಸ್ಸು ಹತ್ತಿದ! ಇದು ಅಸಲೀ ಕಥೆ! ...ನಂತರ ಈತ ಬಾಂಬೆಯಲ್ಲಿ ಐಸ್‌ಕ್ರೀಂ ಗಾಡಿ ದೂಡುತ್ತಿದ್ದುದು, ...ಗಳೂರಿನ ಅವೆನ್ಯೂ ರಸ್ತೆಯ ಚಿಕ್ಕಮ್ಮನ ಮನೆಗೆ ಬಂದು ಮನೆಮನೆಗೆ ...ಪರ್ ಹಾಕುತ್ತಿದ್ದುದ್ದು, ನಂತರ ರಾಜ್ ಅಭಿಮಾನಿ ಸಂಘದ ...ರ್ಗದರ್ಶಿಯಾಗಿ ಅಧ್ಯಕ್ಷನನ್ನೇ ಕೆಳಗಿಳಿಸಿ ಕುಲಗೆಡಿಸಿದ್ದು ಹಾಗೂ ...99 ರಲ್ಲಿ ಎಲ್ಲಾ ಕನ್ನಡಪರ ಸಂಘಟನೆಗಳು ಒಗ್ಗೂಡಿ ಸ್ಥಾಪಿಸಿದ ...ವೇ ಸೇರಿ ನಂತರ ಅಧ್ಯಕ್ಷನೂ ಆಗಿ 'ನಾನೇ ಸ್ಥಾಪಕ' ಅಂತ ಪೋಸು ...ಡುತ್ತಿರುವುದೆಲ್ಲ ಕಣ್ಣ ಮುಂದಿನ ಸತ್ಯಗಳು.

ರಾಜ್ ಅಭಿಮಾನಿ ಸಂಘದಲ್ಲಿದ್ದಾಗ ನಾರಾಯಣ ಗೌಡ ಅವೆನ್ಯೂ ...ದು ಅಮಾಯಕರನ್ನು ಹಿಡಿದು ಚೀಟಿ ದಂಧೆ ನಡೆಸಿ ಮುಂಡಾಯಿಸಿದ್ದ. ...ನ್ಯೂ ರಸ್ತೆಯ ಮಾರ್ವಾಡಿಗಳನ್ನು ಮನಸಾರೆ ಸುಲಿದಿದ್ದ. ಪಟಾಕಿ ..., ಮಾತಾ ಚಿಟ್ ಫಂಡ್ ಅಂತೆಲ್ಲ ನೇಕಾರರಿಗೆ ಟೋಪಿ ಹಾಕಿದ್ದ. ...ರ ಒದೆಯಿಂದ ತಪ್ಪಿಸಿಕೊಳ್ಳುವ ಸಲುವಾಗಿ ಅವೆನ್ಯೂ ರಸ್ತೆಯಿಂದ ...ತ್ತ.

ಕರವೇ ಅಧ್ಯಕ್ಷ ಆದಮೇಲೆಯೂ ಈತ ವಿಜಯನಗರದ ಆದಿ ಚುಂಚನಗಿರಿ ಕಾಂಪ್ಲೆಕ್ಸ್‌ನಲ್ಲಿ ಮಹಾಮಾತಾ ಚಿಟ್ ಫಂಡ್ ನಡೆಸಹತ್ತಿದ್ದ. ಇದರಲ್ಲೂ ಅನೇಕರು ಯಾಮಾರಿದರು. ನಂತರ ಶ್ರೀಮಾತಾ ಕ್ರೆಡಿಟ್ ಕೋಆಪರೇಟಿವ್ ಸೊಸೈಟಿ ಅಂತಲೂ ಮಾಡಿ ಒಂದಷ್ಟು ಮಂದಿಗೆ ನಾಮ ತೀಡಿದ ನಾರಾಯಣ ಗೌಡ ಕರವೇ ಕಾರ್ಯಕರ್ತರಿಗೆ ಲೋನ್ ಸಿಗುವ ಆಸೆ ಹುಟ್ಟಿಸಿ ತಲಾ 1500 ರೂಪಾಯಿ ಸದಸ್ಯತ್ವ ಹಣ ಪಡೆದ. ಇಂದಿಗೂ ಗಾಂಧಿನಗರದ ಕರವೇ ಕಚೇರಿಯಲ್ಲಿ ಎನ್‌ಜಿ ಗೋಲ್ಡ್ ಬೆನಿಫಿಟ್ ಸ್ಕೀಮ್ ಅಂತೊಂದು ನಡೆಯುತ್ತಿದೆ.


ಇನ್ನು ಎಂಎಲ್‌ಎ, ಮಿನಿಸ್ಟ್ರುಗಳ ಹೆಸರು ಹೇಳುತ್ತಾ ಕಂಡವರ ಜಮೀನಿಗೆ ಬೇಲಿ ಸುತ್ತುವುದು ನಾರಾಯಣಗೌಡನ 'ಒರಾಟ'ಗಳ ಪ್ರಮುಖ ಅಂಶ. ಇಂಥ ಅನೇಕ ಪ್ರಕರಣಗಳಿವೆ. ಈತ ಅದೆಂಥಾ ಧನದಾಹಿ ಎಂದರೆ, ಈ ಹಿಂದೆ ಖಾಸಗಿ ಕಂಪನಿಯೊಂದರ ಕಾರ್ಮಿಕರು ಅನ್ಯಾಯಕ್ಕೊಳಗಾಗಿ ಪ್ರತಿಭಟಿಸುತ್ತಿದ್ದರು. ಮಧ್ಯ ಪ್ರವೇಶಿಸಿದ ನಾರಾಯಣ ಗೌಡ 'ನ್ಯಾಯ ಕೊಡುಸ್ತೀನಿ' ಅಂದ. ಪಾಪದ ಕಾರ್ಮಿಕರು ನಂಬಿದರು. ಆದರೀತ ಕಂಪೆನಿ ಮಾಲೀಕರೊಂದಿಗೆ 65 ಲಕ್ಷ ಡೀಲು ಕುದುರಿಸಿಕೊಂಡು ತಣ್ಣಗೆ ಕಳಚಿ ಕೊಂಡ. ವಿಷಯ ತಿಳಿದ ಅಂದಿನ ಉಪ್ಪಾರಪೇಟೆ ಡಿಸಿಪಿ ಶರತ್ಚಂದ್ರ ನಾರಾಯಣ ಗೌಡನಿಗೆ ಉಗಿದು ಕಾರ್ಮಿಕರಿಗೆ ಹಣಹಂಚಿದ್ದರು. ಇದು ನಾರಾಯಣಗೌಡನ ಹೋರಾಟದ ಹಿಂದಿರುವ ಮಸಲತ್ತಿಗೊಂದು ಉದಾಹರಣೆಯಷ್ಟೇ.

ಇಂಥ ದಂಧೆಗಳ ದುಡ್ಡಿನಿಂದ ಕೊಬ್ಬಿರುವ ನಾರಾಯಣ ಗೌಡ ಕೆಂಗೇರಿ ರಸ್ತೆಯ ಅಂಬೇಡ್ಕರ್ ಕಾಲೇಜು ಹತ್ತಿರದಲ್ಲೊಂದು ಮನೆ ಕಟ್ಟಿಸಿದ್ದಾನೆ. ಅದನ್ನು ಮನೆ ಅನ್ನುವುದಕ್ಕಿಂತ ಬಂಗಲೆ ಅನ್ನುವುದೇ ವಾಸಿ. 30x50 ಅಡಿ ಜಾಗದಲ್ಲಿರುವ ಅದು ಅರಮನೆಯಂತಿದೆ. ಜೊತೆಗೆ ಅದರ ಪಕ್ಕದ ಖಾಲಿ ಜಾಗವನ್ನೂ ಈತ ಕಬ್ಜಾ ಮಾಡಿಕೊಂಡಿದ್ದಾನೆಂಬ ಮಾತುಗಳು ಕೇಳಿಬರುತ್ತಿವೆ. ಜೀವನವನ್ನೇ ಹೋರಾಟಕ್ಕೆ ಮುಡಿಪಾಗಿಟ್ಟು, ವೈಯಕ್ತಿಕ ಬದುಕನ್ನೇ ಮರೆತಿರುವಂತೆ ಬಿಂಬಿಸಿಕೊಳ್ಳುವ ಈತ ಇಂತಹ ಅದೆಷ್ಟು ಆಸ್ತಿ ಹೊಂದಿದ್ದಾನೋ....

ನಾರಾಯಣ ಗೌಡನ ಖಾತೆಯಲ್ಲಿ ಇಂಥ ಅಸಂಖ್ಯಾತ ಭಾನಗಡಿಗಳಿವೆ. ಆದರೆ ಈಗ ಮುಖ್ಯವಾಗಿರುವುದು ಕರ್ನಾಟಕದ ಭೂಭಾಗವನ್ನೇ ಆಂಧ್ರಕ್ಕೆ ಒತ್ತೆಯಿಟ್ಟಿರುವ ರೆಡ್ಡಿಗಳು ಹಾಗೂ ಈ ಅನಿಷ್ಟಗಳ ಬಗ್ಗೆ ಮಹಾನ್ ಹೋರಾಟಗಾರ ನಾರಾಯಣ ಗೌಡ ತಳೆದ ಮಹಾಮೌನ.

ಇರಲಿ, ನಾರಾಯಣ ಗೌಡ ರೆಡ್ಡಿಗಳೊಂದಿಗೆ ಡೀಲು ನಡೆಸಿ ಕಪ್ಪ ತಿಂದು ತೆಪ್ಪಗಿದ್ದಾನೆಂದುಕೊಳ್ಳೋಣ. ಆದರೆ ಕಾರ್ಯಕರ್ತರು ಯಾಕೆ ಸುಮ್ಮನಿದ್ದಾರೆ? ಅವರಿಗಾದರೂ ಯಾಕೆ ರೆಡ್ಡಿಗಳು ನಡೆಸುತ್ತಿರುವುದು ಅನ್ಯಾಯ ಅನ್ನಿಸುತ್ತಿಲ್ಲ? ಇಡೀ ಸಂಘಟನೆ ಎತ್ತುವಳಿಯನ್ನೇ ಹೋರಾಟ ಅಂದುಕೊಂಡಿದೆಯಾ....

• ವರದಿಗಾರ



ಕಲಾವಿದರೇ ಹುಷಾರು...

ಸಾಮಾಜಿಕ ಕಳಕಳಿಯ ಮುಖವಾಡದ ಮರೆಯಲ್ಲಿ ಹಣ ಗೆಬರುವ ವಿದ್ಯೆ ನಾರಾಯಣ ಗೌಡನಿಗೆ ಕರಗತವಾಗಿದೆ. ಈತನ ಜಾತಕದ ತುಂಬಾ ಇಂಥ ಶನಿಗ್ರಹಗಳ ಅಡ್ಡಾಟ ವಿಪರೀತವಿದೆ.


ಚೀಟಿ ವ್ಯವಹಾರ, ಕೋಆಪರೇಟಿವ್ ಸೊಸೈಟಿ ಅಂತೆಲ್ಲ ಅಸಂಖ್ಯ ಜನರನ್ನು ಮುಂಡಾಯಿಸಿರುವ ಈತ ಇದೀಗ ಅಶಕ್ತ ಕಲಾವಿದರ ತಲೆ ಮೇಲೆ ಕೈಯಿಟ್ಟಿರುವ ಸುದ್ದಿಯಿದೆ. 'ಅಶಕ್ತ ಕಲಾವಿದರ ಸಂಘ' ಅಂತೊಂದು ರಚನೆಯಾಗಿರುವ ಬಗ್ಗೆಯೂ ಮಾತುಗಳು ಕೇಳಿಬರುತ್ತಿವೆ. ಈ ಸಂಘಕ್ಕೆ ನಟರಾದ ಹೊನ್ನವಳ್ಳಿ ಕೃಷ್ಣ ಹಾಗೂ ಕರಿಬಸವಯ್ಯರನ್ನು ಬೆದರುಬೊಂಬೆಗಳಂತೆ ನಿಲ್ಲಿಸಲಾಗಿದೆ. ಚಿತ್ರರಂಗಕ್ಕೆ ಬದುಕು ಮುಡುಪಾಗಿಟ್ಟು ಮುಪ್ಪಾದ ಅನೇಕ ಕಲಾವಿದರು ಹೀನಾಯಸ್ಥಿತಿಯಲ್ಲಿದ್ದಾರೆ. ಇವರನ್ನು ಥೇಟು ಬಾಳೆಲೆಯಂತೆ ಉಪಯೋಗಿಸಿ ಬಿಸಾಡುವ ಚಾಳಿ ಚಿತ್ರರಂಗದ ಕೆಲ ಅವಿವೇಕಿಗಳಿಗೆ ಅಂಟಿಕೊಂಡಿದೆ. ಇಂಥ ಕಲಾವಿದರುಗಳಲ್ಲಿ ಕೆಲವರು ಔಷಧಿಗೂ ಕಾಸಿಲ್ಲದೆ ಕೊನೆಯುಸಿರೆಳೆದರೆ, ಇನ್ನೂ ಕೆಲ ಮಂದಿ ಸಹಾಯ ಸಿಗಬಹುದೆಂಬ ತಟುಕು ಭರವಸೆ ನೆಚ್ಚಿ ಉಸಿರುಳಿಸಿಕೊಂಡಿದ್ದಾರೆ.

ನಾರಾಯಣ ಗೌಡ ಇದನ್ನೇ ಎನ್‌ಕ್ಯಾಷ್ ಮಾಡಿಕೊಂಡು ಅಖಾಡಕ್ಕಿಳಿದಿದ್ದಾನೆ. ಇದರನ್ವಯ 'ಸ್ವಲ್ಪ ಹಣ ಕಟ್ಟಿ, ರಿಜಿಸ್ಟ್ರೇಷನ್ನು ಅದೂ ಇದೂ ಎಲ್ಲಾ ಮಾಡ್ಸಿ ಕೊಡ್ತೀನಿ' ಅಂತ ಅವರ ತಲೆ ಸವರುತ್ತಿದ್ದಾನೆ. ಕಲಾವಿದರೇನಾದರೂ ನಾರಾಯಣ ಗೌಡನ ಮೇಲೆ ನಂಬಿಕೆಯಿಟ್ಟರೆ ಯಾಮಾರುವ ಸಾಧ್ಯತೆಗಳು ಹೆಚ್ಚಿವೆ. ಯಾಕೆಂದರೆ ಖುದ್ದು ಕರಿಬಸವಯ್ಯ ಮತ್ತು ಹೊನ್ನವಳ್ಳಿ ಕೃಷ್ಣರಿಗೂ ನಾರಾಯಣನ ವಂಚನೆಯ ಅರಿವಿದ್ದಂತಿಲ್ಲ.

ಕಲಾವಿದರೇ.... ಕನ್ನಡಕ್ಕಾಗಿ ಎತ್ತಿದ ನಾರಾಯಣ ಗೌಡನ ಕೈ ಅನೇಕರ ತಲೆ ಸವರಿದೆ. ಇದರಿಂದಾಗಿಯೇ ಆತನ ಬದುಕು ಕಲ್ಪವೃಕ್ಷವಾಗಿದೆ. ಬಡ ಕಾರ್ಮಿಕರ ಹಣಕ್ಕೂ ನಾಲಿಗೆಯೊಡ್ಡಿದ ದುಷ್ಟತನ ಈತನ ಹಿಂದಿದೆ. ಯಾವುದಕ್ಕೂ ಹುಷಾರಾಗಿದ್ದರೆ ಒಳಿತು. ●

ಸಂವಿಧಾನದ ನಾಲಿಗೆ ಕತ್ತರಿಸುವ ಈಶ್ವರಪ್ಪಗಳು...

ದೇಶ ಸ್ವತಂತ್ರವಾದಾಗ ಪ್ರಜಾತಾಂತ್ರಿಕ ವ್ಯವಸ್ಥೆಯನ್ನು ಆಯ್ಕೆ ಮಾಡಿಕೊಂಡ ನಾವು ಅದನ್ನು ಕಾಪಾಡಿ, ಮುಂದುವರಿಸಿಕೊಂಡು ಹೋಗುವ ಸಲುವಾಗಿ ಒಂದು ಸಂವಿಧಾನವನ್ನು ನಮಗೆ ನಾವೇ ಕೊಟ್ಟುಕೊಂಡೆವು. ಹೀಗೆ ವಿಶ್ವದ ಅತ್ಯಂತ ದೊಡ್ಡ ಪ್ರಜಾಪ್ರಭುತ್ವವೆಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಇದೇ ದೇಶದ ಒಂದು ರಾಜ್ಯವಾಗಿರುವ ಕರ್ನಾಟಕದಲ್ಲಿ ಇಂದು ನಡೆಯುತ್ತಿರುವ ವಿದ್ಯಮಾನಗಳು ಮಾತ್ರ ಪ್ರಜಾತಾಂತ್ರಿಕ ವ್ಯವಸ್ಥೆಯನ್ನೆ ಅಣಕಿಸುತ್ತಿವೆ. ಬಿಜೆಪಿ ರಾಜ್ಯಾಧ್ಯಕ್ಷರಾದ ಶ್ರೀಮಾನ್ ಈಶ್ವರಪ್ಪ ಮತ್ತಿತರ ಕೆಲ ಸಂಘ ಪರಿವಾರಿಗಳು ಇತ್ತೀಚೆಗೆ ಸಾರ್ವಜನಿಕವಾಗಿ ಆಡುತ್ತಿರುವ ಮಾತುಗಳು ಅತ್ಯಂತ ಆಘಾತಕಾರಿಯಾಗಿವೆ. "ಗೋಹತ್ಯೆ ನಿಷೇಧ ವಿರೋಧಿಸುವವರ ಕೈಕಡಿಯಿರಿ", "ಮುಖ್ಯಮಂತ್ರಿ ವಿರುದ್ಧ ಮಾತನಾಡುವವರ ನಾಲಿಗೆ ಕತ್ತರಿಸಿ" ಎಂದೆಲ್ಲ ಕೂಗಾಡಿದ ಸನ್ಮಾನ್ಯ ಈಶ್ವರಪ್ಪನವರು,



"ಮುಸ್ಲಿಮರ ಕೈಕಾಲು ಕಡಿಯಿರಿ", "ಸೋಮಯಾಜಿಯವರು ನಾಳೆಯಿಂದ ಕಾಲೇಜಿಗೆ ಬಂದಲ್ಲಿ ದ.ಕ.ಜಿಲ್ಲೆಯಲ್ಲಿ ಕೋಮು ಗಲಭೆಗಳು ಆರಂಭವಾಗಬಹುದು" ಎಂದು ಬೆದರಿಕೆಯೊಡ್ಡಿದ ಮಂಗಳೂರಿನ ನ್ಯಾಯವಾದಿ ಸನ್ಮಾನ್ಯ ಜಗದೀಶ ಶೇಣವರೂ, ಮತಾಂತರ ಮಾಡುವ ಕ್ರೈಸ್ತರನ್ನು ಇಲ್ಲಿಂದ ಹೊರಗಟ್ಟುವ ಧ್ಯೇಯಕ್ಕೆ ತನ್ನ ಜೀವನವನ್ನು ಮುಡುಪಾಗಿಡುತ್ತೇನೆಂದು ಚೀರಾಡಿದ ಖಾನಾಪುರದ ಶಾಸಕ ಪ್ರಹ್ಲಾದ ರೇಮಣಿಯವರೂ, ಇದೇ ಮಾದರಿಯ ಪ್ರಚೋದನಾತ್ಮಕ ಹೇಳಿಕೆ ನೀಡಿರುವ 'ಕೋಮು ಗುತ್ತಿಗೆದಾರ' ಸನ್ಮಾನ್ಯ ಪ್ರಮೋದ್ ಮುತಾಲಿಕರೂ ತಾವೊಂದು ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿರುವುದನ್ನು ಮರೆತಂತಿದೆ. ಇದು ವರ್ಷಾನುಗಟ್ಟಲೆಯ ಸತತ ತರಬೇತಿ ಮತ್ತು ಮಿದುಳು ತೊಳೆಯುವಿಕೆಯ ಫಲವಾಗಿ ಉಂಟಾದ ಜಾಣ ಮರೆವೆಂದೇ ತೋರುತ್ತದೆ. "ಒಂದು ಸಮಾಜದ ಬದುಕಿನಲ್ಲಿ ಹಿಂಸೆಗೆ ಅವಕಾಶವೇನಾದರೂ ಇದೆಯೇ? ಇದೆ, ಆದರೆ ಅದನ್ನು ಶಸ್ತ್ರಚಿಕಿತ್ಸಕನ ಚೂರಿಯಂತೆ ಬಳಸಬೇಕು..... ಈ ಅಸುರರನ್ನು ಸೋಲಿಸಲು ಬಲಪ್ರಯೋಗವೇ ಆಗಬೇಕೆಂದಾದಲ್ಲಿ ಬಲಪ್ರಯೋಗ ಮಾಡಬೇಕು....." ಎಂದು ಅಹಮದಾಬಾದ್, ಭೀವಂಡಿಗಳ ಕೋಮು ದಂಗೆಗಳ ನಂತರ ಬೋಧಿಸಿದ್ದ (ಜೂನ್ 11, 1970) 'ಗುರು' ಗೋಲ್ವಾಲ್ಕರ್‌ರನ್ನು ಆತನ ಶಿಷ್ಯರುಗಳು ಯಥಾವತ್ತಾಗಿ ಅನುಸರಿಸುತ್ತಿರುವಂತಿದೆ. ತೊಳೆದ ಮಿದುಳಲ್ಲಿ ತುಂಬಲಾಗಿರುವ ದ್ವೇಷವನ್ನು ಆಗಾಗ ಅಲ್ಲಲ್ಲಿ ಕಕ್ಕಲಾಗುತ್ತದೆ. ನಾಯಕಮಣಿಗಳೇ ಹೀಗಾಡಿದರೆ ಇನ್ನು ಸಾಮಾನ್ಯ ಸ್ವಯಂಸೇವಕರ ಸನ್ನಿಯ ಮಟ್ಟ ಎಷ್ಟಿರಬಹುದು!

ಒಂದು ಪತ್ರ

ಮಾರ್ಚ್ 1982ರ ಕನ್ಯಾಕುಮಾರಿ ಕೋಮುಗಲಭೆಗಳ ತನಿಖೆ ನಡೆಸಿದ ನ್ಯಾ| ಪಿ.ವೇಣುಗೋಪಾಲ್ ಆಯೋಗದ ವರದಿಯ ಪ್ರಕಾರ:

"ಆರೆಸ್ಸೆಸ್ 'ಶಾಖಾ'ಗಳ ವಿವಿಧ ಕಾರ್ಯಕ್ರಮಗಳನ್ನೆಲ್ಲಾ ದೈಹಿಕ ಕಸರತ್ತುಗಳ ಹೆಸರಿನಲ್ಲಿ ನಡೆಸಲಾಗುತ್ತದೆ. ಉಗ್ರಗಾಮಿ ನಿಲುವನ್ನು ಬೆಳೆಸುವುದು ಮತ್ತು ಯಾವುದೇ ರೀತಿಯ ನಾಗರಿಕ ಕಲಹಗಳಿಗಾಗಿ ತರಬೇತಿ ಒದಗಿಸುವುದು ಈ ಚಟುವಟಿಕೆಗಳ ಉದ್ದೇಶವೆಂದು ತೋರುತ್ತದೆ. ಇದರಿಂದಾಗಿ ಅಲ್ಪಸಂಖ್ಯಾತರಲ್ಲಿ ಹೆಚ್ಚಿನ ವೇಳೆ ಆತಂಕ, ಭಯ ಮತ್ತು ಅಭದ್ರತೆಯ ಭಾವನೆ ಉಂಟಾಗುತ್ತಿದೆ......."

"ಆರೆಸ್ಸೆಸ್ ಯಾವುದನ್ನು ಹಿಂದೂಗಳ ಹಕ್ಕುಗಳೆಂದು ಭಾವಿಸಿಕೊಂಡಿದೆಯೋ ಅವುಗಳಿಗಾಗಿ ಅಲ್ಪಸಂಖ್ಯಾತರ ವಿರುದ್ಧ ಹೋರಾಡಲು ತನ್ನನ್ನು ತಾನೇ ನೇಮಿಸಿಕೊಂಡಿದೆ. ಅಲ್ಪಸಂಖ್ಯಾತರಿಗೆ ಅವರ ಸ್ಥಾನವನ್ನು ತೋರಿಸಿಕೊಡುವ ಕೆಲಸವನ್ನೂ..... ಇದಕ್ಕೆ ಸಿದ್ಧರಿಲ್ಲದಿದ್ದಲ್ಲಿ ಅವರಿಗೆ ಪಾಠ ಕಲಿಸುವ ಕೆಲಸವನ್ನೂ ಅದು ತಾನೇ ವಿಧಿಸಿಕೊಂಡಿದೆ........."

ಬ್ರಿಟಿಷರ ಕಾಲದಲ್ಲಿ ಭಾರತ ಸರಕಾರದ ಗೃಹಖಾತೆಯಿಂದ ಬಿಹಾರ ಸರಕಾರಕ್ಕೆ ಕಳುಹಿಸಲಾಗಿದ್ದ ಸುತ್ತೋಲೆಯೊಂದು (No. F 201/44 Ests. Dated March 16, 1944) ಹೀಗೆ ಹೇಳುತ್ತದೆ: "......ಸುದೀರ್ಘ ಕಾಲದ ಚರ್ಚೆಯ ನಂತರ, ಆರೆಸ್ಸೆಸ್ ಒಂದು ಫ್ಯಾಸಿಸ್ಟ್ ಮಾದರಿಯ ಫೌಜನ್ನು ರಚಿಸುವುದರ ಮೇಲೆ ಕೇಂದ್ರೀಕರಿಸಿರುವ ರಾಜಕೀಯ-ವಾಣಿಜ್ಯ ಸಂಘಟನೆಯಾಗಿರುತ್ತದೆಂಬ ತೀರ್ಮಾನಕ್ಕೆ ಬರಲಾಯಿತು."

ರಾಜಸತ್ತೆಯ ವ್ಯವಸ್ಥೆಯಲ್ಲಿ ರಾಜ, ಸರ್ವಾಧಿಕಾರಿ ವ್ಯವಸ್ಥೆಯಲ್ಲಿ ಸರ್ವೋಚ್ಚ ನಾಯಕ ಹೇಳಿದ್ದೇ ವೇದವಾಕ್ಯ, ಆತನ ತೀರ್ಮಾನವೇ ಅಂತಿಮ. ಅಲ್ಲಿ ವಿರೋಧಿಗಳನ್ನು ಹೆಡೆಮುರಿಗಟ್ಟಿ ತಂದು ಕೈಕಾಲು, ನಾಲಿಗೆ ಅಥವಾ ಕತ್ತು ಕುಯ್ಯಬೇಕೆಂಬ ರಾಜಾಜ್ಞೆ ಹೊರಟಾಕ್ಷಣ ಅದನ್ನು ಪರಿಪಾಲಿಸುವ ಭಟರಿರುತ್ತಿದ್ದರು. ಇಂದು ಸಂಘ ಪರಿವಾರದ ನಾಯಕರು ಮತ್ತದರ ಅಂಗಸಂಸ್ಥೆಗಳು ಪ್ರದರ್ಶಿಸುತ್ತಿರುವುದು ಇದೇ ರಾಜಪ್ರಭುತ್ವದ ಆಧುನಿಕ ಸ್ವರೂಪ ಮತ್ತು ಮನೋಭಾವವನ್ನು.

ಸಾಂವಿಧಾನಿಕ ಮೌಲ್ಯಗಳಿಗೆ ಸದ್ದು ಹೊಡೆಯುತ್ತಿರುವ ಈಶ್ವರಪ್ಪ ಮುಂತಾದವರಿಗೆ ಐಪಿಸಿ ಇತ್ಯಾದಿ ನಿಯಮಗಳು ಅನ್ವಯಿಸುವುದಿಲ್ಲವೇ ಎನ್ನುವುದು ನಮ್ಮ ಪ್ರಶ್ನೆ. ಸಂವಿಧಾನವನ್ನು ರಕ್ಷಿಸುವುದಾಗಿ ಕೈಮುಟ್ಟಿ ಪ್ರಮಾಣವಚನ ಸ್ವೀಕರಿಸಿರುವಂತಹ ಪೊಲೀಸ್ ವ್ಯವಸ್ಥೆಗೆ ಏನಾಗಿದೆ? "ಆಡಳಿತದಲ್ಲಿ ತೂರಿಕೊಂಡು ಅವರೊಳಗೆ ಕೋಮುವಾದಿ ನಿಲುವುಗಳನ್ನು ಅಳವಡಿಸಿ ಬೆಳೆಸುವ ಮುಖಾಂತರ ನಾಗರಿಕ ಸೇವೆಗಳ ಮತ್ತು ಪೊಲೀಸ್ ಸೇವೆಗಳ ಸದಸ್ಯರನ್ನು ಪ್ರೇರೇಪಿಸುವುದು" ಆರೆಸ್ಸೆಸ್‌ನ ತಂತ್ರಗಳಲ್ಲೊಂದೆಂದು ನ್ಯಾ ವೇಣುಗೋಪಾಲ್ ಹೇಳಿರುವುದು ಸುಳ್ಳಲ್ಲವೆಂದು ಸಾಬೀತಾಗುತ್ತಿಲ್ಲವೇ?

ಸಂಬಂಧಪಟ್ಟ ಅಧಿಕಾರಿಗಳು ಈಗಲಾದರೂ ಎಚ್ಚೆತ್ತು ಸೂಕ್ತ ಕಾನೂನು ಕ್ರಮ ಕೈಗೊಳ್ಳುವ ಮೂಲಕ ಪ್ರಜಾಸತ್ತೆಯ ಮೌಲ್ಯಗಳನ್ನು ಮತ್ತು ಸಂವಿಧಾನದ ಶ್ರೇಷ್ಠತೆಯನ್ನು ಎತ್ತಿಹಿಡಿಯಬೇಕೆಂದು ಆಗ್ರಹಿಸುತ್ತೇವೆ.

- ಕೆ.ಎಲ್.ಅಶೋಕ ಮತ್ತು ಸುರೇಶ ಭಟ್ ಬಾಕ್ರಬೈಲು



ಮದ್ದೂರು: ಕೆ.ಟಿ.ಶ್ರೀಕಂಠೇಗೌಡರ ಫ್ಯೂಡಲ್ ಪಾಲಿಟಿಕ್ಸ್‌ಗೆ ಒಬ್ಬ ಬಲಿ!

ಮದ್ದೂರಿನ ಚೆಕ್ಕಳಲೆ ಗ್ರಾಮದಲ್ಲಿ ಮಾಜಿ ವಿಧಾನಪರಿಷತ್ ಸದಸ್ಯ ಕೊಪ್ಪದ ಶ್ರೀಕಂಠೇಗೌಡರ ಫ್ಯೂಡಲ್ ರಾಜಕಾರಣಕ್ಕೆ ಕಾಂಗ್ರೆಸ್‌ನ ಕಾರ್ಯಕರ್ತ ಪರಮೇಶ್ ಎಂಬ ಯುವಕ ಬಲಿಯಾಗಿದ್ದಾನೆ. ಈ ಬಲಿಗೆ ನೇರ ಕಾರಣ ಕೆಟಿಎಸ್ ಹೆಂಡತಿ ವೀಣಾರ ಖಾಸಾ ತಮ್ಮ ರಘುವಾದರೆ, ತೆರೆಮರೆಯಲ್ಲಿ ಶ್ರೀಕಂಠೇಗೌಡರ ಪಾತ್ರ ವಿರುವುದು ಸ್ಪಷ್ಟವಿದೆ.

ಪರಂಪರಾಗತ ದ್ವೇಷ

ಮದ್ದೂರು ತಾಲೂಕಿನ ಕೊಪ್ಪ ಹೋಬಳಿಯ ಚೆಕ್ಕಳಲೆಯು ಹಳ್ಳಿ ರಾಜಕಾರಣ ಬಲವಾಗಿರುವ ಗ್ರಾಮ. ಸುಮಾರು 1000 ಕುಟುಂಬಗಳಿದ್ದು ಹಿಂದುಳಿದ ಜಾತಿಗಳದ್ದು ಬೆರಳೆಣಿಕೆ ಕುಟುಂಬಗಳಷ್ಟೇ. ಎಲ್ಲ ರೀತಿಯಲ್ಲೂ ಒಕ್ಕಲಿಗರದ್ದೇ ಪ್ರಾಬಲ್ಯ. ಇಷ್ಟು ದೊಡ್ಡ ಹಳ್ಳಿಗೆ ಸರಿಯಾದ ರಸ್ತೆ ಮತ್ತು ಸಾಕಷ್ಟು ಬಸ್ಸುಗಳಿಲ್ಲದಿದ್ದರೂ ಫ್ಯೂಡಲ್ ರಾಜಕಾರಣ, ಪಕ್ಷ ವೈಷಮ್ಯಕ್ಕೇನೂ ಕೊರತೆಯಿಲ್ಲ. ಹಳೆತಲೆಗಳಾದ ಮಂಗೇಗೌಡ ಕುಟುಂಬ ಮತ್ತು ಕುರಿಹುಚ್ಚೇಗೌಡ ಕುಟುಂಬಗಳ ನಡುವಿನ ದ್ವೇಷಕ್ಕೆ ದೊಡ್ಡ ಇತಿಹಾಸವೇ ಇದೆ. ಊರಿನ ಆಗುಹೋಗುಗಳಲ್ಲೂ ಇವರ ತೀರ್ಮಾನವೇ ಅಂತಿಮ ಹಾಗೂ ಅಷ್ಟೇ ರಾಜಕೀಯ ಹಗೆತನವೂ ಇದೆ. ಮಂಗೇಗೌಡರಿಗೆ ಗಾಂಧಿವಾದಿ ಎಂಬ ಆರೋಪವಿದ್ದರೂ, ಗಾಂಧಿ ಚಿಂತನೆಗೂ ಇವರಿಗೂ ಯಾವುದೇ ಸಂಬಂಧವಿದ್ದಂತಿಲ್ಲ. ಇವರು ಜನತಾಪಕ್ಷದ ಮಂಚೇಗೌಡರ ಕಟ್ಟಾ ಬೆಂಬಲಿಗರಾಗಿದ್ದರು. ಇನ್ನು ಕುರಿಹುಚ್ಚೆಗೌಡರ ಸೇವೆ ಮಾಜಿ ಸಿಎಂ ಎಸ್.ಎಂ.ಕೃಷ್ಣರಿಗೆ. ಈ ಎರಡೂ ಕುಟುಂಬಗಳೂ ಸಹ ಗ್ರಾಮದ ಜನರನ್ನು ತಮ್ಮ ರಾಜಕೀಯ ತೆವಲಿಗಾಗಿ ಬಳಸಿಕೊಂಡವರೇ ಆಗಿದ್ದಾರೆ.


ಪಕ್ಷರಾಜಕಾರಣಕ್ಕಾಗಿ ಬಲಿ!

ಪರಮೇಶ್ ತನ್ನ ದೊಡ್ಡಪ್ಪ ಕುರಿಹುಚ್ಚೇಗೌಡನಂತೆ ಕಾಂಗ್ರೆ ಪುಢಾರಿ. ಆದರೆ, ಸೋಕಾಲ್ಡ್ ಗಾಂಧೀವಾದಿ ಮಂಗೇಗೌಡರ ಸುಪುತ್ರ ಹಾಗೂ ಕೆಟಿಎಸ್‌ನ ಬಾಮೈದ ರಘು ಎಂಬ ಪುಂಡನಷ್ಟು ಅಪಾಯಕಾರಿಯಲ್ಲ. ಚೆಕ್ಕಳಲೆಯಲ್ಲಿ ಪಕ್ಷ ರಾಜಕಾರಣ ಹಳೆಯದಾದರೂ, ಸಣ್ಣಪುಟ್ಟ ಘರ್ಷಣೆಗಳು ನಡೆಯುತ್ತಿದ್ದರೂ ಕೈ ಕಡಿಯುವ, ಪ್ರಾಣ ತೆಗೆಯುವ ಅತಿರೇಕಕ್ಕೆ ಹೋಗಿರಲಿಲ್ಲ. ಆದರೆ ರಘು ಮಾತ್ರ ಸುಮ್ಮನಿರುತ್ತಿರಲಿಲ್ಲ. ಕಳೆದ ಸಂಸತ್ ಚುನಾವಣೆಯಲ್ಲಿ ಭಾವ ಕೆಟಿಎಸ್‌ನ ಸೂಚನೆಯಂತೆ ಚಲುವರಾಯಸ್ವಾಮಿ ಪರ ಪ್ರಚಾರ ಮಾಡುವ ಸಂದರ್ಭದಲ್ಲೇ ಪರಮೇಶ್‌ನನ್ನು ಮುಗಿಸುವ ಯೋಜನೆ ಆತನಿಗಿತ್ತು ಎಂಬುದು ಸ್ವತಃ ರಘು ಪಟಾಲಂನಲ್ಲಿ ಕೇಳಿಬರುತ್ತಿರುವ ಮಾತಾಗಿದೆ.

ರಘು ತನ್ನ ಭಾವ ಮತ್ತು ಚಲುವರಾಯಸ್ವಾಮಿ ಪ್ರಭಾವ ಬಳಸಿಕೊಂಡು, ಕಳೆದ ಗ್ರಾಮ ಪಂಚಾಯ್ತಿ ಚುನಾವಣೆ ಹತ್ತಿರವಾಗುತ್ತಿದ್ದ ಸಂದರ್ಭದಲ್ಲಿ ಚೆಕ್ಕಳಲೆಯಿಂದ ಉದ್ಯೋಗಕ್ಕಾಗಿ ಬೆಂಗಳೂರಿಗೆ ಹೋಗಿರುವ ಸುಮಾರು 200 ಯುವಕರ ಹೆಸರನ್ನೇ ಚುನಾವಣಾ ಪಟ್ಟಿಯಿಂದ ಕೈಬಿಡಿಸಿದ್ದ ಎಂದು ಪರಮೇಶ ಪತ್ರಿಕಾಗೋಷ್ಠಿ ನಡೆಸಿದ್ದ. ಜಿಲ್ಲಾಧಿಕಾರಿಗಳ ಕಚೇರಿ ಎದುರು ಪ್ರತಿಭಟನೆಯನ್ನೂ ಸಹ ನಡೆಸಲಾಗಿತ್ತು. ಆದರೆ ಇಷ್ಟೆಲ್ಲಾ ಯಡವಟ್ಟುಗಳನ್ನು ಮಾಡುತ್ತಿದ್ದರೂ ಕೆಟಿಎಸ್ ಸುಮ್ಮನಿರಲಿಲ್ಲ, ಬದಲಿಗೆ ಮತ್ತಷ್ಟು ಪ್ರಚೋದಿಸಿದರು ಎಂಬುದು ಅವರ ವಿರೋಧಿಗಳ ಅಭಿಪ್ರಾಯ.

ಜಿದ್ದು ಹೆಚ್ಚಿಸಿದ ಗ್ರಾ.ಪಂ ಚುನಾವಣೆ

ಕಳೆದ ಗ್ರಾಮ ಪಂಚಾಯತಿ ಚುನಾವಣೆ ವೇಳೆ ಈ ದ್ವೇಷ, ಜಿದ್ದು ಮತ್ತಷ್ಟು ಹೆಚ್ಚಾಗಿದೆ. ಪರಮೇಶ್ ತನ್ನದೇ ಗುಂಪನ್ನು ಕಟ್ಟಿಕೊಂಡು ಚೆಕ್ಕಳಲೆ ಗ್ರಾಮಪಂಚಾಯ್ತಿಯನ್ನು ಕಾಂಗ್ರೆ ವಶಕ್ಕೆ ತೆಗೆದುಕೊಳ್ಳಬೇಕು ಎಂದು ಶತಾಯಗತಾಯ



ಪರಮೇಶ

ಪ್ರಯತ್ನಿಸಿದ. ಚೆಕ್ಕಳಲೆ ಗ್ರಾಮ ಪಂಚಾಯತಿಗೆ ಹೊಸ ಕೊಪ್ಪಲು, ತರಿಕೆರೆ, ತರಿಕೆರೆ ಕಾಲೋನಿ, ಹಳ್ಳಹಳ್ಳಿ, ಕಿರಂಗೂರು ಸೇರುತ್ತವೆ. ಈ ಪಂಚಾಯತಿಯ 13 ಸದಸ್ಯರಲ್ಲಿ-6 ಕಾಂಗ್ರೆ, 6 ಜೆಡಿಎಸ್, ಒಬ್ಬ ಪಕ್ಷೇತರ ಸದಸ್ಯ ಆರಿಸಿ ಬಂದರು. ಆಗ ಒಬ್ಬ ಸದಸ್ಯನನ್ನು ಅಪಹರಿಸುವ ಪ್ರಯತ್ನಗಳೂ ನಡೆದಿದ್ದವು. ಅಂತಿಮವಾಗಿ ಜೆಡಿಎಸ್‌ನವರೇ ಗ್ರಾಮ ಪಂಚಾಯತಿ ಅಧ್ಯಕ್ಷರಾಗಿ ಆರಿಸಿಬಂದಿದ್ದರು. ಈ ಪ್ರಯತ್ನದಲ್ಲಿ ಸ್ವಲ್ಪದರಲ್ಲೇ ವಿಫಲವಾಗಿದ್ದರೂ ರಘುವಿನ ದಾಯಾದಿ ಶ್ರೀಕಾಂತ್ ಸೋಲುವಂತೆ ಮಾಡಿದ್ದರಿಂದ ರಘುವಿಗೆ ಸಾಕಷ್ಟು ಮುಖಭಂಗವಾಗಿತ್ತು.


ಕಿಲ್ಲರ್ ರಘುವಿನ ಹಿನ್ನೆಲೆ

ರಘು 'ಗಾಂಧಿವಾದಿ' ಬಿ.ಎಚ್.ಮಂಗೇಗೌಡರ ಮಗ. ಮಂಗೇಗೌಡರ ತಂದೆ ಬಟ್ಟೆ ಹೊಲಿದು ಊರೂರು ಸುತ್ತಿ ಜೀವನ ನಡೆಸುತ್ತಿದ್ದವರು. ಅದಲ್ಲದೇ ನಾಟಕದ ಮೇಷ್ಟ್ರಾಗಿ ಸಹ ಜನಪ್ರಿಯರಾಗಿದ್ದರೂ, ಸ್ಥಿತಿವಂತರೇನಾಗಿರಲಿಲ್ಲ. ಆದರೆ ಮಂಗೇಗೌಡ ಬಡವರ ಆಸ್ತಿ, ಸರ್ಕಾರಿ ಆಸ್ತಿಗಳನ್ನು ಕಬಳಿಸಿ ದುಂಡಗಾಗಿದ್ದರು. ಬರಿಗೈಲಿದ್ದವರು ಸುಮಾರು 40 ಎಕರೆ ಬಡವರಿಗೆ ಸಿಗಬೇಕಿದ್ದ ಗೋಮಾಳದ ಜಮೀನನ್ನು ಬೆದರಿಕೆ ಹಾಕಿ ಕಿತ್ತುಕೊಂಡಿದ್ದರು. ಅವರ ಕಾಲೇಜಿನ ಜಾಗವೂ ಸಹ ಬಡವರನ್ನು ಬೆದರಿಸಿ ಕಿತ್ತುಕೊಂಡಿದ್ದು. ಮೊದಲು ಹಾಸ್ಟೆಲ್ ಆಗಿದ್ದು, ನಂತರ ಟೆಲಿಫೋನ್ ಇಲಾಖೆಯವರ ವಶದಲ್ಲಿದ್ದ ಬಿಲ್ಡಿಂಗ್ ಅನ್ನು ಅಕ್ರಮವಾಗಿ ಕಿತ್ತುಕೊಂಡು ಅದನ್ನೇ ತಮ್ಮ ಮನೆ ಮಾಡಿಕೊಳ್ಳುವ ಮಟ್ಟಕ್ಕೆ ಇವರ ದೌರ್ಜನ್ಯ ಬೆಳೆದಿತ್ತು. ಈಗ ಅದೇ ಬಿಲ್ಡಿಂಗ್ ರಘುವಿನ ರಾಜಕೀಯ ಅಡ್ಡೆ. ಪರಮೇಶ್ ಕೈ ಕತ್ತರಿಸಿದ ಮೇಲೆ ಈ ಅಡ್ಡೆಗೆ ಬೆಂಕಿ ಹಾಕಲಾಗಿದೆ.

ಇಷ್ಟೆಲ್ಲಾ ಮಾಡಿದ ರಘುಗೆ ಅಕ್ಕಪಕ್ಕದಲ್ಲೇ ಶಿಂಷಾ ನದಿಯೂ, ಹಳ್ಳಗಳೂ ಇರುವಾಗ ಸುಮ್ಮನಿರ ಲಾದೀತೇ? ಅಕ್ರಮ ಮರಳು ಸಾಗಾಣಿಕೆಗೂ ಇಳಿದು ಸಾಕಷ್ಟು ಕಮಾಯಿಸಿದ್ದ. ಕಳೆದಬಾರಿ ಗ್ರಾಪಂ ಅಧ್ಯಕ್ಷನಾಗಿದ್ದ ಈತ ಸರ್ಕಾರದ ಏತ ನೀರಾವರಿಯನ್ನೇ ತನ್ನ ಜಮೀನಿಗೆ ತಿರುಗಿಸಿಕೊಂಡ ಭೂಪ. ತನ್ನ ಓದನ್ನು ಅರ್ಧಕ್ಕೆ ಬಿಟ್ಟು ಅಡ್ಡದಾರಿ ಹಿಡಿದವನಿಗೆ ಲೆಕ್ಚರರ್ ಹೆಂಡತಿಯಿರುವುದರಿಂದ ಈಗ ಮಂಡ್ಯದಲ್ಲೇ ವಾಸ. ತನ್ನ ಭಾವ ಕೆ.ಟಿ.ಶ್ರೀಕಂಠೇಗೌಡನ ಸಪೋರ್ಟು ಬೇರೆ.



ಮಂಚೇಗೌಡ



ರಘು

ಆ.13ರಂದು ಜಮೀನಿನ ರಸ್ತೆ ವಿಚಾರಕ್ಕೆ ರಘುವಿಗೂ ಪರಮೇಶ್ ದೊಡ್ಡಪ್ಪನ ಮಗ ಚಂದ್ರುವಿಗೂ ಗಲಾಟೆ ಆಗಿದೆ. ಅದರ ಬಗ್ಗೆ ಪರಮೇಶ್ ಹೋಗಿ ಕೊಪ್ಪ ಠಾಣೆಯಲ್ಲಿ ಎಸ್‌ಐ ಬಸವರಾಜಯ್ಯಗೆ ದೂರು ನೀಡಿದ್ದಾರೆ. ಆದರೆ ಕೆಟಿಎಸ್ ಚೇಲಾ ಆದ ಬಸವರಾಜಯ್ಯ ರಘು ಮತ್ತು ಆತನ ಪಟಾಲಂ ಮೇಲೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ. 14ರ ಬೆಳಗ್ಗೆ ಪರಮೇಶ್ ಗದ್ದೆ ಕಡೆ ಹೋಗಿ ಬರಬೇಕಾದರೆ ಅಡ್ಡಹಾಕಿ ನಮ್ಮ ಮೇಲೆಯೇ ದೂರು ಕೊಡುವಷ್ಟು ಧೈರ್ಯನಾ ಅಂತ ರಘು ಮತ್ತು ಆತನ ಗುಂಪು ಗಲಾಟೆ ಶುರುಮಾಡಿದ್ದಾರೆ.

ಅಲ್ಲಿಂದ ಶುರುವಾದ ಗಲಾಟೆ, ಪರಮೇಶನ ಕ ಕತ್ತರಿಸಿ ತುಂಡಾಗಿ ಬೀಳುವ ಮಟ್ಟಕ್ಕೆ ಹೋಗಿದೆ. ಪ ಮೇಶ್‌ಗೆ ಚಿಕಿತ್ಸೆ ಸಕಾಲದಲ್ಲಿ ಸಿಗದಂತಾಗಲು, ಆಂಬ್ಯುಲೆನ್ ಅನ್ನೂ ಸಹ ತಡೆದರು ಎಂದು ಹೇಳಲಾಗುತ್ತಿದ ಅಂತಿಮವಾಗಿ ಮದ್ದೂರಿನಿಂದ ಬೆಂಗಳೂರಿನ ಆಸ್ಪತ್ರೆಗಳಿ ಶಿಫ್ಟ್ ಆಗಿ 28 ಬಾಟಲ್ ರಕ್ತ ಪಡೆದುಕೊಂಡರೂ ಪರಮೇಶ್ ಉಳಿಯಲಿಲ್ಲ.

ರಾಜಕೀಯ ಅಡ್ಡೆಯಾದ ಪೊಲೀಸ್ ಠಾಣೆ!

ಚೆಕ್ಕಳಲೆ ಗ್ರಾಮ ಕೊಪ್ಪಾ ಪೊಲೀಸ್ ಠಾ ವ್ಯಾಪ್ತಿಯಲ್ಲಿದೆ. ಕೊಪ್ಪಾ ಪೊಲೀಸ್ ಠಾಣೆ ರಾಜಕೀಯ ಅಡ್ಡೆಯಾಗಿ ಮಾರ್ಪಟ್ಟಿದೆ. ಜೊತೆಗೆ ಪೊಲೀಸರ ಕಾಂಗ್ರೆ-ಜೆಡಿಎಸ್ ಬಣಗಳಾಗಿದ್ದು ಅದರಲ್ಲೂ ಕೆಟಿಎಸ್ ಅಡ್ಡೆಯಾಗಿದೆ ಎಂಬುದು ಜನರ ಆರೋಪ. ಇಲ್ಲಿಗೆ ಬರು ಪಿಎಸ್ಸೈಗಳು ಕಾನೂನು ಸುವ್ಯವಸ್ಥೆ ಕಾಪಾಡುವುದಕ್ಕಿಂ ಮರಳುಕಳ್ಳರಿಂದ ಹಫ್ತಾ ವಸೂಲಿ ಮಾಡುವುದರಲ್ಲ ಬ್ಯುಸಿಯಾಗಿರುತ್ತಾರೆ.

ಇನ್ನು ಪರಮೇಶ್ ವಿಚಾರದಲ್ಲಂತೂ ಪಿಎಸ್ ಬಸವರಾಜಯ್ಯ ರಾಜಕೀಯ ಒತ್ತಡಕ್ಕೆ ಮಣಿದ ಬೇಜವಾಬ್ದಾರಿತನ ಪ್ರದರ್ಶನ ಮಾಡಿದ್ದಾನೆ. ಇದಕ್ಕೂ ಕಾರ ಇದೆ, ಅದು ಕೆಟಿಎಸ್ ಬಾಮೈದ ರಘುವಿನ ಮರಳ ಅಮೇಧ್ಯ. ರಘುವಿನ ಮೇಲೆ ಕ್ರಮಕೈಗೊಳ್ಳದೆ ಬಿಟ್ಟಿದ್ದರಿಂ ರಘು ಮತ್ತು ಟೈರ್ ಕಳ್ಳ ಗೌರಿಮಂಗೇಗೌಡ, ಶಂಕರೇಗೌ ಮತ್ತು ರುದ್ರೇಶ್‌ರೆಂಬ ಕಿರಾತಕರಿಗೆ ಪರಮೇಶ್ ಬ ಯಾಗಲು ಪಿಎಸ್ಸೈ ಬಸವರಾಜಯ್ಯ ಸಹ ಕಾರಣನಾಗಿದ್ದ ಸಸ್ಪೆಂಡ್ ಆಗಿ ಈಗ ಮನೆಯಲ್ಲಿರುವುದೇ ಸಾಕ್ಷಿ. ಪರಮೇಶ ನನ್ನು ಬಲಿತೆಗೆದುಕೊಂಡ ಟೈರ್ ಕಳ್ಳ ಗೌರಿಮಂಗೇಗೌ ಶಂಕರೇಗೌಡ ಮತ್ತು ರುದ್ರೇಶ್‌ರನ್ನು ಪೊಲೀಸರ ನಾಟಕೀಯವಾಗಿ ಹಿಡಿದಿದ್ದಾರೆ. ಆದರೆ ಜೊತೆಗೇ ಇ ಅತೀ ಮುಖ್ಯ ಆರೋಪಿ ಕೆಟಿಎಸ್ ಬಾಮೈದ ರಘ ತಪ್ಪಿಸಿಕೊಳ್ಳಲು ಇದೇ ಪೊಲೀಸರು ಸಹಕರಿಸಿದ್ದಾರೆಂ ಆರೋಪಗಳು ಕೇಳಿಬರುತ್ತಿವೆ. ಎಸ್ಪಿ ಕೌಶಲೇಂದ್ರಕುಮಾರ ತಮ್ಮ ಸೋಮಾರಿತನಬಿಟ್ಟು ಇ ಗಮನಹರಿಸಿ ರಾಜಕೀಯ ಪುಂಡ ರಘುನ ಹಿಡಿದು ಶಿಕ್ಷೆಯಾಗುವಂತೆ ಮಾಡಬೇಕಿ

ಪ್ರಬುದ್ಧತೆ ತೋರಿದ ಎಚ್‌ಡಿಕೆ


ಕಿರಾತಕರು ಪರಮೇಶನ ಕೈಕತ್ತರಿಸಿ ರಿಂದ ಗ್ರಾಮದಲ್ಲಿ ರಾಜಕೀಯ ದ್ವೇ ಇನ್ನೂ ಹೆಚ್ಚಾಗುವ ಸಾಧ್ಯತೆಯಿತ್ತು. ಬೇರೆ ಪಕ್ಷಗಳ ಮುಖಂಡರುಗಳಿಗಿಂತ ಮೊದಲ ಭೇಟಿ ನೀಡಿದ ಮಾಜಿ ಮುಖ್ಯಮಂ ಜೆಡಿಎಸ್‌ನ ಕುಮಾರಸ್ವಾಮಿ ನೊಂ ಕುಟುಂಬಕ್ಕೆ ಚಿಕಿತ್ಸಾವೆಚ್ಚ ಭರಿಸುವುದಾ ಮಾತುಕೊಟ್ಟು, ಹಳ್ಳಿಗಳಲ್ಲಿ ಚುನಾವಣೆಯ ವಿಚಾರ ಅನಾಹುತಗಳಾಗುವಂತಾಗಬಾರದ ಎಂದು ಎರಡೂ ಕಡೆಯವರಿಗೆ ಬುದ್ಧಿಹೇ ಪ್ರಬುದ್ಧತೆ ತೋರಿದರು. ನಂತರ ವಿಪ ನಾಯಕ ಸಿದ್ದರಾಮಯ್ಯ ಮತ್ತು ಡಿ. ಶಿವಕುಮಾರ್ ಸಹ ಬರುವಂತಾಯಿತು.

ಕ್ಷುಲ್ಲಕ ರಾಜಕಾರಣಕ್ಕೆ ಪರಮೇಶ್ ಬಲಿಯಾಗಿಹೋ ಆದರೆ ಆತನನ್ನೇ ನಂಬಿದ್ದ ಹೆಂಡತಿ ಶೋಭಾ ಮ ಕುಟುಂಬಕ್ಕೆ ನ್ಯಾಯ ಒದಗಿಸುವವರು ಯಾರು?

●ಲಕ್ಷ್ಮಣ್ ಚೀರನಹ

lakshmancheeranahally@gmail.co

ಕೆ.ಟಿ. ಶ್ರೀಕಂಠೇಗೌಡರ್‍ಯಾಕೆ ಇಷ್ಟು ಕೆಟ್ಟರು?




ಎಂಎಲ್‌ಸಿ ಆಗುವ ಮುಂಚೆ ಕಾಲೇಜು ಅಧ್ಯಾಪಕನೂ, ನಂತರ ಪ್ರಿನ್ಸಿಪಾಲೂ ಆಗಿದ್ದ ಕೆ.ಟಿ.ಎಸ್ ಬಗ್ಗೆ ಮದ್ದೂರು, ಮಂಡ್ಯದಲ್ಲಿ ಮಿಶ್ರ ಅಭಿಪ್ರಾಯವಿತ್ತು. ಸದಾಕಾಲ ಜೆಡಿಎಸ್‌ಗೆ ನಿಷ್ಠನಾಗಿದ್ದ ಈತ ಕಂಡಕಂಡಲ್ಲಿ, ಕಂಡಕಂಡವರನ್ನು ಹೊಗಳುವುದನ್ನು ಕಾಯಕ ಮಾಡಿಕೊಂಡಿದ್ದರು. ದೇವೇಗೌಡರು ಬಂದಾಗಲೆಲ್ಲಾ ಅವರನ್ನು ವಾಚಾಮಗೋಚರ ಹೊಗಳಿ, ಹೊಗಳಿಯೇ ಮೇಲೇರಿದ ಕೆಟಿಎಸ್‌ಗೆ ಈ ಹಿಂದಿನ ಸಾರಿ ಪದವೀಧರರ ಕ್ಷೇತ್ರದಿಂದ ಎಂಎಲ್‌ಸಿ ಆಗುವ ಭಾಗ್ಯವೂ ಲಭಿಸಿತು. ಆ ಸಾರಿಯೇ ಪದವೀಧರರನ್ನೂ, ಶಿಕ್ಷಕರನ್ನೂ ಸಾಕಷ್ಟು ಭ್ರಷ್ಟಗೊಳಿಸಿ ಗೆದ್ದು ಬಂದ ಕೆಟಿಎಸ್ ನಂತರ ಮೆರೆಯತೊಡಗಿದರು. ಮಂಡ್ಯದ ಇನ್ನಾವ ಶಾಸಕರೂ ಕೆಟಿಎಸ್‌ಅಷ್ಟು ಮಾತುಗಾರರಲ್ಲ. ಶಿಕ್ಷಕನಾಗಿದ್ದರಿಂದ ಕಲಿತ ಮಾತೇ ಯಾವಾಗಲೂ ಈತನಿಗೆ ಬಂಡವಾಳವಾಗಿತ್ತು.

ಕೆಟಿಎಸ್ ತನ್ನ ಹೆಣ್ಣುಕೊಟ್ಟ ಮಾವನ ಹೆಸರಿನಲ್ಲಿದ್ದ ಆಸ್ತಿಪಾಸ್ತಿಗಳನ್ನು ತನ್ನ ಸುಪರ್ದಿಗೆ ತೆಗೆದುಕೊಳ್ಳುವ ಧಾವಂತದಲ್ಲಿ ಸೋಕಾಲ್ಡ್ ಗಾಂಧಿವಾದಿ ಮಂಗೇಗೌಡನನ್ನು ಮುಗಿಸಿ ಅದನ್ನು ಅಪಘಾತ ಎಂದು ಕಥೆ ಕಟ್ಟಿದ್ದಾನೆಂಬ ಗುಸುಗುಸು ಇಂದಿಗೂ ಸುತ್ತುತ್ತಿದೆ. ಆದರೆ ಇಷ್ಟೆಲ್ಲದರಾಚೆಗೂ ಶ್ರೀಕಂಠೇಗೌಡರ ಬಗ್ಗೆ ಮಂಡ್ಯದಲ್ಲಿ ಒಂದಷ್ಟು ಒಳ್ಳೆಯ ಅಭಿಪ್ರಾಯವೂ ಇದೆ. ಮೇಲ್ನೋಟಕ್ಕೆ ಸೌಜನ್ಯದ ನಡವಳಿಕೆ, ಸಮಕಾಲೀನ ರಾಜಕೀಯ ಪಟುಗಳಿಗಿಲ್ಲದ ವೈಚಾರಿಕ ತಿಳಿವಳಿಕೆಗಳು ಇವರನ್ನು ಭಿನ್ನವಾಗಿ ನೋಡುವಂತೆ ಮಾಡಿದ್ದವು. ಆದರೆ ಈ ಸಾರಿ ಎಂಎಲ್‌ಸಿ ಚುನಾವಣೆಗೆ ಮುಂಚೆ ಅವರು ಗುಂಡು ಪಾರ್ಟಿಗಳನ್ನು ನೀಡಿ ರಾದಿಯೆಬ್ಬಿಸಿದ್ದನ್ನು ನೋಡಿ, ಪ್ರಜ್ಞಾವಂತರು ಬೆಚ್ಚಿಬಿದ್ದಿದ್ದರು.

ಅದೇ ಕೆಟಿಎಸ್ ಹೆಸರು ಈಗ ಪರಮೇಶನ ಕೊಲೆಯ ಹಿಂದೆಯೂ ಕೇಳಿ ಬರುತ್ತಿದೆ. ಹಲ್ಲೆ ನಡೆದ ಮರುದಿನದಿಂದ ಕೆಟಿಎಸ್ ಎಲ್ಲೂ ಸಾರ್ವಜನಿಕವಾಗಿ ಕಾಣಿಸಿಕೊಂಡಿಲ್ಲ. ಇದು ಅವರ ಹೆಸರನ್ನು ಮತ್ತಷ್ಟು ಹಾಳು ಮಾಡಿದೆ.


ಚೆಕ್ಕಳಲೆ ಗಲಭೆ ವಿಚಾರದಲ್ಲಿ ಕುಮಾರಸ್ವಾಮಿ ತೋರಿದ ಪ್ರಬುದ್ಧತೆಯನ್ನು ಕೆಟಿಎಸ್ ಸಹ ತೋರಬೇಕಿದೆ. ಆ ಮೂಲಕ ತನ್ನ ಎಂಎಲ್‌ಸಿ ಪಟ್ಟಕ್ಕೂ ಒಂದಷ್ಟು ಘನತೆ ಬರುವಂತೆ ನೋಡಿಕೊಳ್ಳಬೇಕಿದೆ.



ಮಾಜಿ ಕೌನ್ಸಿಲರ್ ಗೋವಿಂದರಾಜು ಕೊಲೆಯತ್ನ

ಬಾಂಬ್ ನಾಗನ ಕಿಲ್ಲರ್ ಗ್ಯಾಂಗ್

ಗಾಂಧಿನಗರದ ಮಾಜಿ ಕೌನ್ಸಿಲರ್ ಗೋವಿಂದ ...ಜು ಹತ್ಯಾಪ್ರಯತ್ನದ ರಹಸ್ಯ ಬಯಲಾಗುತ್ತಿದ್ದಂತೆ ...ಬ್ಬ ಮಾಜಿ ಕೌನ್ಸಿಲರ್ ಬಾಂಬ್ ನಾಗ ...ಪಾಗಿದ್ದಾನೆ. ಮಲ್ಲೇಶ್ವರಂ ಪೊಲೀಸರ ಸತತ ...ರು ತಿಂಗಳ ಪರಿಶ್ರಮಕ್ಕೆ ಕೊನೆಗೂ ಫಲ ...ಜೆ.



ಗೋವಿಂದರಾಜು

...ಸದ್ಯ ಮಲ್ಲೇಶ್ವರಂ ಪೊಲೀಸ್ ಠಾಣೆಯ ...ಸ್ಟಿನಲ್ಲಿ ಕೂತು ತಲೆಚಚ್ಚಿಕೊಳ್ಳುತ್ತಿರುವ ...ರಾಂಪುರದ ಬಾಯಪ್ಪನೇ ಗೋವಿಂದರಾಜು ...ಯತ್ನದ ಸೂತ್ರಧಾರ. ಈತ ಗಾಂಧಿನಗರದ ...ಜಿ ಕೌನ್ಸಿಲರ್ ಬಾಂಬ್ ನಾಗ ಉರ್ಫ್ ...ನಾಗರಾಜನ ಖಾಸಾ ಅಳಿಯ ಅಂದೆ ಮಗಳ ...ಕ ಬಾಂಬ್ ನಾಗನೇ ಸುಪಾರಿಕೊಟ್ಟು ತನ್ನನ್ನು ಮಾಜಿ ...ಸಿಲರ್ ಗೋವಿಂದರಾಜು ಹತ್ಯೆಗೆ ಛೂಬಿಟ್ಟಿದ್ದ ಎಂದು ...ಯಪ್ಪ ಬಾಯಿಬಿಟ್ಟಿದ್ದಾನೆ.

...ಕತೆ ವಿಚಿತ್ರವಾಗಿದೆ.


...ಅಷ್ಟಕ್ಕೂ ಗೋವಿಂದರಾಜು ಮಾಜಿ ಕೌನ್ಸಿಲರ್. ಕಳೆದ ...ಲಿಕೆ ಚುನಾವಣೆಯಲ್ಲಿ ಗಾಂಧಿನಗರದ ಸುಭಾಷ್‌ನಗರ ...ರ್ಡ್‌ಗೆ ಪಕ್ಷೇತರನಾಗಿ ನಿಂತು ಕೆಲವೇ ನೂರು ಮತಗಳ ...ತರದಿಂದ ಕಾಂಗ್ರೆಸ್ ...ರ್ಥಿ ಮಲ್ಲೇಶ್ ವಿರುದ್ಧ ...ತ ಗೋವಿಂದರಾಜು ...ಕೊಲ್ಲಿಸಿ ಬಾಂಬ್ ನಾಗ ...ಬರುವ ಲಾಭವಾದರೂ ...?



...ನಾಗನ ಅಳಿಯ ಬಾಯಪ್ಪನ ಗ್ಯಾಂಗ್

...ಅನೇಕರಿಗಿದು ವಿಚಿತ್ರ ...ಸಿದರೂ ಪಾಲಿಕೆ ...ಲಿಟಿಕ್ಸ್‌ನ ಒಳಹುನ್ನಾರಗಳೇ ಬೇರೆಯಿವೆ. ಈಗ ...ಲೀಸರು ಬಂಧಿಸಿರುವ ಬಾಂಬ್ ನಾಗನ ಅಳಿಯ ...ಯಪ್ಪನ ಜೊತೆ ತಮಿಳುನಾಡಿನ ಪಾತಕಿಗಳಿದ್ದಾರೆ. ...ವಣ್ಣಾಮಲೈ ಮತ್ತು ಚೆನ್ನೈನ ಕೆಲ ಪಾತಕಿಗಳನ್ನು ...ಸಿಕೊಂಡು ಗೋವಿಂದರಾಜುವನ್ನು ಮುಗಿಸುವುದು ...ಬ್‌ನಾಗನ ಸ್ಕೆಚ್ಚಾಗಿತ್ತು. ಬಾಂಬ್ ನಾಗ ಕೌನ್ಸಿಲರ್ ...ಗೆದ್ದಿದ್ದ ಸೇವಾಶ್ರಮ ವಾರ್ಡು ಹರಿದು ಹಂಚಿಕೆಯಾಗಿ ...ಸ ಸುಭಾಷ್‌ನಗರ ವಾರ್ಡಾಯಿತು. ಪರಿಶಿಷ್ಟ ...ಸಲಾತಿಗೊಳಪಟ್ಟದ್ದರಿಂದ ಎಲೆಕ್ಷನ್ನಿಗೆ ನಿಲ್ಲುವ ...ಕಾಶವೇ ತಪ್ಪಿಹೋಯ್ತು. ಪಕ್ಕದ ರಾಮಚಂದ್ರಾಪುರ ...ರ್ಡ್ ಕೂಡ ಪರಿಶಿಷ್ಟ ಮಹಿಳೆ ಆಗಿದ್ದರಿಂದ ಆತನ ...ಕೂಡ ಎಲೆಕ್ಷನ್ನಿಗೆ ನಿಲ್ಲದಂತಾಗಿ ಅಲ್ಲಿ ನಾಗನ ಕಡುವೈರಿ ...ಯ ಪತ್ನಿ ಎಲಿಜಬೆತ್ ಗೆಲ್ಲುವಂತಾಯ್ತು.

...ನಿನ್ನೆಮೊನ್ನೆಯ ತನಕ ತಾನು ಮತ್ತು ತನ್ನ ಪತ್ನಿ ಇಬ್ಬರೂ ...ಲರ್‌ಗಳಾಗಿ ಮೆರೆದು ಈಗ ಏನೂ ಇಲ್ಲದ ...ಶ್ಚಿತ್ತುಗಳಾಗಿ ಬದುಕುವುದನ್ನು ನಾಗ ...ಸದೇ ಹೋದ. ಹತಾಶೆಗೆ ಬಿದ್ದ. ತನ್ನದೇ ...ರ್ಡ್‌ಗೆ ಕಾಂಗ್ರೆಸ್‌ನ ಮಲ್ಲೇಶ್ ಗೆದ್ದು ಬಂದು ...ಸಿಲರ್ ಆದದ್ದು ಆತನನ್ನು ಇನ್ನಷ್ಟು ...ಸಿತ್ತು. ಎಷ್ಟೆಂದರೂ ಮಾಜಿ ಪಾತಕಿ. ...ರಾಂಪುರ ಪೊಲೀಸ್ ಠಾಣೆಯ ...ಷೀಟ್‌ನಲ್ಲಿದ್ದಾತ. ಸಾಲದ್ದಕ್ಕೆ ಮತ್ತೊಬ್ಬ ...ಸಿಲರ್ ಚಕ್ರೆಯ ವಿರುದ್ಧವೂ ಕತ್ತಿ ಮಸೆ ...ತ್ತಿದ್ದ.



ಕೌನ್ಸಿಲರ್ ಮಲ್ಲೇಶ್

...ಇಂಥ ಹತಾಶೆಯಲ್ಲೇ ನಾಗನ ಕ್ರಿಮಿನಲ್ ...ಕೆಲಸ ಮಾಡಿದೆ. ಅದೇಹೊತ್ತಿಗೆ ಗೆದ್ದ ಮಲ್ಲೇಶ್‌ಗೂ, ...ನ ವಿರುದ್ಧ ಕೆಲವು ಮತಗಳ ಅಂತರದಿಂದ ಪಕ್ಷೇತರನಾಗಿ ...ಸೋತಿದ್ದ ಗೋವಿಂದರಾಜುಗೂ ಜಟಾಪಟಿ ...ನಡೆಯುತ್ತಿದ್ದದ್ದನ್ನು ನಾಗ ಸದ್ದಿಲ್ಲದೆ ಗಮನಿಸಿದ್ದ. ಇಬ್ಬರೂ ...ಶ್ ಗುಂಡೂರಾವ್ ಶಿಷ್ಯರೇ. ಹೇಗಿದ್ದರೂ ದಿನೇಶ್ ...ಗುಂಡೂರಾವ್ ತನ್ನ ಕಡುವೈರಿ. ಒಂದೇ ಏಟಿಗೆ ಹಾಲಿ ಕೌನ್ಸಿಲರ್ ಮಲ್ಲೇಶ್‌ರನ್ನೂ ಮಾಜಿ ಕೌನ್ಸಿಲರ್ ಗೋವಿಂದರಾಜುವನ್ನೂ ಮುಗಿಸಿಬಿಟ್ಟರೆ ಮುಂದೆ ತನ್ನ ಚೇಲಾಗಳನ್ನೇ ನಿಲ್ಲಿಸಿ ತಾನೇ ಅನಭಿಷಕ್ತ ಕೌನ್ಸಿಲರ್ ಆಗಬಹುದೆಂಬ ದುರಾಶೆ ನಾಗನ ತಲೆಹೊಕ್ಕಿದೆ.

ಅದಕ್ಕೆ ತನ್ನ ಪಾತಕ ಮಾರ್ಗದಲ್ಲೇ ಕಾರ್ಯಾಚರಣೆ ಗಿಳಿದಿದ್ದಾನೆ ನಾಗ. ಗೋವಿಂದರಾಜುವನ್ನು ಮುಗಿಸಿಬಿಟ್ಟರೆ ಸಹಜವಾಗೇ ಅದು ಹಾಲಿ ಕೌನ್ಸಿಲರ್ ಮಲ್ಲೇಶ್ ತಲೆಗೆ ಸುತ್ತಿಕೊಳ್ಳುತ್ತದೆ. ಮಲ್ಲೇಶ್ ತನ್ನ ಬಂಟರನ್ನು ಛೂಬಿಟ್ಟು ಗೋವಿಂದರಾಜುವನ್ನು ಕೊಲ್ಲಿಸಿದ್ದಾನೆಂದು ಪೊಲೀಸರೂ, ಗೋವಿಂದರಾಜು ಮಕ್ಕಳೂ ಭಾವಿಸುತ್ತಾರೆ. ಮಲ್ಲೇಶ್ ವಿರುದ್ಧವೇ ಗೋವಿಂದರಾಜು ಮನೆಯವರು ದೂರು ದಾಖಲಿಸುತ್ತಾರೆ. ಅಲ್ಲಿಗೆ ಮಲ್ಲೇಶ್ ಜೈಲುಪಾಲಾದಂತೆಯೇ. ಹಾಗೊಮ್ಮೆ ಜಾಮೀನು ಗಿಟ್ಟಿಸಿ ಮಲ್ಲೇಶ್ ಜೈಲಿಂದ ಬಂದನೆಂದರೆ ಆತನನ್ನೂ ತನ್ನದೇ ಗ್ಯಾಂಗ್ ಬಿಟ್ಟು ಕೊಲ್ಲಿಸಿಬಿಡುವುದು. ಅಲ್ಲಿಗೆ ಮಲ್ಲೇಶ್ ಮನೆಯವರು ಮತ್ತು ಪೊಲೀಸರು ಅದು ಗೋವಿಂದರಾಜು ಕೊಲೆಗೆ ನಡೆದ ಪ್ರತೀಕಾರವೆಂದೇ ಭಾವಿಸಿ ಗೋವಿಂದರಾಜು ಮಕ್ಕಳನ್ನು ಬಂಧಿಸುತ್ತಾರೆ.

ಒಂದೇ ಏಟಿಗೆ ಎರಡು ಹಕ್ಕಿ ಹೊಡೆದಂತಾಯ್ತು. ಹಾಲಿ ಮತ್ತು ಮಾಜಿ ಕೌನ್ಸಿಲರ್‌ಗಳಿಬ್ಬರೂ ತಮ್ಮತಮ್ಮಲ್ಲೇ ಹೊಡೆದಾಡಿಕೊಂಡು ನಿಕಾಲಿಯಾದಂತೆ ಮಾಡಿ, ಒಂದೇ ವರ್ಷಕ್ಕೆ ಮತ್ತೆ ಪಾಲಿಕೆ ಉಪಚುನಾವಣೆ ಬರುವಂತಾಗಿ ತಾನು ಬೇನಾಮಿ ಕೌನ್ಸಿಲರ್‌ಗಿರಿ ನಡೆಸುವುದು ನಾಗನ ಹುನ್ನಾರವಾಗಿತ್ತು.

ತನ್ನ ಕೈವಾಡದ ಬಗ್ಗೆ ಯಾರೂ ಅನುಮಾನಿಸಲಾರರೆಂದೇ ನಾಗ ಲೆಕ್ಕ ಹಾಕಿದ್ದ. ರಾಮಚಂದ್ರಾಪುರದಲ್ಲಿ ಚಕ್ರೆ ಪತ್ನಿ ಕ್ವೀನ್ ಎಲಿಜಬೆತ್‌ಗೆ ಪರಿಶಿಷ್ಟ ಜಾತಿಯ ಪ್ರಮಾಣಪತ್ರ ಕೊಡಿಸಿದ್ದೇ ಗೋವಿಂದರಾಜು ಎಂಬ ಸಿಟ್ಟು ಬೇರೆ ಇತ್ತು. ಗೋವಿಂದ ರಾಜುವನ್ನು ಮುಗಿಸಲು ತನ್ನ ಅಳಿಯ ಬಾಯಪ್ಪನ ಜೊತೆ ಕೆಂಪಾಪುರ ಅಗ್ರಹಾರದ ವಂಡ್ರೆ ಬಾಬು ಎಂಬ ಹಳೇ ಪಾತಕಿಯನ್ನು ಜೊತೆ ಹಾಕಿದ. ತಮಿಳುನಾಡಿನ ಚೆನ್ನೈನ ಗೋಪಿ, ಲಿಂಗರಾಜು ತಿರುವಣ್ಣಾಮಲೈ ಕುಟ್ಟಿ ವಿನೋದಾ ಮುಂತಾದ ಖತರ್‌ನಾಕ್ ಕ್ರಿಮಿನಲ್‌ಗಳನ್ನೇ ರೆಡಿ ಮಾಡಿದ. ಲೆಕ್ಕಾಚಾರದಂತೆಯೇ ಆಗಿದ್ದರೆ ಜೂನ್ 21 ರ ಬೆಳಗ್ಗೆ ಮಲ್ಲೇಶ್ವರದ ಹಳ್ಳಿಮನೆ ಹೋಟೆಲ್‌ನ ಎದುರೇ ಗೋವಿಂದರಾಜು ಕೊಲೆಯಾಗಬೇಕಿತ್ತು.

ಆದರೆ ನಡೆದದ್ದೇ ಬೇರೆಯಾಗಿತ್ತು. ಹಳ್ಳಿ ಮನೆ ಹೋಟೆಲ್‌ನ ಎದುರು ಕಾಫಿ ಕುಡಿಯುತ್ತಾ ಕುಳಿತಿದ್ದ ಗೋವಿಂದರಾಜು ಮೇಲೆ ಹಂತಕರು ಅಟ್ಯಾಕ್ ಮಾಡಿದ್ದೇ ತಡ, ಗೋವಿಂದರಾಜು ಹೋಟೆಲ್‌ನೊಳಕ್ಕೆ ಓಡಿಹೋದರು. ಅದೇಹೊತ್ತಿಗೆ ಹೋಟೆಲ್‌ನ ಕೆಲ ಸಿಬ್ಬಂದಿ ಮತ್ತು ಬಂದಿದ್ದ ಗಿರಾಕಿಗಳು ಹಂತಕರತ್ತ ನುಗ್ಗಿ ಬಂದರು. ಜನ ಮುತ್ತಿಕೊಂಡಿದ್ದು ಗೊತ್ತಾದದ್ದೇ ಹಂತಕರು ಓಟಕಿತ್ತರು. ತಲೆಗೆ ಮತ್ತು ಕತ್ತಿಗೆ ಸಣ್ಣಪುಟ್ಟ ಲಾಂಗ್ ಏಟು ಬಿದ್ದು ಆಸ್ಪತ್ರೆ ಸೇರಿದ ಗೋವಿಂದರಾಜು ಅದೃಷ್ಟವಶಾತ್ ಬದುಕುಳಿದರು.

ಅಲ್ಲಿಗೆ ನಾಗನ ಸ್ಕೆಚ್ಚೇ ಉಲ್ಟಾ ಹೊಡೆದಿತ್ತು. ಮೊದಮೊದಲು ಹಾಲಿ ಕೌನ್ಸಿಲರ್ ಮಲ್ಲೇಶ್ ಮೇಲೆ ಗುಮಾನಿ ಬರುವಂತೆ ನಾಗ ಅಪಪ್ರಚಾರ ಮಾಡಿದ್ದ. ಎರಡು ತಿಂಗಳಾಗುತ್ತಾ ಬಂದರೂ ಗೋವಿಂದರಾಜು ಹತ್ಯಾಪ್ರಯತ್ನದ ಆರೋಪಿಗಳು ಯಾರೆಂಬುದೇ ಮಲ್ಲೇಶ್ವರದ ಇನ್ಸ್‌ಪೆಕ್ಟರ್ ಶ್ರೀನಿವಾಸ್‌ಗೆ ಗೊತ್ತಾಗಿರಲಿಲ್ಲ. ಆದರೆ ಹಂತಕರೇ ದುಡುಕಿ ಯಡವಟ್ಟು ಮಾಡಿಕೊಂಡರು. ತಿರುವಣ್ಣಾಮಲೈನ ಬಾರ್ ಒಂದರಲ್ಲಿ ಕುಡಿದು ಸುಪಾರಿ ದುಡ್ಡಿಗಾಗಿ ಕಚ್ಚಾಡಿಕೊಂಡರು. ಇದು ತಮಿಳುನಾಡು ಪೊಲೀಸರ ಗಮನಕ್ಕೆ ಬರುತ್ತಿದ್ದಂತೆ ಗೋವಿಂದರಾಜು ಹತ್ಯಾಪ್ರಯತ್ನದ ನಾಗನ ಹುನ್ನಾರ ಬಯಲಾಯಿತು.

ಸದ್ಯ ನಾಗನ ಅಳಿಯ ಕುಮಾರ್ ಅಲಿಯಾಸ್ ಬಾಯಪ್ಪ, ಕೆ.ಪಿ.ಅಗ್ರಹಾರದ ವಂಡ್ರೆ ಬಾಬು, ಚೆನ್ನೈನ ಕುಟ್ಟಿ ವಿನೋದ, ಗೋಪಿ ಮತ್ತು ಲಿಂಗರಾಜು ಜೈಲು ಪಾಲಾಗಿದ್ದಾರಾದರೂ ಬಾಂಬ್ ನಾಗ ಎಸ್ಕೇಪಾಗಿದ್ದಾನೆ.

ಒಂದಾನೊಂದು ಕಾಲಕ್ಕೆ ದಿನೇಶ್ ಗುಂಡೂರಾವ್ ವಿರುದ್ಧ ಕೇವಲ ಐನೂರು ಮತಗಳಿಂದ ಸೋತವನು ಬಾಂಬ್‌ನಾಗ. ನಂತರ ತಾನೇ ಪಾಲಿಕೆಗೆ ನಿಂತು ಕೌನ್ಸಿಲರ್ ಆದ. ಪತ್ನಿ ಲಕ್ಷ್ಮಿಯನ್ನೂ ನಿಲ್ಲಿಸಿ ಗೆಲ್ಲಿಸಿಕೊಂಡ. ಕ್ರಿಮಿನಲ್ ಯಾವತ್ತಿದ್ದರೂ ಕ್ರಿಮಿಯೇ. ಬಾಂಬ್ ನಾಗನಂಥ ಹುಳವನ್ನು ಹೊಸಕಿ ಹಾಕದೇ ಹೋದರೆ ಮುಂದೊಮ್ಮೆ ಶ್ರೀರಾಂಪುರಕ್ಕೆ ಅಪಾಯ ಕಟ್ಟಿಟ್ಟ ಬುತ್ತಿ

• ರಾ. ಸೋಮನಾಥ್
ra.somanath2010@gmail.com

ದಯವಿಟ್ಟು ನೀವು ರಾಜೀನಾಮೆ ಕೊಡಬೇಡಿ ಸಾರ್

ಕಡೂರು ಮತ್ತು ಗುಲ್ಬರ್ಗದ ಉಪಚುನಾವಣೆ ಬರುತ್ತಿರಲಾಗಿ, ಸದರಿ ಚುನಾವಣೆಯಲ್ಲಿ ಹೇಳಿಕೊಳ್ಳಲು ಕಡಿದು ಕಟ್ಟೆ ಹಾಕಿರುವ ಯಾವ ಸಾಧನೆಯೂ ಇಲ್ಲದ ಪ್ರಯುಕ್ತ ಬಿಜೆಪಿಗಳು ಗೋವಿನ ಬಾಲವನ್ನು ಬಿಗಿಯಾಗಿ ಹಿಡಿದು ಹೊರಟಿವೆಯಂತಲಾ. ಇದನ್ನು ಕಂಡು ಅಪ್ಪಟ ಕಾಂಗ್ರೆಸ್ ನಾಯಕರಂತೆ ಕಂಗೊಳಿಸುವ ಭಾರದ್ವಾಜರು "ನಿಮಗೆ ಬೇರೆ ಮಾರ್ಗವೇ ಇಲ್ಲವೆ?" ಎಂದು ಕೇಳಲಾಗಿ, ಇದೇ ಸಮಯವೆಂದು ಕಾಯುತ್ತಿದ್ದ ಕರ್ನಾಟಕದ ಜ್ಯೋಯಿಸರು ಕಂ ಆಧುನಿಕ ಮನು ಮತ್ತು ಮಾಜಿ ರಾಜ್ಯಪಾಲರೊಬ್ಬರು ಥೇಟ್ ಚಡ್ಡಿ ನಾಯಕರಂತೆ ಉತ್ತರಿಸಿದ್ದಾರಂತಲ್ಲಾ, ಥೂತ್ತೇರಿ!

******



ನಮ್ಮ ಸಂತೆ ಶಿವರದ ಚಡ್ಡಿ ಬೈರಣ್ಣ "ಈ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದ್ದು ಗಾಂಧೀಜಿಯ ಉಪವಾಸದಿಂದಲ್ಲ, ಬದಲಿಗೆ ನಮ್ಮ ಭೋಜನದ ಹೊಡೆತ ನೋಡಿ ಬ್ರಿಟಿಷರು ಹೆರಿಕಿತ್ತರು" ಎಂಬಂತೆ ಮುಲುಕಿದ್ದಾರಂತಲ್ಲಾ. "ಅಲ್ಲಾ, ಗಾಂಧಿ ಉಪವಾಸದಿಂದ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿತು ಅಂತ ಯಾರು ಹೇಳಿದರು? ಉಲ್ಬಣಗೊಂಡ ಸಮಸ್ಯೆಗಳ ಉಬ್ಬರವನ್ನು ಇಳಿಸಲೋಸ್ಕರ ಗಾಂಧಿ ಉಪವಾಸ ಮಾಡುತ್ತಿದ್ದರು ಅಷ್ಟೆ. ಇಷ್ಟನ್ನು ಯೋಚಿಸಲಾಗದ ಎಸ್.ಎಲ್. ಭೈರಣ್ಣನ ತಲೆ, ಎಂಭತ್ತು ವರ್ಷ ತುಂಬಿರುವ ಪ್ರಯುಕ್ತ ಕೆಟ್ಟು ಕೆರ ಹಿಡಿದು ಹೋಗಿದೆ. ಇಲ್ಲವಾದರೆ, 'ಕವಲು' ಎಂಬ ತೆವಲು ಕೆರೆದು ಮಹಿಳೆಯರಿಂದ ಹಿಗ್ಗಾಮುಗ್ಗ ಇಕ್ಕಿಸಿಕೊಳ್ಳುತ್ತಿರಲಿಲ್ಲ" ಎಂದು ಭೈರನ ವಿರೋಧಿಗಳು ಕೂಗಿದವಂತಲ್ಲಾ. ಈ ಮಧ್ಯೆ " 'ಕವಲು' ಬಗ್ಗೆ ಸರಿಯಾದ ವಿಮರ್ಶೆಯೇ ಬಂದಿಲ್ಲ, ಆದ್ದರಿಂದ ಅನಿವಾರ್ಯವಾಗಿ ನಾನೇ ಸರಿಯಾದ ವಿಮರ್ಶೆ ಮಾಡಿಕೊಳ್ಳುತ್ತೇನೆ" ಎಂದು ಭೈರಪ್ಪ ಘೋಷಿಸಿದರಂತಲ್ಲ, ಅಷ್ಟೇ ಅಲ್ಲದೆ, ಭೈರಣ್ಣ ಈಗ ಸಂಘದ ಕೆಲಸ ಮಾಡುವವರಂತೆ ಪುಸ್ತಕದ ಸಮೇತ ಊರೂರು ಅಲೆಯುತ್ತಿರಲಾಗಿ, ಅಲ್ಲಿನ ಸಂಘಗಳು 'ಕವಲು' ಮಾರಿದ ಕಾಸನ್ನು ಪೈಸೆ ಪೈಸೆ ಲೆಕ್ಕ ತೋರಿ ಭೈರನ ಕೈಗಿಡುತ್ತಿವೆಯಂತಲ್ಲಾ, ಥೂತ್ತೇರಿ!

******

ಮಾಡಲೂ ಆಗದೆ, ಮಲಗಲೂ ಆಗದೆ, ರಾತ್ರಿಯಿಡೀ ಕೆಮ್ಮುತ್ತ ಆಚೀಚೆ ತಿರುಗುತ್ತ ಕಡೆಗೆ ಬೆಳಕು ಹರಿದನಂತರ ಹೊರಟುಹೋಗುವ ಭಗ್ನಪ್ರೇಮಿಯಂತೆ ಕಾಣುತ್ತಿರುವ ಎಡ್ಡೂರಪ್ಪನನ್ನು ಕೂಗಿ ಎರಡು ಸಾಂತ್ವನದ ಮಾತನಾಡಬೇಕೆನಿಸಿತಲ್ಲಾ, ಆ ಕೂಡಲೇ ಫೋನ್ ಮಾಡಲಾಗಿ ಸಿಕ್ಕಿದರು.

ಥೂತ್ತೇರಿ

ಯಾಹೂ

ರಿಂಗ್ ಟೋನ್: "ನಿನಗ್ಯಾರಿದ್ದರೇನೂ ಸುಖವಿಲ್ಲ ಪ್ರಭುವೇ, ದಾರಿ ಸುಖವಿಲ್ಲ, ಬಾಯಾರಿತು ಎಂದು ಭಾವಿ ನೀರಿಗೆ ಪೋದೆ...."

"ಹಲೊ ಯಾರು?"

"ನಾನು ಸಾರ್, ಯಾಹು ಅಂತ, ಪತ್ರಕರ್ತ."

"ಗೊತ್ತು, ಏನೇಳ್ರೀ?"

"ಯಾಕ್ ಸಾರ್ ಸಿಟ್ಟಾಗಿದ್ದಿರಿ?"

"ಮತ್ತೆ ಇನ್ನೇನ್ರಿ? ನಾನು ಮುಖ್ಯಮಂತ್ರಿಯಾಗಿ ನನ್ನ ಇಷ್ಟ ಬಂದೋರ ಎರಡು ಜನರನ್ನ ಸಂಪುಟಕ್ಕೆ ಸೇರಿಸಿಗಳಕ್ಕಾಗಲ್ಲ ಅಂದ್ರೆ ನಾನ್ಯಾಕಿರಬೇಕು?"

"ಅಂಗಂತ ರಾಜೀನಾಮೆ ಕೊಡಬೇಡಿ ಸಾರ್."

"ಇನ್ನೇನು ಮಾಡದೇಳಿ?"

"ನಾನೇನು ತಿಳಕಂಡೆ ಅಂದ್ರೆ, ಕರ್ನಾಟಕದ ವಿದ್ಯುತ್ ಸಮಸ್ಯೆ ಬಗೆಹರಿಯೋದಾದ್ರೆ ನಾಳೆನೆ ನಾನು ರಾಜೀನಾಮೆ ಕೊಡ್ತಿನಿ ಅಂದ್ರಲ್ಲ ಸಾರ್. ಅದು ನಿಜ ಅನ್ನಕಂಡೆ."

"ಅದೂ ಒಂದು ಕಾರಣ ಕಂಡ್ರಿ. ಎಷ್ಟು ಅಂತ ಜನಗಳ ಕೈಲಿ ಬೈಸಿಗಳದು, ನೀವೆ ಹೇಳಿ."

"ಸರಿ, ನೀವ್ಯಾಕ್ ಸಾರ್ ಆ ಖಾತೆ ಇಟಗಂಡು ಬೈಸಿಗತ್ತಿರಿ. ಆ ಬಚ್ಚೇಗೌಡನಿಗೊ, ಜಗದೀಶ್ ಶೆಟ್ಟರ್‌ಗೊ ಕೊಡಿ. ಅವರು ಬೈಸಿಗಳ್ಳಿ."

"ಆ ಖಾತೆನ ಆ ತರ ಬಿಟ್ಟುಕೊಡಕ್ಕಾಗಲ್ಲ ಕಂಡ್ರೀ."

"ಆದ್ರು ನೀವು ರಾಜೆನಾಮೆ ಮಾತಾಡಬೇಡಿ ಸಾರ್. ಸದ್ಯದ ಈಗಿನ ಕರ್ನಾಟಕನ ಆಳೋದಕ್ಕೆ ನೀವಲ್ಲದೆ ಇನ್ಯಾರಿಂದ್ಲೂ ಸಾಧ್ಯವಿಲ್ಲ."

"ಹಾಗಂತಿರ?"

"ದೇವರಾಣೆ ನಿಜ ಸಾರ್. ಈ ಟೈಮಲ್ಲಿ ಇನ್ಯಾರೋ ಆಗಿದ್ರು ವಿಷ ಕುಡುದು ನೇಣಾಯ್ಕಳ್ತಿದ್ರು. ನೀವು ಮಾತ್ರ ಅಭಿನವ ಬಸವಣ್ಣನ ತರ ಶಾಂತ ಮುಖದಲ್ಲಿ, ಮಲ್ಲಿಗೆ ಮುಗುಳು ನಗೆಲಿ, ಭೂಮಿಗೆ ಎಲ್ಲಿ ನೋವಾಗುತ್ತೊ ಅಂತ ಹಗುರವಾಗಿ ಹೆಜ್ಜೆ ಇಡತ, ಎಲ್ಲಾನು ನಿಭಾಯಿಸ್ತಾಯಿದ್ದಿರಿ. ನಿಮ್ಮ ಒಂದೊಂದು ಹೆಜ್ಜೆನೂ ಒಂದೊಂದು ದಾಖಲೆ ಸಾರ್. ನೀವು ಮಾತ್ರ ಈ ಸಂದರ್ಭಕ್ಕೆ ಹೇಳಿ ಮಾಡಿಸಿದ ನಾಯಕ."

"ಇನ್ನೊಂದಿಷ್ಟು ಮಾತಾಡಿ ಯಾಹೂ ಅವರೆ."

"ಆ ಕಡೆ ಹೆಬ್ಬಾವಿನಂತ ದೇವೇಗೌಡ್ರು. ಈ ಕಡೆ ಕೊಂಬಿನ ಟಗರಿನ ತರ ಸಿದ್ದರಾಮಯ್ಯ, ಹತ್ತಕಾಗದೆಯಿದ್ರು ಸುಮ್ಮನೆ ಗುಟರಾಕೋ ಇಲಾತಿ ಗೂಳಿ ದೇಶಪಾಂಡೆ. ಇವುರಷ್ಟೆ ಅಲ್ಲದೆ ಅತ್ತ ಅನಾಗರಿಕ ಜನಾರ್ದನ ರೆಡ್ಡಿ, ಮೂರ್ಖ ರಾಮುಲು, ಪರಮನೀಚರಾದ ಕರುಣಾಕರ, ಸೋಮಶೇಖರ. ಇಂತಹ ಜನಗಳೆಲ್ಲ ನಿರಂತರವಾಗಿ ತೊಂದ್ರೆ ಕೊಡತಾಯಿದ್ರೂ ಅದೆಲ್ಲವನ್ನು ಶರಣ ಕಲ್ಯಾಣಕ್ಕಾಗಿ ಸಹಿಸಿಕೊಂಡು ಮುನ್ನಡಿತಾಯಿರೊ ನೀವು ನಿಜಕ್ಕೂ ಹೀರೋ ಸಾರ್."

"ಶೋಬಾನೂ ಅದನ್ನೆ ಹೇಳ್ತಾಯಿದ್ಲು, ಏನೇ ಆಗ್ಲಿ ರಾಜೀನಾಮೆ ಕೊಡಬೇಡಿ ಅಂತ."

"ಅವ್ರುರನ್ನದ್ರಲ್ಲಿ ಏನಾದ್ರು ಇರುತ್ತೆ ಸಾರ್. ಅದೇ ನಾನು ಹೇಳದ್ರಲ್ಲಿ ಈ ನಾಡಿನ ಹಿತ ಇದೆ. ಸಮಗ್ರ ಅಭಿವೃದ್ಧಿ ಇದೆ. ನಿಮ್ಮ ಕುಟುಂಬದ ಕಲ್ಯಾಣ ಇದೆ. ಆದ್ರಿಂದ ರಾಜೀನಾಮೆ ಕೊಡಕೂಡದು."

"ಕೊಡಲ್ಲ ಕಂಡ್ರಿ. ಇಂತ ನೂರು ದೇವೇಗೌಡ, ಸಿದ್ದರಾಮಯ್ಯ ಬಂದ್ರೂ ಕೊಡಲ್ಲ. ಅಕಸ್ಮಾತ್ ಕೊಟ್ರೆ ಅಂತ ತಿಳಕೊಳಿ. ಆಗೇನಾಗತ್ತೆ ಅಂದ್ರೆ ಗಣಿಗಾರಿಕೆ ಅಕ್ರಮದ ಸಿಬಿಐಗೆ ವಹಿಸಿಬಿಡ್ತರೆ. ಆಗ ಬೇಲೇಕೇರಿ ಗುಡರಾಶಿಗೆ ನಮ್ಮನ್ನೂ ದೂಡಿಬುಡ್ತಾರೆ."

"ಅಂಗಾದ್ರೆ ಬೇಲೇಕೇರಿ ಗಣಿ ಧೂಳಲ್ಲಿ ನಿಮ್ಮ ಕೈವಾಡ ಇದೆಯಾ ಸಾರ್?"

"ಇದೆ ಕಂಡ್ರಿ. ಅದ್ಕೆ ಇಷ್ಟು ಹೊರಾಡದು ನಾನು."

"ಥೂತ್ತೇರಿ!!!"

ಬಿಜೆಪಿ ಷಡ್ಯಂತ್ರ 'ರಕ್ತವನು ಹರಿಸೋ ಹನುಮಂತ'

ಮೊನ್ನೆ ಅಂದರೆ ಆಗಸ್ಟ್ 16ರಂದು ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಶುರು ಹಚ್ಚಿಕೊಂಡ 'ಹನುಮ ಶಕ್ತಿ ಜಾಗರಣ ಅಭಿಯಾನ'ಕ್ಕೂ, ಅದರ ಮರುದಿನವೇ ಗುಲ್ಬರ್ಗಾದಲ್ಲಿ ಹನುಮಂತ ದೇವರಮೂರ್ತಿ ಭಗ್ನವಾಗಿದ್ದಕ್ಕೂ ಏನು ಸಂಬಂಧ?



ಆಗಸ್ಟ್ 16 ರಂದೇ ಮೈಸೂರಿಗೆ ಬಂದ ಪೇಜಾವರ ಸ್ವಾಮೀಜಿ 'ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಿಸಲು ಯುವಕರು ಹನುಮನಂತೆ ಎದ್ದು ನಿಲ್ಲಬೇಕು' ಎಂದು ಏಕೆ ವೀರಾವೇಶದ ಭಾಷಣ ಬಿಗಿಯುತ್ತಾರೆ?

ಆಗಸ್ಟ್ 16 ರಿಂದ ನವೆಂಬರ್ 17 ರವರೆಗೆ ಆರೆಸ್ಸೆಸ್ ಹಮ್ಮಿಕೊಂಡ 'ಹನುಮಾನ್ ಚಾಲೀಸಾ ವ್ರತ' ಮತ್ತು ಶ್ರೀರಾಮತಾರಕ ಜಪಕ್ಕೂ, ಆನಂತರ ಡಿಸೆಂಬರ್ 16 ರ ತನಕ ಸಂಘಪರಿವಾರ ದೇಶದ 800 ಕೇಂದ್ರಗಳಲ್ಲಿ ಶುರುವಿಡಲಿರುವ 'ಹನುಮಾನ್ ಶಕ್ತಿ ಜಾಗರಣಾ ಮಹಾಯಜ್ಞ'ಕ್ಕೂ ಮತ್ತು ಗೋಹತ್ಯೆ ನಿಷೇಧ ಕಾಯ್ದೆಗಾಗಿ ರಾಜ್ಯಾದ್ಯಂತ ಬಿಜೆಪಿ ಸರ್ಕಾರ ಆರಂಭಿಸಲಿರುವ 'ಸರ್ಕಾರಿ ಪ್ರತಿಭಟನೆ'ಗೂ ಇರುವ ಒಳಸಂಬಂಧವೇನು?

ವಿಶ್ವ ಹಿಂದೂ ಪರಿಷತ್ತಿನ ನಾಯಕ ಅಶೋಕ್ ಸಿಂಘಾಲ್ ಬಿಡದಿಗೆ ಬಂದು ಕಾಮುಕ ಸ್ವಾಮಿ ನಿತ್ಯಾನಂದನ ಜೊತೆ ಏಕೆ ಸಮಾಲೋಚಿಸಬೇಕು?

ಅತ್ತ ಶಿವಮೊಗ್ಗದಲ್ಲಿ ಹನುಮಂತ್ ಶಕ್ತಿ ಜಾಗರಣಾ ಅಭಿಯಾನವನ್ನು ಉದ್ಘಾಟಿಸಿದ ಹಿಂದೂ ಜಾಗರಣಾ ವೇದಿಕೆಯ ರಾಜ್ಯ ನಾಯಕ ಮುನಿಯಪ್ಪ 'ರಾಮಮಂದಿರವನ್ನು ಅಯೋಧ್ಯೆಯಲ್ಲಿ ನಿರ್ಮಿಸದೇ ಮೆಕ್ಕಾದಲ್ಲಿ ಕಟ್ಟಲು ಸಾಧ್ಯವಾ?' ಎಂದು ಪಕ್ಕಾ ಟೆರರಿಸ್ಟ್ ಗತ್ತಿನಲ್ಲಿ ಏಕೆ ಬೊಬ್ಬೆ ಹಾಕುತ್ತಾನೆ?

ಗಣಿ ಲೂಟಿಯ ವಿರುದ್ಧ ಕಾಂಗ್ರೆಸ್‌ನ ಬಳ್ಳಾರಿ ಪಾದಯಾತ್ರೆಗೆ ಸಿಕ್ಕ ಅಭೂತಪೂರ್ವ ಜನಬೆಂಬಲದ ಮಧ್ಯೆಯೇ ಸಂಘ ಪರಿವಾರ ಗೋಹತ್ಯೆ, ಅಯೋಧ್ಯೆ, ಹನುಮಾನ್ ಚಾಲೀಸಾ ಇತ್ಯಾದಿ ಕಾರ್ಯಕ್ರಮಗಳನ್ನು ಒಂದರ ಮೇಲೊಂದರಂತೆ ಏಕೆ ರೂಪಿಸುತ್ತಿದೆ?

ಈ ಎಲ್ಲಾ ಪ್ರಶ್ನೆಗಳಿಗೆ ಸಂಪೂರ್ಣ ಉತ್ತರ ದೊರಕುವ ಹೊತ್ತಿಗೆ ಕರ್ನಾಟಕದುದ್ದಕ್ಕೂ ಅದೆಷ್ಟು ರಕ್ತ ಹರಿದಿರುತ್ತೋ, ಎಲ್ಲೆಲ್ಲಿ ಬೆಂಕಿ ಬಿದ್ದಿರುತ್ತೋ; ಕಲ್ಪಿಸಿಕೊಳ್ಳುವುದೇ ಭಯಾನಕ!

ಅಂಥದೊಂದು ಷಡ್ಯಂತ್ರವನ್ನು ಸದ್ದಿಲ್ಲದೇ ಹೆಣೆದಿದೆ ಆರೆಸ್ಸೆಸ್. ಕಾಂಗ್ರೆಸ್ ನಾಯಕ ಸಿದ್ಧರಾಮಯ್ಯ ಗಣಿ ಲೂಟಿ ವಿರುದ್ಧ ಹಮ್ಮಿಕೊಂಡ ಬಳ್ಳಾರಿ ಪಾದಯಾತ್ರೆಯೊಂದೇ ಬಿಜೆಪಿ ಸರ್ಕಾರದ ಶವಪೆಟ್ಟಿಗೆಗೆ ಹೊಡೆದ ಮೊಳೆಯಂತೆ ಚೆಡ್ಡಿ ಪಡೆಗೆ ನಡುಕ ಹುಟ್ಟಿಸಿದೆ. ಪರಿಸ್ಥಿತಿ ಹೀಗೇ ಮುಂದುವರಿದರೆ ಕರ್ನಾಟಕದ ಮಟ್ಟಿಗೆ ಯಡ್ಡಿ ಆಳ್ವಿಕೆಯೇ ಬಿಜೆಪಿಯ ಅಂತಿಮ ಅಧಿಕಾರಾವಧಿಯಾಗುತ್ತದೆ. ಜನ ಮತ್ತೆಂದೂ ಬಿಜೆಪಿಯನ್ನು ಮೂಸುವುದು ಕಷ್ಟ. ಹಾಗಾಗಬಾರದೆಂದರೆ ಸಿದ್ದು ಪಾದಯಾತ್ರೆಯ ಎಫೆಕ್ಟನ್ನು ಮೊಳಕೆಯಲ್ಲೇ ಚಿವುಟಬೇಕು. ಗಣಿ ಸಂಪತ್ತಿನ ಲೂಟಿ, ಬಳ್ಳಾರಿ ರೆಡ್ಡಿಗಳ ಅಟ್ಟಹಾಸ, ಸರ್ಕಾರಿ ಭ್ರಷ್ಟಾಚಾರ, ವಿದ್ಯುತ್ ಕೊರತೆಯ ಗಾಢಾಂಧಕಾರ ಮತ್ತು ಪ್ರವಾಹ ಸಂತ್ರಸ್ತರ ಪುನರ್ವಸತಿ ವೈಫಲ್ಯ; ಇತ್ಯಾದಿ ಬಿಜೆಪಿ ದುರಾಚಾರಗಳನ್ನೆಲ್ಲ ಒಂದೇ ಏಟಿಗೆ ಮುಚ್ಚಿ ಹಾಕಬೇಕೆಂದರೆ ಅದಕ್ಕಿರುವ ಒಂದೇ ದಾರಿ ಅದು ಗುಜರಾತ್ ಮಾದರಿ-

ಅಂದರೆ ರಾಜ್ಯಾದ್ಯಂತ ಕೋಮುಗಲಭೆಗಳಾಗಬೇಕು. ಹಿಂದೂ ಮುಸ್ಲಿಮರು ಬೀದಿಗಿಳಿದು ಬಡಿದಾಡಬೇಕು. ಗಣೇಶೋತ್ಸವದ ಹೆಸರಲ್ಲಿ ಗಲಭೆ, ಗೋಹತ್ಯೆಯ ನೆಪದಲ್ಲಿ ಹಿಂಸೆ, ಅಯೋಧ್ಯೆಯ ಕಾರಣಕ್ಕೆ ಬೆಂಕಿ, ಹಿಂದೂ ದೇವತೆಗಳ ರಕ್ಷಣೆಗೆ ದೊಂಬಿ ಮತ್ತು ಹನುಮಂತನನ್ನು ಜಪಿಸುತ್ತಲೇ ಕೊಲೆ-ಸುಲಿಗೆ!

ಇದು ಇಷ್ಟರಲ್ಲೇ ಆರೆಸ್ಸೆಸ್ ಆರಂಭಿಸಲಿರುವ ರಹಸ್ಯ ಕಾರ್ಯತಂತ್ರ!

ಇದಕ್ಕೆ ಆಯುಧವಾಗಿ ಅವತರಿಸುವವನು ರಾಮನ ಬಂಟ ಹನುಮಂತ!

'ಅಂದರೆ ಪವನಸುತ ವೀರಾಂಜನೇಯ ಸ್ವಾಮಿ ಅರ್ಥಾತ್ ಕನ್ನಡ ಕುಲಪುಂಗವ ಹನುಮ!

ರಾಮನ ಬ್ರಾಂಡು ಮತ್ತು ಟ್ರೇಡ್‌ಮಾರ್ಕಿನ ಬಗ್ಗೆ ಜನಕ್ಕೆ ಈಗಾಗಲೇ ಜಿಗುಪ್ಸೆ ಹುಟ್ಟಿದೆಯಾದ್ದರಿಂದ ಆತನ ಪರಮಭಕ್ತ ಹನುಮಂತನಂತೆ ಯುವಕರು ಎದ್ದು ನಿಂತು ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಿಸಬೇಕೆಂದು ಕೇಸರಿ ಪ್ರವಾದಿ ಪೇಜಾವರ ವಿಶ್ವೇಶತೀರ್ಥರು ಭಾಷಣ ಬಿಗಿಯುತ್ತಿದ್ದಾರೆ. ಹಿಂದೆ ಕರಸೇವೆಗೆ ಬಾಣ ಹೂಡುತ್ತಿರುವ ವೀರಾವೇಶದ ಶ್ರೀರಾಮನ ಚಿತ್ರ ಬಳಸಿದಂತೆ ಈ ಬಾರಿ ಗದೆ ಹಿಡಿದು ಕಾಳಗಕ್ಕೆ ನಿಂತ ಹನುಮಂತನ ಚಿತ್ರವನ್ನು ಚೆಡ್ಡಿ ಪಡೆ ಪ್ರಯೋಗಿಸಲಿದೆ. ಹನುಮಂತ ತನ್ನ ಎದೆ ಬಗೆದು ಶ್ರೀರಾಮಚಂದ್ರನನ್ನು ತೋರಿಸಿದಂತೆ ನಾಡಿನ ಯುವಕರು ಅಯೋಧ್ಯೆಯಲ್ಲಿ ಮಂದಿರ ಕಟ್ಟಲು ವೀರರಂತೆ ಆಯುಧ ಹಿಡಿಯಬೇಕು. ನುಗ್ಗಬೇಕು. ಯುದ್ಧಕ್ಕೆ ನಿಲ್ಲಬೇಕು.

ಇದು ಪೇಜಾವರರ ಭಾಷಣದ ಭಾವಾರ್ಥವಾದರೆ ಹಿಂದೂ ಜಾಗರಣ ವೇದಿಕೆ, ಭಜರಂಗದಳ, ಶ್ರೀರಾಮಸೇನೆ ಮತ್ತು ವಿಶ್ವ ಹಿಂದೂ ಪರಿಷತ್ತಿನ ಹುನ್ನಾರಗಳೇ ಬೇರೆ. ಹನುಮಂತನಿಗೆ ಸಿಟ್ಟು, ಆಕ್ರೋಶ, ಕ್ರೌರ್ಯ, ಪೌರುಷ, ಶಕ್ತಿಗಳೆಲ್ಲ ಏಕಾಏಕಿ ಉಕ್ಕಬೇಕೆಂದರೆ ಗೋಮಾತೆಯ ಹತ್ಯೆಯ ವಿರುದ್ಧ ಭಗವಂತ ರೊಚ್ಚಿಗೇಳಲೇಬೇಕು. ಒಂದೆಡೆ ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಿಸದ ಸಿಟ್ಟು, ಮತ್ತೊಂದೆಡೆ ಗೋಮಾತೆಯ ಹತ್ಯೆಯ ಆಕ್ರೋಶ, ಮಗದೊಂದೆಡೆ ಮತಾಂತರದ ಹಾವಳಿ, ಇನ್ನೊಂದೆಡೆ ಲವ್ ಜಿಹಾದ್‌ನ ಬೊಬ್ಬೆಗಳೆಲ್ಲ ಸೇರಿಬಿಟ್ಟರೆ ಕರ್ನಾಟಕ ಗುಜರಾತ್ ಆಗಿ, ಕನ್ನಡಿಗರೆಲ್ಲ ಮೋದಿಯಂತಾಗಿ ಗಣಿ ಸಂಪತ್ತಿನ ಲೂಟಿ ವಿರುದ್ಧದ ಸಿಟ್ಟೆಲ್ಲ ತನ್ನಿಂತಾನೇ ಮಾಯವಾಗಿ ಬಿಡುತ್ತದೆ ಮತ್ತು ಬಳ್ಳಾರಿ ಪಾದಯಾತ್ರೆಯ ಎಫೆಕ್ಟೆಲ್ಲ ಹೊಳೆಯಲ್ಲಿ ಹುಣಿಸೆಹಣ್ಣು ಕಿವುಚಿದಂತಾಗುತ್ತದೆ.

ಅದಕ್ಕಾಗೇ ಹನುಮಂತನನ್ನು ಬೀದಿಗೆ ಎಳೆದು ತರಬೇಕಿದೆ. ಅಂಥದೊಂದು ಷಡ್ಯಂತ್ರದ ಹೆಸರೇ ಹನುಮಾನ್ ಶಕ್ತಿ ಜಾಗರಣ ಅಭಿಯಾನ. ಯಾವುದೇ ಕಾರಣವಿಲ್ಲದೇ ಏಕಾಏಕಿ ಆಗಸ್ಟ್ 16 ರಿಂದ ರಾಜ್ಯಾದ್ಯಂತ ಸಂಘ ಪರಿವಾರ ಶುರುಹಚ್ಚಿಕೊಂಡ ಹನುಮಾನ್ ಚಾಲೀಸಾವ್ರತ ಮತ್ತು ಶ್ರೀರಾಮತಾರಕ ಜಪದ ಉದ್ದೇಶ ಹಿಂಸೆ ಮತ್ತು ರಕ್ತಪಾತ ಮಾತ್ರ. ನೆಪಕ್ಕಷ್ಟೇ ಅಯೋಧ್ಯೆಯಲ್ಲಿ ರಾಮಮಂದಿರ ಕಟ್ಟಲು ಕೇಂದ್ರ ಸರ್ಕಾರ ವಿಶೇಷ ಶಾಸನ ರಚಿಸಬೇಕೆಂದೂ ಅದಕ್ಕಾಗಿ ಯುವಕರು ಹನುಮಂತನಂತೆ ಸಿಡಿದು ನಿಲ್ಲಬೇಕೆಂದೂ ಪೇಜಾವರ ಸ್ವಾಮೀಜಿ ಕರೆಕೊಡುತ್ತಿದ್ದಾರೆ.







ರಾಮಮಂದಿರ ನಿರ್ಮಿಸುವುದೇ ಬಿಜೆಪಿಯ ಗುರಿಯಾಗಿದ್ದರೆ ಬಾಬರಿ ಮಸೀದಿ ಕೆಡವಿ ಅಧಿಕಾರಕ್ಕೆ ಬಂದ ವಾಜಪೇಯಿ ಒಂದಲ್ಲ ಮೂರು ಅವಧಿಗೆ ಪ್ರಧಾನಿಯಾಗಿದ್ದರಲ್ಲ; ಆ ಹೊತ್ತಿಗೇ ಮಂದಿರ ಕಟ್ಟಬಹುದಿತ್ತಲ್ಲವೆ? ಸತತ ಐದು ವರ್ಷಗಳ ಕಾಲ ಅಧಿಕಾರದಲ್ಲಿದ್ದೂ ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಿಸದ ಬಿಜೆಪಿ ಈಗ ಕಾಂಗ್ರೆಸ್ ಅಧಿಕಾರಾವಧಿಯಲ್ಲಿ ಮಂದಿರ ಕಟ್ಟುವಂತೆ ಹೋರಾಟಕ್ಕಿಳಿಯುವುದರಲ್ಲಿ ಏನಾದರೂ ಅರ್ಥವಿದೆಯೇ?

ಪ್ರಶ್ನೆ ಅದಲ್ಲ, ರಾಮನ ಹೆಸರಲ್ಲಿ ರಕ್ತ ಹರಿಸೇ ಅಧಿಕಾರ ಹಿಡಿಯುವುದು ಸಂಘ ಪರಿವಾರದ ಹುನ್ನಾರವಾಗಿತ್ತು. ಈಗದು ಹನುಮಂತನನ್ನು ಬಳಸುತ್ತಿದೆ. ಆಗಸ್ಟ್ 16 ರಂದು ರಾಜ್ಯಾದ್ಯಂತ ಶುರುವಾದ ಹನುಮಾನ್ ಶಕ್ತಿ ಜಾಗರಣ ಅಭಿಯಾನದ ಮರುದಿನವೇ ಗುಲ್ಬರ್ಗಾದಲ್ಲಿ ಆಂಜನೇಯನ ವಿಗ್ರಹವನ್ನು ಭಗ್ನಗೊಳಿಸಿದ್ದು ಯಾರೋ ಕಿಡಿಗೇಡಿಗಳಾಗಲಿ, ಹಿಂದೂ ವಿರೋಧಿಗಳಾಗಲಿ ಅಲ್ಲ.



ಕೋಮು ಗಲಭೆಗೆ ಈ ಬಾರಿ ಆಂಜನೇಯ ಸ್ವಾಮಿಯನ್ನು ಬಳಸುವ ಷಡ್ಯಂತ್ರದ ಫಲವಾಗೇ ನಡೆದ ಕುಚೋದ್ಯವದು. ಈತನಕ ಹನುಮಂತ ದೇವರನ್ನು ಭಗ್ನಗೊಳಿಸಿದ ಆರೋಪಿಗಳನ್ನು ಬಿಜೆಪಿಯದೇ ಸರ್ಕಾರವಿದ್ದಾಗಲೂ ಏಕೆ ಬಂಧಿಸಲಾಗಿಲ್ಲ?

ಇದು ಮುಂಬರುವ ಕೋಮುದಳ್ಳುರಿಗೆ ಮುನ್ಸೂಚನೆಯಷ್ಟೇ? ಆಗಸ್ಟ್ 16 ರಿಂದ ಶುರುವಾಗಿ ನವೆಂಬರ್ 17 ಕ್ಕೆ ಮುಗಿಯಲಿರುವ ಹನುಮಾನ್ ಶಕ್ತಿ ಜಾಗರಣ ಅಭಿಯಾನದ ಎರಡನೇ ಘಟ್ಟವೇ ನವೆಂಬರ್ 17 ರಿಂದ ಡಿಸೆಂಬರ್ 16 ರ ತನಕ ದೇಶಾದ್ಯಂತ 800 ಕೇಂದ್ರಗಳಲ್ಲಿ ನಡೆಯಲಿರುವ ಹನುಮಾನ್ ಶ[ಕ್ತಿ] ಜಾಗರಣ ಮಹಾಯಜ್ಞ.

ಈ ಮಧ್ಯೆಯೇ ಅಂದರೆ ಸೆಪ್ಟೆಂಬರ್ ಕೊನೆ[ಯ] ವಾರಕ್ಕೆ ಅಯೋಧ್ಯೆಯ ವಿವಾದದ ಕುರಿತಂತೆ ಅಲಹಾಬಾದ್ ಹೈಕೋರ್ಟಿನ ತೀರ್ಪು ಹೊರಬೀಳಲಿದೆ. ಹಾಗೇನಾದರೂ ಬಾಬರಿ ಮಸೀದಿಯನ್ನು ಪುನರ್ ನಿರ್ಮಿಸುವಂತೆ ತೀರ್ಪು ಬಂತೆಂದರೆ ಅದರ ವಿರುದ್ಧ ಬೀದಿಗಿಳಿಯುವುದು ಸಂಘ ಪರಿವಾರದ ಹುನ್ನಾರ. ಅದಕ್ಕೆ ಹನುಮಂತನನ್ನು ಆಯುಧವಾಗಿ ಬಳಸುತ್ತಿದೆ.

ಅದೇ ಹೊತ್ತಿಗೆ ರಾಜ್ಯಾದ್ಯಂತ ಗಣೇಶೋತ್ಸವ ಬೇರೆ ಶುರುವಾಗಿರುತ್ತದೆ. ಮೊದಲೇ ಚಾಲ್ತಿಗೆ ಬಂದ ಹನುಮಾನ್ ಅಭಿಯಾನವನ್ನು ಶತಗತಾಯ ಗಣೇಶನ ಗಲಾಟೆಗೆ ಬಳಸಲೇಬೇಕೆಂಬುದು ಆರೆಸ್ಸೆಸ್‌ನ ರಹಸ್ಯ ಕಾರ್ಯಸೂಚಿಯಂತೆ. ಏಕೆಂದರೆ ಗೋಹತ್ಯೆ ಮತ್ತು ಬಾಬರಿ ಮಸೀದಿ ವಿರುದ್ಧ ದೊಡ್ಡಮಟ್ಟದಲ್ಲಿ ಗಲಭೆಗಳಾಗಬೇಕೆಂದರೆ ಗಣೇಶೋತ್ಸವದಲ್ಲಿ ಸಣ್ಣಪುಟ್ಟ ಕಿಡಿಗಳಾದರೂ ಹಾರಲೇಬೇಕಂತೆ!


ಅದಕ್ಕೊಂದು ಸಂಘ ಪರಿವಾರ ಈ ಬಾರಿ ಹುಬ್ಬಳ್ಳಿ, ಶಿವಮೊಗ್ಗ ಮತ್ತು ಮಂಗಳೂರು ನಗರಗಳನ್ನು ಆಯ್ದುಕೊಂಡಿದೆ. ಹಿಂದೆಲ್ಲ ಗಣೇಶೋತ್ಸವದ ಗಲಭೆಗೆ ಕುಖ್ಯಾತಿಯಾಗಿದ್ದ ಈ ಮೂರು ನಗರಗಳಲ್ಲದೇ ಇದೇ ಮೊದಲೆಂಬಂತೆ ಮೈಸೂರನ್ನು ಹಿಂಸೆಗೆ ಅಳವಡಿಸಲೇಬೇಕೆಂಬ ಮಾಸ್ಟರ್ ಪ್ಲಾನ್ ಕೂಡ ರೆಡಿಯಾಗಿದೆ. ಸಾಧ್ಯವಾದರೆ ಬೆಳಗಾವಿ ಮತ್ತು ಗುಲ್ಬರ್ಗಾಗಳಲ್ಲೂ ಸಣ್ಣಪುಟ್ಟ ಗಲಾಟೆಯೆಬ್ಬಿಸುವ ದುರಾಲೋಚನೆಯೂ ಇದೆಯಂತೆ.

ಇಂಥ ಉದ್ದೇಶಕ್ಕಾಗೇ ತಮ್ಮಿಂದ ಸಿಡಿದುಹೋಗಿದ್ದ ಶ್ರೀರಾಮಸೇನೆಯ ಸೃಷ್ಟಿಕರ್ತ ಪ್ರಮೋದ್ ಮುತಾಲಿಕ್ ಜೊತೆ ಆರೆಸ್ಸೆಸ್ ರಾಜಿ ಮಾಡಿಕೊಂಡಿದೆ. ಹಿಂಸೆ ಗಲಾಟೆಯ ವಿಷಯಕ್ಕೆ ಬಂದರೆ ಮುತಾಲಿಕ್ ಮತ್ತು ಆತನ ಶ್ರೀರಾಮಸೇನೆಯು ಭಜರಂಗ ದಳಕ್ಕಿಂತಲೂ ಒಂದು ಕೈ ಮೇಲೆಯೇ. ಇದನ್ನು ಮನಗಂಡೇ ಆತನ ಮೇಲಿದ್ದ ಹದಿನೇಳು ಕ್ರಿಮಿನಲ್ ಕೇಸುಗಳನ್ನು ವಾಪಸ್ಸು ಪಡೆದ ಯಡ್ಡಿ ಸರ್ಕಾರ ಎಸಗಿದ ಮತ್ತೊಂದು ಅನಾಹುತವೆಂದರೆ ರಾಜ್ಯಾದ್ಯಂತ ನೂರೈವತ್ತಕ್ಕೂ ಹೆಚ್ಚು ಮಂದಿ ಭಜರಂಗದಳ

ಆರೆಸ್ಸೆಸ್ ಹತಾಶೆ ಮತ್ತು ಸೆಪ್ಟೆಂಬರ್ ತೀರ್ಪು?

ಕೇಂದ್ರದ ಇಂಟಲಿಜೆನ್ಸ್ ಮೂಲಗಳೇ ವರದಿ ಕೊಟ್ಟಂತೆ ಮುಂಬರುವ ಮಾರ್ಚ್ ಅಥವಾ ಏಪ್ರಿಲ್ ತಿಂಗಳಲ್ಲಿ ದೊಡ್ಡಮಟ್ಟದ ಸರ್ಕಾರಿ ಪ್ರಾಯೋಜಿತ ಕೋಮುಗಲಭೆಗಳನ್ನು ಸೃಷ್ಟಿಸುವುದು ಬಿಜೆಪಿ ಸರ್ಕಾರದ ಉದ್ದೇಶವಂತೆ. ಗೋಹತ್ಯೆ ಮತ್ತು ಅಯೋಧ್ಯೆ ಎರಡನ್ನೂ ಬಳಸಿಕೊಂಡೇ ಕರ್ನಾಟಕವನ್ನು ಗುಜರಾತ್ ಮಾಡಲು ಆರೆಸ್ಸೆಸ್ ಯತ್ನಿಸುತ್ತಿದೆಯಂತೆ.

ಇದಕ್ಕೆ ಮುನ್ಸೂಚನೆಯೆಂಬಂತೆ 18 ವರ್ಷಗಳ ಬಳಿಕ ಅಂದರೆ ಕಳೆದ ವಾರವಷ್ಟೇ ವಿಶ್ವ ಹಿಂದೂ ಪರಿಷತ್ ಅಯೋಧ್ಯೆಯಲ್ಲಿ ಸಭೆ ಸೇರಿದೆ. ವಿಹಿಂಪ ನಾಯಕ ಸಿಂಘಾಲ್, ಹಾಗೊಮ್ಮೆ ಬಾಬ್ರಿ ಮಸೀದಿಯನ್ನು ಮರು ನಿರ್ಮಾಣ ಮಾಡುವುದೇ ಆದರೆ ಅದನ್ನು ಅಯೋಧ್ಯೆಯಿಂದ ಹೊರಗೆ, ದೂರದಲ್ಲಿ ನಿರ್ಮಿಸಬೇಕೇ ಹೊರತು ರಾಮಜನ್ಮ ಭೂಮಿಯಲ್ಲಲ್ಲ......' ಎಂದು ಬಹಿರಂಗ ಹೇಳಿಕೆ ಕೊಟ್ಟಿದ್ದಾನೆ. ಇದಕ್ಕೆ ವಿಹಿಂಪ ಬಳಸುತ್ತಿರುವುದು ರಾಮಚರಿತ ಮಾನಸವನ್ನು. ಬಾಬರಿ ಮಸೀದಿಯನ್ನು ಅಯೋಧ್ಯೆಯ ಹೊರವಲಯದಲ್ಲಿ ನಿರ್ಮಿಸಬೇಕೆಂದು ರಾಮಚರಿತ ಮಾನಸದಲ್ಲೇ ಉಲ್ಲೇಖಿಸಲಾಗಿದೆಯಂತೆ!



ಏಕಾಏಕಿ ವಿಹಿಂಪಕ್ಕೆ ಈ ಥರದ ಜ್ಞಾನೋದಯವಾಗಲು ಕಾರಣವಾದದ್ದು ಅಲಹಾಬಾದ್ ಹೈಕೋರ್ಟು. ಸೆಪ್ಟೆಂಬರ್ ಕೊನೇ ವಾರದಲ್ಲಿ ಅದು ಬಾಬರಿ ಮಸೀದಿ ಕುರಿತು ತೀರ್ಪು ನೀಡಲಿದೆ. ಅಲಹಾಬಾದ್ ಹೈಕೋರ್ಟಿನ ತ್ರಿಸದಸ್ಯ ಪೀಠದ ನ್ಯಾಯಮೂರ್ತಿಗಳಾದ ಎಸ್.ಯು. ಖಾನ್, ಸುಧೀರ್ ಅಗರ್‌ವಾಲ್ ಮತ್ತು ಡಿ.ವಿ. ಶರ್ಮಾ ಪೀಠವು ಜುಲೈ 26 ರ ವರೆಗೆ ನಡೆಸಿದ ವಿಚಾರಣೆಯೇ ಕಾಲು ಶತಮಾನದಷ್ಟು ಪುರಾತನದ್ದು. 1950 ರಲ್ಲಿ ಗೋಪಾಲ್ ಸಿಂಗ್ ವಿಶಾರದ್, 1959 ರಲ್ಲಿ ನಿರ್ಮೋಹಿ ಅಖಾರ, 1961 ರಲ್ಲಿ ಉತ್ತರ ಪ್ರದೇಶದ ಸುನ್ನಿ ಸೆಂಟ್ರಲ್ ವಕ್ಫ್ ಬೋರ್ಡ್ ಮತ್ತು 1989 ರಲ್ಲಿ ಆರೆಸ್ಸೆಸ್‌ನ ಕೆಲ ಸಂಘಟನೆಗಳು ಸೇರಿ ತರಹೇವಾರಿ ಹಿತಾಸಕ್ತಿಗನುಗುಣವಾಗಿ ವಾದ ಮತ್ತು ಬೇಡಿಕೆಗಳನ್ನು ಮಂಡಿಸಿದ್ದಾರೆ.



ವಾದಗಳೇನೇ ಇದ್ದರೂ ನ್ಯಾಯ ಮಾತ್ರ ಬಾಬರಿ ಮಸೀದಿ ಪರವಾಗೇ ಇರುವಂತಿದೆ. ತೀರ್ಪು ಸಂಘ ಪರಿವಾರದ ವಿರುದ್ಧ ಬರುವ ಸಾಧ್ಯತೆಗಳೇ ಹೆಚ್ಚು. ಅದಕ್ಕೇ ವಿಹಿಂಪ ಊರ ಹೊರಗೆ ಮಸೀದಿ ನಿರ್ಮಿಸುವ ಹೊಸ ಕ್ಯಾತೆ ತೆಗೆದಿದೆ. ರಾಜ್ಯ ಮತ್ತು ಕೇಂದ್ರ ಸರ್ಕಾರಗಳನ್ನೇ ಬೆದರಿಸುತ್ತಿರುವ ಸಂಘ ಪರಿವಾರದ ವಿರುದ್ಧ ಮತ್ತು ತೀರ್ಪಿನ ನಂತರ ಉದ್ಭವಿಸಬಹುದಾದ ಗಲಭೆಗಳನ್ನು ಎದುರಿಸಲು ಮಾಯಾವತಿ ಸರ್ಕಾರ ನಾಲ್ಕೂವರೆ ಸಾವಿರ ಹೆಚ್ಚುವರಿ ಪ್ಯಾರಾಮಿಲಿಟರಿ ಯೋಧರನ್ನು ಕಳಿಸುವಂತೆ ಕೇಂದ್ರಕ್ಕೆ ಮನವಿ ಸಲ್ಲಿಸಿದೆ. ಆರೆಸ್ಸೆಸ್-ಬಿಜೆಪಿಯ ಹುನ್ನಾರ ಅರಿತೇ ಪ್ರಧಾನಿ ಮನಮೋಹನ್ ಸಿಂಗ್ ಆಗಸ್ಟ್ 24 ರಂದು ಗುಪ್ತಚರ ಇಲಾಖೆಯ ಅಧಿಕಾರಿಗಳು ಮತ್ತು ಹಿರಿಯ ಸಚಿವರ ಸಭೆ ಕರೆದು ಅಲಹಾಬಾದ್ ಕೋರ್ಟ್ ತೀರ್ಪಿನ ಆಗುಹೋಗುಗಳ ಬಗ್ಗೆ ಸಮಾಲೋಚನೆ ನಡೆಸಿದ್ದಾರೆ. ಸೋಕಾಲ್ಡ್ ರಾಮಭಕ್ತರ ಹಣೆಬರಹ ಈಗಾಗಲೇ ದೇಶಕ್ಕೆ ಗೊತ್ತಾಗಿದೆ. ಹತಾಶೆಗೆ ಬಿದ್ದು ಇನ್ನೇನು ಅನಾಹುತಕ್ಕೆ ಕೈ ಇಡುತ್ತಾರೆಂಬುದೇ ಉಳಿದಿರುವ ಪ್ರಶ್ನೆ.



ರ್ಯಕರ್ತರ ಮೇಲಿದ್ದ ಕ್ರಿಮಿನಲ್ ಕೇಸುಗಳನ್ನು ಪಡೆದದ್ದು-

ಮುತಾಲಿಕ್, ಆತನ ಶ್ರೀರಾಮಸೇನೆ ಮತ್ತು ಭಜರಂಗ ದ ಕಾರ್ಯಕರ್ತರ ಮೇಲಿದ್ದ ಕ್ರಿಮಿನಲ್ ಕೇಸುಗಳೆಲ್ಲ ಸಿಯತ್ತ ಬೆಂಕಿಹಚ್ಚಿದ್ದು ಕೋಮುಗಲಭೆಗೆ ಪ್ರಚೋದನೆ ದಂಥ ಸಮಾಜಕಂಟಕ ಮೊಕದ್ದಮೆಗಳೆ. ಇದರಿಂದ ಾಮಸೇನೆ ಮತ್ತು ಭಜರಂಗಿಗಳಿಗೆ ಹೊಸ ಹಿಂಸೆಗೆ ುಕುವ ಶಕ್ತಿ ಬಂದಂತಾಗಿ ಯಾವ ಕ್ಷಣದಲ್ಲಾದರೂ ರ್ಾಚರಣೆಗಿಳಿಯುತ್ತಾರೆ. ಹೇಳಿಕೇಳಿ ಸೆಪ್ಟೆಂಬರ್‌ನ ಣವೆಂದರೆ ಅದು ಹಬ್ಬಗಳ ಮಾಸ. ಕೃಷ್ಣ ಜನ್ಮಾಷ್ಟಮಿ, ಶ ಚತುರ್ಥಿ, ಏಕಾದಶಿ; ಆನಂತರದ ನವರಾತ್ರಿ, ಾವಳಿ, ದುರ್ಗಾಪೂಜೆ; ಹೀಗೆ ಸೆಪ್ಟೆಂಬರ್ ಮತ್ತು ್ಟೋಬರ್ ಮಧ್ಯದ ಧಾರ್ಮಿಕ ವಾತಾವರಣವೇ ಆರೆಸ್ಸೆಸ್ ್ಚಾರಕ್ಕೆ ಹೇಳಿಮಾಡಿಸಿದಂತಿದೆ.

ಇದನ್ನೆಲ್ಲ ಉಪಯೋಗಿಸಿಕೊಂಡೇ ಕರ್ನಾಟಕವನ್ನು ರಾತ್ ಮಾಡುವ ಎಲ್ಲಾ ಪ್ರಯತ್ನಕ್ಕೂ ಸಂಘ ಪರಿವಾರ ಟ್ಟಿದೆ. ಇದಕ್ಕೆ ಮತ್ತೊಂದು ಪುರಾವೆಯೆಂದರೆ ಇತ್ತ ಮಾನ್ ಅಭಿಯಾನ, ಗೋಹತ್ಯೆ ವಿರುದ್ಧ ಆಂದೋಲನ ್ತ ಅಯೋಧ್ಯೆ ಕಾರಸ್ಥಾನಕ್ಕೆ ಪೂರಕವಾಗಿ ರಾಜ್ಯ ಬಿಜೆಪಿಯ ಾಧಿಕಾರಿಗಳಿಗೆಂದೇ ಅಭ್ಯಾಸವರ್ಗಗಳನ್ನು ಡಿಸಲಾಗಿದೆ. ಪ್ರಾರಂಭದಲ್ಲಿ ಜಿಲ್ಲಾ ಮಟ್ಟದಲ್ಲಿ ವಾಗಿ ನಂತರ ತಾಲ್ಲೂಕು ಮಟ್ಟಕ್ಕೂ ಹಬ್ಬಲಿರುವ ಜಿ ಕಾರ್ಯಕರ್ತರ ಅಭ್ಯಾಸ ವರ್ಗವನ್ನುದ್ದೇಶಿಸಿ ನ್ಯಾಸ ನೀಡುವವರೆಲ್ಲ ಆರೆಸ್ಸೆಸ್ ನಾಯಕರುಗಳೆ!

ಕೋಮು ವಿಷವನ್ನಲ್ಲದೇ ಯಾವ ಮನುಷ್ಯತ್ವವನ್ನು ಸ್ಸೆಸ್ ಚೆಡ್ಡಿಗಳು ಭೋದಿಸಲು ಸಾಧ್ಯ?

ಗಣಿಲೂಟಿ ವಿರುದ್ಧ ಸಿದ್ದು ಪಾದಯಾತ್ರೆ ಮೇಲ್ನೋಟಕ್ಕೆ ಟಕದ ಗಡಿ ಮತ್ತು ಭೂಸಂಪತ್ತಿನ ರಕ್ಷಣೆಗಾಗಿ ನಡೆದ ಆಂದೋಲನವಾಗಿ ಕಂಡರೂ ಆಳದಲ್ಲದು ಅಹಿಂದದ ತ ರೂಪವೆ. ಮೇಲ್ಜಾತಿಗಳ ವಿರುದ್ಧ ಹಿಂದುಳಿದ ಗಳೆಲ್ಲ ಸಿದ್ಧರಾಮಯ್ಯನವರ ನೇತೃತ್ವದಲ್ಲಿ ಒಗ್ಗೂಡುತ್ತಿವೆ. ಹತ್ಯೆ ನಿಷೇಧದ ವಿರುದ್ಧ ದಲಿತರು, ಕ್ರಿಶ್ಚಿಯನ್ನರು ತ್ತು ಮುಸ್ಲಿಮರು ಬೀದಿಗಿಳಿಯುತ್ತಿದ್ದಾರೆ. ಮಾನ್ಯಗಳಿಗಾಗಿ ಸರ್ಕಾರಿ ಬೊಕ್ಕಸ ಬರಿದಾಗಿದ್ದು ನಸ್ಥಾನದ ಪೂಜಾರಿಗಳಿಗಾಗಿ ಕೊಡುತ್ತಿದ್ದ 500 ಾಯಿಯ ತಸ್ತೀಕ್ ಹಣವನ್ನು ಏಕಾಏಕಿ ಹನ್ನೆರಡು ರಕ್ಕೇರಿಸಿದ್ದು, ಐದು ಸಾವಿರ ಕೋಟಿಗೂ ದೊಡ್ಡ ತ್ತದ ಬಿಬಿಎಂಪಿ ಬೋಗಸ್ ಬಿಲ್ ಹಗರಣ, ನೆರೆಸಂತ್ರಸ್ತರ ಾರದ ದುರವಸ್ಥೆ; ಹೀಗೆ ಪ್ರತಿನಿತ್ಯ ಒಂದಲ್ಲಾ ಒಂದು ಹುತಗಳನ್ನೇ ಸೃಷ್ಟಿಸಿಕೊಂಡು ಬಂದ ಬಿಜೆಪಿ ಸರ್ಕಾರ ಟಕಕ್ಕೆ ಕೊಟ್ಟದ್ದು ವಿದ್ಯುತ್ ಬರದ ಗಾಡಾಂಧಕಾರವನ್ನು ತ್ರ.

ಗಣಿ ಲೂಟಿ ವಿರುದ್ಧ ಬಳ್ಳಾರಿ ಪಾದಯಾತ್ರೆಗೆ ಆ ಜನಬೆಂಬಲ ಒದಗಿ ಬಂದದ್ದು ಕೇವಲ ಗಣಿರೆಡ್ಡಿಗಳ ದ್ಧದ ಸಿಟ್ಟಷ್ಟೇ ಆಗಿರದೇ ಇಡೀ ಬಿಜೆಪಿ ಸರ್ಕಾರದ ಡಳಿತದ ವಿರುದ್ಧದ ಸಾಮೂಹಿಕ ಜನಾಕ್ರೋಶವಾಗಿತ್ತು. ನ್ನು ಅಳಿಸಬೇಕೆಂದರೆ ಕರ್ನಾಟಕವನ್ನು ಗುಜರಾತ್ ುವುದೊಂದೇ ಪರಿಹಾರವೆಂಬ ಸಂಘಪರಿವಾರದ ್ಚಾರಕ್ಕೆ ಸರ್ಕಾರವೇ ಕೈಜೋಡಿಸಿಬಿಟ್ಟಿದೆ. ಗೋಹತ್ಯೆ ದಿದವರ ಕೈಯನ್ನೇ ಕತ್ತರಿಸುತ್ತೇವೆಂದು ಬಹಿರಂಗವಾಗಿ ಣ ಮಾಡುವ ಈಶ್ವರಪ್ಪ ರಾಮಮಂದಿರ ನಿರ್ಮಿಸಲು ವಕರು ಹನುಮನಂತೆ ನುಗ್ಗಬೇಕೆಂದು ಛೂಬಿಡುವ ವರ ಸ್ವಾಮಿ, ಹನುಮಾನ್ ಅಭಿಯಾನದ ವೇದಿಕೆಯಲ್ಲಿ ್ಲಿಮರನ್ನು ತೆಗಳುವ ಆರೆಸ್ಸೆಸ್ ಪರಿಷ್ಕರು, ಗೋಹತ್ಯೆ ಧ ಕಾಯ್ದೆಗಾಗಿ ರಾಷ್ಟ್ರಪತಿಗಳ ವಿರುದ್ಧವೇ ಬೀದಿಗಿಳಿದು ಭಟಿಸುತ್ತೇನೆನ್ನುವ ಮುಖ್ಯಮಂತ್ರಿ, ದನ ದಿಸಿದರೆಂದು ಚಿಕ್ಕಮಗಳೂರಿನ ಬಡಮುಸ್ಲಿಮರ ಲೆ ಸುಳ್ಳು ಕೇಸು ಹಾಕುವ ಪೊಲೀಸರು ಮತ್ತು ಶೋತ್ಸವದ ಗಲಭೆಗೆಂದು ಸಜ್ಜಾಗಿ ನಿಂತ ಭಜರಂಗಿಗಳೆಲ್ಲ ಟಕವನ್ನು ಗುಜರಾತ್ ಮಾಡೇ ತೀರುವ ಕನಸು ತ್ತಿದ್ದಾರೆ ನಿಜ.

ನಾಡಿಗೆ ಬೆಂಕಿ ಹಚ್ಚಿ ಚಳಿಕಾಯಿಸಿಕೊಳ್ಳುವ ಳಿರುವಲ್ಲಿ ರಾಮನಿರುತ್ತಾನಾ? ಪವನ ಸುತ ಹನುಮಂತ ಡದೇ ಇರುತ್ತಾನಾ? ಸೈತಾನರ ಕೈಯಿಂದ ದೇವರಿಗೆ ್ತಿ ಕೊಡುವವರ್ಯಾರು?

• ರಾ. ಸೋಮನಾಥ್
ra.somanath2010@gmail.com

ಭ್ರಷ್ಟ ಮಗನ ಪರ ಅರಳು ಮರಳು ದೇಜಗೌ



ಹಿರಿಯ ಸಾಹಿತಿ ದೇ. ಜವರೇಗೌಡರಿಗೀಗ ತೊಂಭತ್ತೆರಡು ವರ್ಷ. ಡಾಕ್ಟರೇಟು, ರಾಜ್ಯೋತ್ಸವ ಪ್ರಶಸ್ತಿ ಮುಂತಾದ ಹಾಳೂಮೂಳುಗಳೆಲ್ಲಾ ಆದ ಮೇಲೆ ಅವರಿಗೆ, ನಾಡೋಜ ಪ್ರಶಸ್ತಿಯೂ ಬಂತು. ಕೊನೆಗೆ ಕರ್ನಾಟಕ ರತ್ನವೆಂಬ ಕಿರೀಟವನ್ನು ದೇಜಗೌ ತಲೆ ಮೇಲೆ ಇಡಲಾಗಿದೆ. ಇದೆಲ್ಲಾ ಅವಿವೇಕಿಗಳ ಕೆಲಸವೆಂಬುದು ಬೇರೆ ಮಾತು. ದೇಜಗೌ ತಮ್ಮಿಡೀ ಜೀವನದಲ್ಲಿ ಎಂದೂ ಈ ಪ್ರಶಸ್ತಿಗಳ ಲೆವೆಲ್ಲಿಗೆ ಬದುಕಿರಲಿಲ್ಲ. ಅದು ಹಾಳಾಗಿ ಹೋಗಲಿ, ಕನಿಷ್ಠ ಪಕ್ಷ ಕರ್ನಾಟಕ ರತ್ನ ಅನಿಸಿಕೊಂಡ ಮೇಲಾದರೂ ಆ ಪ್ರಶಸ್ತಿಯಾಗಿರುವ ಗೌರವ -ಘನತೆಯ ಮಟ್ಟಕ್ಕಾದರೂ ಬದುಕಿರಬೇಕೆಂಬ ಯೋಚನೆಯೂ ಈತನಿಗಿದ್ದಂತಿಲ್ಲ.

ಅದರ ಪರಿಣಾಮವೇ ದೇಜಗೌರ ಈಗಿನ ಲೇಟೆಸ್ಟ್ ಉಪವಾಸ ಪ್ರಹಸನ.

ಈತನ ಕುಲಪುತ್ರ ಜೆ. ಶಶಿಧರ ಪ್ರಸಾದ್ ಮೈಸೂರು ವಿಶ್ವವಿದ್ಯಾಲಯದ ವೈಸ್ ಛಾನ್ಸಲರ್ ಆಗಿದ್ದಾಗ ನಡೆಸಿರುವ ಭ್ರಷ್ಟಾಚಾರ ಹಾಗೂ ಅಕ್ರಮಗಳೆಲ್ಲಾ ಈಗ ಪ್ರಪಂಚಕ್ಕೇ ಗೊತ್ತಾಗಿದೆ. ಆದರೂ ಜವರೇಗೌಡರಿಗೆ ಜಾಣ ಕುರುಡು. ಮಾನವಂತರು ಯಾರಾದರೂ ಮಾಡಲು ಹಿಂಜರಿಯುವ ಕೆಲಸಕ್ಕೆ ದೇಜಗೌ ಈಗ ಸಲೀಸಾಗಿ ಮುಂದಾಗಿದ್ದಾರೆ.

ಶಶಿಧರ ಪ್ರಸಾದ್‌ನ ಅವ್ಯವಹಾರಗಳ ಬಗ್ಗೆ ತನಿಖೆ ನಡೆಸಲು ರಾಜ್ಯ ಹೈಕೋರ್ಟ್ ಆದೇಶದ ಮೇರೆಗೆ ರಚನೆಯಾಗಿದ್ದ ರಂಗವಿಠಲಾಚಾರ್ ಆಯೋಗವು ವರದಿ ಸಲ್ಲಿಸಿ ಹಲವು ತಿಂಗಳುಗಳೇ ಆಗಿಹೋಗಿದೆ. ಭ್ರಷ್ಟಾಚಾರ ಸಾಬೀತಾದ ಕಾರಣ ಶಶಿಧರನ ಮೇಲೆ ಕ್ರಮ ತೆಗೆದುಕೊಳ್ಳಲು ರಾಜ್ಯ ಕ್ಯಾಬಿನೆಟ್ ನಿರ್ಧರಿಸಿ ಅದರಂತೆ ಶಿಕ್ಷಣ ಇಲಾಖೆಯೂ ಕ್ರಿಮಿನಲ್ ಕೇಸ್ ಹಾಕಲು ಮುಂದಾಗಿತ್ತು, ಇದಕ್ಕೆ ಕರ್ನಾಟಕ ವಿಶ್ವವಿದ್ಯಾಲಯ ಕಾಯ್ದೆ 2000 ದ ಸೆಕ್ಷನ್ 8 ರಡಿ ಅವಕಾಶವೂ ಇತ್ತು, ಆದರೆ ಏಕಾಏಕಿ ಜೂನಿಯರ್ ದೇಜಗೌ ಥರ ಆಡತೊಡಗಿರುವ ರಾಜ್ಯಪಾಲ ಹಂಸರಾಜ್ ಭಾರದ್ವಾಜ್ ಶಶಿಧರ ಪ್ರಸಾದ್‌ನ ತಲೆ ಕಾಯಲು ನಿಂತು ಬಿಟ್ಟಿದ್ದಾರೆ. ಬಹುಶಃ ಇದರಿಂದ ದೇಜಗೌಗೆ ಇನ್ನಷ್ಟು ಭಂಡಧೈರ್ಯ ಬಂದಿರಲಿಕ್ಕೂ ಸಾಕು... ಈಗ ದೇಜಗೌ ಮಗನ ರಕ್ಷಣೆಗೆಂದು ಒಂದು ದಿನದ ಉಪವಾಸ ಮುಷ್ಕರ ಮಾಡಿ ಮುಗಿಸಿದ್ದಾರೆ. ಎದುರಿಗೆ ಗಾಂಧಿ ಫೋಟೋ ಬೇರೆ ಕೇಡು!

ಕಳ್ಳಬೆಕ್ಕು ದೇಜಗೌ

ಈ ದೇಜಗೌ ಹತ್ತಿರ ಅನೇಕ ಸೈಜಿನ ಟೋಪಿಗಳು ಸದಾ ರೆಡಿಯಾಗಿರುತ್ತವೆ. ಕುವೆಂಪುರ ವಿಶ್ವಮಾನವ ಸಂದೇಶವನ್ನೇ ಬಳಸಿಕೊಂಡು ಒಂದು ಸೊಗಸಾದ ಟೋಪಿ ಹೊಲಿದು ಕುವೆಂಪುರಿಗೆ ಹಾಕಿದ್ದ ಪ್ರಳಯಾಂತಕ ಈ ದೇ. ಜವರೇಗೌಡ. ಆಮೇಲೆ ಸರ್ಕಾರಿ ಜಾಗ ಕದ್ದು ಬೇಲಿ ಸುತ್ತಿ ಅನುಮತಿಯಿಲ್ಲದ ಶಾಪಿಂಗ್ ಕಾಂಪ್ಲೆಕ್ಸ್ ಕಟ್ಟಿ, ಲಕ್ಷಗಟ್ಟಲೆ ಬಾಡಿಗೆ ಬರುತ್ತಿದ್ದರೂ ನಗರಪಾಲಿಕೆಗೆ ತೆರಿಗೆ ಕಟ್ಟದೆ ಅಲ್ಲೂ ಟೋಪಿ ಹಾಕಿರುವ ಹಿರಿಮೆ ಈತನದ್ದು.



ತಂದೆಗೆ ತಕ್ಕ ಮಗ ಶಶಿಧರ ಪ್ರಸಾದನೂ ಮೈಸೂರು ವಿ.ವಿ.ಗೆ ವಕ್ಕರಿಸಿಕೊಂಡಾಗ ಇದೇ ದಂಧೆ ಮುಂದುವರೆಸಿ ಈಗ ಸಿಕ್ಕಿಬಿದ್ದಿದ್ದಾನೆ. ತನಿಖಾ ವರದಿಗಳೂ ಶಶಿಧರ ಒಬ್ಬ ವಂಚಕ ಎಂದೇ ಹೇಳುತ್ತಿವೆ. ಸಾಕ್ಷಿ, ಪುರಾವೆ, ದಾಖಲಾತಿಗಳೆಲ್ಲಾ ಸಿಕ್ಕಿದೆ. ಇಷ್ಟಾದರೂ ನಾಡೋಜನ ನಡತೆ ಬದಲಾಗಲಿಲ್ಲ.

ಭಂಡ ಬಂಟರು

ದೇಜಗೌ ಜೊತೆ ಈಗ ಮೈಸೂರಿನ ಕೆಲ ಭಂಡ ಜನರೂ ಸೇರಿಕೊಂಡಿದ್ದಾರೆ. ಕೆ. ಭೈರವಮೂರ್ತಿ, ಸಿ. ನಾಗಣ್ಣ, ಜಯಪ್ಪ ಹೊನ್ನಾಳ್ಳಿ, ಎಂ.ಬಿ. ವಿಶ್ವನಾಥ್, ಪ್ರಕಾಶಕ ಚೆಲುವೇಗೌಡ, ಜಿಲ್ಲಾ ಕಸಾಪದ ವಿಶ್ವನಾಥ್, ಕಲಾವಿದ ರಾಜಶೇಖರ ಕದಂಬ, ಪಾಳಲಿ ವಸಂತಕುಮಾರ್ ಮುಂತಾದವರ ತಲೆಗೆ ಅದ್ಯಾವ ಏಟು ಬದ್ದಿದೆಯೋ ಗೊತ್ತಿಲ್ಲ, ಅವರೆಲ್ಲಾ ಭ್ರಷ್ಟ ಶಶಿಧರನ ಪರ ಕಾಣಿಸಿಕೊಳ್ಳುತ್ತಿದ್ದಾರೆ. ಹೇಳಿಕೆ ಕೊಡುವುದು, ಧರಣಿ ಕೂರುವ ಭಂಡ ಕೆಲಸ ಮಾಡುತ್ತಿದ್ದಾರೆ.

ಶಶಿಧರ ಕಿಸಿದಿದ್ದೇನು?

ಅಕ್ರಮ ನೇಮಕಾತಿಗಳೇ ಶಶಿಧರ ಪ್ರಸಾದ್‌ರ ಮೇಲಿರುವ ಪ್ರಮುಖ ಆರೋಪವಾಗಿದೆ. ಇದರಲ್ಲಿ ಸ್ವಜನಪಕ್ಷಪಾತ, ರೋಸ್ಟರ್ ನಿಯಮ ಉಲ್ಲಂಘನೆ ಹಾಗೂ ಭ್ರಷ್ಟಾಚಾರ ಎದ್ದು ಕಾಣುತ್ತಿವೆ. ಇದಿಷ್ಟೇ ಅಲ್ಲದೆ ತನಿಖೆಯಾದರೆ ಶಶಿಧರ ಸಿಕ್ಕಿಬೀಳಬಹುದಾದ ಇನ್ನೂ ಹಲವು ಅವ್ಯವಹಾರಗಳಿವೆ.

ಈತ ವಿಸಿಯಾಗಿದ್ದಾಗ ಕುಕ್ಕರಹಳ್ಳಿ ಕೆರೆ ಪುನಶ್ಚೇತನಕ್ಕೆಂದು ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್‌ನಿಂದ ಒಂದು ಕೋಟಿ ರೂಪಾಯಿ ಸಾಲ ತಂದು ಖರ್ಚು ಮಾಡಿದ್ದಾನೆ. ಅಷ್ಟು ಹಣ ಹೇಗೆ ಬಳಕೆಯಾಯಿತೆಂಬ ಬಗ್ಗೆಯೂ ತನಿಖೆಯಾದರೆ ಉತ್ತಮ. ಈತ ರಿಟೈರ್ಡ್ ಆಗುವಾಗ 'ಏನಯ್ಯಾ ನಿನ್ನ ಸಾಧನೆ?' ಅಂತ ಕೇಳಿದವರಿಗೆ ಅನೇಕ ಹಾಸ್ಯಾಸ್ಪದ ಉತ್ತರಗಳನ್ನು ಕೊಟ್ಟಿದ್ದ.

"ವಿಶ್ವವಿದ್ಯಾಲಯದ ಎಲ್ಲಾ ಕಟ್ಟಡಗಳಿಗೂ ಸುಣ್ಣಬಣ್ಣ ಮಾಡಿಸಿದೆ" ಎನ್ನುವ ಉತ್ತರವೂ ಅದರಲ್ಲಿ ಸೇರಿತ್ತು. ಈಗ ಕರ್ನಾಟಕ ಮುಕ್ತ ವಿಶ್ವವಿದ್ಯಾಲಯದ ವಿಸಿಯಾಗಿರುವ ಪ್ರೊ. ಕೆ.ಎಸ್. ರಂಗಪ್ಪ ಮೈಸೂರು ವಿ.ವಿ.ಯಲ್ಲಿದ್ದಾಗ ಅತೀ ದೊಡ್ಡ ಪಿಎಚ್‌ಡಿ ಹಗರಣ ಸೃಷ್ಟಿಸಿದ್ದ. ಈ ರಂಗಪ್ಪನ ಜೊತೆ ಶಶಿಧರ ಪ್ರಸಾದನ ಕೈವಾಡವೂ ಅದರಲ್ಲಿತ್ತು ಎನ್ನಲಾಗಿದೆ.

ನಾಚಿಕೆ, ಮಾನ, ಮರ್ಯಾದೆಗಳನ್ನೆಲ್ಲಾ ಬಿಟ್ಟು ನಿಂತಿರುವ ಜವರೇಗೌಡ ಇಂತಹ ಭ್ರಷ್ಟ ಪುತ್ರನ ರಕ್ಷಣೆಗೆ ಹೀಗೆ ಬೀದಿಗೆ ಒಂದು ನಿಲ್ಲುತ್ತಾರೆಂದರೆ ಏನು ಹೇಳುವುದು?

ದೇಜಗೌ ಅಯೋಗ್ಯತೆ ತಿಳಿದಿರುವ ಜನರಿಗೆ ಅವರ ಈಗಿನ ವರ್ತನೆ ನೋಡಿ ಆಶ್ಚರ್ಯವೇನೂ ಆಗಿಲ್ಲ. ಆದರೆ ನಾಡೋಜ ಪ್ರಶಸ್ತಿ ನೀಡಿರುವ ಹಂಪೆ, ಕನ್ನಡ ವಿಶ್ವವಿದ್ಯಾಲಯದವರಾದರೂ ಆಶ್ಚರ್ಯಪಡಬೇಕಿದೆ.

ಆ ಪ್ರಶಸ್ತಿಯ ಗೌರವ ಕಾಪಾಡಬೇಕೆಂದರೆ ಜವರೇಗೌಡರಿಗೆ ದಯಪಾಲಿಸಿರುವ ನಾಡೋಜ ವಾಪಸ್ ಪಡೆಯುವುದೊಂದೇ ಪರಿಹಾರ.

ನಾಡೋಜ ಬರೆಯಲಿದ್ದಾರೆ ರೈ ಆತ್ಮಚರಿತ್ರೆ!

ದೇಜಗೌ ಅದೆಂತಹ ತಿಕ್ಕಲು ವ್ಯಕ್ತಿ ಹಾಗೂ ಅವಿವೇಕಿ ಎನ್ನಲು ಈಗ ಹರಡಿರುವ ಒಂದು ರೂಮರ್ ಬಗ್ಗೆ ಹೇಳಬಹುದು.


ಮಾಫಿಯಾ ಡಾನ್ ರೈ ಎಂಬುವನ ಆತ್ಮಕತೆ ಬರೆಯಲು ದೇಜಗೌ ತಯಾರಾಗುತ್ತಿದ್ದಾರಂತೆ. ಈ ರೈ ಎಂಬುವನು ಕೆಲ ತಿಂಗಳ ಹಿಂದೆ ಹೊಗೇನಕಲ್‌ಗಾಗಿ ಹೋರಾಟ ಎಂದು ಪ್ರಚಾರ ಮಾಡಿ ಮೆರವಣಿಗೆ ತೆಗೆದಿದ್ದ. ಅವನ ಗುಂಪು ಮೈಸೂರಿಗೆ ಕಾಲಿಟ್ಟಾಗ ದೇಜಗೌ ರೈ ಪಕ್ಕದಲ್ಲೇ ವೇದಿಕೆ ಮೇಲೆ ಕುಳಿತಿದ್ದರು... ಅವತ್ತು ಕರ್ನಾಟಕ ರತ್ನ ಹಾಗೂ ಕರ್ನಾಟಕದ ಕಳಂಕ ಎರಡರ ಸಮ್ಮಿಳನವಾಗಿತ್ತು. ಹೊಗಳುವವರು ಅದೆಂಥ ಖದೀಮರೇ ಆಗಿರಲಿ, ಈ ನಾಡೋಜನಿಗೆ ಖುಷಿಯಾಗಿಬಿಡುತ್ತದೆ. ಹಾಗಾಗಿ ಈಗ ರೈನ ಆತ್ಮಕತೆ ಬರೆಯುತ್ತಾರಂತೆ ದೇಜಗೌ.

ಸಾರ್ಥಕವಾಯಿತು ಬಿಡಿ ದೇಜಗೌ ಜನುಮ!

ರಾಜ್ಯಪಾಲರ ಹುಚ್ಚಾಟ

ಶಶಿಧರ ಪ್ರಸಾದ್ ಹಗರಣದಲ್ಲಿ ಎಲ್ಲರಿಗೂ ಅಚ್ಚರಿಯಾಗಿರುವುದು ರಾಜ್ಯಪಾಲ ಭಾರದ್ವಾಜ್‌ರ ಪ್ರತಿಕ್ರಿಯೆಗಳು. ಶಿಕ್ಷಣ ಇಲಾಖೆಯು ಶಶಿಧರನ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಿಸಿ ಕ್ರಮ ತೆಗೆದುಕೊಳ್ಳಲು ಹೊರಟಾಗ ಅದಕ್ಕೆ ತಡೆಯೊಡ್ಡಿದ್ದು ರಾಜ್ಯಪಾಲರೆ. ನಂತರ ಕೆಲ ಗಣ್ಯರು ನಿಯೋಗದಲ್ಲಿ ಹೋದಾಗ ಯದ್ವಾತದ್ವಾ ಗದರಿಸಿ ವಾಪಸ್ ಕಳಿಸಿದ್ದೂ ಇದೇ ಗೌವರ್ನರ್ ಮಹಾಶಯರೇ ಈಗ ನೋಡಿದರೆ ಹಾಲಿ ಮೈಸೂರು ವಿ.ವಿ. ಉಪಕುಲಪತಿ ತಳವಾರ್‌ಗೂ ರಾಜ್ಯಪಾಲರು ಬಹಿರಂಗವಾಗೇ ಧಮಕಿ ಹಾಕುತ್ತಿದ್ದಾರೆ. "ಮೈಸೂರು ವಿವಿಗೆ ಇನ್ನು ಮುಂದೆ ನಾನು ಬರಲ್ಲ, ನಿಮಗೆ ಯೂಜಿಸಿ ಅನುದಾನ ನಿಲ್ಲಿಸಿಬಿಡುತ್ತೇನೆ" ಅಂತೆಲ್ಲಾ ಕಿರುಚಿಕೊಂಡಿದ್ದಾರೆ.

ಇದಂತೂ ಆಶ್ಚರ್ಯಕರವಾಗಿದೆ. ನಮ್ಮ ರಾಜ್ಯಪಾಲರಿಗೂ ಚೂರು ಅಧಿಕಾರದ ಮದ ಇದೆ ಎಂಬುದನ್ನು ತೋರಿಸಿರುವ ಈ ಪ್ರಕರಣದ ಹಿನ್ನೆಲೆಯಲ್ಲಿ ಇಂಟರೆಸ್ಟಿಂಗಾದ ಒಂದೆರಡು ಸಂಗತಿಗಳಿವೆ.




ಈ ಶಶಿಧರ ಪ್ರಸಾದ್ ಮೈಸೂರು ವಿವಿಯನ್ನು 'ಉದ್ಧಾರ' ಮಾಡಿ ಹೋದ ನಂತರ ಈಗ ಪುಟ್ಟಪರ್ತಿ ಸಾಯಿಬಾಬಾನ ವಿಶ್ವವಿದ್ಯಾಲಯದ ವಿಸಿಯಾಗಿದ್ದಾನೆ. ರಾಜ್ಯಪಾಲ ಭಾರಧ್ವಾಜ್ ಕೂಡ ಅನೇಕ ಮೂಢರಂತೆಯೇ ಸಾಯಿಬಾಬಾನ ಭಕ್ತ. ಹಾಗಾಗಿ ಶಶಿಧರ ಪ್ರಸಾದ ಹಾಗೂ ದೇಜಗೌ ಕಳ್ಳ-ಮಳ್ಳ ಜೋಡಿ ಸಾಯಿಬಾಬಾ ಮೂಲಕ ರಾಜ್ಯಪಾಲರಿಗೆ ಗಾಳ ಹಾಕಿ ಆಪತ್ತಿನಿಂದ ಪಾರಾಗಲು ಹವಣಿಸುತ್ತಿದೆ. ರಾಜ್ಯಪಾಲರು ಈ ಭ್ರಷ್ಟರ ತಾಳಕ್ಕೆ ತಕ್ಕಂತೆ ಈಗ ಕುಣಿಯುತ್ತಲೂ ಇದ್ದಾರೆ.

ಅಂದಹಾಗೆ

"ನಾನು ಹೇಳಿದಂತೆ ಕೇಳದಿದ್ದರೆ ಮೈಸೂರು ವಿ.ವಿ.ಗೆ ಯುಜಿಸಿ ಅನುದಾನ ನಿಲ್ಲುವಂತೆ ಮಾಡುತ್ತೇನೆ" ಅಂದು ಬೆದರಿಸಿದ್ದಾರೆ ರಾಜ್ಯಪಾಲರು!

ಯುಜಿಸಿ ಅಂದರೆ ಹಂಸರಾಜ್ ಭಾರದ್ವಾಜರ ಖಾಸಗಿ ತಿಜೋರಿ ಅಂದುಕೊಂಡಿರಬಹುದಾ ಈತ?

ಮಲ್ಲೇಶ್ವರದ ನಾಶಕ್ಕೆ ನಿಂತೈತೆ ಮಂತ್ರಿಮಾಲ್


ಮಲ್ಲೇಶ್ವರದ ಮಂತ್ರಿ ಮಾಲ್

ಯಾವುದೇ ಶುಕ್ರವಾರ ಅಥವಾ ಶನಿವಾರದ ಸಂಜೆ ನೀವೇನಾದರೂ ಮೆಜೆಸ್ಟಿಕ್‌ನಿಂದ ಮಲ್ಲೇಶ್ವರಕ್ಕೆ ಹೋಗಬೇಕೆಂದರೆ ನಿಮ್ಮ ಆಯುಸ್ಸಿನ ಒಂದೂವರೆ ಗಂಟೆ ನೆಗೆದುಬಿದ್ದಂತೆಯೇ ಲೆಕ್ಕ!

ಬಸ್ಸು, ಕಾರು, ಬೈಕು; ಗಾಡಿ ಯಾವುದಾದರೇನು? ಸಂಪಿಗೆ ಟಾಕೀಸ್‌ನ ಆ ಒಂದು ಸಿಗ್ನಲ್ ದಾಟ ಅಲ್ಲಿಂದ ಫರ್ಲಾಂಗ್ ದೂರದ ಮಲ್ಲೇಶ್ವರ ಸರ್ಕಲ್‌ಗೆ ಬರಬೇಕೆಂದರೆ ಒಂದೋ ನಡಕೊಂಡು ಬರಬೇಕು ಅಥವಾ ನಿಮ್ಮ ಗಾಡಿಯ ಸಮೇತ ದಾಟಬೇಕೆಂದರೆ ಒಂದೂವರೆ ಗಂಟೆ ಕಾಯಲೇಬೇಕು. ಕೆಲವೊಮ್ಮೆ ಟ್ರಾಫಿಕ್ ಜಾಮು ಸಂಪಿಗೆ ಸಿಗ್ನಲನ್ನೂ ದಾಟ, ಅದರ ಹಿಂದಿನ ಸೆಂಟ್ರಲ್ ಸಿಗ್ನಲನ್ನೂ ನುಂಗಿ, ಮೆಜೆಸ್ಟಿಕ್‌ನ ಹೊಸ್ತಿಲಿನಂತಿರುವ ಕೃಷ್ಣಾಫ್ಲೋರ್‌ಮಿಲ್ ಸಿಗ್ನಲನ್ನೂ ಜಾಮ್ ಮಾಡಿ ಕೊನೆಗೆ ಮೆಜೆಸ್ಟಿಕ್‌ತನಕ ಇಡೀ ಟ್ರಾಫಿಕ್ ವ್ಯವಸ್ಥೆಯನ್ನೇ ಕುಲಗೆಡಿಸಿ ಹಾಕುತ್ತದೆ.

ಕೇವಲ ಟ್ರಾಫಿಕ್ ಸಮಸ್ಯೆಯಷ್ಟೇ ಆಗಿದ್ದರೆ ಮಲ್ಲೇಶ್ವರದ ಜನರಾಗಲೀ, ಅದನ್ನು ಹಾದುಹೋಗುವ ಯಶವಂತಪುರ, ಪೀಣ್ಯ, ದಾಸರಹಳ್ಳಿಯ ಜನರಾಗಲೀ ಈ ಪಾಟ ಸಂಕಷ್ಟಕ್ಕೆ ಸಿಲುಕುತ್ತಿರಲಿಲ್ಲ. ಒಂದೇ ಒಂದು ಟೌನ್‌ಶಿಪ್, ಅದರೊಳಗಿನ ದೈತ್ಯ ಶಾಪಿಂಗ್‌ಮಾಲ್; ಹೇಗೆ ಊರೊಂದಕ್ಕೆ ತಲೆನೋವಾಗಿ ಪರಿಣಮಿಸುತ್ತದೆ ಎಂಬುದಕ್ಕೆ ಮಲ್ಲೇಶ್ವರದ ಮಂತ್ರಿಮಾಲ್ ಒಂದೇ ಸಾಕು.



ಅದನ್ನು ಮಂತ್ರಿ ಸ್ಕ್ವೇರ್ ಅನ್ನುತ್ತಾರೆ. ಒಂದಲ್ಲ ಆರು ಅಂತಸ್ತುಗಳ ಈ ರಕ್ಕಸ ಮಾಲ್‌ನಲ್ಲಿ ಆರು ಸಿನಿಮಾ ಥೇಟರುಗಳಿವೆ. ಶೇಷಾದ್ರಿಪುರದಿಂದ ಅಥವಾ ಮೆಜೆಸ್ಟಿಕ್‌ನಿಂದ ಮಲ್ಲೇಶ್ವರಕ್ಕೆ ಬರಬೇಕೆಂದರೆ ಇರುವುದೊಂದೇ ದಾರಿಯೆಂದರೆ ಅದು ಸಂಪಿಗೆ ರಸ್ತೆ. ಆದರೆ ಸಂಪಿಗೆ ರಸ್ತೆಯ ತಲೆಬಾಗಿಲಲ್ಲೇ ಕೆಕ್ಕರಿಸಿ ನಿಂತಿದೆ ಮಂತ್ರಿ ಟೌನ್‌ಶಿಪ್!



ದೈತ್ಯ ಮಂತ್ರಿ ಗ್ರೀನ್ಸ್

ಆರು ಅಂತಸ್ತುಗಳ ಮಂತ್ರಿ ಸ್ಕ್ವೇರ್ ಪಕ್ಕದ್ದೇ ಮಂತ್ರಿ ಗ್ರೀನ್ಸ್. ಬಹುಶಃ ಬೆಂಗಳೂರಿನ ಅತೀ ದೊಡ್ಡ ಅಪಾರ್ಟ್‌ಮೆಂಟ್ ಸಮುಚ್ಚಯಗಳ ಪೈಕಿ ಇದೂ ಒಂದು. ಒಂದಲ್ಲ ಎರಡಲ್ಲ ಒಟ್ಟು ಹದಿನೆಂಟು ಅಂತಸ್ತುಗಳ, ಪ್ರತಿ ಅಂತಸ್ತಿನಲ್ಲಿ ಕನಿಷ್ಠ ಮೂರು ಫ್ಲಾಟುಗಳು. ಇಂಥ ಎಂಟು ಗಗನಚುಂಬಿ ಅಪಾರ್ಟ್‌ಮೆಂಟ್‌ಗಳು ಒಟ್ಟಿಗೆ ಸೇರಿದರೇನೇ ಮಂತ್ರಿ ಗ್ರೀನ್ಸ್ ಎಂಬ ಟೌನ್‌ಶಿಪ್ ಸೃಷ್ಟಿಯಾಗುತ್ತದೆ. ಅದು ಕಮ್ಮಿಯೆಂದರೂ ಐನೂರು ಫ್ಲಾಟುಗಳ ದೈತ್ಯ ಕಾಂಕ್ರೀಟ್ ಕೂಟ. ಮಂತ್ರಿ ಗ್ರೀನ್ಸ್ ಮತ್ತು ಮಂತ್ರಿ ಸ್ಕ್ವೇರ್ ಎಂಬ ಈ ಎರಡೂ ಕಟ್ಟಡಗಳೇ ಇವತ್ತು ಮಲ್ಲೇಶ್ವರದ ನೆಮ್ಮದಿಗೆ ಭಂಗ ತಂದಿವೆ.

ದಿನದ ಯಾವ ಹೊತ್ತಲ್ಲಿ ನೋಡಿದರೂ ಸಂಪಿಗೆ ಸರ್ಕಲ್‌ನ ಮುಂದೆ ಟ್ರಾಫಿಕ್ ಜಾಮ್. ಜನ ನಡೆದಾಡುವುದಕ್ಕೂ ಪರದಾಡಬೇಕು. ಅತ್ತ ಶ್ರೀರಾಂಪುರ, ಓಕುಳೀಪುರ, ರಾಮಚಂದ್ರಪುರ, ದೇವಯ್ಯ ಪಾರ್ಕ್, ಲಕ್ಷ್ಮೀನಾರಾಯಣಪುರ ಮತ್ತು ಪ್ರಕಾಶನಗರದ ಜನ ಶೇಷಾದ್ರಿಪುರಕ್ಕೋ ಶಿವಾನಂದ ಸರ್ಕಲ್‌ಗೋ ಅಥವಾ ಶಿವಾಜಿನಗರ, ವಿಧಾನಸೌಧದ ಕಡೆ ಬರಬೇಕೆಂದರೆ ಮಂತ್ರಿಮಾಲ್ ಸೃಷ್ಟಿಸಿದ ಈ ನರಕವನ್ನು ಹಾಯ್ದೇ ಬರಬೇಕು. ಪ್ರತಿದಿನ ಬೆಳಗ್ಗೆ ಆದರೆ ಸಾಕು, ಮಂತ್ರಿ ಟೌನ್‌ಶಿಪ್‌ನಿಂದ ಹೊರಬೀಳುವ ಕಾರುಗಳು ಸಂಪಿಗೆ ರಸ್ತೆಗೆ ಇಳಿದವೆಂದರೆ ಮುಗಿದೇ ಹೋಯ್ತು. ಒಂದಲ್ಲ ಎರಡಲ್ಲ ಏಕಕಾಲಕ್ಕೆ ನಾನೂರಕ್ಕೂ ಹೆಚ್ಚು ಕಾರುಗಳು ಮಂತ್ರಿ ಗ್ರೀನ್ಸ್‌ನಿಂದ ಹೊರಬಿದ್ದು ಸಂಪಿಗೆ ರಸ್ತೆಗೆ ಇಳಿದವೆಂದರೆ ಮೆಜೆಸ್ಟಿಕ್, ಶೇಷಾದ್ರಿಪುರಂ, ಸ್ವಸ್ತಿಕ್ ಕಡೆಯಿಂದ ಮಲ್ಲೇಶ್ವರಂ ಸರ್ಕಲ್ ಕಡೆಗೆ ಬರುವ ಬಸ್ಸು, ಕಾರು, ರಿಕ್ಷಾಗಳ ಪಾಡೇನಾಗಬೇಕು?

ಪಾರ್ಕಿಂಗ್ ದುರಂತ

ಸಂಪಿಗೆ ರಸ್ತೆಯ ಅಗಲ ಹೆಚ್ಚೆಂದರೆ 80 ಅಡಿ. ಹಿಂದಾದರೆ ಇಮ್ಮುಖ ಸಂಚಾರವಿತ್ತು, ಈಗ ಅದನ್ನು ಏಕಮುಖ ಮಾಡಿದ್ದಾರೆ. ಅದೂ ಮಂತ್ರಿಮಾಲ್‌ನ ಕಾರಣಕ್ಕಾಗಿ. ಟ್ರಾಫಿಕ್ ಜಾಮ್‌ನ ಕರ್ಮ ಒಂದೆಡೆಯಾದರೆ ಮತ್ತೊಂದೆಡೆ ಪಾರ್ಕಿಂಗ್ ಸಂಕಟ. ಮಂತ್ರಿ ಗ್ರೀನ್ಸ್ ಟೌನ್‌ಶಿಪ್, ತನ್ನ ಫ್ಲಾಟುದಾರರಿಗೆ ಪಾರ್ಕಿಂಗ್ ಸೌಲಭ್ಯ ಕಲ್ಪಿಸಿದೆ ನಿಜ. ಆದರೆ ಮಂತ್ರಿ ಸ್ಕೇರ್ ಹಾಗಲ್ಲ, ಹೇಳಿಕೇಳಿ ಅದು ಶಾಪಿಂಗ್ ಮಾಲ್. ಅದರೊಳಗೆ ಆರು ಸಿನಿಮಾ ಥಿಯೇಟರ್‌ಗಳಷ್ಟೇ ಅಲ್ಲ; ದೈತ್ಯ ಸೂಪರ್ ಮಾರ್ಕೆಟ್ ಮಳಿಗೆಯಿದೆ. ವಿವಿಧ ರಿಲಯನ್ಸ್ ಅಡ್ಡೆಗಳಿವೆ. ಅಮೀಬಾ ಹೆಸರಿನ ರೆಸ್ಟೋರೆಂಟ್, ತರಹೇವಾರಿ ಬಟ್ಟೆ ಅಂಗಡಿಗಳು, ಜ್ಯುವೆಲ್ಲರಿ, ಕಂಪ್ಯೂಟರ್, ಟಿವಿಗಳ ಮಳಿಗೆಗಳೆಲ್ಲ ಸೇರಿದರೇನೆ ಮಂತ್ರಿ ಸ್ಕೇರ್

ಇಷ್ಟೆಲ್ಲ ಮಳಿಗೆಗಳ ಮಾಲೀಕರು, ನೌಕರರ ವಾಹನಗಳಿಗೆ ಮಂತ್ರಿ ದಣಿಗಳು ಪಾರ್ಕಿಂಗ್ ಸೌಲಭ್ಯ ಕಲ್ಪಿಸಿಲ್ಲ. ಇರುವ ಸೆಲ್ಲಾರ್‌ನಲ್ಲಿ ಸದಾಕಾಲಕ್ಕೂ ಕಾರುಗಳು ಕಿಕ್ಕಿರಿದು, ಮಳಿಗೆಗಳ ನೌಕರರ ಬೈಕುಗಳಿಗೆ ಜಾಗವೇ ಇಲ್ಲ. ಇನ್ನು ಆರು ಥಿಯೇಟರ್‌ಗಳಿಗೆ ಬರುವ ಪ್ರೇಕ್ಷಕರು, ಶ್ರೀಮಂತರ ಕಾರುಗಳೆಲ್ಲಿ ನಿಲ್ಲಬೇಕು?

ಪಾರ್ಕಿಂಗ್ ದುರಂತ ಎಂಬುದೇನಾದರೂ ಇದ್ದರೆ ಅದು ಜನ್ಮತಳೆಯುವುದೇ ಇಲ್ಲಿಂದ. ಐಷಾರಾಮಿ ಥಿಯೇಟರ್‌ಗಳಿಗೆ ಬರುವ ಶ್ರೀಮಂತ ಪ್ರೇಕ್ಷಕರ ಕಾರುಗಳೆಲ್ಲ ಎದುರಿನ ಪಾಲಿಕೆ ಕಚೇರಿ ಮುಂದಿನ ರಸ್ತೆಯನ್ನಾಕ್ರಮಿಸುತ್ತವೆ. ಮಂತ್ರಿ ಸ್ಕ್ವೇರ್ ಎದುರೇ ಪ್ರಖ್ಯಾತ ಕೃಷ್ಣಭವನ್ ಹೋಟೆಲ್ ಇದೆ. ಸದ್ಯ ಅದಕ್ಕೆ ಗಿರಾಕಿಗಳೇ ಇಲ್ಲ, ಏಕೆಂದರೆ ಕೃಷ್ಣಭವನ್ ಸುತ್ತಮುತ್ತಲ ಯಾವ ರಸ್ತೆಯಲ್ಲಿ ಗಾಡಿ ನಿಲ್ಲಿಸಲು ಅವಕಾಶ ವಿಲ್ಲ. ಮಂತ್ರಿ ಮಾಲ್‌ಗೆ ಬರುವ ಗಿರಾಕಿಗಳ ಗಾಡಿಗಳೇ ಈ ಸುತ್ತಮುತ್ತಲ ಅಷ್ಟೂ ರಸ್ತೆಗಳನ್ನು ಆಕ್ರಮಿಸುತ್ತವೆ. ಎದುರಿಗಿರುವ ಪೆಟ್ರೋಲ್ ಬಂಕ್‌ಗೆ ಪೆಟ್ರೋಲ್ ತುಂಬಿಸುವುದಕ್ಕೂ ವಾಹನಗಳು ಬರುವುದಿಲ್ಲ

ನೀರಿನ ಹಾಹಾಕಾರ

ಇನ್ನು ಸಂಪಿಗೆ ಟಾಕೀಸಿನ ಕತೆ ನೋಡಬೇಕು! ಒಂದಾನೊಂದು ಕಾಲಕ್ಕೆ ರಿಲೀಸಾಗುವ ಪ್ರತಿ ಕನ್ನಡ ಚಿತ್ರಕ್ಕೂ ಇದೇ ನಾಂದಿಯಾಗುತ್ತಿದ್ದದ್ದು. ಈಗ ಕಳಪೆ ತಮಿಳು ಚಿತ್ರಗಳನ್ನು ಓಡಿಸುತ್ತಿದೆ. ಅಕ್ಕಪಕ್ಕದ ಸ್ಲಮ್ಮುಗಳ ತಮಿಳರನ್ನು ಬಿಟ್ಟರೆ ಸಂಪಿಗೆ ಟಾಕೀಸ್‌ಗೆ ಸಭ್ಯ ಪ್ರೇಕ್ಷಕರೇ ಇಲ್ಲ. ಇದು ಕೇವಲ ಮಂತ್ರಿ ಮಾಲ್‌ನ ಆಜೂಬಾಜಿನ ಕತೆಯಷ್ಟೇ ಅಲ್ಲ, ಇಡೀ ಸಂಪಿಗೆ ರಸ್ತೆಯ ಯಾವ ಅಂಗಡಿ-ಮಳಿಗೆಗಳಿಗೂ ಗಿರಾಕಿಗಳಿಲ್ಲ. ಹೋಟೆಲ್‌ಗಳು ನೊಣ ಹೊಡೆಯುತ್ತಿವೆ. ಜನ ಮಲ್ಲೇಶ್ವರಕ್ಕೆ ಬರುವುದಕ್ಕೆ ಅಸಹ್ಯ ಪಡುತ್ತಿದ್ದಾರೆ. ಎಲ್ಲೆಂದರಲ್ಲಿ ಇಕ್ಕಟ್ಟು, ಗಿಜಿಗುಡುವ ರಸ್ತೆಗಳು. ಸದಾಕಾಲಕ್ಕೂ ವಾಹನಗಳ ಕರ್ಕಶ ಸದ್ದು. ನೆಮ್ಮದಿ ಬಯಸುವ ಯಾರು ತಾನೇ ಮಲ್ಲೇಶ್ವರದಲ್ಲುಳಿಯಲು ಸಾಧ್ಯ?


...ಯಣ

ಇಡೀ ಮಲ್ಲೇಶ್ವರಕ್ಕೆ ಜಲಮಂಡಳಿ ಸರಬರಾಜು ಮಾಡುವ ನೀರಿನ ಪ್ರಮಾಣವೇ ಒಂದಾದರೆ ಅಷ್ಟೇ ನೀರು ಮಂತ್ರಿ ಟೌನ್‌ಶಿಪ್‌ಗೂ ಬೇಕು. ಮಂತ್ರಿ ಕಾಂಪ್ಲೆಕ್ಸ್ ಬಂದಮೇಲೆ ಮಲ್ಲೇಶ್ವರದ ಜನಕ್ಕೆ ನೀರಿನ ಹಾಹಾಕಾರ ಶುರುವಾಗಿದೆ. ಜೊತೆಗೆ ಟೌನ್‌ಶಿಪ್‌ನಿಂದ ಮೋರಿಗೆ ಹರಿಯುವ ತ್ಯಾಜ್ಯವಿದೆಯಲ್ಲ ಅದಕ್ಕೆ ಹಳೇ ಕಾಲದ ಯಾವ ಮೋರಿ ಪೈಪು ಸಾಲುವುದಿಲ್ಲ. ಮಂತ್ರಿ ಟೌನ್‌ಶಿಪ್ ಹೊರಬಿಡುವ ಕೊಳೆ ನೀರಿನ ಒತ್ತಡಕ್ಕೆ ಪ್ರತಿನಿತ್ಯ ಒಂದಲ್ಲ ಒಂದು ಮೋರಿ ಪೈಪು ಒಡೆಯುತ್ತದೆ.

ಅಷ್ಟಕ್ಕೂ ಇಂಥದೊಂದು ದೈತ್ಯ ಟೌನ್‌ಶಿಪ್ ಅನ್ನು ಮಲ್ಲೇಶ್ವರ ಮೇಲೆ ಹೇರಿದ್ದಾದರೂ ಯಾರು? ಹೇಗೆ ಪರಿಸರ ಮಾಲಿನ್ಯ ಮಂಡಳಿ ಇದಕ್ಕೆ ಪರವಾನಗಿ ಕೊಟ್ಟಿತು? ಮಲ್ಲೇಶ್ವರದ ನೆಮ್ಮದಿಗಿದು ಭಂಗ ತರುವುದು ಗೊತ್ತಿದ್ದೂ


ಸಂಪಿಗೆ ಸರ್ಕಲ್

ಯಾವೊಬ್ಬ ನಾಯಕರೂ ಇದಕ್ಕೆ ತಕರಾರೆತ್ತಲಿಲ್ಲವೇ? ಬೆಂಗಳೂರು ಮಹಾನಗರ ಪಾಲಿಕೆಯಿದ್ದೂ ಹೇಗೆ ಈ ಪಾಟ ಕಂಟಕವೊಂದು ಮಲ್ಲೇಶ್ವರಕ್ಕೆ ಅಪ್ಪಳಿಸಿತು?

ಭೂಕಂಟಕ ಕಿರಣ್‌ಕುಮಾರ್

ಅದು ಮತ್ತೊಮ್ಮೆ ಬಿಬಿಎಂಪಿ, ನಗರಾಭಿವೃದ್ಧಿ ಇಲಾಖೆ ಮತ್ತು ಮಾಲಿನ್ಯ ನಿಯಂತ್ರಣ ಮಂಡಳಿ ಸೇರಿಕೊಂಡು ಮಲ್ಲೇಶ್ವರಕ್ಕೆ ಮಾಡಿದ ಮೋಸದ ಕತೆ ಜಕ್ಕರಾಯನಕೆರೆ ಮೈದಾನಕ್ಕೆ ಹೊಂದಿಕೊಂಡು ಸಂಪಿಗೆ ಟಾಕೀಸ್‌ತನಕ ವ್ಯಾಪಿಸಿದ ಮಂತ್ರಿ ಟೌನ್‌ಶಿಪ್ ತಲೆಯೆತ್ತಿರುವುದು ಹಳೇ ರಾಜಾಮಿಲ್‌ನ ಜಮೀನಿನಲ್ಲಿ. ಅನಂತಕುಮಾರ್ ಕೇಂದ್ರ ಮಂತ್ರಿಯಾಗಿದ್ದ ಕಾಲಕ್ಕೆ ಸ್ಥಗಿತಗೊಂಡಿದ್ದ ರಾಜಾಮಿಲ್‌ನ 13.5 ಎಕರೆಗೆ ಕಣ್ಣು ಹಾಕಿದವನು ಮುಂಬಯಿಯ ಕುಖ್ಯಾತ ಬಿಲ್ಡರ್ ಸುಶೀಲ್ ಮಂತ್ರಿ.

ಕೃಷ್ಣ ಆ ಹೊತ್ತಿಗೆ ಮುಖ್ಯಮಂತ್ರಿಯಾಗಿದ್ದರು. ದೇಶಪಾಂಡೆ ಜೊತೆಗೂ ಸುಶೀಲ್ ಮಂತ್ರಿಗೆ ವ್ಯಾವಹಾರಿಕ ನೆಂಟಸ್ತಿಕೆ ಕುದುರಿತ್ತು. ರಾಜಾಮಿಲ್‌ನ 13.5 ಎಕರೆ ಜಮೀನು ಖರೀದಿಸಿ ಅಲ್ಲೊಂದು ಐಷಾರಾಮಿ ಟೌನ್‌ಶಿಪ್ ಎಬ್ಬಿಸುವ ಐಡಿಯಾ ಅನ್ನು ಸುಶೀಲ್ ಮಂತ್ರಿಯ ತಲೆಗೆ ಹಾಕಿದ್ದು ಬೆಂಗಳೂರಿನ ಕಿರಣಕುಮಾರ್ ಎಂಬಾತ. ಈತ ಓರ್ವ ಖತರ್ನಾಕ್ ಖದೀಮ ಹಾಖಂಡಿ ಲ್ಯಾಂಡ್ ಡೀಲರ್. ಕೇವಲ ಮಲ್ಲೇಶ್ವರದ ಮಂತ್ರಿ ಗ್ರೀನ್ಸ್ ಅಷ್ಟೇ ಅಲ್ಲ; ಬೆಂಗಳೂರಿನ ನಾನಾಕಡೆ ಸರ್ಕಾರಿ ಭೂಮಿ ಕಬಳಿಸಿ ಗಗನಚುಂಬಿ ಮಂತ್ರಿ ಅಪಾರ್ಟ್‌ಮೆಂಟ್‌ಗಳನ್ನೆಬ್ಬಿಸುವ ಮಾಸ್ಟರ್ ಪ್ಲಾನ್ ಕಿರಣ್‌ಕುಮಾರ್ ರೂಪಿಸಿದ್ದ

ಒಂದು ಮೂಲದ ಪ್ರಕಾರ ಮಂತ್ರಿ ಗ್ರೀನ್ಸ್‌ಗೆ ಬಿ... ನಾಯಕ ಅನಂತಕುಮಾರ್, ಪ್ರಮೋದ್ ಮಹಾಜ... ಕಾಂಗ್ರೆಸ್‌ನ ದೇಶಪಾಂಡೆ, ಎಸ್ಸೆಂ ಕೃಷ್ಣರ ಅಳಿಯ ಸಿದ್ಧಾ... ಮುಂತಾದವರನ್ನೆಲ್ಲ ಪಾಲುದಾರರನ್ನಾಗಿ ಕಿರಣ್‌ಕುಮಾ... ಜೊತೆ ಹಾಕಿಕೊಂಡಿದ್ದ. ಇದಕ್ಕೆ ಪೂರಕವಾಗೇ ಸುಶೀ... ಮಂತ್ರಿ ತನ್ನ ಕಂಪನಿಗೆ ಕಿರಣ್‌ಕುಮಾರ್‌ನನ್ನು ಉಪಾಧ್ಯಕ್ಷನ... ಮಾಡಿಕೊಂಡಿದ್ದ.

ಆರೂವರೆ ಎಕರೆ ಸರ್ಕಾರಿ ಆಸ್ತಿ

ಅಸಲಿಗೆ ರಾಜಾಮಿಲ್‌ನ ಜಮೀನು ಕೇವಲ 13... ಎಕರೆಯಷ್ಟೇ ಇತ್ತಾದರೂ ಪಕ್ಕದ ಶಿರೂರು ಮಠದ ಭೂ... ಜಕ್ಕರಾಯನಕೆರೆಗೆ ಹೊಂದಿಕೊಂಡಿದ್ದ 2.35 ಎಕರೆಗಳ... ಪಾಲಿಕೆ ಆಸ್ತಿ ಮತ್ತು ಮುನೇಶ್ವರ ದೇವಸ್ಥಾನ... ಮೂರೆಕರೆಯನ್ನೂ ಸೇರಿದಂತೆ ಒಟ್ಟು ಇಪ್ಪತ್ತೆಕರೆಗೆ ಮ... ಖದೀಮರು ಕಾಂಪೌಂಡ್ ಹಾಕಿಕೊಂಡರು. ಇ... ಕುಮ್ಮಕ್ಕು ಕೊಟ್ಟವನು ಭೂಮಾಪನ ಇಲಾಖೆ... ಕಮೀಷನರ್ ರಾಜೀವ್ ಶುಕ್ಲ ಎಂಬ ಕಡುಭ್ರಷ್ಟ ಐಎ... ಅಧಿಕಾರಿ. ರಾಜೀವ್ ಶುಕ್ಲ ಒಬ್ಬನೇ ಮಂತ್ರಿ ಗ್ರೀನ್ಸ್‌... ಎರಡು ಫ್ಲಾಟುಗಳನ್ನು ಗಿಟ್ಟಿಸಿದ್ದ. ಕೆಐಎಡಿಬಿಯ ಮೂ... ಸರ್ಕಾರಿ ಆಸ್ತಿ ಸೇರಿಸಿ ನೋಟಿಫೈ ಮಾಡಿಸಿಕೊಳ್ಳ... ದೇಶಪಾಂಡೆಯನ್ನು ಮುಂದಿಟ್ಟುಕೊಂಡರು. ಭೂಕಬಳಿಕೆ... ನಂತರ ಟೌನ್‌ಶಿಪ್‌ನ ಪ್ಲಾನ್ ಮಂಜೂ... ರಾಗಬೇಕಲ್ಲ; ಅದಕ್ಕೆ ಮಂತ್ರಿ ಖದೀಮ... ಬಲೆಬೀಸಿದ್ದು ಆಗ ಮುಖ್ಯಮಂತ್ರಿಯಾ... ಧರ್ಮ ಸಿಂಗ್‌ಗೆ.

ಧರ್ಮಸಿಂಗ್ ಒಬ್ಬರಿಗೆ ಐದು ಫ್ಲಾ... ಗಳ ಗಿಫ್ಟ್ ಕೊಟ್ಟರಂತೆ. ರಾಜಾಮಿ... ಖರೀದಿಸಿ, ಅಕ್ಕಪಕ್ಕದ ಸರ್ಕಾರಿ ... ದೋಚಿದ್ದು ಒಂದು ಹಂತವಾದರೆ, ಪ್ಲಾ... ಮಂಜೂರಾತಿ ಗಿಟ್ಟಿಸಿ ಕಾಮಗಾರಿ... ಶುರುವಿಟ್ಟಿದ್ದು ಎರಡನೇ ಹಂತ. ... ಹೊತ್ತಿಗೆ ಮಂತ್ರಿ ಸ್ಕ್ವೇರ್‌ಗೆ ಪಾಲುದಾರನಾಗಿ ಹ... ಆಸಾಮಿಯೊಬ್ಬ ಜಮೆಗೊಂಡಿದ್ದ ಆತ ಬಿಜೆಪಿಯ ಮತ್ತೊ... ರಾಷ್ಟ್ರನಾಯಕ ವೆಂಕಯ್ಯ ನಾಯ್ಡು!

ಒಂದೆಡೆ ಅಧಿಕಾರಸ್ಥ ಧರ್ಮಸಿಂಗ್ ಸರ್ಕಾ... ಮತ್ತೊಂದೆಡೆ ವಿರೋಧಿ ಬಿಜೆಪಿಯ ಕುಮ್ಮಕ್ಕು. ಮ... ಖದೀಮರ ಹಾವಳಿಯನ್ನು ಪ್ರಶ್ನಿಸುವವರೇ ಇಲ್ಲವ... ಒಟ್ಟು 20 ಎಕರೆಯ ರಕ್ಕಸ ಪ್ಲಾನಿಗೆ ಪಾಲಿಕೆ ಮಂಜೂರ... ಕಲ್ಪಿಸಿತ್ತು. ಮಲ್ಲೇಶ್ವರಂ ಶಾಸಕ ಅಶ್ವತ್ಥನಾರಾಯಣಗೌಡರಿಗೆ... ಕೈತುಂಬಾ ಪ್ರಸಾದ ಗಿಟ್ಟುತ್ತಲ್ಲ; ಇನ್ನು ಆಗ ಕೌನ್ಸಿಲ... ಆಗಿದ್ದ ಬಾಂಬ್ ನಾಗ ಸುಮ್ಮನಿರುತ್ತಾನ... ಅವನೊಬ್ಬನಿಗೇ ಒಂದೂವರೆ ಕೋಟಿಯ... ಸಲ್ಲಿಸಿದನಂತೆ ಮಂತ್ರಿ ದೂರ್ತ ಕಿರಣ್‌ಕುಮಾ...

ಮಾಲಿನ್ಯ ಮಂಡಳಿಯ ದ್ರೋಹ...

ಮಾಲಿನ್ಯ ನಿಯಂತ್ರಣ ಮಂಡಳಿಯ ಖದೀ... ರಿಗೆ ಮೂರೂವರೆ ಕೋಟಿಯಷ್ಟು ಲಂಚ ತಿನ್ನಿ... ಮಂತ್ರಿ ಖದೀಮರು ಇವತ್ತು ಮಲ್ಲೇಶ್ವರಕ್ಕೆ ಶಾಪ... ನಿಂತಿದ್ದಾರೆ. ಸಂಪಿಗೆ ರಸ್ತೆಯ ಅಗಲೀಕರಣ ಎಂಬು... ಇವರ ಮುಂದೆ ಅದೆಷ್ಟು ಹಾಸ್ಯಾಸ್ಪದವಾಗಿದೆಯೆಂದ... ಎಲ್ಲಿ ಮಂತ್ರಿ ಮಾಲ್‌ನ ಹತ್ತು ಅಡಿಗಳಿಗೆ ಕು... ಬರುತ್ತೋ ಎಂದು ಎದುರಿನ ಪಾರ್ಕನ್ನೇ ಪಾ... ನಾಶಮಾಡಿದೆ. ಹಾಗೊಮ್ಮೆ ಎಡಭಾಗದ... ರಸ್ತೆಯನ್ನೇನಾದರೂ ಅಗಲಿಸಿದರೆ ಎಲ್ಲಿ ಮಂತ್ರಿ ಮಾಲ್... ಹತ್ತಡಿ ಅಗಲದ ರ್‍ಯಾಂಪ್ ನೆಲಸಮಗೊಳಿಸಬೇಕಾಗುತ್ತೆ... ಎಂಬ ಭೀತಿ ಪಾಲಿಕೆಯ ಅಧಿಕಾರಿಗಳದ್ದು-

ರಸ್ತೆಯ ಹತ್ತಡಿಯನ್ನು ಕಬಳಿಸಿ, ಅಕ್ಕಪಕ್ಕದ ಸರ್ಕಾ... ಭೂಮಿಯನ್ನು ಅತಿಕ್ರಮಿಸಿ, ಇಡೀ ಮಲ್ಲೇಶ್ವರ... ನೆಮ್ಮದಿಯನ್ನೇ ನಾಶ ಮಾಡಿದ ಮಂತ್ರಿ ಟೌನ್‌ಶಿಪ್‌ಗ... ಮಲ್ಲೇಶ್ವರದ ಜನ ಇನ್ನು ಏನೇನು ತ್ಯಾಗ ಮಾಡಬೇಕು... ಊರೊಂದರ ಸಂಸ್ಕೃತಿ ಮತ್ತು ಪರಿಸರವನ್ನೇ ಹಾಳುಗೆಡವ... ದೈತ್ಯ ಟೌನ್‌ಶಿಪ್‌ನ ಅನಾಹುತ ಕೊನೆಕೊನೆಗೆ ಯ... ಮಟ್ಟಮುಟ್ಟಿದೆಯೆಂದರೆ ಇವತ್ತು ಮಲ್ಲೇಶ್ವರ... ಮೂಲನಿವಾಸಿಗಳೇ ಗುಳೇ ಹೊರಟಿದ್ದಾರೆ. ಮಲ್ಲೇಶ್ವರ... ತಮ್ಮ ಮನೆ ಮಾರಿಕೊಂಡು ಮೈಸೂರಿಗೋ, ಬೆಂಗಳೂ... ಹೊರವಲಯದ ಹೊಸ ಬಡಾವಣೆಗಳಿಗೋ ವ... ಹೋಗುತ್ತಿರುವ ಮೂಲ ನಿವಾಸಿಗಳ ಸಂಕಟಕ್ಕೆ ಯಾ... ಹೊಣೆ?

ದೈತ್ಯ ಅಪಾರ್ಟ್‌ಮೆಂಟೊಂದು, ಐಷಾರಾಮಿ ಮಾ... ಒಂದು ಹೇಗೆ ಊರೊಂದನ್ನು ನುಂಗಿ ಹಾಕುತ್ತದೆ ಮ... ಪ್ರಶ್ನಿಸದ ಜನ ಹೇಗೆ ಊರು ಬಿಡಬೇಕಾಗುತ್ತದೆ ಎಂಬು... ಮಲ್ಲೇಶ್ವರದ ಮಂತ್ರಿ ಮಾಲ್ ವಿಕಟ ನಿದರ್ಶನವಷ್ಟೆ...

• ರಾ. ಸೋಮನಾಥ...
ra.somanath2010@gmail.co...

ಜಾನಿ ಅರೆಸ್ಟ್ ಕೋತಿರಾಮನ ಜೈಲು ಪೇಚಾಟ



ಚೈಚಕುಪ್ಪೆಯ ಜಾನಿ ...ಗಿದ್ದಾನೆ. ಆತನ ...ಗಟ್ಟಲೇ ...ಗರನ್ನೂ ಮಂಡ್ಯ ...ೀಸರು ಹಿಡಿದು ...ಗೆ ಹಾಕಿದ್ದಾರೆ. ಕೇಸು ...ದೇನಲ್ಲ. ಜಡೇಜಾ ...ಕೊಲೆಕೇಸಿನ ...ರಣೆಗೆಂದು ಮಂಡ್ಯಕ್ಕೆ ...ದ್ದೆ ಜಾನಿ ಬಹುಶಃ ... ಹುಡುಗರಲ್ಲದೇ ...ೀಸ್ ...ಾವಲಿನಲ್ಲೋ, ...ನ್ಸ್‌ಧಾರಿ ...ದ್ಯೂನ್‌ಗಳನ್ನಿಟ್ಟುಕೊಂಡೋ ...ರ್ಟಿಗೆ ಬಂದಿದ್ದರೆ ಹೀಗಾಗುತ್ತಿರಲಿಲ್ಲ.

...ಬಿದು ಪಾತಕ ಬದುಕಿನ ಪ್ರಾರಬ್ಧ ಕರ್ಮ. ಜಡೇಜಾ ... ಹತ್ಯೆಗೂ ಜಾನಿಗೂ ಸಂಬಂಧವಿರಲಿಲ್ಲ. ಆದರೆ ...ಲ್ಲಿ ಕೋತಿರಾಮನ ಜೊತೆ ಅವನಿದ್ದ ಎಂಬ ಒಂದೇ ...ಕ್ಕೆ ಪೊಲೀಸರು ಜಡೇಜಾನ ಕೊಲೆ ಕೇಸಿಗೆ ಜಾನಿಯ ...ರನ್ನು ಸೇರಿಸಿಬಿಟ್ಟರು. ಈಗ ಕೋರ್ಟ್‌ಗೆ ...ಬೇಕೆಂದರೆ ಒಬ್ಬನೇ ಬರುವಂತಿಲ್ಲ. ಒಬ್ಬನೇ ಬಂದರೆ ...ಡ್ಯದ ಜಡೇಜಾ ಗ್ಯಾಂಗ್ ಕೊಲ್ಲದೇ ಕಳಿಸುವುದಿಲ್ಲ. ...ಕುಳಿಯಬೇಕೆಂದರೆ ಹುಡುಗರನ್ನು ಜೊತೆ ...ಕೊಳ್ಳದೇ ವಿಧಿಯೇ ಇಲ್ಲ.

...ಇಂಥದೊಂದು ಜಂಜಾಟಕ್ಕೆ ಸಿಲುಕಿರುವ ಜಾನಿ ...ಡ್ಯ ಪೊಲೀಸರಿಗೆ ಟೂಲ್ಸ್ ಸಮೇತ ಸಿಕ್ಕಿಬಿದ್ದದ್ದು ...ತ್ತ ಅದರ ಸುತ್ತಣ ಕುಚೋದ್ಯಗಳಿವೆಯಲ್ಲ; ಅದರ ...ರ್ಮ ಮಾತ್ರ ಯಾರಿಗೂ ಅರ್ಥವಾಗುತ್ತಿಲ್ಲ.

...ಮಂಡ್ಯದ ಕೋರ್ಟ್‌ಗೆ ಬಂದಿದ್ದ ಜಾನಿ ಅರೆಸ್ಟಾಗಲು ...ತಿರಾಮನೇ ಕಾರಣ ಎಂಬುದು ಒಂದು ಸುದ್ದಿ. ...ಜಾನಿಯನ್ನು ಅರೆಸ್ಟಾಗುವಂತೆ ಮಾಡಿ ಮಂಡ್ಯದ ...ೋಕ್ ಪೈನನ್ನು ಮುಗಿಸುವುದು ಕೋತಿರಾಮನ ...ಎಂಬುದು ಮತ್ತೊಂದು ಸುದ್ದಿ. ಜೈಲಲ್ಲಿ ಕೂತೇ ...ಾರಿ ಕೊಲೆಗಳನ್ನು ಮಾಡಿಸುವುದು ಕೋತಿರಾಮನ ...ನ್ನಾರವೆಂಬುದು ಮಗದೊಂದು ಸುದ್ದಿ.

ಈ ಥರದ ಒಳತಂತ್ರ, ಕುತಂತ್ರಗಳು ಭೂಗತ ಜಗತ್ತಿನಲ್ಲಿ ಹೊಸದೇನಲ್ಲ. ಆದರೆ ಅತ್ತ ತುಮಕೂರು ಜೈಲಲ್ಲಿ ಕೂತು ತಲೆತಲೆ ಚಚ್ಚಿಕೊಳ್ಳುತ್ತಿರುವ ಪಾತಕಿ ಕೋತಿರಾಮ ಮಾತ್ರ ಈ ಬಗ್ಗೆ ಸುಮ್ಮನಾಗುವ ಲಕ್ಷಣಗಳಿಲ್ಲ. ಇದರಲ್ಲಿ ಇನ್ನೆಂಥದ್ದೋ ಹುನ್ನಾರವಿದೆಯೆಂದು ಕಂಡಕಂಡವರಿಗೆ ಫೋನಾಯಿಸಿ ಪೇಚಾಡುತ್ತಿರುವ ಕೋತಿರಾಮನ ಗೋಳಾಟಕ್ಕೆ ಬೇರೆಯದೇ ಕಾರಣವಿದೆಯೇ? ಅದನ್ನು ಆತನ ಬಾಯಲ್ಲೇ ಕೇಳಬೇಕು.

'..ಜಾನಿ ನನ್ನ ಒಳ್ಳೆಯ ಸ್ನೇಹಿತ ನಿಜ, ಹಾಗಂತ ನಾನೇ ಹುಡುಗರನ್ನು ಬಿಟ್ಟು ಆತನನ್ನು ಅರೆಸ್ಟ್ ಮಾಡಿಸಿದರೆ ನನಗದರಿಂದ ಏನು ಪ್ರಯೋಜನ? ಜಾನಿ ಜೈಲಲ್ಲಿದ್ದರೆ ನನ್ನ ಖರ್ಚು ವೆಚ್ಚಗಳನ್ನೆಲ್ಲ ಆತನೇ ನೋಡಿಕೊಳ್ಳುತ್ತಾನೆ ಅಂತ ಯಾರಾದರೂ ಭಾವಿಸೋದಾದ್ರೆ ಅವರಿಗೆ ಫೀಲ್ಡಿನ ಎಬಿಸಿಡಿ ಗೊತ್ತಿಲ್ಲ ಎಂದೇ ಅರ್ಥ.

ಏಕೆ ಗೊತ್ತಾ? ಯಾರೇ ವ್ಯಕ್ತಿಯೊಬ್ಬ ಹಣ ಸಂಪಾದಿಸೋದು ಜೈಲಿಂದ ಹೊರಗಿದ್ದಾಗಲೇ ಹೊರತು ಜೈಲಲ್ಲಿ ಕೂತಲ್ಲ. ಜೈಲಲ್ಲಿ ಕೂತು ಯಾರೂ ವ್ಯವಹಾರ ನಡೆಸಲು ಸಾಧ್ಯವಿಲ್ಲ. ಇದ್ದ ದುಡ್ಡು ಪೋಲಾಗುತ್ತದೆಯೇ ಹೊರತು ನಾಲ್ಕು ಕಾಸು ಅಂತ ಗಳಿಸಬೇಕಾದ್ರೆ ಜೈಲಿಂದ ಹೊರಗಿದ್ದೇ ದುಡಿಯಬೇಕು. ಹಾಗೊಮ್ಮೆ ಜಾನಿ ನನ್ನ ಖರ್ಚು ವೆಚ್ಚಗಳನ್ನು ನಿಭಾಯಿಸೋದೆ ನಿಜ ಆಗಿದ್ರೆ ಆತ ಹೊರಗೆ ಇರೋದೆ ನನಗೆ ಲಾಭವಲ್ಲವೇ? ಜೈಲೊಳಗಿರುವಾಗಲೇ ಖರ್ಚು ನೋಡಿಕೊಳ್ಳೋನು ಬಿಡುಗಡೆಯಾದ ತಕ್ಷಣ ದುಡ್ಡನ್ನೆಲ್ಲ ಬ್ಯಾಂಕಿಗೆ ಹಾಕ್ತಾನೆ ಅಂತ ನಂಬುವ ಮುಠ್ಠಾಳ ಯಾರು?


ಬಹುಶಃ ಈ ತರಹದ ಕುಚೋದ್ಯ ಮಾಡುವವರಿಗೆ ಫೀಲ್ಡಿನ ತಲೆಬುಡವೇ ಗೊತ್ತಿದ್ದಂತಿಲ್ಲ. ಅನ್ಯಾಯವಾಗಿ ಜಡೇಜಾ ರವಿ ಕೊಲೆಕೇಸಲ್ಲಿ ಪೊಲೀಸರು ಜಾನಿಯ ಹೆಸರನ್ನು ಸೇರಿಸಿಬಿಟ್ಟರು. ಜಡೇಜಾ ರವಿ ಕೊಲೆಗೆ ಮಂಡ್ಯದ ಅಶೋಕ್ ಪೈ ಎಂಬಾತ ನನಗೆ ಸುಪಾರಿ ಕೊಟ್ಟಿದ್ದರಿಂದಲೇ ನಾನು ಹುಡುಗರನ್ನು ಬಿಟ್ಟು ಆತನನ್ನು ಮುಗಿಸಿದೆ ಅಂತ



ಯಾರಾದರೂ ನಂಬುವುದಾದ್ರೆ ಅದು ಕೂಡ ಮುಠ್ಠಾಳತನವಾಗುತ್ತದೆ. ಅಶೋಕ್ ಪೈ ಯಾರು ಅನ್ನೋದೆ ನನಗೆ ಗೊತ್ತಿಲ್ಲ. ನಂಬ್ತೀರೋ ಬಿಡ್ತೀರೋ ಈತನಕ ನಾನು ಆತನ ಮುಖವನ್ನೇ ನೋಡಿಲ್ಲ!

ಜಡೇಜಾ ರವಿ ಕೊಲೆ ಪ್ರಕರಣದಲ್ಲಿ ನನ್ನ ಪಾತ್ರ ಏನಿತ್ತು ಅನ್ನೋದು ಪೊಲೀಸರಿಗೆ ಚೆನ್ನಾಗಿಯೇ ಗೊತ್ತು. ಜಡೇಜಾನಿಂದ ಕೊಲೆಯಾದ ಚೀರನಹಳ್ಳಿ ಶಂಕ್ರನ ತಮ್ಮ ಶಿವರಾಮ ನನಗೆ ಪ್ರಾಣಸ್ನೇಹಿತನಾಗಿದ್ದ. ಜೊತೆಗೆ ಶಂಕ್ರನ ಬಾಮೈದ ಚೇತು ಮತ್ತು ಆತನ ಗೆಳೆಯ ಕುಮಾರ ಶಿವರಾಮನ ಹತ್ಯೆಗೆ ರಿವೇಂಜ್ ತಗೊಂಡೇ ತೀರ್‍ತೀವಿ ಅಂತ ನಿಂತುಬಿಟ್ಟಿದ್ದರು. ಬೇಡ ಅಂತ ನಾನು ಹೇಳಿಬಿಟ್ರೆ ಅವರು ಕೇಳ್ತಾರಾ?

ಅಣ್ಣ ಶಂಕ್ರ ಮತ್ತು ತಮ್ಮ ಶಿವರಾಮನ್ನ ಅನ್ಯಾಯವಾಗಿ ಕೊಲ್ಲಿಸಿದ ಜಡೇಜಾನನ್ನು ಮುಗಿಸಿದ್ದರಲ್ಲಿ ಚೇತು ಮತ್ತು ಕುಮಾರನ ಕಾರಣವೇ ಮುಖ್ಯವಾಗಿತ್ತೇ ಹೊರತು ಅದರಲ್ಲಿ ಅಶೋಕ್ ಪೈ ಪಾತ್ರ ಏನೇನೂ ಇರಲಿಲ್ಲ. ಸಾಲದ್ದಕ್ಕೆ ನಮ್ಮ ದುಷ್ಮನ್‌ಗಳಾದ ರಾಮ ಮತ್ತು ಲಕ್ಷ್ಮಣರಿಗೆ ಜಡೇಜಾ ಮಂಡ್ಯದಲ್ಲಿ ಶೆಲ್ಟರ್ ಕೊಡುತ್ತಿದ್ದ. ಜಡೇಜಾನ ಕೊಲೆ ಕೇಸಿನಲ್ಲಿ ಅಶೋಕ್ ಪೈ ಅರೆಸ್ಟಾಗಿದ್ದು ನಿಜ ಆದ್ರೂ ಆತನಿಂದ ಸುಪಾರಿ ಪಡೆದು ಜಡೇಜಾನನ್ನು ಕೊಲ್ಲಿಸೋಕೆ ನನಗೆ ಕಾರಣವೇ ಇಲ್ಲ.



ಲಿಕ್ಕರ್ ರಂಗಸ್ವಾಮಿ ಮಗ ಮಹೇಶನ ಹತ್ಯೆ ವಿರುದ್ಧ ನಾನೇ ಅಶೋಕ್ ಪೈಗೆ ಆವಾಜ್ ಹಾಕಿದ್ದೆ. ಏಕೆಂದರೆ ಪೊಲೀಸರು ಅನ್ಯಾಯವಾಗಿ ಆ ಕೇಸಲ್ಲಿ ಕಳ್ಳಾ ಜಗ್ಗನ ಹೆಸರನ್ನು ಸೇರಿಸಿಬಿಟ್ರು. ಮಹೇಶ್ ಕೊಲೆ ಪ್ರಕರಣದಲ್ಲಿ ಬೆಂಗಳೂರಿನ ಯಾರೊಬ್ಬರ ಕೈವಾಡವೂ ಇಲ್ಲ ಅನ್ನೋದು ಮಂಡ್ಯ ಪೊಲೀಸರಿಗೆ ಚೆನ್ನಾಗಿ ಗೊತ್ತು. ಮಹೇಶನ ಕೊಲೆ ಕೇಸಲ್ಲೂ ಅನ್ಯಾಯವಾಗಿ ನನ್ನನ್ನು ಮೊದಲ ಆರೋಪಿಯನ್ನಾಗಿ ಮಾಡಿಬಿಟ್ರು. ಹಾಗೊಮ್ಮೆ ಮಹೇಶನ ಕೊಲೆ ಕೇಸಲ್ಲಿ ನನ್ನ ಪಾತ್ರ ಇದ್ದಿದ್ದೇ ಆದರೆ ಅಪ್ಪ ಲಿಕ್ಕರ್ ರಂಗಸ್ವಾಮಿ ನನ್ನ ವಿರುದ್ಧ ದೂರು ಕೊಡಬೇಕಿತ್ತು, ಏಕೆಂದರೆ ಅದರಲ್ಲಿ ನನ್ನ ಪಾತ್ರ ಇಲ್ಲ ಅನ್ನೋದು ಸ್ವತಃ ರಂಗಸ್ವಾಮಿಗೆ ಚೆನ್ನಾಗಿ ಗೊತ್ತಿತ್ತು.

ಚೀರನಹಳ್ಳಿ ಚೇತು ಆಗಲಿ, ಶಿವರಾಮನ ಫ್ಯಾಮಿಲಿಯವರಾಗಲಿ; ಅವರಿಗೇ ಖರ್ಚಿಗೆ ಕಾಸಿರಲಿಲ್ಲ, ಇನ್ನು ಸುಪಾರಿ ಕೊಟ್ಟು ಕೊಲ್ಲಿಸೋದು ಎಲ್ಲಾದರೂ ಉಂಟಾ? ಜಡೇಜಾನ ಕೊಲೆಕೇಸಿಗೆ ಕೋರ್ಟ್‌ಗೆ ಬಂದಿದ್ದ ಜಾನಿ ಜೊತೆ ಮಂಡ್ಯಕ್ಕೆ ಬಂದಿದ್ದ ಗಿರೀಶ ಆತನ ಕಾರಿನ ಡ್ರೈವರು. ಹೇಮಂತ ಜಡೇಜಾನ ಕೊಲೆ ಕೇಸಿನಲ್ಲಿದ್ದ. ಸತೀಶ, ಯೋಗೀಶ, ಮಂಜುನಾಥ, ರಾಜೇಶ ಮುಂತಾದವರೆಲ್ಲ ಜಾನಿಯ ಮನೆಯ ಕೆಲಸದ ಹುಡುಗರೇ ಹೊರತು ನನ್ನ ಹುಡುಗರಲ್ಲ. ಅವತ್ತು ನಾನ್ಯಾಕೆ ಕೋರ್ಟ್‌ಗೆ ಬಂದಿರಲಿಲ್ಲ ಅಂದ್ರೆ, ಅದೇ ದಿನ ತುಮಕೂರು ಸರ್ಕಾರಿ ಆಸ್ಪತ್ರೆಯಲ್ಲಿ ನನ್ನ ಕೈ ಆಪರೇಷನ್ ಇತ್ತು. ಮಚ್ಚನ ಕೊಲೆ ನಡೆದಾಗ ನನ್ನ ಕೈಗೆ ಪೆಟ್ಟಾಗಿ ಅವತ್ತು ಹಾಕಿದ್ದ ರಾಡ್ ತೆಗೀಬೇಕಿತ್ತಲ್ಲ; ಆ ಕಾರಣಕ್ಕೆ ನಾನು ಅವತ್ತು ಮಂಡ್ಯಕ್ಕೆ ಬರಲು ಆಗಲಿಲ್ಲ.


ನಾನು ಕೋರ್ಟ್‌ಗೆ ಬರಲಿಲ್ಲ ಎಂಬ ಕಾರಣಕ್ಕೆ ನಾನೇ ಜಾನೀನ ಪೊಲೀಸರಿಗೆ ಹಾಕಿಕೊಟ್ಟೆ ಅಂತ ಯಾರಾದರೂ ಲೆಕ್ಕ ಹಾಕಿದ್ರೆ ಅದೂ ಕೂಡ ಅವರ ಮುಠ್ಠಾಳತನವಲ್ಲದೇ ಮತ್ತೇನಲ್ಲ. ಹಾಗೇ ಜಾನೀನ ಜೈಲಿಗೆ ಬರೋ ಹಾಗೆ ಮಾಡಿಕೊಂಡು ನಾನು ಮಂಡ್ಯದ ಪೈನ ಕೊಲ್ಲಿಸ್ತೀನಿ ಅಂತ ಯಾರಿಗೆ ಕನಸು ಬಿದ್ದಿದೆಯೋ ಗೊತ್ತಿಲ್ಲ. ಪೈನ ಈತನಕ ನಾನು ನೋಡೇ ಇಲ್ಲ. ನಾನು ಚಿತ್ರದುರ್ಗ ಜೈಲಿನಲ್ಲಿದ್ದಾಗ ಆತ ಹಾಸನ ಜೈಲಿನಲ್ಲಿದ್ದ. ಅನಂತರ ನಾನು ಬೆಂಗಳೂರಿನ ಜೈಲಿಗೆ ಬಂದೆ. ಆಗ ಪೈ ಚಾಮರಾಜನಗರ ಜೈಲಿಗೆ ಹೋಗಿ ಅಲ್ಲಿಂದ ರಾಮನಗರ ಜೈಲಿಗೆ ಬಂದಿದ್ದ. ನಾನು ಬಳ್ಳಾರಿ ಜೈಲಿನಲ್ಲಿದ್ದಾಗ ಆತ ಮಂಡ್ಯ ಜೈಲಿನಲ್ಲಿದ್ದ. ಈಗ ನಾನು ತುಮಕೂರು ಜೈಲಿನಲ್ಲಿದ್ದೇನೆ. ಪೈ ಮೈಸೂರು, ಗುಲ್ಬರ್ಗಾ ಜೈಲಿಗೆ ಹೋಗಿ ಮತ್ತೆ ಹಾಸನ ಜೈಲಿಗೆ ಬಂದಿದ್ದಾನಂತೆ. ಒಂದೇ ಒಂದು ದಿನ ನಾನಾಗಲಿ ಅವನಾಗಲಿ ಒಂದೇ ಜೈಲಿನಲ್ಲಿರಲಿಲ್ಲ ಎಂದ ಮೇಲೆ, ನನಗೂ ಆತನಿಗೂ ಮಾತಿರಲಿ ಪರಿಚಯ ಕೂಡ ಇಲ್ಲ ಎಂದ ಮೇಲೆ ನಾನು ಯಾವ ಕಾರಣಕ್ಕೆ ಮಂಡ್ಯದ ಪೈಯನ್ನ ಕೊಲ್ಲಿಸಬೇಕು?

ಇರೋದೇ ಜೈಲು ಅಂದಮೇಲೆ ಅಲ್ಲಿ ಇನ್ನೆಂಥಾ ಖರ್ಚು ಬರುತ್ತೆ ಮತ್ತು ಜೈಲಲ್ಲಿ ಕೂತು ಹೇಗೆ ಕಾಸು ದುಡಿಯಲು ಸಾಧ್ಯ? ನೋಡಿ ಸಾರ್, ಇದೆಲ್ಲಾ ನನ್ನ ವಿರೋಧಿಗಳು ನಡೆಸ್ತಿರೋ 'ಅಪಪ್ರಚಾರ'. ಸತ್ಯ ಏನು ಅನ್ನೋದು ಸಿಸಿಬಿ ಪೊಲೀಸರಿಗೆ ಚೆನ್ನಾಗಿ ಗೊತ್ತು. ನನಗೆ ನನ್ನ ಉಸಾಬರಿಯೇ ಸಾಕಷ್ಟಿದೆ. ಅದನ್ನು ಬಿಟ್ಟು ಜೈಲಲ್ಲಿ ಕೂತು ಸುಪಾರಿ ಕೊಲೆಗಳನ್ನು ಮಾಡಿಸುತ್ತಾ ಹೋದೆ ಅಂದ್ರೆ ಏನೂ ಇಲ್ಲದೇ ಸುಮ್ಮನೇ ಯಾರ್‍ಯಾರದೋ ಕೊಲೆ ಕೇಸಿಗೆ ನನ್ನ ಹೆಸರು ಸೇರಿಸೋ ಪೊಲೀಸರು ನಿಜಕ್ಕೂ ಮಾಡಿಸಿದ್ರೆ ಬಿಡುತ್ತಾರಾ? ಸತ್ಯ ಇವತ್ತಲ್ಲಾ ನಾಳೆ ಹೊರಗೆ ಬರಲೇಬೇಕಲ್ಲವೇ?

ಇದು ಕೋತಿರಾಮನ ಮಾತು. ಅದರ ಸತ್ಯಾಸತ್ಯತೆಯನ್ನು ನಿರ್ಧರಿಸುವವರು ಪೊಲೀಸರು. ಅದು ಬಿಟ್ಟು ಊಹಾಪೋಹದ ಕತೆ ಹೊಡೆದರೆ ಅದರಿಂದ ಅಂಡರ್‌ವರ್ಲ್ಡ್‌ನ ಯಾವ ಕಡ್ಡಿಯಾದರೂ ಅಲ್ಲಾಡಲು ಸಾಧ್ಯವೇ? ●

ಮೇಯರ್ ಚೇಲಾಗಳ ವಸೂಲಿ ಹಾವಳಿ

...ಮೇಯರ್ ಎಸ್.ಕೆ.ನಟರಾಜ್ ...ಅದ್ಯಾವ ಕಾಮಾಲೆಯೋ ಗೊತ್ತಿಲ್ಲ, ...ಕೆಯಲ್ಲಿರುವ ಸಜ್ಜನರು, ದಕ್ಷರು ...ತ್ತ ನಿಷ್ಠುರಿಗಳ್ಯಾರೂ ಮೇಯರ್ ...ೇಬರ ಕಣ್ಣಿಗೆ ಬೀಳುತ್ತಿಲ್ಲ ಅಥವಾ ...ಯವರು ಅವರಿಗೆ ಬೇಕಾಗಿಲ್ಲ. ...ರ ಪ್ರತಿಫಲವೆಂಬಂತೆ ಪಾಲಿಕೆ ಹೆಗ್ಗಣ ...ದ ರೋಲ್‌ಕಾಲ್‌ವೀರ ಗುಂಡಪ್ಪ, ...ಗಸ್ ಬಿಲ್ ಪ್ರವೀಣ ರಾಜಣ್ಣ, ...ಕಾಸು ಖದೀಮ ಷಣ್ಮುಗಂ, ...ರ್ಟ್ವೆಂಟಿ ಲಿಂಗಯ್ಯ ಮತ್ತು ಕಲೆಕ್ಷನ್ ...ಪ್ಪನೆಂದೇ ಕುಖ್ಯಾತನಾಗಿರುವ ...ರಾಜು ಥರದವರೆಲ್ಲ ನಟರಾಜ್ ...ಸಹಾಯಕರಾಗಿದ್ದು-



...ಒಂದೇ ಬುಟ್ಟಿಗೆ ಬಿದ್ದ ಹಾವುಗಳಲ್ಲೇ ಪರಸ್ಪರ ಕಚ್ಚಾಟವಾದಂತೆ ...ಗೆ-ವಸೂಲಿಗಿಳಿದ ಇಂಥ ಚೇಲಾಗಳೇ ಕ್ರಮೇಣ ಕಿತ್ತಾಡಿಕೊಂಡರು. ...ಕಾಸು ಷಣ್ಮುಗಂ ಮತ್ತು ಫೋರ್‌ಟ್ವೆಂಟಿ ಲಿಂಗಯ್ಯನ ...ದ್ಧ ಗುಂಡಪ್ಪ ಮತ್ತು ರಾಜಣ್ಣ ಚಾಡಿ ಚುಚ್ಚಿ ಅವರಿಬ್ಬರನ್ನೂ ...ಯರ್ ಛೇಂಬರಿನಿಂದಲೇ ಹೊರದಬ್ಬಿಬಿಟ್ಟರು. ಇಷ್ಟಾದ ...ತರವಾದರೂ ಮೇಯರ್ ಪಾಳೆಯದಲ್ಲಿ ನೆಮ್ಮದಿ ...ಸಬೇಕಿತ್ತಲ್ಲವೆ?

...ಹಾಗಾಗಿಲ್ಲ. ಸಾಕಿದ ಸರ್ಪವೇ ತಿರುತಿರುಗಿ ಕಚ್ಚಿದಂತೆ ...ಚೇಲಾಗಳೇ ಮೇಯರ್ ಪಾಲಿಗೆ ತಲೆನೋವಾಗುತ್ತಿದ್ದಾರೆ. ...ಪೈಕಿ ಪಿ.ಎ. ಗುಂಡಪ್ಪ ಅದ್ಯಾವ ವೇಗದಿಂದ ವಸೂಲಿಗಿಳಿದಿದ್ದಾನೆಂದರೆ, ಮೊನ್ನೆಯಷ್ಟೇ ಪಾಲಿಕೆಯ ಮುಖ್ಯ ಆರೋಗ್ಯಾಧಿಕಾರಿ ಗಾಯಿತ್ರಿಯವರ ಛೇಂಬರಿಗೆ ನುಗ್ಗಿದ್ದೇ ನೇರಾನೇರ ಹತ್ತು ಲಕ್ಷದ ರೋಲ್‌ಕಾಲ್ ಪ್ರಸ್ತಾಪ ಮಂಡಿಸಿದ್ದಾನೆ. 'ಅಲ್ರೀ; ಮೇಯರ್‌ಗೆ ನಾನ್ಯಾಕ್ರೀ ಮಂತ್ಲಿ ಕೊಡಬೇಕು? ನಾನೇನು ಲಂಚಾ ತಿಂತಿದೀನಾ ಅಥವಾ ಡಕಾಯಿತಿ ಮಾಡ್ತಿದ್ದೀನಾ? ಇಂಥಾ ಕೆಲ್ಸ ಮಾಡೋ ಬದಲು ಹೋಗಿ ಎಲ್ಲಾದ್ರೂ ಭಿಕ್ಷೆ ಬೇಡ್ರೀ. ಗೆಟ್‌ಔಟ್....!' ಎಂದಿದ್ದೇ ಗುಂಡಪ್ಪನ ಮುಖಕ್ಕೆ ಉಗಿದಿದ್ದಾರೆ ಗಾಯಿತ್ರಿ. ಬಂದಷ್ಟೇ ವೇಗವಾಗಿ ಮುಖ್ಯ ಆರೋಗ್ಯಾಧಿಕಾರಿಗಳ ಛೇಂಬರಿನಿಂದ ಹೊರಬಿದ್ದ ಗುಂಡಪ್ಪ ಅಷ್ಟಕ್ಕೇ ಸುಮ್ಮನಾಗಲಿಲ್ಲ. ಇದಾಗಿ ಮೂರೇ ದಿನಕ್ಕೆ ಗಾಯಿತ್ರಿಯವರ ಪಿ.ಎ. ಪ್ರಸನ್ನನನ್ನು ಎತ್ತಂಗಡಿ ಮಾಡಿಸಿಬಿಟ್ಟ. ಕಾರಣ, ಪ್ರಸನ್ನನೇ ನಿಂತು ಗಾಯಿತ್ರಿಯವರಿಂದ ಮಂತ್ಲಿ ಕೊಡಿಸಬೇಕಿತ್ತಂತೆ. ಆದಕ್ಕೇ ಈ ಶಿಕ್ಷೆಯಂತೆ!

ಗಾಬರಿಬಿದ್ದ ಪ್ರಸನ್ನ ಸೀದಾ ಹೋಗಿದ್ದೇ ಮೇಯರ್ ಕಾಲಿಗೆ ಬಿದ್ದು ಕಣ್ಣೀರಿಟ್ಟಿದ್ದಾನೆ. ನಾನು ತಾನೇ ಎಲ್ಲಿಂದ ರೋಲ್‌ಕಾಲ್ ಕೊಡಲಿ? ಎಂದು ದಮ್ಮಯ್ಯಗುಡ್ಡೆ ಹಾಕಿದ ಪ್ರಸನ್ನನ ಪೇಚಾಟ ಕಂಡ ಮೇಯರ್‌ಗೆ ಕರುಳು ಚುರ್ರೆಂದಿರಬೇಕು. ತಾವೇ ಮಾಡಿದ ಎತ್ತಂಗಡಿ ಆದೇಶವನ್ನು ಮೂರೇ ದಿನಕ್ಕೆ ಹಿಂತೆಗೆದುಕೊಂಡು ಪ್ರಸನ್ನನನ್ನು ಮತ್ತೆ ಅದೇ ಜಾಗಕ್ಕೆ ಹಾಕಿದ್ದಾರೆ.



ಅಲ್ಲಿಗೆ ಗುಂಡಪ್ಪನ ವಿಧ್ವಂಸಕ ಕೃತ್ಯಕ್ಕೇನೋ ತೆರೆಬಿತ್ತು ...ಡ. ಆದರೆ ಹಾವಳಿ ಮಾತ್ರ ನಿಂತೇ ಇಲ್ಲ. ಯಾವ್ಯಾವ ಅಧಿಕಾರಿ ಎಷ್ಟೆಷ್ಟು ಕಮಾಯಿಸುತ್ತಾನೆ? ಆತನಿಗೆ ಏನು ಮಾಡಿದರೆ ಎಲ್ಲಿ ದುಡ್ಡು ಉದುರುತ್ತೆ? ಯಾರಿಂದ ಎಷ್ಟು ಕಿತ್ತು ಎಲ್ಲಿಗೆ ಹಾಕಿದರೆ ಎಷ್ಟು ಮಂತ್ಲಿ ಗಿಟ್ಟುತ್ತದೆ? ಯಾವ ಫೈಲನ್ನು ತರಿಸಿಕೊಂಡು ಕೊಕ್ಕೆ ಹಾಕಿದರೆ ಎಷ್ಟು ಬಾಚಬಹುದು? ಇತ್ಯಾದಿ ಸುಲಿಗೆಯ ನಾನಾ ವೆರೈಟಿಗಳನ್ನು ಮೇಯರ್ ತಲೆಗೆ ತುಂಬುವವನು ಇದೇ ಗುಂಡಪ್ಪ. ಈತನ ಎತ್ತುವಳಿ ತಾಕತ್ತನ್ನು ಕಂಡೇ ನಿವೃತ್ತಿಯಾದ ನಂತರವೂ ತಮ್ಮ ಆಪ್ತನನ್ನಾಗಿ ನಟರಾಜ್ ನೇಮಿಸಿಕೊಂಡಿದ್ದಾರೆಂದರೆ ಗುಂಡಪ್ಪನ ಕೈಚಳಕ ಇನ್ನೆಷ್ಟಿರಬೇಡ?



ಕೆಲ ತಿಂಗಳ ಹಿಂದೆ ತನ್ನ ಮಗನ ಮದುವೆ ಪೂರೈಸಿದ ಗುಂಡಪ್ಪ ಅದಕ್ಕೊಂದು ಮಾಡಿದ ಖರ್ಚೇ ಕೋಟಿ ದಾಟಿತ್ತು. ಇನ್ನು ರಾಜಣ್ಣನದು ಯಾಪಾಟಿ ಹಾವಳಿಯೆಂದರೆ, ಈತನ ತಲೆಕಂಡರೆ ಸಾಕು ಪಾಲಿಕೆಯ ಅಧಿಕಾರಿಗಳೆಲ್ಲ ಎದ್ದೂ ಬಿದ್ದು ಓಡಿಹೋಗುತ್ತಾರೆ. ಇವರಿಬ್ಬರ ಕಾಟ ಸಾಲದೆಂಬಂತೆ ಮೇಯರ್ ಸಾಹೇಬರ ಮಿಡಿಯಾ ಅಧಿಕಾರಿಯೆಂದು ಕಲೆಕ್ಷನ್ ಲಿಂಗರಾಜು ಅಟಕಾಯಿಸಿಕೊಳ್ಳುತ್ತಾನೆ.



ಇಂಥ ಸುಲಿಗೆಕೋರ ಪಿ.ಎ.ಗಳು, ಚೇಲಾಗಳನ್ನಿಟ್ಟುಕೊಂಡು ಬೆಂಗಳೂರನ್ನು ಉದ್ಧಾರ ಮಾಡ್ತೀನಿ ಎನ್ನುವ ಮೇಯರ್ ಮಾತಿಗೆ ಏನಾದರೂ ಅರ್ಥವುಂಟೆ? ಯಾವ ಅಧಿಕಾರಿ ತಾನೇ ಲಂಚ ಹೊಡೆಯದೇ ಪಾಲಿಕೆಯಲ್ಲಿ ಉಳಿಯಲು ಸಾಧ್ಯ?

● ರಾ. ಸೋ.

ಮಲೆನಾಡು: ಮಳೆ, ಕಪ್ಪೆ, ಮೀನು ಮತ್ತು ಉಭಯವಾಸಿ ಮನುಷ್ಯರು....

ವಿಶೇಷ ಲೇಖನ

• ಕಲ್ಕುಳಿ ವಿಠಲ ಹೆಗ್ಗಡೆ

ಮಲೆನಾಡಿನ ಹೃದಯಭಾಗದಂತಿರುವ ನನ್ನೂರಿನಲ್ಲಿ ಮಳೆಗಾಲದಲ್ಲಿ ಹೆಚ್ಚೆಂದರೆ 250 ಇಂಚು ಮಳೆ ಬೀಳುತ್ತದೆ. ಇಲ್ಲಿ ಬರಗಾಲ ಅಂದರೆ ಕನಿಷ್ಠ 120ರಿಂದ 130 ಇಂಚು ಮಳೆ ಬೀಳುತ್ತದೆ. ಈ ಕಾರಣಕ್ಕೆ ಇರಬೇಕು ಮಲೆನಾಡಿನವರೆಂದರೆ ಮಳೆನಾಡಿನವರು ಅಂತಲೇ ಜನ ಭಾವಿಸಿದ್ದಾರೆ. ಇಲ್ಲಿ ಇಷ್ಟೊಂದು ಮಳೆ ಬೀಳುವುದರಿಂದ ಇಲ್ಲಿನ ನಾವು ಒಂಥರಾ ಭೂಚರ ಹಾಗೂ ಜಲಚರಗಳ ರೀತಿ ಉಭಯ ವಾಸಿಗಳಿದ್ದಂತೆ ಎಂದರೆ ಅದು ಉತ್ಪ್ರೇಕ್ಷೆ ಅಲ್ಲ.

ನಮ್ಮಲ್ಲಿ ಬೀಳುವ ಮಳೆಯದೊಂದು ಲೆಕ್ಕಾಚಾರ ಕೊಡುತ್ತೇನೆ. ಒಂದು ಎಕರೆ ಪ್ರದೇಶದಲ್ಲಿ ಒಂದು ಇಂಚು ಮಳೆ ಬಿದ್ದಿತು ಅಂದರೆ ಕನಿಷ್ಠ 80 ಸಾವಿರ ಲೀಟರು ನೀರು ಬಿದ್ದಿತು ಎಂದೇ ಅರ್ಥ. ಒಂದು ಎಕರೆ ಪ್ರದೇಶ ಅಂದರೆ ಅದು ಸುಮಾರು 40-42 ಸಾವಿರ ಚದರ ಅಡಿ. ಅಂದರೆ ಒಂದು ಚದರ ಅಡಿ ಪ್ರದೇಶದ ಮೇಲೆ ಎರಡು ಲೀಟರ್ ನೀರು ಬಿದ್ದದ್ದಕ್ಕೆ ಸಮಾನ. ಅಕಸ್ಮಾತ್ ಒಂದು ಮಳೆಗಾಲದಲ್ಲಿ 250 ಇಂಚು ಮಳೆ ಬಿತ್ತು ಅಂತಿಟ್ಟುಕೊಂಡರೆ ಅಲ್ಲಿಗೆ ಒಂದು ಚದರ ಅಡಿ ಪ್ರದೇಶದ ಮೇಲೆ ಸುಮಾರು 500 ಲೀಟರ್ ನೀರು ಬಿದ್ದಂತೆಯೇ!

ಇನ್ನೊಂದು ಲೆಕ್ಕಾಚಾರ ಹೀಗಿದೆ: ಒಂದಡಿಗೆ ಹನ್ನೆರಡಿಂಚು, 250 ಇಂಚು ಮಳೆ ಬಿತ್ತೆಂದರೆ ಹತ್ತಿರಹತ್ತಿರ 20 ಅಡಿ ನೀರು ಬಿದ್ದಂತೆ. ನೀವು ಈಗ 20 ಅಡಿ ನೀರಿನ ಆಳವನ್ನು ಊಹಿಸಿಕೊಳ್ಳಿ. ಇಲ್ಲಿ ಬಿದ್ದ ಮಳೆ ನೀರು ಹರಿದುಹೋಗದಿದ್ದರೆ ಮಲೆನಾಡಿನವರಾದ ನಾವೆಲ್ಲ ಇಪ್ಪತ್ತು ಅಡಿ ಆಳದ ನೀರಿನಲ್ಲಿ ಮುಳುಗಿರುತ್ತಿದ್ದೆವು. ಈಗ ಹೇಳಿ, ನಾವು ಜಲಚರಗಳಂತೆ ಅಲ್ಲವೇ?!

ಆದರೆ ಅಪೆಷ್ಟೇ ಮಳೆ ಬಿದ್ದರೂ ನಮ್ಮ ಕಾಡುಗುಡ್ಡಗಳಿಗೆ ಇಲ್ಲಿ ಬೀಳುವ ಮಳೆ ನೀರಿನಲ್ಲಿ ಅರ್ಧಕ್ಕಿಂತ ಹೆಚ್ಚನ್ನು ಇಂಗಿಸಿಕೊಳ್ಳುವ ಶಕ್ತಿ ಇದೆ. ಆದರೆ ಅದು ಪರಿಸರ ಸಹಜವಾದ ಜಾಗದಲ್ಲಿ ಮಾತ್ರ ಸಾಧ್ಯ. ನಮ್ಮ ಕಾಡಿನ ಒಂದೊಂದು ಮರವು ಸಾವಿರಾರು ಲೀಟರ್ ನೀರನ್ನು ತಮ್ಮ ಬೇರುಗಳ ಮೂಲಕ ಭೂಮಿಗೆ ಇಳಿಸಿ, ವರ್ಷವಿಡೀ ಹೊಳೆಹಳ್ಳಗಳು ಹರಿಯುವಂತೆ ಮಾಡುತ್ತವೆ. ಅದಕ್ಕೆ ನಮ್ಮ ಗುಡ್ಡಗಳಿಗೆ ನಾನು 'ಓವರ್ ಹೆಡ್ ಟ್ಯಾಂಕು' ಅಂಥ ಕರೆಯೋದು.

ಮಲೆನಾಡಿನ ಮಳೆಯನ್ನು ಅನುಭವಿಸಿಯೇ ನೋಡಬೇಕು. ಅನಾದಿಕಾಲದಿಂದ ಇಲ್ಲಿ ಒಂದು ಮಾತು ಚಾಲ್ತಿಯಲ್ಲಿದೆ. ಅದೇನೆಂದರೆ: 'ಜೂನ್ 10ಕ್ಕೆ ಹೊಳೆಗೆ ದೋಣಿ ಹಾಕಲಿಲ್ಲ ಅಂದರೆ ಆ ವರ್ಷ ಬರಗಾಲ ಖಾತ್ರಿ' ಅಂತ. ಆದರೆ ಅನೇಕ ಬಾರಿ ಜೂನ್ ಹತ್ತರ ಆಸುಪಾಸಿನಲ್ಲಿಯೇ ಇಲ್ಲಿ ಮಳೆಗಾಲ ಶುರುವಾಗುತ್ತದೆ.

ಮಲೆನಾಡಿನ ಎಲ್ಲಾ ಚಟುವಟಿಕೆಗಳನ್ನು ನಿರ್ಧರಿಸುವುದು ಮಳೆಯೇ. ಮನೆ ಜೋಪಾನ ಮಾಡಿಕೊಳ್ಳುವುದರಿಂದ ಹಿಡಿದು ಗದ್ದೆಗೆ ಬೀಜ, ಮದುವೆ ಮುಂಜಿ, ಹರಕೆಯಂಥ ಎಲ್ಲಾ ವಿಶೇಷಗಳು ಮಳೆಗಾಲ ಹಿಡಿಯುವುದಕ್ಕೆ ಮುಂಚೆಯೇ ಮುಗಿಯಬೇಕು. ಇಲ್ಲಿನ ಸಾಹಸ ಕೆಲಸವೆಂದರೆ 60 ಅಡಿಗಳಿಗಿಂತಲೂ (ಅಂದರೆ ಸಣ್ಣ ಗಾತ್ರದ!) ಹೆಚ್ಚು ಎತ್ತರವಿರುವ ಅಡಿಕೆ ಮರಗಳಿಗೆ ಔಷಧಿ ಹಾಕುವುದು. ಮಳೆಗಾಲಕ್ಕೆ ಮುಂಚೆ ತೋಟದಲ್ಲಿ ನೀರಿರುವುದಿಲ್ಲ, ಆದ್ದರಿಂದ ಮಳೆ ಬೀಳುವ ಮುನ್ನ ಔಷಧಿ ಹೊಡೆದರೂ ಏನು ಪ್ರಯೋಜನವಿಲ್ಲ. ಆ ಔಷಧಿಯ ಪವರ್ ಹೆಚ್ಚಾಗಿರುವುದು 45 ದಿನಗಳ ಕಾಲ, ಪ್ರತಿ ದಿನ, ಕನಿಷ್ಠ 50 ಇಂಚು ಮಳೆ ಬಿದ್ದಾಗಲೇ.

ಹೀಗೆ ಜೂನ್ ಹತ್ತರ ಸಮೀಪ ಮಳೆಗಾಲ ಶುರುವಾಗಿ ನಾವು ಮತ್ತೆ ಸೂರ್ಯನನ್ನು ನೋಡಬೇಕೆಂದರೆ ಆಗಸ್ಟ್ 15ರ ತನಕ ಕಾಯಬೇಕು. ಮಲೆನಾಡಲ್ಲಿ ಮಳೆ ಹೇಗೆ ಬರುತ್ತೆ ಅಂದರೆ ಮೊದಲು ಕಪ್ಪುಬಿಳುಪು ಟಿವಿ ಸೆಟ್‌ಗಳಿದ್ದಾಗ ಟಿವಿ ಟವರ್‌ನಿಂದ ಪ್ರಸಾರ ಕಟ್ ಆದಾಗ ಟಿವಿ ಪರದೆಯ ಮೇಲೆ ಕಪ್ಪು ಬಿಳುಪಿನ ಚುಕ್ಕೆಗಳು ಕಾಣಿಸುತ್ತಿದ್ದವಲ್ಲ, ಆ ದೃಶ್ಯದಂತೆಯೇ ಇರುತ್ತದೆ ಇಲ್ಲಿನ ಮಳೆಯ ದೃಶ್ಯ ಕೂಡ.



ಒಂದು ಮಳೆ ಜೋರಾಗಿ ಬಂದುಹೋಗುತ್ತಿದ್ದಂತೆಯೇ ತಾನೇನು ಕಡಿಮೆ ಎಂಬಂತೆ ಇನ್ನೊಂದು ಮಳೆ ಶುರುವಾಗುತ್ತದೆ. ನಾನು ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದಾಗ ಸಮಾಜ ಪಾಠದಲ್ಲಿ ವರ್ಷದಲ್ಲಿ ಎರಡು ಕಾಲ ಇರುತ್ತದೆ ಎಂದು ಹೇಳಲಾಗಿತ್ತು, ಅವುಗಳೆಂದರೆ ಬೇಸಿಗೆ ಕಾಲ ಮತ್ತು ಚಳಿಗಾಲ. ಆದರೆ ಮಲೆನಾಡಿನವರಾದ ನಮ್ಮ ಜೊತೆ ಮಳೆಗಾಲವೆ ಹತ್ತಿರ್ಹತ್ತಿರ ಆರು ತಿಂಗಳುಗಳ ಕಾಲ ಇರುತ್ತಿತ್ತು, ಆದರೆ ನಮ್ಮ ಪಠ್ಯಪುಸ್ತಕದಲ್ಲಿ ಮಳೆಗಾಲದ ಪ್ರಸ್ತಾಪವೇ ಇರುತ್ತಿರಲಿಲ್ಲ! ಈ ಮಳೆಗಾಲದಿಂದಾಗಿ ನಮಗೆ ವರ್ಷದಲ್ಲಿ 3-4 ಬಾರಿಯಾದರೂ ರಜೆ ಸಿಗುತ್ತಿತ್ತು ಅಥವಾ ನಾವೇ ಜಾರಿಬಿದ್ದು ಮೈ ಬಟ್ಟೆ ಒದ್ದೆ ಮಾಡಿಕೊಂಡೊ, ಸೂಡಕ್ಕೆ ಕೊಡೆ ಕಂಬ್ಳಿ ಇಲ್ಲ ಎಂದೋ ಒಂದಷ್ಟು ದಿನ ರಜೆ ಗಿಟ್ಟಿಸಿಕೊಳ್ಳುತ್ತಿದ್ದೆವು.

ಮಲೆನಾಡಿನಲ್ಲಿ ಬರಿ ಮಳೆ ಮಾತ್ರ ಪ್ರಮುಖವಲ್ಲ, ಇಲ್ಲಿನ ಏಲಕ್ಕಿ, ಕರಿಮೆಣಸಿನಂಥ ಸಾಂಬಾರು ಬೆಳೆಗೆ ಬ್ರಿಟಿಷರಾದಿಯಾಗಿ ಬಹಳಷ್ಟು ವಿದೇಶಿಯರು ಮಲೆನಾಡಿನ ಘಟ್ಟವನ್ನು ಹುಡುಕಿಕೊಂಡು ಬಂದವರು. ಪೂರ್ವಕಾಲದಲ್ಲಿ ಬ್ರಿಟಿಷರ ನಾಡಿನಲ್ಲಿ ನಮ್ಮ ದೇಶದ ಬಗ್ಗೆ ಒಂದು ಕಥೆ ಇತ್ತಂತೆ. ಆ ಕತೆಯ ಸಾರಾಂಶ: "ಭೂಮಿಯ ಮೇಲೆ ಸ್ವರ್ಗದಂಥ ಒಂದು ನಾಡಿದೆ. ಅಲ್ಲಿ ಕಾಡೆಲ್ಲ ಹೂವು ಹಣ್ಣುಗಳಿಂದ ತುಂಬಿ ಸುಗಂಧಮಯವಾಗಿದೆ. ಅಲ್ಲಿನ ಎಲ್ಲಾ ಗಿಡಗಳು ಔಷಧಿಗೆ ಬರುತ್ತವೆ." ಈ ಕಾರಣಕ್ಕೆ ವಿದೇಶಿಯರು ಪ್ರಪಂಚವನ್ನೆಲ್ಲಾ ತಡಕಾಡಿ, ಸಮುದ್ರ ದಂಡೆಯಲ್ಲಿ ಸಿಕ್ಕ ಊರುಗಳನ್ನೆಲ್ಲ 'ಇಂಡಿಯ' ಅಂಥ ಕರೆದದ್ದು!

ಜಗತ್ತಿನ ಬಹುತೇಕ ಎಲ್ಲ ಗಿಡಗಳು ವಸಂತಕಾಲದಲ್ಲಿ ಹೂ ಬಿಡುತ್ತವೆ. ಆದರೆ ಈ ಏಲಕ್ಕಿ, ಕಾಳುಮೆಣಸು ಇತ್ಯಾದಿ ಮಲೆನಾಡಿನ ಘಟ್ಟ ಗಿಡಗಳು ಹೂ ಬಿಡಲು ಮಳೆಗಾಲವೇ ಶುರುವಾಗಬೇಕು. ಮಾತ್ರವಲ್ಲ ಮಳೆಗಾಲ ಹದವಾಗಿರಬೇಕು.


ಇನ್ನು ನಮ್ಮ ಜೊತೆ ಇಲ್ಲಿ ಬದುಕುವ ಕಪ್ಪೆ, ಏಡಿ, ಮೀನುಗಳಂತೂ ಮಳೆಗಾಲ ಶುರುವಾದ ನಂತರವೇ 'ಜೀವದ್ರವ'ವನ್ನು ಸುರಿಸಲು ಪ್ರಾರಂಭಿಸುವುದು. ಮಲೆನಾಡನ್ನು 'ಮಳೆನಾಡು', 'ಮಳೆಕಾಡು' ಅಂತೆಲ್ಲ ಕರೆಯುತ್ತಾರೆ. ಅದರ ಜೊತೆ 'ಕಪ್ಪೆಗಳ ನಾಡು' ಅಂತ ಕರೆದರೂ ಸರಿಹೋಗುತ್ತೆ! ಯಾಕೆಂದರೆ ಭಾರತದಲ್ಲಿರುವ ಸುಮಾರು 80 ಕಪ್ಪೆಗಳ ಜಾತಿಗಳಲ್ಲಿ ಕನಿಷ್ಠ 120 ಜಾತಿಯ ಕಪ್ಪೆಗಳು ನಮ್ಮಲ್ಲಿವೆ. ಕೇಜಿಗಟ್ಟಲೆ ತೂಗುವ ಕಪ್ಪೆಗಳಿಂದ ಹಿಡಿದು ಅತಿ ಸಣ್ಣ ಕಪ್ಪೆಗಳೂ ನಮ್ಮಲ್ಲಿವೆ. ಮಳೆಗಾಲ ಹಿಡಿಯುತ್ತಿದ್ದಂತೆ ಹಳ್ಳ ಅಥವಾ ಹೊಳೆಯ ಪಕ್ಕ ಇರುವ ಮನೆಗಳಲ್ಲಿ ಬೇರೆ ಯಾವ ಶಬ್ದವೂ ಕೇಳಿಸುವುದಿಲ್ಲ, ಯಾಕೆಂದರೆ



ಅಲ್ಲಿ ಹಂದಿ, ಕೋಣಗಳಂತೆ ದೊಡ್ಡ ಸ್ವರ ಮಾಡುವ 'ಡ್ಡಾಂಕರ ಕಪ್ಪೆ'ಗಳಿಂದ ಹಿಡಿದು ಹಕ್ಕಿಗಳಂತೆ ಸಂಗೀತ ನುಡಿಸುವ ಕಪ್ಪೆಗಳ ಸದ್ದೇ ತುಂಬಿರುತ್ತದೆ. ಇಲ್ಲಿಯ ತನಕ ಸಂಶೋಧಕರು ಇಲ್ಲಿ ಸುಮಾರು 120 ಜಾತಿಯ ಕಪ್ಪೆಗಳನ್ನು ಪಟ್ಟಿ ಮಾಡಿದ್ದಾರೆ. ಆದರೂ ಈಗಲೂ ಹೊಸ ಹೊಸ ಜಾತಿಯ ಕಪ್ಪೆಗಳು ಸಿಗುತ್ತಿರುತ್ತವೆ. ಇನ್ನೂ ಸಿಗದಿರುವ ಅದೆಷ್ಟು ಜಾತಿಯ ಕಪ್ಪೆಗಳು ಇಲ್ಲಿವೆಯೋ.

ಕಪ್ಪೆಗಳಿಗೆ ಹೋಲಿಸಿದರೆ ಇಲ್ಲಿ ಏಡಿಗಳು ಕಡಿಮೆ. ಆದರೂ ಅವು ಕೇವಲ ಮೂರು ತಿಂಗಳುಗಳಲ್ಲಿ ಉಂಡು ತಿಂದು ಮಜಾ ಮಾಡಿ ಮಕ್ಕಳು ಮರಿ ಮಾಡಿ ಜೀವನದ ಎಲ್ಲಾ ಚಟುವಟಿಕೆಗಳನ್ನು ಮುಗಿಸಿದ ನಂತರ ಒಂಭತ್ತುತಿಂಗಳುಗಳ ಕಾಲ ಉಪವಾಸದೊಂದಿಗೆ ಕುಂಭಕೋಣ ನಿದ್ದೆಗೆ ಜಾರುತ್ತವೆ.

ನಮ್ಮ ಹೊಳೆಗಳೂ ಬೇರೆಲ್ಲಾ ನದಿಗಳಿಗಿಂತ ವಿಶಿಷ್ಟವಾದವು. ಸಾವಿರಾರು ಅಡಿ ಎತ್ತರದ ಘಟ್ಟದ ಮೇಲೆ ಹುಟ್ಟಿ, ಮಣ್ಣಿನಲ್ಲಿ ಬಸಿದು, ಮೆಟ್ಟಲಿಂದ ಮೆಟ್ಟಲು ಇಳಿದಂತೆ ಅಡಿಗಡಿಗೂ ಹಾರಿಹಾರಿ ಈ ಹೊಳೆಗಳು ಹರಿಯುವುದರಿಂದ ಅವು 'ಶ್ರೇಷ್ಠವಾದ ಮಿನರಲ್ ವಾಟರ್' ಆಗಿವೆ. ಅದಕ್ಕೆ ನಮ್ಮ ನೀರಿಗೆ 'ತುಂಗಾ ಪಾನ' ಅಂತ ಹೆಸರು. ಇಲ್ಲಿ ಹುಟ್ಟಿದವರಿಗೆ ಬೇರಾವ ಊರಿನ ನೀರು ರುಚಿಸುವುದೇ ಇಲ್ಲ, ನಮ್ಮ ನದಿಗಳ ನೀರಿಗೆ ಆಮ್ಲಜನಕವನ್ನು ಕರಗಿಸಿ ಕೊಳ್ಳುವ ಶಕ್ತಿ ಜಾಸ್ತಿ. ಮಾಮೂಲಿ ನೀರಿನಲ್ಲಿ ಆಮ್ಲಜನಕದ ಪ್ರಮಾಣ 9



ರಿಂದ 12 ಮಿ.ಲೀಟರ್ ಇದ್ದರೆ ನಮ್ಮ ನದಿಯ ನೀರಿನಲ್ಲಿ 14 ಮಿ.ಲೀ... ಆಮ್ಲಜನಕವಿರುತ್ತದೆ. ಮಾತ್ರವಲ್ಲ ನಮ್ಮ ನದಿಯ ನೀರಿನಲ್ಲಿ ಮೀಥೇನ್ ಪ್ರ... ಅತ್ಯಂತ ಕನಿಷ್ಠ.

ಇಂಥ ನೀರಿನಲ್ಲಿ ಮಾತ್ರ ವಾಸ ಮಾಡುವ ಮೀನುಗಳೂ ಇಲ್ಲಿವೆ. ... ಮೀನುಗಳು ಮಳೆ ಪ್ರಾರಂಭವಾದಾಗ ಮೊಟ್ಟೆ ಇಟ್ಟರೆ ಈ ಮೀನು... ಮಳೆಗಾಲದಲ್ಲಿ ಬೆದೆಯಾಡುತ್ತವೆ. ಮಳೆಗಾಲದ ನೀರೆಲ್ಲ ಹಣಿತು ತಿಳಿಯ... ಮೇಲೆ ಆಗಸ್ಟ್-ಸೆಪ್ಟೆಂಬರ್‌ನಲ್ಲಿ ನಿಂತ ನೀರಿದ್ದಲ್ಲಿ ಬಂಡೆಗೋ, ಮರದ ಬೇರಿ... ಮೊಟ್ಟೆ ಅಂಟಿಸಿ ಮರಿ ಮಾಡುತ್ತವೆ.

ಈಗೆಲ್ಲ ಗದ್ದೆಗಳಿಗೆ ಔಷಧಿ ಹೊಡೆದೂ ಹೊಡೆದೂ ಇಲ್ಲಿನ ಮೀ... ಸಂತಾನವೇ ನಾಶವಾಗುತ್ತಿದೆ. ಆದ್ದರಿಂದ ಮೀನುಗಳಿಗೂ 'ಸೀಸನ್' ಬಂ... ಆದರೆ ಒಂದು ಕಾಲದಲ್ಲಿ ನಮ್ಮಪ್ಪ ವರ್ಷವಿಡೀ ಮೀನು ಹಿಡಿಯುತ್ತಿದ್ದ...

ಮಳೆಗಾಲಕ್ಕೂ, ಮೀನುಗಳಿಗೂ ವಿಶಿಷ್ಟವಾದ ಸಂಬಂಧ. ಆದರೆ ಮಳೆ... ಹಿಡಿದು ಅದು ಹದ ಆಗುವವರೆಗೂ ಇಲ್ಲಿನ ಮೀನು ತತ್ತಿ ಜಪ್ಪ... ಮಾಡುವುದಿಲ್ಲ. ಆದರೆ ಮಳೆ ಹಿಡಿದು, ಝುರಿ ಹಳ್ಳಗಳೆಲ್ಲ ತುಂಬಿ, ... ಹರಿದು, ಗದ್ದೆ ಗಣ್ಣಗಳಿಗೆಲ್ಲ ನೀರು ನುಗ್ಗಬೇಕು, ಅದು ಹದವಾದ ಪ್ರ... ಆದಾಗ ಗದ್ದೆ ಬಯಲಿನ ಕಡಿಮೆ ನೀರಿನಲ್ಲಿ ಹುಲ್ಲು, ಎಲೆ ಮತ್ತು ಹೆಜ್ಜೆ... ಮೀನುಗಳು ತಮ್ಮ ತತ್ತಿ ಜಪ್ಪ (ಮೊಟ್ಟೆ ಇಟ್ಟು) ಮಾಡಿ ಹೋಗುತ್ತವೆ.

ಹದ ಮಳೆ ಆಗುತ್ತಿದೆ ಅಂದರೆ ಮೀನುಗಳಿಗೆ ತತ್ತಿಜಪ್ಪವೇ ಮುಖ್ಯ... ಅವು ತಮ್ಮ ಮೈಮೇಲಿನ ಜ್ಞಾನವನ್ನೇ ಕಳೆದುಕೊಳ್ಳುತ್ತವೆ. ಆ ಕಾರಣಕ್ಕೇ ... ಹಲವೊಮ್ಮೆ ಬಯಲಲ್ಲೂ ಬಿದ್ದಿರುತ್ತವೆ. ಅಂತ ಗದ್ದೆ ಬಯಲಲ್ಲಿ ಹುಷಾ... ಓಡಾಡಬೇಕು. ಇಲ್ಲವೆಂದರೆ ಮೀನಿನ ಮೊಟ್ಟೆಯ ಲೋಳೆಯ ಮೇಲೆ ... ಬೀಳುವುದು ಗ್ಯಾರಂಟಿ.

ತುಂಗಾ ನದಿ ಮೂಲದ ಪ್ರದೇಶದಲ್ಲಿ ಗಿರಿಜನರು ವಾಸ ಮಾ... ಸಿಂಗಸಾರು ಮತ್ತು ಎಲ್‌ಸಾರು ಎಂಬ ಕೊಡ್ಲಿಗಳಿವೆ. ಅಲ್ಲಿ ಸಣ್ಣ ... ತೊರೆಗಳಿವೆ. ಮಳೆಗಾಲ ಶುರುವಾಗಿ ನೀರು ಹದ ಆದರೆ ಆ ಹಳ್ಳಿ... ಒಂದು ಜಾತಿಯ ಮೀನು ತತ್ತಿ ಜಪ್ಪಲು ಹೋಗುತ್ತವೆ. ಆ ಮೀನು... ಹಿಂಗಳಿ ಅಂತ ಕರೆಯುತ್ತಾರೆ. ಅವು ಮೈ ತುಂಬ ಮುಳ್ಳಿದ್ದರೂ ಅತ್ಯ... ರುಚಿಯಾದ ಮೀನುಗಳು. ಈ ಮೀನುಗಳು ನದಿ ಮೂಲದ ಆಯಕ... ಜಾಗದಲ್ಲಿ ತತ್ತಿ ಇಡುತ್ತವೆ.

ಹಿಂಗಳಿ ಮೀನು ಎಲ್ಲಿಯೂ ಒಂಟಿಯಾಗಿ ಇರುವುದಿಲ್ಲ. ಸ್ಟ್ರೈ... ಕರೆಕೊಟ್ಟಿರುವ ನಾಯಕನ ಹಿಂದೆ ಹೇಗೆ ಜನ ಹೆಜ್ಜೆಹಾಕುತ್ತಾರೋ ಹಾಗೆ... ಹಿಂಗಳಿ ಮೀನುಗಳು ಕೂಡ ಗುಂಪುಗಳಲ್ಲಿ ಇರುತ್ತವೆ. ಎಲ್‌ಸಾರು ಪ... ಸಿಂಗಸಾರು ಹಳ್ಳಿಗಳಲ್ಲಿ ಮಳೆ ಹದವಾಗಿ ಬಿದ್ದು ಈ ಮೀನುಗಳು ಹೊರಟವೆಂ... ಹಳ್ಳದಲ್ಲಿ ನೀರಿಗಿಂತ ಮೀನುಗಳೇ ಹೆಚ್ಚಿರುತ್ತವೆ. ಪರಿಸರದೊಂದಿಗೆ ಸಹಬ... ನಡೆಸುವ ಗಿರಿಜನರು ಈ ಮೀನುಗಳು ಮೇಲೆ ಹೋಗಿ ತತ್ತಿಜಪ್ಪ ಮ... ಹಿಂದೆ ಬರುವಾಗ 'ಯಾಕೆ' ಅಂಥ ತಟ್ಟೆ ಮಾಡಿ ಅವುಗಳಲ್ಲಿ ಮೀನುಗಳ... ಹಿಡಿಯುತ್ತಾರೆ. ಹೀಗೆ ರಾಶಿರಾಶಿ ಮೀನುಗಳನ್ನು ಹಿಡಿದು ಅವುಗಳ... ಬೆಂಕಿಯಲ್ಲಿ ಒಣಗಿಸಿ, ಕರಿಮೀನು ಅಂತ ಮಾಡಿ ಅದನ್ನು ವರ್ಷ... ಇಟ್ಟುಕೊಂಡು ತಿನ್ನುತ್ತಾರೆ.

ಈ ಮೀನುಗಳಲ್ಲಿ ಹೆಣ್ಣು ಮೀನುಗಳೇ ಹೆಚ್ಚು ಇರಬೇಕು. ಸಿಕ್ಕ... ಎಲ್ಲಾ ಮೀನುಗಳಲ್ಲೂ ಮೊಟ್ಟೆ ಇರುತ್ತವೆ. ಮೀನಿನ ಮೊಟ್ಟೆ ಅಂದರೆ ಒಂದೊ... ಮೊಟ್ಟೆಯಲ್ಲ, ಸಾವಿರಾರು ಮೊಟ್ಟೆಗಳು. ಅವೆಲ್ಲ ಮರಿಯಾಗಿ ಮೀನಾ... ಹೊಳೆಗೆ ಇಳಿಯುವುದೇ ಅಸಾಧ್ಯವಾಗುತ್ತದೆ ಎಂದೇ ಅದನ್ನು ಗಿರಿಜನ... ರಾಶಿ ರಾಶಿ ಹಿಡಿಯುತ್ತಾರೆ.

ನಮ್ಮ ಹೊಳೆಯಲ್ಲಿ 'ಕಲ್‌ಗಿರಿ' ಎಂಬ ಒಂದು ಸಣ್ಣ ಗಾತ್ರದ ಮೀನ... ಅದರ ಗುಣವೆಂದರೆ ಹೆರಸಿ ತಿನ್ನುವುದು. ಹೊಳೆಗೆ ಕಾಲಿಟ್ಟರೆ ಸ... ಕಚಗುಳಿಯಾಗುವಂತೆ ಕಾಲನ್ನು ಹೆರಸುತ್ತವೆ. ಆ ಮೀನು ತನ್ನ ಹೊಟ್ಟೆಯ... ಎಷ್ಟು ಮೊಟ್ಟೆಗಳನ್ನು ಕಟ್ಟಿಕೊಂಡಿರುತ್ತದೆ ಅಂದರೆ ಅದರ ಹೊಟ್ಟೆಯ ತೆಳುವ... ಚರ್ಮ ಬಿರಿಯುವಷ್ಟರ ಮಟ್ಟಿಗೆ. ಅದರ ಹೊಟ್ಟೆಯ ಚರ್ಮ... ತೆಳುವಾಗಿರುವುದರಿಂದ ಒಳಗಿನ ಮೊಟ್ಟೆ ಕಣ್ಣಿಗೆ ಕಾಣಿಸುತ್ತದೆ. ವಿಚಿತ್ರವೆಂ... ಈ ಮೀನಿನ ದೇಹದ ಗಾತ್ರಕ್ಕಿಂತ ಅದರ ಹೊಟ್ಟೆ ದೊಡ್ಡದಾಗಿರುತ್ತದೆ. ಮೀ... ನಿಂದ ಅದರ ತತ್ತಿಯನ್ನು ಬೇರೆ ಮಾಡಿದರೆ ಆ ಮೀನಿನಷ್ಟೇ ದೊಡ್ಡದಾಗಿರು... ಅದರ ತತ್ತಿಯ ಚೀಲ.

ಕುರಿ ಮಂದೆಯಂತೆ ವರ್ತಿಸುವ ಕೆಲವು ಜಾತಿಯ ಮೀನುಗಳೂ ಇಲ... ಒಂದು ಮೀನು ಬುಟ್ಟಿಗೆ ಬಿದ್ದರೆ ಉಳಿದ ಮೀನುಗಳು ಅದನ್ನು ಹಿಂಬಾಲಿಸು... ಎಷ್ಟರಮಟ್ಟಿಗೆ ಅಂದರೆ ಬುಟ್ಟಿ ತುಂಬಿದರೂ ಅವಕ್ಕೆ ಗೊತ್ತಾಗುವುದೇ ... ಇವಲ್ಲದೆ ನಮ್ಮ ಹೊಳೆಯಲ್ಲಿ ಇನ್ನೂ ನಾನಾ ತರದ ಮೀನುಗಳಿವೆ. ಕೊ... ಎನ್ನುವ ಅತಿ ಸಣ್ಣ ಮಿಲಿಗ್ರಾಂ ತೂಕದ ಮೀನುಗಳಿಂದ ಹಿಡಿದು 80-... ಕೆ.ಜಿ. ತೂಗುವ ಹಳ್ಳು ಮೀನುಗಳೂ ನಮ್ಮ ಹೊಳೆಯಲ್ಲಿವೆ.


ಶೃಂಗೇರಿ ಮಠದ ಆಕರ್ಷಣೆಯೇ ಹೊಳೆಮೀನು. ನಾವು ಇವುಗಳ... ಹಳ್ಳು ಮೀನು ಅಂತ ಕರೆದರೆ ವಿಜ್ಞಾನಿಗಳು ಇವುಗಳನ್ನು ಇಂಗ್ಲಿಷ್... ಮಾಷರ್ಸ್ ಅಂತ ಕರೀತಾರೆ. ಇವು ಅತ್ಯಂತ ಹೆಚ್ಚು ಆಮ್ಲಜನಕವಿರು... ನೀರಿನಲ್ಲಿ ವಾಸವಿರುವಂಥ ಮೀನುಗಳು. ಆದ್ದರಿಂದ ಇವುಗಳ... ಅಣೆಕಟ್ಟುಗಳಲ್ಲಿಯಾಗಲಿ, ಕೆರೆ-ಟ್ಯಾಂಕ್‌ಗಳಲ್ಲಾಗಲಿ ಕೃತಕವಾಗಿ ಬೆಳೆಸಲು ಸಾಧ್ಯವಿ... ಇವಕ್ಕೆ ಹರಿಯುವ, ಆಮ್ಲಜನಕ ಸಮೃದ್ಧವಾಗಿರುವ, ಮಿಥೇನ್ ರಹಿತ ನೀ... ಬೇಕು. ಆದರೆ ಶೃಂಗೇರಿ ಮಠದವರು ಇವುಗಳಿಗೆ ಈಗ ಮಾಡುತ್ತಿರುವ... ಮಂಡಕ್ಕಿ ಮುಸುರೆ ತಿನ್ನಿಸುತ್ತಿದ್ದರೆ ಮತ್ತು ಮಠದ ಭಕ್ತರು ಇದೇ ತರ... ಮೀನುಗಳಿಗೆ ಗಲೀಜು ಬಿಸಾಡುವುದನ್ನು ಮುಂದುವರಿಸಿದರೆ ಸದ್ಯದ... ಇಲ್ಲಿಂದ ಈ ಮೀನುಗಳು ಮಾಯವಾಗುವುದರಲ್ಲಿ ಸಂಶಯವಿಲ್ಲ.

ಈ ಹಿಂದೆ ನಮ್ಮ ಯಾವ ಊರಿಗೂ ಸೇತುವೆ ಸಂಪರ್ಕಗಳಿರಲಿ... ಆಗೆಲ್ಲ ಸಣ್ಣಸಣ್ಣ ಹಳ್ಳಗಳಿಗೆ ಸಾರ ಕಟ್ಟುತ್ತಿದ್ದರೆ ದೊಡ್ಡ ಹೊಳೆ ದಾಟ... ದೋಣಿಗಳನ್ನು ಬಳಸಲಾಗುತ್ತಿತ್ತು. ಹೀಗಾಗಿ ಒಂದು ಕಾಲದಲ್ಲಿ ತಾಲ್ಲೂ... ಬೋರ್ಡಿನ ಆದಾಯಗಳಲ್ಲಿ ದೋಣಿ ಹರಾಜಿನಿಂದ ಬಂದ ಹ... ಪ್ರಮುಖವಾಗಿತ್ತು. ಈ ದೋಣಿ ಉದ್ಯಮ ಲಾಭ ತರಲಾರಂಭಿಸಿದಾಗ ದಕ್ಷಿ... ಕನ್ನಡ ಜಿಲ್ಲೆಯಿಂದ ಸಮುದ್ರದಲ್ಲಿ ದೋಣಿ ಓಡಿಸುವ ಮಗೇರರು, ಸಾಬ... ಇತ್ಯಾದಿ ಜನರೆಲ್ಲ ನಮ್ಮಲ್ಲಿಗೆ ಬಂದರು. ಆದರೆ ಅವರು ಹರಾಜಿನಲ್ಲಿ ಗೆದ್ದ... ಇಲ್ಲಿ ದೋಣಿ ಓಡಿಸುವುದಕ್ಕೆ ಊರಿನವರೇ ಬೇಕಾಗಿತ್ತು. ಏಕೆಂದರೆ ನ... ಹೊಳೆ ಸ್ಪೆಷಲ್ ಆಗಿತ್ತು. ಇದರ ವೇಗ, ಆಳ, ಆತ್ಮಗಳೆಲ್ಲ ಇಲ್ಲಿ ಹುಟ್ಟಿದವ...

ಗೊತ್ತಿತ್ತು, ಅಂದಹಾಗೆ, ಶೃಂಗೇರಿಗೆ ಬರುವ ಮತ್ತು ಪ್ರವಾಸಿಗರು ಇಲ್ಲಿನ ಹೊಳೆ ಕಂಡು ಣ್ಣ ಹೊಳೆ ಅಂಥ ಭಾವಿಸಿ ಅದರೊಳಗೆ ಇಳಿದು ವೇಗ, ಆಳ, ಆತ್ಮಗಳು ಗೊತ್ತಿರದ ಕಾರಣ ಹಲವರು ದುಕೊಳ್ಳುತ್ತಾರೆ.

ೋಣಿ ನಡೆಸುವುದು ಅತ್ಯಂತ ತ್ರಾಸದ ಮತ್ತು ದ ಕೆಲಸ. ಮಳೆಗಾಲದಲ್ಲಿ ಮಲೆನಾಡಿಗರ ಪ್ರಮುಖ ಸಾಧನ ದೋಣಿಗಳೇ. "ಅಂಬಿಗ ಮಿಂಡ" ಒಂದು ಗಾದೆ ಮಾತಿದೆ. ಆದರೆ ಅದು ನಮಗೆ ಯುವುದಿಲ್ಲ, ದಿನನಿತ್ಯ ದೋಣಿಯಲ್ಲೇ ಹೊಳೆಯನ್ನು ದಾಟ ಸೇರಬೇಕಿರುವುದರಿಂದ ದೋಣಿ ನಡೆಸುವ ಮ್ಮ ಬದುಕಿನಲ್ಲಿ ಮುಖ್ಯರು.

ನಮ್ಮ ತಾಲೂಕಲ್ಲಿ ಇದ್ದದ್ದು ನಾಲ್ಕೇ ಗಂಡಿಗಳು. ಅವುಗಳು ನಮ್ಮ ಜೀವನದಲ್ಲಿ ಬವಾಗಿದ್ದವು. ದೋಣಿ ದಾಟಿಸುವವ ಶೂದ್ರ ವನಾದರೂ ಬ್ರಾಹ್ಮಣರು ದೋಣಿ ದಾಟುವಾಗ ಜಾತಿಯವರ ಪ್ರಯಾಣ ನಿಷಿದ್ಧವಾಗಿತ್ತು. ನಾವು ಜನ ಬ್ರಾಹ್ಮಣೇತರರು ಕಾಯುತ್ತಿದ್ದರೂ ಓರ್ವ ಮಾತ್ರ ದೋಣಿಯಲ್ಲಿ ಕೂತು ದಾಟುತ್ತಿದ್ದದ್ದು ನಿಸಿದೆ. ಆಮೇಲೆ ಬ್ರಾಹ್ಮಣರಿಗೆಂದೇ ದೋಣಿಯಲ್ಲಿ ಗಳು ಕಾಣಿಸಿಕೊಂಡವು. ನಾವು ದೊಡ್ಡ ಗರಾದ ಮೇಲೆ ಬ್ರಾಹ್ಮಣರಿಗೆಂದು ಹತ್ತಿದ ಯಿಂದ ಇಳಿಯಲಿಕ್ಕೆ ನಾವು ಸಿದ್ಧರಿರುತ್ತಿರಲಿಲ್ಲ, ವಚೆ ಅವರೇ ನಮ್ಮ ಜೊತೆ ಬರಲಿ ಅಂತ"



ಹಾಕುತ್ತಿದ್ದೆವು. ಇದರಿಂದ ಕಾಲೇಜು ಹುಡುಗ ನಮ್ಮನ್ನು ಕಂಡರೆ ಬ್ರಾಹ್ಮಣರು ಹೆದರುತ್ತಿದ್ದರು. ಠದವರದ್ದೊಂದು ದೋಣಿ ಇತ್ತು. ಗುರುಗಳು ಆಚೆ ನರಸಿಂಹವನದಲ್ಲೇ ಇರುತ್ತಿದ್ದರು. ದೊಡ್ಡ ಲದಲ್ಲಿ ಮತ್ತು ಚಾತುರ್ಮಾಸದಲ್ಲಿ ಅವರು ಹೊಳೆ ತ್ತಿರಲಿಲ್ಲ. ಮಠದ ಪ್ರತಿಷ್ಠಿತರು ಮತ್ತು ಗುರುಗಳು ದಾಟುವಾಗ ಬ್ರಾಹ್ಮಣ ಹುಡುಗರೇ ದೋಣಿ ಹಾಕುತ್ತಿದ್ದರು. ಒಂದು ಸಾರಿ ಮಠದ ಪ್ರತಿಷ್ಠಿತ ದಾಟಬೇಕೆಂದಾಗ ದೋಣಿಯವನಾದ ಶೂದ್ರನನ್ನು ಬ್ರಾಹ್ಮಣರೇ ಹುಟ್ಟು ಹಾಕುತ್ತಿದ್ದಾಗ ದೋಣಿ ಆರು ಜನ ಹೊಳೆಯಲ್ಲಿ ಮುಳುಗಿಹೋದರು. ಒಂದು ದುರಂತ ನಮ್ಮ ಹೊಳೆಯಲ್ಲಿ ಎಂದೂ ಸಿರಲಿಲ್ಲ, ಮಡಿ, ಮಡಿ ಅಂತ ಅವರೆಲ್ಲ ಡಿದುಕೊಂಡಿದ್ದಕ್ಕೆ ಆರು ಜನ ಮಡಿದರು.

ಗೇರಿ ಪೇಟೆಯ ಹತ್ತಿರ ಒಂದು ದೊಡ್ಡ ಹಳ್ಳವಿದೆ. ದೋಣಿ ದಾಟಿದ ನಂತರ ಆ ಹಳ್ಳಕ್ಕೆ ಹಾಕಿದ್ದ ಮೇಲೆ ನಡೆದು ಹಳ್ಳ ದಾಟಬೇಕಿತ್ತು. ಅದು ಉದ್ದದ ಸಾರ; ಅಡಿಕೆ ಮರದಲ್ಲಿ ಅದನ್ನು ನ್ದರು.

ಬ್ರಾಹ್ಮಣರು ಸಾರದಲ್ಲಿ ಹೋಗುವಾಗ ಬೇರೆ ವರು ಯಾರೂ ಅದರ ಮೇಲೆ ದಾಟಕೂಡದು ನಿಯಮವಿತ್ತು. ಏಕೆಂದರೆ ಬ್ರಾಹ್ಮಣ ಮುಟ್ಟಿದ ನ್ನು ಏಕಕಾಲದಲ್ಲಿ ಶೂದ್ರರು ಮುಟ್ಟುವಂತಿರಲಿಲ್ಲ. ಶ್ ಮುಟ್ಟಿದರೆ ಕರೆಂಟ್ ಸರ್ಕ್ಯೂಟಿನಂತೆ ಶೂದ್ರರ ಅವರಿಗೆ ತಾಗಿ ಮೈಲಿಗೆ ಆಗುತ್ತಂತೆ.

ರ್ವ ಬ್ರಾಹ್ಮಣ ವಿಧವೆ ಇದ್ದರು. ಆಕೆ ಸಾರವನ್ನು ತ್ತರುವಾಗ ನಾವು ಶಾಲೆಗೆ ತಡವಾಗುತ್ತಿದೆ ಎಂದು ನ್ನ ಮುಟ್ಟಿದರೆ ನಮಗೆ ಹಿಡಿ ಶಾಪ ಹಾಕುತ್ತಿತ್ತು ಮುದುಕಿ. ಒಂದು ಸಾರಿ ನಾವು ಮಧ್ಯ ಸಾರಕ್ಕೆ ನಂತರ ಸಾರವನ್ನು ದಾಟಲು ನಿಂತ ಆ ಮುದುಕಿ ್ಲ "ಹಿಂದಕ್ಕೆ ಹೋಗಿ" ಅಂತ ಕೂಗಿಕೊಳ್ಳುತ್ತಿತ್ತು. ದ್ರರು ಮುಟ್ಟಿದ ನೆಲ ಕೂಡ ಬ್ರಾಹ್ಮಣರಿಗೆ ಅಂತೆ. ಅದಕ್ಕೆ ಅವರು ಸ್ನಾನ ಮಾಡಿದ ನಂತರ ಬಿಂದಿಗೆಯಲ್ಲಿ ನೀರು ಹಿಡಿದುಕೊಂಡು ದಾರಿಯಲ್ಲಿ ಚೆಲ್ಲುತ್ತಾ ಅದರ ಮೇಲೆ ಹಾರುತ್ತ ಹಾರುತ್ತಾ ತ್ತಾರೆ. ಅದಕ್ಕೆ ಅವರಿಗೆ 'ಹಾರುವವರು' ಅಂತ ೆ.

ವೆಲ್ಲ ಏನೇ ಇರಲಿ, ಮಲೆನಾಡಿನ ಮಳೆಗಾಲದ ಕಥೆಗಳನ್ನು ಹೇಳುತ್ತಾ ಹೊರಟರೆ ಅವು ಯುವುದಿಲ್ಲ. ಆದರೆ ಇತ್ತೀಚೆಗೆ ಇಲ್ಲಿ ಬರುತ್ತಿರುವುದೆಲ್ಲ ಮಳೆ. ಅಮೆರಿಕಾದವರು ಮತ್ತು ಅವರ ಗೆಳೆಯರ ಿಂದ ಜಗತ್ತಿನಾದ್ಯಂತ ಆಕಾಶವೆಲ್ಲ ಹೊಗೆ ತುಂಬಿ ಗೆ ಜ್ವರ ಬಂದಿದೆ. ಆದ್ದರಿಂದ ಎಲ್ಲಿಯೂ ಮಳೆ ದ ಕಾಲಕ್ಕೆ ಬರುತ್ತಿಲ್ಲ, ಬಂದರೆ ನಿಲ್ಲುವುದು

ಮುಸ್ಲಿಂ ಮಹಿಳೆಯರಿಗೆ ದ್ರೋಹ ಬಗೆಯುತ್ತಿರುವ ಮುಸ್ಲಿಂ ನಾಯಕರು



ಇಸ್ಲಾಂ ಧರ್ಮವೆಂಬುದು ಇಂದು ಕುರುಡರು ಮುಟ್ಟಿದ ಆನೆಯಂತಾಗಿದೆ. ಆನೆಯ ಸೊಂಡಿಲು ಮುಟ್ಟಿದವನು, ಕಾಲು ಮುಟ್ಟಿದವನು, ಕಿವಿ ಮುಟ್ಟಿದವನು ಆನೆ ಎಂದರೆ ಹೀಗಿದೆ ಎಂದು ತಾವು ಮುಟ್ಟಿದ ಅಂಗವನ್ನೇ ಆನೆಯೆಂದು ವರ್ಣಿಸಿದ ಕತೆಯನ್ನು ಚಿಕ್ಕಂದಿನಲ್ಲಿ ನಾವು ಓದಿದ್ದೆವು. ಇಂದು ಇಸ್ಲಾಂ ಧರ್ಮಾನುಯಾಯಿಗಳ ಕುರಿತೂ ಇದೇ ಮಾತನ್ನು ಹೇಳಬೇಕಾಗಿದೆ. ಅಷ್ಟೇ ಆಗಿದ್ದರೆ ಪರವಾಗಿರಲಿಲ್ಲ. ಆದರೆ ತಾವು ತಿಳಿದುಕೊಂಡಂತೆ, ಇತರರೂ ತಿಳಿದುಕೊಳ್ಳಬೇಕು; ತಮ್ಮ ನಂಬಿಕೆಯನ್ನು ಇತರರೂ ಒಪ್ಪಿಕೊಂಡು ಅದೇ ನಂಬಿಕೆಯಂತೆ ನಡೆದುಕೊಳ್ಳಬೇಕು. ಹಾಗೆ ಬದುಕಲು ಒತ್ತಡ ಹೇರಿ ಸರ್ವಾಧಿಕಾರಿಗಳಂತೆ ಸಮಾಜವನ್ನು ತಮ್ಮ ಮುಷ್ಠಿಯಲ್ಲಿಟ್ಟುಕೊಳ್ಳಲು ಪುರುಷ ಪ್ರಧಾನ ಸಮಾಜ ಪ್ರಯತ್ನಿಸುತ್ತಲೇ ಇದೆ.

ಇತ್ತೀಚೆಗೆ ಹೈದರಾಬಾದಿನಲ್ಲಿ ಸಾನಿಯಾ ಮಿರ್ಜಾ ಎಂಬ ಹೆಣ್ಣು ಮಗಳೊಬ್ಬಳ ಮದು ವೆಯ ಸಂದರ್ಭದಲ್ಲಿ ಧರ್ಮದ ಹೆಸರಿನಲ್ಲಿ ನಡೆದ ನಾಟಕೀಯ ಬೆಳವಣಿಗೆಗಳ ಕುರಿತು ಕೆಲವು ವಿಷಯಗಳನ್ನು ಹೇಳಬೇಕಾಗಿದೆ.



ಮೂರು ಕುಟುಂಬಗಳಿಗೆ ಸಂಬಂಧಪಟ್ಟ ಒಂದು ಕೌಟುಂಬಿಕ ಸಮಸ್ಯೆಯನ್ನು ಅದು ಇಡೀ ದೇಶಕ್ಕೆ ಸಂಬಂಧಪಟ್ಟ ಬಹಳ ದೊಡ್ಡ ಸಮಸ್ಯೆ ಎಂಬಂತೆ ನಾಲ್ಕೈದು ದಿನಗಳವರೆಗೆ ದೊಡ್ಡ ತಲೆಬರಹದಲ್ಲಿ ಮತ್ತೆ ಮತ್ತೆ ತೋರಿಸುತ್ತಿದ್ದ ದೃಶ್ಯ ಮಾಧ್ಯಮಗಳು ಹಾಗೂ ಪತ್ರಿಕಾ ಮಾಧ್ಯಮಗಳು ಒಂದೆಡೆಯಾದರೆ, ತಾವು ರೂಪಿಸಿ ಅನುಷ್ಠಾನಕ್ಕೆ ತರಲಾದ ನಿಯಮಗಳಲ್ಲಿ ಏರುಪೇರಾಗದಂತೆ ಆ ನಿಯಮಗಳಿಗನುಸಾರವಾಗಿ ಈ ಕುಟುಂಬಗಳು ನಡೆದುಕೊಳ್ಳುತ್ತಿವೆಯೆಂದು ಕಾಣಿಸುವಂತೆ ಮಾಡಲು ತಂತ್ರ ರೂಪಿಸುತ್ತಿದ್ದ ಪುರುಷ ಪ್ರಧಾನ ವ್ಯವಸ್ಥೆ ಇನ್ನೊಂದೆಡೆ. ಪಾಕಿಸ್ತಾನವೆಂಬ 'ಸಾಂಪ್ರದಾಯಿಕ ಎದುರಾಳಿ' ವೈರಿ ದೇಶದ ಹುಡುಗನೊಬ್ಬ ಇಂಡಿಯಾದ ಹುಡುಗಿಯೊಬ್ಬಳನ್ನು ಮದುವೆಯಾಗಲು ಹೊರಟಾಗ ಅದನ್ನು ಹೇಗಾದರೂ ತಡೆದು ಮದುವೆ ನಿಲ್ಲಿಸಬೇಕೆಂಬ ಇರಾದೆಯಿಂದ ವಿಷ ಕಾರುತ್ತಿರುವ ಕೋಮುವಾದಿಗಳ ತಂಡ ಇನ್ನೊಂದೆಡೆ; ಶೋಯೆಬ್ ಮಲಿಕ್ ಎಂಬ ಹುಡುಗನೊಬ್ಬ ಸಾನಿಯಾ ಮಿರ್ಜಾ ಎಂಬ ಹೆಣ್ಣು ಮಗಳನ್ನು ಮದುವೆಯಾಗಲು ಹೊರಟಾಗ ಈ ದೃಶ್ಯಗಳೆಲ್ಲವೂ ಕಂಡುಬಂದವು.

ಶೋಯೆಬ್‌ಗೆ ಕೆಲವು ವರ್ಷಗಳ ಹಿಂದೆ ಹೈದರಾಬಾದಿನ ಆಯಿಷಾ ಸಿದ್ದೀಕ್ ಎಂಬ ಮಹಿಳೆಯೋರ್ವಳೊಡನೆ ನಿಕಾಹ್ ಆಗಿತ್ತು ಎಂಬುದೇ ಎಲ್ಲಾ ಗೊಂದಲಗಳಿಗೆ ಕಾರಣವಾಗಿತ್ತು. ಈ ಮೊದಲ ನಿಕಾಹ್ ಎಂಬುದು ಇಸ್ಲಾಂ ಧಾರ್ಮಿಕ ನಿಯಮಗಳಿಗನುಸಾರವಾಗಿ ನಡೆದೇ ಇರಲಿಲ್ಲ. ನಿಕಾಹನ್ನು ದೂರವಾಣಿ ಮುಖಾಂತರ ನೆರವೇರಿಸುವುದು ಯಾವ ಧಾರ್ಮಿಕ ನಿಯಮ? ಒಂದು ನಿಕಾಹ್ ನೆರವೇರಲು ವಧೂ ವರರ ಎರಡೂ ಕಡೆಗಳಿಂದಲೂ ಇಬ್ಬಿಬ್ಬರು ಸಾಕ್ಷಿಗಳು ಆ ಸ್ಥಳದಲ್ಲಿ ಉಪಸ್ಥಿತರಿರಬೇಕು. ಅವರು ವಧುವಿನ ತಂದೆ ಮತ್ತು ಮೌಲ್ವಿ (ಧರ್ಮ ಗುರುಗಳು)ಗಳ ನಡುವೆ ನಡೆಯುವ ಎಲ್ಲ ಮಾತುಗಳನ್ನೂ ಕಿವಿಯಾರೆ ಕೇಳಿಸಿಕೊಳ್ಳಬೇಕು. ವಧುವಿನ ಕಿವಿಗೂ ನಿಕಾಹ್‌ನ ಶಬ್ದಗಳು ಬೀಳಬೇಕು ಎಂಬ ನಿಯಮವೂ ಇದೆ. ಆದರೆ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಎಲ್ಲ ನಿಯಮಗಳನ್ನೂ ಮೂಲೆಗೆ ಸರಿಸಿ ಪುರುಷರಿಗೆ ಅನುಕೂಲವಾಗುವಂತೆ ನಿಯಮಗಳನ್ನು ಬೇಕಾದಂತೆ ರೂಪಿಸಿಕೊಳ್ಳಲು ಪುರೋಹಿತರು ಸಿದ್ಧರಿರುತ್ತಾರೆ. ವರನೊಬ್ಬನು ದೂರದಲ್ಲಿ, ವಿದೇಶದಲ್ಲಿದ್ದರೆ ದೂರವಾಣಿಯಲ್ಲಾದರೂ ನಿಕಾಹ್ ಮುಗಿಸಿಬಿಟ್ಟು ದಕ್ಷಿಣೆ ಪಡೆದುಕೊಳ್ಳಲು ಪುರೋಹಿತರು ಕಂಡುಹಿಡಿದ ಉಪಾಯವೇ ದೂರವಾಣಿ ನಿಕಾಹ್. ಹಾಗೆಯೇ ವಿಚ್ಛೇದನಕ್ಕೂ ಹಲವಾರು ನಿಯಮಗಳಿವೆ. ಅದರಲ್ಲಿ ಖುರ್‌ಆನ್ ಸ್ಪಷ್ಟವಾಗಿ ಉಲ್ಲೇಖಿಸಿದ ವಾಕ್ಯ ವಿಚ್ಛೇದಿತ ಮಹಿಳೆಗೆ 'ಮತಾ:' (ಒಂದೇ ಗಂಟಿನಲ್ಲಿ ಜೀವನಾಂಶ) ನೀಡಬೇಕು ಎಂಬುದು. ಆದರೆ ನಮ್ಮ ದೇಶದಲ್ಲಿ ವಿಚ್ಛೇದಿತ ಪತ್ನಿಗೆ ಜೀವನಾಂಶ ನೀಡದಂತೆ ಯಾವ ರೀತಿ ಮುಸ್ಲಿಂ ಪುರುಷರು ತಡೆಯೊಡ್ಡಿ ಯಶಸ್ವಿಯಾದರೆಂಬುದು ಈಗ ಇತಿಹಾಸವಾಗಿದೆ.

ಈಗ ಶೋಯೆಬ್ ಮತ್ತು ಆಯಿಷಾ ಸಿದ್ದೀಕ್ ಅವರ ವಿಷಯಕ್ಕೆ ಬರೋಣ. ಇಸ್ಲಾಂ ಧಾರ್ಮಿಕ ನಿಯಮದಂತೆ ದೂರವಾಣಿಯಲ್ಲಿ ನಡೆದ ನಿಕಾಹ್ ಸಿಂಧುವಲ್ಲ, ಪ್ರವಾದಿಗಳ ಕಾಲದಲ್ಲಿ ದೂರವಾಣಿ ಎಲ್ಲಿತ್ತು? ವಿವಾಹವೇ ಆಗಿಲ್ಲವೆಂದ ಬಳಿಕ ವಿಚ್ಛೇದನ ಎಲ್ಲಿಯದು? ಆದರೆ ಆಯಿಷಾ ಎಂಬ ಮಹಿಳೆಗೆ ನೆರವಾಗಲು ಕಾಂಗ್ರೆಸ್ ಪಕ್ಷದ ರಾಜ್ಯ ಕಾರ್ಯದರ್ಶಿ, ರಾಜಕಾರಣಿಗಳು, ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿಯ ಸದಸ್ಯ ಊರಿನ ಕೆಲವು ಧಾರ್ಮಿಕ ಮುಖಂಡರೆಲ್ಲರೂ ಸೇರಿ ಬೆಳಗಿನ ಜಾವದವರೆಗೆ ಸಂಧಾನ ನಡೆಸಿದರೇ ಹೊರತು ದೂರವಾಣಿ ನಿಕಾಹ್‌ನ ಕುರಿತು ಯಾರೂ ಧ್ವನಿ ಎತ್ತಲಿಲ್ಲ. "ನಮ್ಮ ಧಾರ್ಮಿಕ ನಿಯಮಗಳಿಗನುಸಾರವಾಗಿ ನಾವು ನಡೆದುಕೊಳ್ಳುತ್ತಿದ್ದೇವೆ" ಎಂದು ಮುಸ್ಲಿಮೇತರರಿಗೆ ತೋರಿಸಿಕೊಳ್ಳಲು ಏನೇನೊ ಕಸರತ್ತುಗಳನ್ನು ಮಾಡಿದರು. ಮೂರು ತಿಂಗಳಿಗೆ ಮಾತ್ರ ಆಯಿಷಾಗೆ ಜೀವನಾಂಶ ಕೊಡಬೇಕೆಂಬ ತೀರ್ಮಾನಕ್ಕೆ ಬಂದರೆಂಬ ಪ್ರಚಾರವೂ ಆಯಿತು. ಆದರೆ ತೆರೆಮರೆಯಲ್ಲಿ ಕೋಟಿಗಟ್ಟಲೆ ಹಣ ಕೈ ಬದಲಾಯಿಸಿತು ಎನ್ನಲಾಗಿದ್ದರೂ ಎಲ್ಲವೂ ಶರಿಯತ್ ನಿಯಮದಂತೆ ನಡೆಯಿತೆಂದು ಮುಸ್ಲಿಮರು ಮುಖ ಉಳಿಸಿಕೊಳ್ಳುವ ಮಾತನಾಡಿದರು.

ಬಡ ಮುಸ್ಲಿಂ ಹೆಣ್ಣುಮಗಳೊಬ್ಬಳಿಗೆ ಇಂತಹ ಸಮಸ್ಯೆ ಎದುರಾಗಿದ್ದರೆ ಅದನ್ನು ಬಗೆಹರಿಸಲು ಎಷ್ಟು ಜನ ಮುಖಂಡರು ಮುಂದಾಗುತ್ತಿದ್ದರು? ಎರಡೊ ಮೂರೊ ಮಕ್ಕಳನ್ನು ಹುಟ್ಟಿಸಿ ಬೀದಿಗೆಸೆದು ಇನ್ನೊಂದೆಡೆ ಹೋಗಿ ಇನ್ನೊಬ್ಬಳನ್ನು ಕಟ್ಟಿಕೊಂಡು ಯಾರಿಗೂ ಏನೂ ಕೊಡದೆ ಓಡಾಡಿಕೊಂಡಿರು ವವರೆಷ್ಟೊ ಜನರಿದ್ದಾರೆ. ಇದೆಲ್ಲವೂ ಧಾರ್ಮಿಕ ಮುಖಂಡರಿಗೂ, ರಾಜಕಾರಣಿಗಳಿಗೂ ಚೆನ್ನಾಗಿ ಗೊತ್ತು. ಅವರ ಸಮಸ್ಯೆ ಏನೆಂದರೆ ಶೋಹೆಬ್ ಆಯಿಷಾಗೆ ದೊಡ್ಡ ಮೊತ್ತದ ಪರಿಹಾರ ನೀಡಿದ್ದಾನೆನ್ನುವುದು ಇತರ ಮುಸ್ಲಿಂ ಮಹಿಳೆಯರಿಗೆ ತಿಳಿಯಬಾರದು! ತಿಳಿದರೆ ನಾಳೆ ವಿಚ್ಛೇದಿತ ಮುಸ್ಲಿಂ ಮಹಿಳೆಯರು ಪರಿಹಾರ ಕೇಳಿದರೆ ಏನೆಂದು ಉತ್ತರಿಸುವುದು? ಇಂತಹ ನ್ಯಾಯಗಳೆಲ್ಲವೂ ಶ್ರೀಮಂತರ ಪರವಾಗಿಯೇ ಇರುತ್ತವೆ ಎಂಬುದಕ್ಕೆ ಇಂತಹ ನೂರಾರು ಉದಾಹರಣೆಗಳಿವೆ. ವಿಚ್ಛೇದನಕ್ಕೆ ಅನುಮತಿ ನೀಡಲು ಸಾಧ್ಯವೇ ಇಲ್ಲ ಎನ್ನುತ್ತಿದ್ದ ಆಯಿಷಾಳ ತಂದೆತಾಯಿಗಳು ರಾತ್ರಿ ಬೆಳಗಾಗುವುದರೊಳಗೆ ತಮ್ಮ ಧ್ವನಿ ಬದಲಾಯಿಸಿ ಶೋಯೆಬ್ ಮತ್ತು ಸಾನಿಯಾಳ ವೈವಾಹಿಕ ಬದುಕು ಸುಖಮಯವಾಗಲಿ ಎಂದು ಹರಿಸಿದರು!

ಧಾರ್ಮಿಕ ನಿಯಮಗಳನ್ನು ಸರಿಯಾಗಿ ಅರ್ಥೈಸಿ ಕರಗತ ಮಾಡಿಕೊಂಡವರನ್ನು ಸುಲಭದಲ್ಲಿ ಹಾದಿತಪ್ಪಿಸಲು ಸಾಧ್ಯವಿಲ್ಲ ಎಂಬುದಕ್ಕೆ ಕೇರಳದ ನ್ಯಾಯಾಧೀಶ ಖಾಲಿದ್ ಎಂಬವರು ಸಾಕ್ಷಿಯಾಗಿದ್ದಾರೆ. ಇವರು ಖುರಾನ್ ವಾಕ್ಯದ 'ಮತಾಃ'ಗೆ ಅನುಸಾರವಾಗಿ ವಿಚ್ಛೇದಿತ ಮಹಿಳೆಗೆ ಜೀವನಾಂಶ ನೀಡುವಂತೆ ತೀರ್ಪು ನೀಡುತ್ತಿದ್ದಾರೆ. ವಿಚ್ಛೇದಿತ ಮಹಿಳೆಯರು ಜೀವನಾಂಶಕ್ಕಾಗಿ ಮೊಕದ್ದಮೆ ಹೂಡಿದಾಗ ಆ ಗಂಡನ ಆರ್ಥಿಕ ಸ್ಥಿತಿಗನುಸಾರವಾಗಿ ತೀರ್ಪು ನೀಡುತ್ತಿದ್ದು ಆ ಮಹಿಳೆಗೆ ಕೆಲವು ಲಕ್ಷ ರೂಪಾಯಿಗಳವರೆಗೆ ಜೀವನಾಂಶ ನೀಡಬೇಕೆಂಬ ತೀರ್ಪು ಹೊರಬೀಳುತ್ತಿದೆ. ಶ್ರೇಷ್ಠ ನ್ಯಾಯಾಲಯ ಈ ತೀರ್ಪನ್ನು ಪ್ರಶ್ನಿಸಿಲ್ಲ ಮತ್ತು ನಿಷೇಧಿಸಿಲ್ಲದ ಕಾರಣ ಕೇರಳದಲ್ಲಿ ಹೆಂಡತಿಗೆ ತಲಾಖ್ ನೀಡಲು ಪುರುಷರು ಹಿಂಜರಿಯುತ್ತಿರುವ ಪರಿಸ್ಥಿತಿ ನಿರ್ಮಾಣವಾಗಿದೆ. ಮಾನ್ಯ ಖಾಲಿದರಂತಹ ನ್ಯಾಯಾಧೀಶರು ಕರ್ನಾಟಕದಲ್ಲಿಲ್ಲದ ಕಾರಣ ಇಲ್ಲಿ ತಲಾಖ್ ಪೀಡಿತ ಮಹಿಳೆಗೆ ಕೇವಲ ಮೂರು ತಿಂಗಳವರೆಗೆ ಮಾತ್ರ ಏನಾದರೂ ದೊರೆಯಬಹುದಷ್ಟೆ ಹೊರತು ಆಕೆಯ ಮುಂದಿನ ಬದುಕು ತ್ರಾಸದಾಯಕವಾಗಿಯೇ ಇರುತ್ತದೆ. ಕೋಮುವಾದಿ ಸಂಘಟನೆಗಳು ಮುಸ್ಲಿಂ ಮಹಿಳೆಯರು ಜೀವನಾಂಶಕ್ಕಾಗಿ ನ್ಯಾಯಲಯಕ್ಕೆ ಹೋಗದಂತೆ ವ್ಯವಸ್ಥಿತವಾಗಿ ತಡೆಯೊಡ್ಡುತ್ತವೆ.

• ಸಾರಾ ಅಬೂಬಕ್ಕರ್

ಅಮಾನುಷ

ಒಂತೆ ಸುಡುವ ರಾತ್ರಿಯಲಿ ಬಂದು
ಅವರ ಎದೆಯ ಮೇಲೆ ಕಾಲಿಟ್ಟರು ಯಾರೋ ಇಂದು
ಬೆಳ್ಳಂಬೆಳಗ್ಗೆ ರಾಜಬೀದಿಯ ತುಂಬ ನೆತ್ತರಿನ
ಹೆಜ್ಜೆಗಳು ಮೂಡಿವೆ: ಊರ ನೆಲವೆಲ್ಲ ಕೆಂಪು
ಕೆಂಪು ಹಾಸುಗಲ್ಲಿನ ಮೇಲೆ ಥಟ್ಟೈಸಿದ ಪಾದ
ಗಳ ಹಸಿ ಹಸಿ ಗುರುತಿಗೆ ಮೆತ್ತಿದ ದುರ್ನಾತ:
ಕರುಳು ಕತ್ತರಿಸುವ ಎದೆಯ ನೋವಿಗೆ ಮುಳ್ಳುಗಳು
ನಿಟ್ಟುಸಿರುಡುತ್ತವೆ ಸಂಕಟದಲ್ಲಿ: ತಮಗೆ ತಾವೇ
ಮೊಂಡಾಗಿವೆ ನಿಲ್ಲದ ಬಿಕ್ಕುಗಳನ್ನು ಕಂಡು
ಲೋಬಾನದ ಹೊಗೆಯಲ್ಲಿ ಕಳೆದುಹೋದ
ನಮಗೆಂದೂ ತಾಕುವುದಿಲ್ಲ ಹೇಸಿಗೆ: ಮಡಿ-
ಮೈಲಿಗೆ ಗೊತ್ತಿರದ ಅವರ ಹಸಿ ಮೈಬೆವರ ವಾಸನೆ
ಮುರುಟಿ ಹೋಗದಿರಲಿ
ಗುಲಾಬಿಯ ಪಕಳೆಗಳಂತೆ ಸುವಾಸನೆ ಬೀರಲಿ
ಹಸಿಗಾಯ ಮಾಯುವವರೆಗೂ ಉಸಿರಾಡದಿರಲಿ ಕೀವು-
ಜೀವ ಹಿಂಡುವ ನರಕದ ಬಾಗಿಲು ಎಂದೆಂದಿಗೂ ಮುಚ್ಚಲಿ
****
ಕರುಳು ಕಿತ್ತು ಬಾಯಿಗೆ ಬರುವಂತೆ ದುರ್ನಾತ
ಅಡ್ಡಗಟ್ಟಿದ ಕೊಳಕು ಸೆರೆ ಇಲ್ಲದಿದ್ದರೆ ಗಂಟಲೊಳಗೆ
ಇಳಿಯದು ತಿನ್ನುವ ಅನ್ನವೂ ದಕ್ಕದು ಎಂದೂ-
ಕನಸುಗಳನ್ನು ಕಾಣುವುದಿಲ್ಲ-ಕಂಡರೂ ತಮ್ಮ ಶಿರ
ದ ಮೇಲೆ ತಾವೇ ಮಲ ಹೊತ್ತ ಅಸ್ಪಷ್ಟ ಚಿತ್ರ-
ಕೈಗಳಿಗೆ ಮೆತ್ತಿದ್ದೂ ಅದೇ ಎತ್ತಿಡಲಾಗದ್ದು
ಪಕ್ಕಕ್ಕೆ ಸಲೀಸಾಗಿ: ಸತ್ಯ ಹೇಳುವುದಾದರೆ ಎದೆ ಮುಟ್ಟಿ
ಅವರಿಗದೇ ದೇವರ ಕೆಲಸ
****
ಹುಟ್ಟಿ ಬರುವುದಿಲ್ಲ ಮತ್ತೆ
ಮತ್ತೆ ಗಾಂಧಿ-ಬುದ್ಧ-ಅಂಬೇಡ್ಕರ:
ಹುಟ್ಟಬೇಕಿದೆ ಕರುಣೆ ನಮ್ಮ ಎದೆಯಲ್ಲಿ
ಈ ಜಗದ ಈ ಪರಿಯ ಕೇವಲ ಕೇವಲ
ಮನುಷ್ಯರಿಗಾಗಿ.

• ಕಲ್ಲೇಶ್ ಕುಂಬಾರ್, ಹಾರೂಗೇರಿ



ನಿರಾಧಾರ ಹೇಳಿಕೆಗಳು ಹುಸಿ ಆರೋಪಗಳು


'ದೇಶಕಾಲ ವಿಶೇಷ'ದಿಂದ ಪ್ರಾರಂಭವಾದ ಚರ್ಚೆ ಎಲ್ಲೆಲ್ಲಿಗೋ ಹೋಗಿ ಅಡಿಗ, ಸುಬ್ಬಣ್ಣ ಮತ್ತು ಅನಂತಮೂರ್ತಿಯವರನ್ನು ತಲುಪಿದೆ. ವಸಂತ ಬನ್ನಾಡಿ, ತಮ್ಮ ಇತ್ತೀಚಿನ ಬರಹದಲ್ಲಿ "ಭಾವುಕ ಕೂಟ" ಎಂದು ಹೆಸರಿಸಿರುವ ಆ ಮೂವರಲ್ಲಿ ಅಡಿಗ ಮತ್ತು ಸುಬ್ಬಣ್ಣ ತೀರಿಕೊಂಡಿದ್ದರೆ ಅನಂತಮೂರ್ತಿ ಇಳಿವಯಸ್ಸು ಹಾಗೂ ಅನಾರೋಗ್ಯಗಳ ನಡುವೆ ತಮ್ಮ ಪ್ರಾಣಪಕ್ಷಿಯನ್ನು ರಕ್ಷಿಸಿಕೊಂಡು ನಮ್ಮೊಟ್ಟಿಗೆ ಇದ್ದಾರೆ. ಹಿರಿಯರಾದರೂ ನಮಗೆ ಸಮಕಾಲೀನರಾದ ಆ ಮೂವರ ಸಾಧನೆಗಳೂ ನಮ್ಮ ಕಣ್ಣೆದುರಿಗೇ ಇವೆ. ಆದರೆ ಬನ್ನಾಡಿಯವರ ಬರಹ ಅವರೇ ಹೇಳಿಕೊಂಡಿರುವ ಹಾಗೆ, "ಆ ಮೂವರ ಅಂದಿನ ವರ್ತನೆಗಳ ಕುರಿತು ಇದೆಯೇ ಹೊರತು ಅವರ ಬರಹ ಮತ್ತು ಒಟ್ಟು ಸಾಧನೆಗಳ ಬಗ್ಗೆ ಅಲ್ಲ". ಸಾಹಿತಿಗಳ ಕೃತಿ ಬದಲು ವರ್ತನೆಯ ವಿಮರ್ಶೆ ಸಾಧುವೋ ಎಂಬ ಪ್ರಶ್ನೆ ಹಾಗಿರಲಿ, ಯಾರ ವರ್ತನೆಯ ಬಗೆಗೇ ಆಗಲಿ, ವಸ್ತುನಿಷ್ಠವಾಗಿ ಯೋಚಿಸಲು ಸಾಧ್ಯವೆ? ಪೂರ್ವಾಗ್ರಹಗಳಿಲ್ಲದೆ ಬರೆಯಲು ಸಾಧ್ಯವೆ? ಅದು ಅಸಾಧ್ಯ ಎನ್ನುವುದಕ್ಕೆ ಬನ್ನಾಡಿಯವರ ಬರಹವೇ ಒಂದು ಉದಾಹರಣೆ. ಅವರ ಬರಹದ ಉದ್ದಕ್ಕೂ, ನಮಗೆ ಎದುರಾಗುವುದು, ಅಡಿಗ, ಸುಬ್ಬಣ್ಣ ಹಾಗೂ ಅನಂತಮೂರ್ತಿಯವರ ಕುರಿತು ಅವರ ಏಕಪಕ್ಷೀಯರಾದ ಅನ್ನಿಸಿಕೆ, ಅಭಿಪ್ರಾಯ ಹಾಗೂ ತೀರ್ಮಾನಗಳು. ನಿಮ್ಮ ಮಾತುಗಳಿಗೆ ಪ್ರೂಫ್ ಕೊಡಿ ಎಂದು ನಾವು ಬನ್ನಾಡಿಯವರನ್ನು ಆಗ್ರಹಿಸಿದರೆ, ಅವರು ನಮ್ಮನ್ನು ಅಡಿಗ, ಸುಬ್ಬಣ್ಣ ಮತ್ತು ಅನಂತಮೂರ್ತಿಯವರ ವಂದಿ ಮಾಗಧರ ಸಾಲಿಗೆ ಸೇರಿಸಿಬಿಡುತ್ತಾರೆ. ಉದಾಹರಣೆಗೆ ಹೆಗ್ಗೋಡಿನಲ್ಲಿ ಉಸಿರು ಕಟ್ಟಿಸುವ ವಾತಾವರಣವಿದೆ ಎಂದು ಬನ್ನಾಡಿಯವರು ಹೇಳಿದರೆ ನಾವು ಅದನ್ನು ನಂಬಬೇಕು; ಅದರ ಬಗ್ಗೆ ಪ್ರೂಫ್ ಕೇಳುವ ಹಾಗಿಲ್ಲ, ಉಸಿರು, ವಾತಾವರಣ-ಅದಕ್ಕೆಲ್ಲ ಅಲಾಯದ ಪ್ರೂಫ್ ಇರಲು ಸಾಧ್ಯವಾ? ಪ್ರೂಫ್ ಕೇಳುವ ನಾವೇ ದಡ್ಡರು!

ಬನ್ನಾಡಿ ತಮ್ಮ ಬರಹದ ಮೊದಲಿಗೇ ಅಡಿಗ, ಸುಬ್ಬಣ್ಣ ಮತ್ತು ಅನಂತಮೂರ್ತಿಯವರ "ಭಾವುಕ ಕೂಟ"ದ ಬಗ್ಗೆ ಅದೊಂದು ಅಕ್ರಮ ಕೂಟ ಎಂಬಂತೆ ಪ್ರಸ್ತಾಪಿಸಿದ್ದಾರೆ. ಈ ಮೂವರೂ ಪರಸ್ಪರರಿಗೆ ಆಪ್ತರಾಗಿದ್ದರು. ಪ್ರಕಾಶಕ ಎಂಬ ಕಾರಣಕ್ಕೆ ಸುಬ್ಬಣ್ಣರು ಅಡಿಗ ಮತ್ತು ಅನಂತಮೂರ್ತಿ ಮಾತ್ರವಲ್ಲ, ತನ್ನ ಕಾಲದ ಹಲವು ಲೇಖಕರ ಜೊತೆ ಸ್ನೇಹ, ಸಲುಗೆಗಳ ಸಂಬಂಧ ಹೊಂದಿದ್ದರು. ಅಡಿಗ ಮತ್ತು ಅನಂತಮೂರ್ತಿಯವರ ಸ್ನೇಹಿತರ ಬಳಗವೂ ದೊಡ್ಡದು. ಆದರೆ ಈ ಮೂವರದ್ದೇ ಪ್ರತ್ಯೇಕವಾದ ಹಾಗೂ ದುರುದ್ದೇಶದ 'ಭಾವುಕ ಕೂಟ'ವೊಂದಿತ್ತು ಎಂಬ ಮಾತು ನಾನು ಕೇಳುತ್ತಿರುವುದು ಇದೇ ಮೊದಲ ಬಾರಿ. ಈ ಭಾವುಕಕೂಟ ಬನ್ನಾಡಿಯವರ ಸಂಶೋಧನೆಯೇ ಆಗಿರಲಿ ಅಥವಾ ಬೇರೆಯವರು ಹಬ್ಬಿಸಿದ ಪುಕಾರೇ ಇರಲಿ ಸಂಪೂರ್ಣವಾಗಿ ನಿರಾಧಾರವಾಗಿರುವಂತಹದ್ದು. ಅಡಿಗ, ಸುಬ್ಬಣ್ಣ ಹಾಗೂ ಅನಂತಮೂರ್ತಿ ತಮ್ಮ ಆಲೋಚನೆಗಳಿಗೆ ಸಾಕ್ಷಿ, ನೀನಾಸಂ ಮತ್ತು ರುಜುವಾತು ಗಳ 'ಸಾಂಸ್ಥಿಕ ರೂಪ' ಕೊಟ್ಟರು ಎಂಬುದು ಬನ್ನಾಡಿ ಯವರ ಮತ್ತೊಂದು ಆರೋಪ. ಅಕ್ಷರ ಪ್ರಕಾಶನವನ್ನು ಅವರು ಯಾಕೆ ಕೈಬಿಟ್ಟರೋ? ಪತ್ರಿಕೆಯೊಂದು ಅದರ ಸಂಪಾದಕರ ಆಲೋಚನೆಗಳ ಸಾಂಸ್ಥಿಕ ರೂಪವೆನ್ನುವು ದಾದರೆ, ಆ ಮಾತು ಸಾಕ್ಷಿ, ರುಜುವಾತು ಮಾತ್ರವಲ್ಲ, ಸಂಕ್ರಮಣ, ಶೂದ್ರ, ಸಂವಾದ, ಅನ್ವೇಷಣೆ ಮುಂತಾದ ಪತ್ರಿಕೆಗಳ ಮಟ್ಟಿಗೂ ನಿಜವಾಗಬೇಕು. ಆದರೆ ವಾಸ್ತವವಾಗಿ, ಈ ಯಾವ ಪತ್ರಿಕೆಯೂ-ಅದರ ಹುಟ್ಟಿನ ಸಂದರ್ಭ ಏನೇ ಇರಲಿ-ಆಯಾ ಸಂಪಾದಕರ ಮುಖವಾಣಿಯಾಗಿರಲಿಲ್ಲ. ಈ ಪತ್ರಿಕೆಗಳೆಲ್ಲ, ತಮ್ಮ ಸಂಪಾದಕೀಯ ಧೋರಣೆಯಲ್ಲಿ "ಎಲ್ಲ ಮೂಲಗಳಿಂದಲೂ ಒಳಿತನ್ನು ಆಯ್ದುಕೊಳ್ಳುವ ವಿಶಾಲ ಮನೋಧರ್ಮದವಾಗಿದ್ದವು. ಅಡಿಗರು ಸಂಪಾದಿಸುತ್ತಿದ್ದ 'ಸಾಕ್ಷಿ'ಯಲ್ಲಿ ಅವರ ವ್ಯಕ್ತಿಗತ ಒಲವುಗಳಿಗೆ ವ್ಯತಿರಿಕ್ತವಾಗಿದ್ದ ಬರಹಗಳದ್ದೇ ಜಾಸ್ತಿ ಸಂಖ್ಯೆಯಾಗಿದ್ದಿತು. ಬನ್ನಾಡಿಯವರಿಗೂ ಇದು ಗೊತ್ತಿದೆ. ತಮ್ಮ ಹಿಂದಿನ ಒಂದು ಲೇಖನದಲ್ಲಿ ಅಡಿಗ, ಸುಬ್ಬಣ್ಣ ಮತ್ತು ಅನಂತಮೂರ್ತಿಯವರ "ಎಕ್ಲೆಕ್ಟಿಸಿಸಂ"ನ್ನು ಬನ್ನಾಡಿ ಗುರುತಿಸಿದ್ದಾರೆ. ಆದರೆ ಅವರು ತಾವಾಡಿದ ಆ ಮಾತನ್ನು ರಿವರ್ಸ್ ಗೇರಿನಲ್ಲಿ ಇಟ್ಟು "ಆಲೋಚನೆಗಳ ಸಾಂಸ್ಥಿಕ ರೂಪ"ದ ಹೊಸ ಮಾತನ್ನು ಚಲಾಯಿಸಿದ್ದಾರೆ. ಯಾವುದು ಅವರ ನಿಜವಾದ ಮಾತು? ಪ್ರಾರಂಭದಲ್ಲಿ ಅನಂತಮೂರ್ತಿ, ನಂತರ ಕೆಲಕಾಲ ಪ್ರಸನ್ನ ಸಂಪಾದಿಸಿದ 'ರುಜುವಾತು' ಬಗ್ಗೆ ಬನ್ನಾಡಿಯವರ ಕಂಪ್ಲೇಂಟ್ ಏನು? ರುಜುವಾತು ಅನಂತಮೂರ್ತಿಯವರ 'ಆಲೋಚನೆಗಳ ಸಾಂಸ್ಥಿಕ ರೂಪ'ವಂತೂ ಖಂಡಿತಾ ಅಲ್ಲ, ಪ್ರಾರಂಭದಿಂದಲೂ ಅದರ ಪ್ರಕಟಣೆಯಲ್ಲಿ ಅನಂತಮೂರ್ತಿ ನಿಮಿತ್ತ ಮಾತ್ರವಾಗಿದ್ದರು.

ಸುಬ್ಬಣ್ಣ ಸ್ಥಾಪಿಸಿದ ಅಕ್ಷರ ಪ್ರಕಾಶನ ಮತ್ತು ನೀನಾಸಂಗಳ ಬಗ್ಗೆ ಏನನ್ನೂ ಹೇಳುವ ಅಗತ್ಯವಿಲ್ಲ, ಅವು ಸಾರ್ವಜನಿಕರಿಗೆ ಅಕ್ಷರಶಃ ಸದಾ ತೆರೆದುಕೊಂಡಿರುವ ಸಂಸ್ಥೆಗಳು. ಕಳೆದ 60 ವರ್ಷಗಳಲ್ಲಿ ಅಕ್ಷರ ಪ್ರಕಾಶನ ಪ್ರಕಟಿಸಿರುವ ಪುಸ್ತಕ ಮತ್ತು ನೀನಾಸಂ ಆಡಿರುವ ನಾಟಕಗಳಿಂದ ಉದಾಹರಿಸದೆ, ಆ ಸಂಸ್ಥೆಗಳನ್ನು ಟೀಕಿಸುವುದು, ವಿಮರ್ಶೆಯ ವಿವೇಕವೂ ಅಲ್ಲ ನ್ಯಾಯವೂ ಅಲ್ಲ, ಬನ್ನಾಡಿ ಮತ್ತೆಮತ್ತೆ ನೀನಾಸಂ ಫೋರ್ಡ್ ಫೌಂಡೇಷನ್ ನೆರವು ಪಡೆದದ್ದರ ಬಗ್ಗೆ ಬರೆದಿದ್ದಾರೆ. ಸುಬ್ಬಣ್ಣ ಆ ನೆರವನ್ನು ಸ್ವೀಕರಿಸಿದಾಗಲೇ ಆ ಬಗ್ಗೆ ಆಕ್ಷೇಪಗಳು ಕೇಳಿಬಂದಿದ್ದವು. ನೀನಾಸಂ, ಆ ನೆರವಿನ ಮೊತ್ತವನ್ನು ಸಾರ್ವಜನಿಕವಾಗಿ ಒಂದು ವರ್ಷ ವಿನಿಯೋಗಿಸಿದ ನಂತರ, ಮತ್ತೊಮ್ಮೆ ಅದನ್ನು ಸ್ವೀಕರಿಸಲು ನಿರಾಕರಿಸಿತು. ಆ ಒಂದು ವರ್ಷದ ಅವಧಿಯಲ್ಲಿ ಸಹ ನೀನಾಸಂ, ಅದುವರೆಗೆ ತಾನು ಎತ್ತಿ ಹಿಡಿದ ಯಾವ ತತ್ವಾದರ್ಶಗಳಿಗೂ ದ್ರೋಹ ಬಗೆಯುವ ಹಾಗೆ ನಡೆದುಕೊಳ್ಳಲಿಲ್ಲ, ಫೋರ್ಡ್ ಫೌಂಡೇಷನ್ ನೆರವು ಪಡೆದುಕೊಂಡು, ಬನ್ನಾಡಿ ಆಪಾದಿಸುವ ಹಾಗೆ ಸುಬ್ಬಣ್ಣ ಎಡಪಂಥೀಯ ಚಳವಳಿಯನ್ನು ಒಡೆಯುವ ಪ್ರಯತ್ನವನ್ನಂತೂ ಖಂಡಿತ ಮಾಡಲಿಲ್ಲ, ಫೋರ್ಡ್ ಫೌಂಡೇಷನ್ ನೆರವು ಪಡೆಯುವ ಮೊದಲೂ ನೀನಾಸಂ ಇತ್ತು; ಆನಂತರವೂ ಇದೆ. ನೀನಾಸಂ, ಈ ನೆರವು ಪಡೆದ ನಂತರ, ಕರ್ನಾಟಕದ ಅನೇಕ ತಂಡಗಳು ನಾಟಕ ಆಡುವುದನ್ನೇ ನಿಲ್ಲಿಸಿವೆ ಎಂಬುದು ಬನ್ನಾಡಿಯವರ ಇನ್ನೊಂದು ಆರೋಪ. ನಾಟಕ ತಂಡಗಳೆಂದರೆ ಪರಸ್ಪರ ಪಂದ್ಯದಲ್ಲಿ ತೊಡಗಿಕೊಂಡಿರುವ ತಂಡಗಳಾಗಿದ್ದು ಅವುಗಳಲ್ಲಿ ನೀನಾಸಂ ಅಸಮಬಲದ ತಂಡವೆಂದು ಬನ್ನಾಡಿಯವರ ಮಾತಿನ ಅರ್ಥವೆ? ಅವರು ಹೇಳುವ ಹಾಗೆ ನೀನಾಸಂ ನಾಟಕಗಳಿಂದಾಗಿ ತಮ್ಮದು ಕಳಪೆ ನಾಟಕ ಎಂಬ ಕೀಳರಿಮೆ ತಲೆ ದೋರಿ ಹಲವು ನಾಟಕ ತಂಡಗಳು ತಮ್ಮ ಚಟುವಟಿಕೆ ಸ್ಥಗಿತಗೊಳಿಸಿರು ವುದೇ ಹೌದಾದರೆ ಈ ಸಮಸ್ಯೆಗೆ ಏನು ಪರಿಹಾರ? ನೀನಾಸಂ ಇನ್ನು ಮುಂದೆ ಎಲ್ಲಿಯೂ ನಾಟಕ ಆಡ ಕೂಡದು ಎಂದು ಸರ್ಕಾರ ಕಾನೂನು ತರುವಂತೆ ಒತ್ತಾಯಿಸಿ ಚಳುವಳಿ ನಡೆಸಿದರೆ ಹೇಗೆ?

ಬನ್ನಾಡಿ ತಾನು ಬಳಸಿದ "ಸಾಂಸ್ಕೃತಿಕ ರಾಜಕಾರಣ" ಎಂಬ ಮಾತನ್ನು ನಾನು "ಜಾತಿ ರಾಜಕೀಯ" ಎಂದು ತಿರುಚಿದ್ದೇನೆ ಎಂದು ಹೇಳುತ್ತಾರೆ. ಅದು ಅಳಿಯ ಅಲ್ಲ ಮಗಳ ಗಂಡ ಎಂದು ಹೇಳಿದ ಹಾಗಲ್ಲವೆ? ಹಾಗಲ್ಲವಾದರೆ "ಸಾಂಸ್ಕೃತಿಕ ರಾಜಕಾರಣ" ಎಂದರೆ ಏನು ಎಂದು ಬನ್ನಾಡಿ ಸ್ಪಷ್ಟವಾಗಿ ಹೇಳಬೇಕು. ಅವರ ಬರಹದ ಮುಖ್ಯ ಸಮಸ್ಯೆಯೆಂದರೆ, ಅವರ ಯಾವ ಪದಪ್ರಯೋಗಕ್ಕೂ ನಿಖರವಾದ ವಿವರಣೆ ಇಲ್ಲದಿರುವುದು. "ಸಾಂಸ್ಕೃತಿಕ ರಾಜಕಾರಣ" "ಸಾರ್ವಜನಿಕ ಜೀವನಕ್ಕೆ ತಕ್ಕುದಲ್ಲದ ಭಾವನಾತ್ಮಕ ಅಂತರ್‌ಸೆಲೆ", "ಭಾವುಕ ಕೂಟ", "ಸಾಂಸ್ಕೃತಿಕ ಯಜಮಾನಿಕೆ" "ಭಾವುಕ ನೆಂಟಸ್ತಿಕೆ," "ನವ ಶ್ರೇಣೀಕೃತವ್ಯವಸ್ಥೆ", "ಅಗೋಚರ ಕಿರುಕೊಂದಿ(!)", "ಕೂಟ ಮಾದ[...] ರಾಜಕಾರಣ"- ಇವು ಬನ್ನಾಡಿಯವರ ಅಸ್ಪಷ್ಟ ಪದಪ್ರಯೋಗಗಳಲ್ಲಿ [...] ಮಾತ್ರ. ಇವೆಲ್ಲ ಸಾಬೀತಾಗಿರುವ ಅಪರಾಧಗಳು ಎಂದು ಬ[...] ಭಾವಿಸಿರುವುದರಿಂದ, ಇವಕ್ಕೆ ವಿವರಣೆ ಮತ್ತು ಪುರಾವೆ ಒದಗ[...] ಶ್ರಮವನ್ನು ಬನ್ನಾಡಿ ತೆಗೆದುಕೊಂಡಿಲ್ಲ, ತಮ್ಮ ತೀರ್ಮಾನಗಳಿಗೆ ವ್ಯತಿರಿ[...] ಪುರಾವೆಗಳನ್ನು ಬನ್ನಾಡಿ ಗಮನಿಸುವುದೂ ಇಲ್ಲ, ತಮ್ಮ ಹಿ[...] ಬರಹವೊಂದರಲ್ಲಿ ಅವರು ಬ್ರೆ[...] ವಹಿಸಿಕೊಂಡು ಆತನೇ ನ[...] ಮುಂದಿರುವ ಆಯ್ಕೆ, ಎ[...] ಹೇಳಿದರು; ಸರಿಯಾದ ಮಾತು. ಈ ಲೇಖನ ಬರೆಯುವ ಹೆ[...] ಬನ್ನಾಡಿಗೆ, ಬ್ರೆಕ್ಟ್ ಕಾವ್ಯ ನಾಟಕ ರಂಗ ಶೈಲಿಗಳನ್ನು ಕನ್ನಡಿ[...] ಮುಟ್ಟಿಸುವುದರಲ್ಲಿ ಅನಂತಮ[...] ಸುಬ್ಬಣ್ಣ ಅಕ್ಷರ ಮತ್ತು ನೀ[...] ವಹಿಸಿದ ಪಾತ್ರ ಮ[...] ಹೋಗಿದೆ! ಆದರೆ [...] "ಭಾವುಕ ಕೂಟ"ಕ್ಕೆ ಅ[...] ಆರೋಪಿಸುವ ಷಡ್ಯಂತ್ರಕ್ಕೆ [...] ಬೀಳುವ ಸಾಕ್ಷ್ಯ, ಜಾಣ ಮ[...]

ಅಡಿಗರು ಜನರಿಗೆ [...] ಬರೆಯಲಿಲ್ಲ ಎಂಬ [...] ಮಾತು ದಾರಿ ತಪ್ಪಿಸು[...] ಹದ್ದು ಎಂದು ಬ[...] ಬರೆಯುತ್ತಾರೆ. ಬನ್ನಾಡಿ[...] ಲೇಖನದಲ್ಲಿ ಪ್ರಸ್ತಾ[...] "ಮತ್ತೆ ಮೊಳ[...] ಪಾಂಚಜನ್ಯ" ಮತ್ತು "[...] ಸಮಾಜ"ಗಳನ್ನು ಸಹ ಅಡಿಗರು ಜನ ಮೆಚ್ಚಲಿ [...] ಬರೆಯಲಿಲ್ಲ, ಜನಮನಕ್ಕೆ ಮೆಚ್ಚುಗೆಯಾಗುವಂತಹ, "ರಾಜಕೀಯ[...] ಸಮರ್ಥಕವಾದ" ಒಂದು ಸಾಲನ್ನೂ ಅಡಿಗರು ಯಾವತ್ತೂ ಬರ[...] ಅವರ ಬಲಪಂಥೀಯ ರಾಜಕೀಯ ಧೋರಣೆಗಳ ಬಗ್ಗೆ ಈಗ ಹೊಸ[...] ಹೇಳುವುದು ಏನೂ ಉಳಿದಿಲ್ಲ, "ಮತ್ತೆ ಮೊಳಗಲಿ ಪಾಂಚಜನ್ಯ"ವೇ [...] ಅಡಿಗರ ಅತ್ಯುತ್ತಮ ಕವಿತೆಗಳಲ್ಲೂ ಪುನರುತ್ಥಾನವಾದೀ ಬಲಪಂಥ[...] ಆಶಯಗಳು ಇಲ್ಲವೆಂಬುದರ ಬಗೆಗೂ ಸಾಕಷ್ಟು ಚರ್ಚೆ ನಡೆದಿದೆ. [...] ಅತ್ಯುತ್ತಮ ಕಾವ್ಯ ಅವರ ಬಲಪಂಥೀಯ ರಾಜಕೀಯವನ್ನು ಮೀರಿ[...]ತ್ತದೆ ಮಾತ್ರವಲ್ಲ, ಅನೇಕ ಸಂದರ್ಭಗಳಲ್ಲಿ ಅದನ್ನು ನಿರಾ[...]ತ್ತದೆ ಕೂಡ. ಅಡಿಗರನ್ನು ಬಿಟ್ಟು ಇನ್ನು ಯಾವ ಬಲಪಂ[...] ಕವಿ, "ಸತ್ಯ ಶಿವಸುಂದರರ ಜಳ್ಳಿನುಪ್ಪಟ್ಟು" (ಹಳೆ ಮ[...] ಮಂದಿ) ಎಂದು ಬರೆಯಬಲ್ಲ? ಆರೆಸ್ಸೆಸ್‌ನ ಯಾವ ರಾ[...] ಅವರ "ರಾಮನವಮಿಯ ದಿವಸ"ವನ್ನು [...] ಮಾಡಿಕೊಳ್ಳಬಲ್ಲ? ಬನ್ನಾಡಿ, ನಾಚಿಕೆ ಸ್ವಭಾವದ ನ[...] ಗದಗುಡುವ ಚಳಿಯಲ್ಲಿ ಲಕ್ಷಾಂತರ ಜನರಿಗೆ ಪದ್ಯ ಓ[...] ಬಗ್ಗೆ ಬರೆದಿದ್ದಾರೆ. ಸ್ವಭಾವತಃ ಮುಖೇಡಿಯಾಗಿದ್ದ ಹಿ[...] ಜರ್ಮನಿಯಲ್ಲಿ ಲಕ್ಷಾಂತರ ಜನರ ಸಭೆಗಳನ್ನು ಉದ[...] ಭಾಷಣ ಮಾಡುತ್ತಿದ್ದ. ನಾನು ವಾಲ್ಟರ್ ಬೆಂಜಮಿನ[...] ನೆನಪಿಸಿಕೊಂಡ ಸಂದರ್ಭ ಅದು. ಮಾರ್ಕ್ಸ್‌ವಾದಿ[...] ಯಹೂದಿಯೂ ಆಗಿದ್ದ ಬೆಂಜಮಿನ್, ಜರ್ಮನಿ[...] ನಾಝಿಗಳು ಚುನಾವಣೆಯಲ್ಲಿ ಬಹುಮತ ಪಡೆದು [...] ಸರ್ವಾಧಿಕಾರಿಗಳಾದದ್ದಕ್ಕೆ ಪ್ರತ್ಯಕ್ಷದರ್ಶಿಯಾಗಿದ್ದ. ಬ[...] ಹೇಳುವ "ಜನಮನ" ಬೆಂಜಮಿನ್‌ಗೆ ಎಂದೂ ವಿಮರ್ಶೆಯ ನಿಕಷವಾಗು[...] ಸಾಧ್ಯವಿರಲಿಲ್ಲ, 'ಜನಮನ'ವೆನ್ನುವುದು ಅದರಷ್ಟಕ್ಕೆ ಅದು ಸ್ವಯಂ ಸಿದ್ಧ[...] ಮಾನದಂಡವಲ್ಲ, ಅದು ಸಂದರ್ಭಾನುಸಾರಿಯಾಗಿದ್ದು, ಆಯಾ ಸಂದ[...] ರಾಜಕೀಯವನ್ನು ಪ್ರತಿಫಲಿಸುವಂತಹದ್ದು. ಹಾಗಾಗಿ ಜನಮನವೆನ್ನುವು[...] ನಮಗೆ ಆಗದವರಿಗೆ ಇಕ್ಕಲು ಬಡಿಗೆಯ ಹಾಗೆ ಬಳಸುವುದು [...] ವಿಮರ್ಶೆಗೆ ಅದರಿಂದ ಬೇರೆ ಯಾವ ಉಪಯೋಗವೂ ಇಲ್ಲ.



ದೇಶಕಾಲ ಚರ್ಚೆ



• ಜಿ.ರಾಜಶೇಖರ

ದೇಶಕಾಲ ಅಂತಿಮ ತೀರ್ಪು!!

'ದೇಶಕಾಲ' ಕುರಿತಾದ ಚರ್ಚೆಯಲ್ಲಿ ಗೆಳೆಯ ವಸಂತ ಬನ್ನಾಡಿಯವರ ಕೊನೆಯ ಕಂತಿನ ಲೇಖನದ ವಿಷಾದ ನಮ್ಮನ್ನು ತಟ್ಟದಿದ್ದರೆ ನಮ್ಮ ಸಾಹಿತ್ಯ ಲೋಕಕ್ಕೆ ಏನೋ ಗ್ರಹಚಾರ ಬಡಿದಿದೆ/ಬಡಿಯಲಿದೆ ಎಂಬುದು ಖಚಿತ.

ಈ ಎರಡು ತಿಂಗಳೂ ಈ ಸಾಂಸ್ಕೃತಿಕ ರಾಜಕಾರಣದ ಚರ್ಚೆಯಲ್ಲಿ ಬನ್ನಾಡಿಯೇ ಅಂದಂತೆ ಯಾರು ಪ್ರತಿಕ್ರಿಯಿಸಬೇಕೋ ಅವರು ಜಾಣ ಮೌನ ವಹಿಸಿದ್ದಾರೆ. ಇದೆಲ್ಲಾ ಅಪಕ್ವ ಬಡಬಡಿಕೆ, ಇದೂ ತಣ್ಣಗಾಗುತ್ತದೆ, ಮತ್ತೆ ಸಾಂಸ್ಕೃತಿಕ ಸಂವಾದ ನಡೆಸಿದರಾಯಿತು, ಇದೂ ವಿಧಿಯ ಸಮಯ ಪರೀಕ್ಷೆ ಎಂದು ತಾಳಿಕೊಂಡರಾಯಿತು.. ಎಂಬ ಧೋರಣೆ ಕಣ್ಣಿಗೆ ಬಡಿಯುತ್ತದೆ.

ಇದೇನೂ ಹೊಸದಲ್ಲ, ಈ ಹಿಂದೆ ಮಠಗಳ ವಿರುದ್ಧ 'ಸಹಭೋಜನ ನಡೆಸಿ, ದಲಿತರ ಮನೆಯಲ್ಲಿ ನೀರು ಕುಡಿಯಿರಿ, ನಿಮ್ಮ ಮಡಿ ನಡವಳಿಕೆ ಬಗ್ಗೆ ಆತ್ಮವಿಮರ್ಶೆ ಮಾಡಿಕೊಳ್ಳಿ' ಎಂದೆಲ್ಲಾ ಆಕ್ರೋಶದ ಸವಾಲು ಹಾಕಿದಾಗೆಲ್ಲ ಮಠಗಳು ದಿವ್ಯ ಧ್ಯಾನಶೀಲ ಮೌನ ವಹಿಸಿ ಉತ್ತರಿಸಬೇಕಾದ ಗಂಡಾಂತರದಿಂದ ಆ ಕ್ಷಣಕ್ಕೆ ಪಾರಾಗಿ, ವೈದಿಕ ನಿತ್ಯ ನೈಮಿತ್ತಿಕಗಳಲ್ಲಿ ಮುಳುಗಿದ್ದನ್ನು ನಾವು ಕಂಡಿದ್ದೇವೆ. ಆದರೆ ಈ ರೀತಿಯ ನಟನೆಯ ಮೂಲಕ ಕಾಲದ ನದಿಗೆಯಲ್ಲಿ ಪಾಂಡವರಂತೆ ಬಿದ್ದು ಹೋಗಿದ್ದನ್ನೂ ಕಂಡಿದ್ದೇವೆ.



ಪ್ರಾಯಶಃ ಐಜೂರ್, ಲತಾ, ಅರುಣ ಅಥವಾ ಬರಗೂರು, ನಾನು ಮತ್ತು ಬನ್ನಾಡಿ ಎತ್ತಿರುವ ಪ್ರಶ್ನೆಗಳು ಉತ್ತರಿಸಲೂ ಯೋಗ್ಯವಲ್ಲ ಎಂಬ ಮೌನ ವಹಿಸಿದರೆ ಒಂದೋ ನಮ್ಮ ಸಂವೇದನೆ ತೀರಾ ಕೆಳಮಟ್ಟದ್ದು ಎಂದರ್ಥ. ಇಲ್ಲವಾದರೆ, ಉತ್ತರಿಸಲು ಹೊರಟರೆ, ಬೌದ್ಧಿಕವಾಗಿ, ಸಾಂಸ್ಕೃತಿಕವಾಗಿ ಇನ್ನಷ್ಟು ಮುಜುಗರ ಹುಟ್ಟಿಸುವ ಪ್ರಶ್ನೆಗಳನ್ನು ಮೈಮೇಲೆ ಎಳೆದುಕೊಳ್ಳಬೇಕಾದೀತು ಎಂಬ ಎಚ್ಚರವೂ ಕಾರಣವಿದ್ದೀತು.

'ದೇಶಕಾಲ'ದ ಬಳಗದ ದಿವ್ಯಮೌನದಿಂದ 'ದೇಶಕಾಲ'ವೇ 21ನೇ ಶತಮಾನದ ಉದಯೋನ್ಮುಖ ಪ್ರತಿಭೆಗಳಲ್ಲೊಂದು ಎಂದು ಮಾನ್ಯ ಮಾಡಿರುವ 50ರ ಗಡಿಯಲ್ಲಿರುವ (!) ನನಗಂತೂ ನಾನು ಪ್ರತಿಭಾವಂತನೋ ಅಥವಾ 'ದೇಶಕಾಲ'ದವರ ಆಯ್ಕೆಯ ದಡ್ಡತನದ ಪ್ರತೀಕವೋ ಎಂಬ ಗೊಂದಲ ಆವರಿಸಿದೆ.

ಸಾಹಿತ್ಯವೇ ಒಂದು ಸಂವಾದ, ಅನುಸಂಧಾನ. ಈಗ ನಾವು ಎತ್ತಿರುವ ಸಂವಾದದಲ್ಲೇ ಭಾಗಿಯಾಗಲು ನಿರಾಕರಿಸುವ ಮಂದಿ ಬದುಕಿನ ಜೊತೆ ಅನುಸಂಧಾನ ನಡೆಸುತ್ತಾರೆಂದು ಹೇಗೆ ಭಾವಿಸೋಣ?

ಸಾಹಿತ್ಯ ಬದುಕಿನ ಬಹು ಮುಖ್ಯ ಅಂಗ. ಆದರೆ ಅದು ದಾರಿಯೇ ಹೊರತು ಗುರಿಯೆಂದು ಭಾವಿಸದೇ ನಾವೆಲ್ಲ ಮತ್ತೆ ಸಾಮುದಾಯಿಕ ಅನುಭವಗಳ ಭಾಗವಾಗುವುದರತ್ತ ಹೊರಳುವುದೇ ಅರ್ಥಪೂರ್ಣವೇನೋ.

• ಕೆ.ಪಿ.ಸುರೇಶ, ಬೆಂಗಳೂರು

ಮುಂದೆ ಗಣಿಗಾರಿಕೆ ನಿಂತ್ರೂ ಗಲಾಟಿ ನಿಲ್ಲದಿಲ್ಲವಂತೆ!

...ಿವಂತನಾದರೂ ಕನ್ನಡ ನಾಡಲ್ಲೇ ಮೆರೆವೇ, ...ದರೂ ಕನ್ನಡ ನಾಡಲ್ಲೇ ಮಡಿವೆ" ಎಂದು ... ವಾಟಿಸ್ಸೆ ಬಂದ.

...ವಂತಾಗಕ್ಕಂತೂ ಆಗದಿಲ್ಲ, ಭಿಕ್ಷುಕನಂತೂ ...ದು ಬುಡು" ಎಂದ ಉಗ್ಗಿ.

...ಗ್ಲೂ ಒಂಥರಾ ಭಿಕ್ಷೆ ಮಾಡೋನೇ ಅಲವೇನ್ನ

...ಮಲು ಸೀಮೆ ...ಪ್ಪೆ ಪುರಾಣ

▶▶ ಬಿ. ಚಂದ್ರೇಗೌಡ

ಎಂದಳು ಜುಮ್ಮಿ.

...ಮಾತ್ ವಾಪಸ್ ತಗಳಕ್ಕ ನೀನು. ನಮ್ಮ ಭಿಕ್ಷೆನೆ ಬ್ಯಾರೆ, ಗಿಫ್ಟೇ ಬ್ಯಾರೆ, ಕಾಣಿಕೆನೆ ಬ್ಯಾರೆ. ...ಂಡ್ಸು ನನ್ನ ಹ್ಯಾಬಿಟ್ಟ ಗೌರವಿಸಿ ಕಾಣಿಕೆ ಕೊಡ್ತಾರೆ. ...ೀನು ಭಿಕ್ಷೆ ಅನ್ನಬಾರದು."

...ಾಕನ್ನಬಾರದ್ದ?"

...ೀಡಕ್ಕ, ಕರ್ನಾಟಕದಲ್ಲಿ ಭಿಕ್ಷುಕರಿಗೆ ಉಳಿಗಾಲಿಲ್ಲ, ...ಲ್ಲ ತುಂಡೋಗಿ ಇಲಿ ಪಾಷಾಣ ಹಾಕಿ ಸಾಯಿಸ್ತಾ...

...ಾಗರೆ ಈಗ ಸತ್ತ ಭಿಕ್ಷುಕರಿಗ್ಯಲ್ಲ ಇಲಿ ಪಾಷಾಣ ...ನ್ನ?"

...ಕಣಕ್ಕ. ಯರಡು ಮೂರುದಿನದಲ್ಲಿ ಇಪ್ಪತ್ತೈದು ... ಅಂದ್ರೆ ಏನಾರ ಹಾಕಿರಬೇಕಲ್ವೇ?"

...ಬುಡ್ಡ, ಈ ನನ ಮಕ್ಕಳು ಇಸ ಹಾಕಕ್ಕೂ ...ರಲ್ಲ" ಎಂದ ಸೀರ.

...ಚಿಗಪ್ಪ ನೀನು ಈಗ ಹಾಕಿರೊ ಡ್ರಸ್ನಲ್ಲಿ ...ರಿಗೇನಾರ ಹೋದಿಯಾ."

...ಾಕ್ಯಾ ಹೋಗಬಾರ್ದು?"

...ಗ್ಗರ್ ಅಂತ ಹಿಡಕಂಡು ಬೆಗ್ಗರ್ ಕಾಲೋನಿಗೆ ...ೀಗಿ ಹಾಕ್ತರೆ. ಆಗ ನಾವು ಏನು ಮಾಡಿದ್ರೂ ...ಡಿಸಿಗಂಡು ಬರಕ್ಕಾಗದಿಲ್ಲ, ಸತ್ರ ಕೂಡ ಸವ ...ೀಕಿಟ್ಟಾಗಿ ದಫನ್ ಮಾಡ್ತರಂತೆ."

...ರ ಮಾವ್ಪನ್ನಾಕ್ಕೆ ಹಿಡಕಂಡೋದರೂ?"

...ೀಡಕ್ಕ, ಈಗ ಬೆಂಗಳೂರಿಂದ ತಪ್ಪಿಸಿಗಂಡು ...ವರು ಥೇಟ್ ನಮ್ ಸೀರ ಚಿಗಪ್ಪನಂಗೇ ಅವುರೆ. ...ಗಪ್ಪನ ಕಾಕಿ ಚಿಡ್ಡಿ ಮಾತ್ರ ಆರೆಸ್ಸೆಸ್ ತರ ಆದೆ, ... ಆ ಬೂದು ಬಣ್ಣದ ಅಂಗಿ ನೋಡಿದ್ರೆ ಬೆಗ್ಗರ್ ...ರ ಆದೆ. ಅದ್ಕೆ ಹೇಳಿದ್ನು."

...ಲ್ಲಾ ಭಿಕ್ಷುಕರು ಆಗಿರದು ನಮ್ಮ ಯಮ್ಮೆಲ್ಯೆಂದ್ಲೆ ...ವರ ಸರಿಯಾಗಿ ನೋಡಿಕೊಳ್ಳದೆ ಆಟೋಂತರ ...ರೂ ಅಂದ್ರೇ, ಅದಕೆ ಯಾರು ಜವಾಬ್ದಾರೂ?" ...ಳಮಾವ.

...ವಾಬ್ದಾರು ಯಾರು ಅಂದ್ರೆ, ಎಡೂರಪ್ಪನೇ ದ್ವಡಪ್ಪ ...ವುನು ರೆಡ್ಡಿಗಳ ಸಮಾವೇಶದಲ್ಲಿ ಬಜೆಯಾಗಿದ್ದ... ಆದ್ರು ಆ ಟೇಮಲ್ಲಿ ಆಗ್ಲೆ ಇಪ್ಪತ್ತಮೂರು ಜನ ಸತ್ತಿದ್ರು. ಎಡೂರಪ್ಪನಿಗೆ ಮನಸಿದ್ರೆ ಅಲ್ಲಿಗೋಗದೆ ಬೆಗ್ಗರ್ ಕಾಲೋನಿಗೆ ಬಂದಿದ್ರೆ ರೆಡ್ಡಿಗಳೂ ಏನು ಮಾಡಕ್ಕಾಯ್ತಿರಲಿಲ್ಲ."

"ಆ ಎಡೂರಪ್ಪನಿಗೆ ಹಿಂದುಳಿದ ವರ್ಗ ಕಂಡ್ರೆ ಆಗದಿಲವಂತೆ. ಇನ್ನ ಭಿಕ್ಷುಕರು ಸತ್ರೆ ಬಂದನೇನೊ ವಾಟಿಸ್ಸೆ? ಅವುನೇನಿದ್ರು ಗಣೇಶನ ಮದುವೆ ಸಿನುಮ ನೋಡಿಕಂಡು ಕಾಲಹಾಕೊ ಗಿರಾಕಿ" ಎಂದ ಉಗ್ಗಿ.

"ಮಿಸ್ಟರ್ ಉಗ್ಗಿ, ಯಲ್ಲಾ ಅನಾಹುತಕ್ಕು ಸಿ.ಎಂ.ನೇ ಜವಾಬ್ದಾರನ್ ಮಾಡಕ್ಕೆ ಬರದಿಲ್ಲ. ಅದ ನಾನು ಒಪ್ಪಿಗತಿನಿ. ಆದ್ರೆ ಆ ಟೈಮಲ್ಲಿ ಎಡೂರಪ್ಪ ಹ್ಯಂಗೆ ನಡಕಂಡ ಅನ್ನದು ಮುಖ್ಯ. ಹೇಳಿಕೇಳಿ ಸುಸುಮ ಸ್ವರಾಜ್ ಕಂಡ್ರೆ ಎಡೂರಪ್ಪನಿಗೆ ಆಗದಿಲ್ಲ, ಅಂಥೋಳ ಸಭಿಗಿಂತ ಇಪ್ಪತ್ತು ಜನ ಸತ್ತ ಜಾಗಕ್ಕೆ ಹೋಗಬೇಕಾಗಿತ್ತು, ಆಗೆ ಅವುನು ನಿಜವಾದ ಲೀಡ್ರಾಗನು. ಜನರ ನಾಯಕ ಆಗನು."

"ಎಡೂರಪ್ಪನಿಗೆ ಅದಿಲ್ಲ ಬುಡೊ. ಮುಖ್ಯಮಂತ್ರಿ ಮಕನೋಡಿದ್ರೆ ಯಲ್ಲಾ ಜನಾಂಗಕ್ಕೂ ಇವುನು ನಮ್ಮೋನು ಅನ್ನಸ ಬೇಕು. ಎಡೂರಪ್ಪನ ಕಂಡ್ರೆ ಅಂಗನ್ನ ಕ್ಯಾಗತೋ?"

"ಆ ತರ ಇದ್ರೋನು ಅರಸು ಮಬ್ಬೇನೆ ಕಣೊ. ಯಾವ ಜಾತಿಗೆ ಮಂತ್ರಿ ಪದವಿ ಸಿಕ್ಕಿಲ್ಲವೊ, ಆ ಜಾತಿ ಜನ ನನ್ನನ್ನೇ ನಿಮ್ಮ ಜನಾಂಗದ ಮಂತ್ರಿ ಅಂತ ತಿಳಕಳಿ ಅಂತ ಹೇಳಿದ್ನ, ಅಂಗೇ ನಡಕಂಡ. ಅಂಥೋನ್ನ ನನಿಸಗಳೊ ಸಭಿಗೆ ಈ ಎಡೂರಪ್ಪ ಇಲ್ಲಿಗಂಟ ಹೋಗಿಲ್ಲವಂತೆ. ಇದಕ್ಕೇ ನೆಲ್ಲಿ?"

"ನೋಡು ಮತ್ತೆ ಇನ್ನಂಥ ಸಣ್ಣ ಮನುಸ ಇದ್ದನವುನು. ಸಣ್ಣ ಮನುಸ್ಯರ್ದೊನು ಸಣ್ಣ ಕಲಸನೇ ಅಲವೆ ಮಾಡದು."

"ಇಪ್ಪತ್ತಾರು ಜನ ಸತ್ತ ಜಾಗಕ್ಕೆ ಹೋಗ್ಲೋನು. ಇಪ್ಪತೊರಸದ ಮ್ಯಾಲೆ ನ್ಯಡಿಯೋ ಅರಸು ತಿಥಿಗೋದನೇನ್ನ?" ಎಂದ ಸೀರ.

"ನಮ್ಮ ಚಿಗಪ್ಪ ಹೇಳೋದ್ರಲ್ಲೂ ಥಿಂಕ್ ಮಾಡೋ ಅಂತಪ್ಪದ್ದೇ ಕಣೊ ಉಗ್ಗಿ, ಯಾಕೆ ಎಡೂರಪ್ಪನಿಂದ ನಾವು ಇಂತ ನಡವಳಿಕೆನ್ನಲ್ಲ ನಿರೀಕ್ಷೆ ಮಾಡ್ತೀವಿ. ಪಾಪ ಅವುನು ಇರದೆ ಅಂಗೆ."

"ಅಂಗನ್ನಕಂಡು ಸುಮ್ಮನಾಗಕ್ಕೇನು ನಿಮಗೆ?" ಎಂದ ಕಾಳಮಾವ.

"ಸುಮ್ಮನಾಗಬವುದಿತ್ತು ದ್ವಡಪ್ಪ, ಅದವುನು ಮುಖ್ಯಮಂತ್ರಿ. ಈ ರಾಜ್ಯದ ಮುಖ್ಯಮಂತ್ರಿಯಾದಿಂದ ನಮಿಗೂ ಮುಖ್ಯ ಮಂತ್ರಿ."

"ನನಗಂತೂ ಅಂಗನ್ನಿಸಲ್ಲ ಕಂಡ್ರ, ಅದ್ಯಾಕೆ ಸುಳ್ಳೇಳೀನ"

"ಓಹೋ, ನಿನಿಗೆ ದೇವೇಗೌಡ್ರು ಮಾತ್ರ ಲೀಡರಲವೆ. ನಾನು ಮರತೇ ಬುಟ್ಟಿದ್ದೆ"

"ದ್ಯಾವೇಗೌಡ್ರಷ್ಟೇ ಅಲ್ಲ ಕಂಡ್ರ, ನಿಜಲಿಂಗಪ್ಪ ಇರೇಂದ್ರ ಪಾಟೀಲ, ಅರಸು, ಹ್ಯಗಡೇರು, ಅಮ್ಯಾಲೆ ಪಟೇಲ್ ಇವುರ್ಯಲ್ಲ ನಿಜವಾಗ್ಲು ದ್ವಡ್ಡ ಜನ. ಅವುರಿಗ್ಯಲ್ಲ ಈಗಿನೋರ ಹೋಲಸಕ್ಕಾಗದಿಲ್ಲ" ಎಂದ ಕಾಳಮಾವ.

"ಅದು ನಿಜ. ಆದ್ರು ದ್ವಡಪ್ಪ ನನಿಗೊಂದು ಭಯ ಅದೆ."

"ಅದ್ಯಾವುದಪ್ಪ ನಿನ್ನ ಭಯ?"

"ನೋಡಕ್ಕ, ಕುಮಾರಸ್ವಾಮಿಯಂಥೋನು ಮುಖ್ಯ ಮಂತ್ರಿಯಾದ ಮ್ಯಾಲೆ, ಎಡೂರಪ್ಪನಂಥೋನು ಆದ. ಮುಂದೆ ಶ್ರೀರಾಮುಲು ತರದೋನು ಆದ್ರೆ ಗತಿಯೇನು ಅಂತ ಭಯ ಕಣಕ್ಕ."

"ಅಂಗೇನು ಆಗದಿಲ್ಲ ಸುಮ್ಮನಿರೊ. ಆ ಮುಂಡೆದ್ಕೆ ಸರಿಯಾಗಿ ಮಾತಾಡಕ್ಕೆ ಬರದಿಲ್ಲ, ಪಾದಯಾತ್ರೆ ಬತ್ತಾ ಅವುರೆ ಕಾಂಗ್ರೆಸಿನೋರು ಅಂದಕೂಡ್ಲೆ ತಲೆಬೋಳಿಸಿಗಂಡು ತದ್ದಿಕಾಳು ತಿಂತ ಕೂತಿದ್ದ, ಅದೇನೊ ಸುಸುಮ ಸ್ವರಾಜ್ ಅನ್ನೋಳು ಇರಗಂಟ ಅಂಗಾಡ್ತವೆ. ಅಮ್ಯಾಲತ್ತಗೋಯ್ತವವು" ಎಂದ ಉಗ್ಗಿ.

"ಅದೇನ್ಲ ಅವುಳ ಕಂಡ್ರೆ ಅಂಗಾಡ್ತರವುರು?"

"ಅಯ್ಯೋ, ಅವುಳ ಕಾಲಲ್ಲಿ ತೋರಿದ್ದ ತಲೆಮ್ಯಾಲೊತ ಗಂಡು ಮಾಡ್ತವೆ ಕಣೆ. ಅವುತ್ತು ಬಳ್ಳಾರಿ ಸಭೆಲಿ ಸುಸುಮ ಸ್ವರಾಜ್ ಯಕ್ಕದವ ರೆಡ್ಡಿ ವರಸಿ ವರಸೀಕೊಟ್ಟನಂತೆ. ಆ ಮುಂಡೆಮಗ ತಾನು ಕರ್ನಾಟಕದ ಮಂತ್ರಿ ಅನ್ನದು ಮರತಿದ್ದ" ಎಂದ ಉಗ್ಗಿ.

"ಮಿಸ್ಟರ್ ಉಗ್ಗಿ, ರಿಯಲ್ ಮ್ಯಾಟರೇನು ಗೊತ್ತೇನೋ? ಈ ರೆಡ್ಡಿಗಳು ಸುಸುಮವುನ ಮುಟ್ಟನ ಸೀರಿ ಹ್ಯಗದುಕೊಟ್ರೂ ಅವುಳ ರುಣ ತೀರಸಕ್ಕಾಗದಿಲ್ಲವಂತೆ."

"ಅಂತ ಉಪಕಾರ ಏನು ಮಾಡಿದ್ದಳ್ರ?"

"ಏನು ಮಾಡ್ವಳಲ ಅಂತಿಯೇನಕ್ಕ? ಅವುಳು ಕೇಂದ್ರದಲ್ಲಿ ಮಂತ್ರಿಯಾಗಿದ್ದಾಗ, ಈ ರೆಡ್ಡಿ ರಾಮುಲು ಬಳ್ಳಾರಿ ಗಲ್ಲಿಲಿ ಲೂಸಾದ ಮ್ಯಾಲೆ ಓಡಾಡತಿದ್ದವಂತೆ. ಆಗ ಈಯಮ್ಮ ಕರದು, ಚೀನಾದೇಸಕ್ಕೆ ಬಳ್ಳಾರಿ ಮಣ್ಣು ಬೇಕಂತೆ, ಆದ ಅಗುದು ಮಾರಿಕಳಿ ಅಂತ ಹೇಳಿ ಏನೇನು ಮಾಡಬೇಕು ಅಂತ ಯಲ್ಲಾನು ತಿಳಿಸಿಕೊಟ್ಟಳಂತೆ. ಅದೂ ಅಲ್ದೆ ಫೈನಾನ್ಸಿಯಲ್ ಹೆಲುಪ್ಪೂ ಮಾಡಿದ್ಲಂತೆ."

"ಓಹೊಹೊ, ಅದ್ಕೆ ಈಗ ಸಾಲ ತೀರುಸ್ತಯಿರಬೇಕು."

"ಥೂ, ಸಾಲ ಒಂದೇ ಕಂತಲಿ ತೀರೋಗ್ಯದೆ. ಆದ್ರೆ ಆ ಯಮ್ಮ ತೋರಿಕೊಟ್ಟ ದಾರಿಲಿ ಹೋದದ್ಕೆ ಈ ರೆಡ್ಡಿ ರಾಮುಲು ಸಾವುರಾರು ಕೋಟನೇ ಬಾಚಿ ಬಳದು ಗುಡ್ಡೆಹಾಯ್ಕಂಡು ಕುಂತವುರೆ. ಅದೂ ಅಲ್ದೆ ಅದರಲ್ಲಿ ಪ್ರತಿ ವರ್ಸ ಲಕ್ಷ್ಮಿಪೂಜೆ ದಿನ ಕಾಸುಕೊಡ್ತರೆ. ಅದ್ಕೆ ಅವುಳು ಅಮ್ಮ, ಇವುರು ಮಕ್ಕಳು. ಎಡೂರಪ್ಪ ಯರಡ ಮಾಡಿಕಂಡ್ರೂ ರೆಡ್ಡಿಗಳ ಏನು ಮಾಡಕ್ಕೂ ಆಗದಿಲ್ಲ."

"ಅದೇನಾರ ಆಗ್ಲಿ, ಈ ರೆಡ್ಡಿಗಳು ನಾವು ಅಕ್ರಮವೇ ಮಾಡಿಲ್ಲ, ಬೇಕಾದ್ರೆ ಬಹಿರಂಗವಾಗಿ ನ್ಯಾಣಯ್ಯತ್ತೀವಿ ಅಂತರಲ್ಲ, ನಿಜವೇ?"

"ಅವುರೇಳ್ತಯಿರದು ಅವುರ ಭಾಗಕ್ಕೆ ನಿಜ. ಅವ್ರು ಗಣಿ ಮಾರಿಲ್ಲ, ಮಣ್ಣು ಮಾರಿ ಬುಟ್ಟವುರೆ. ಆಮ್ಯಾಲೆ ಗಣಿ ಲೂಟಿ ಮಾಡೋರತ್ರ ಹಪ್ತಾ ವಸೂಲಿ ಮಾಡ್ತವುರೆ. ಅವುರು ನ್ಯಾಯವಾಗೇ ಮಾಡಿದ್ರೆ ನಲವತ್ತೈದು ಕೋಟಿ ರೂಪಾಯಿನ ಕಿರೀಟವೆ ತಿರುಪ್ತಿ ತಿಮ್ಮಪ್ಪನಿಗೆ ಕೊಡ ಕ್ಕಾಯಿತ್ತೆ?"

"ಆಟೊಂದು ದುಡ್ಡಿನ ಕಿರೀಟ ಕೊಟ್ಟಿದ್ದನೆ?"

"ಕೊಟ್ಟ ದ್ವಡಪ್ಪ, ಯಾಕ್ ಕೊಟ್ಟ ಅಂದ್ರೆ, ಅದರದೊಂದು ಸ್ಟೋರಿನ ಆದೆ. ಏನಪ್ಪ ಅಂದ್ರೆ ಕರ್ನಾಟಕ ಆಂಧ್ರದ ನಡುವೆ ಗಡಿರೇಖೆ ಹೋಗ್ತದಲ್ಲ, ಅದರ ಮ್ಯಾಲೆ ದುಗ್ಗಲಮ್ಮನ ಗುಡಿ ಇತ್ತಂತೆ. ಗುಡಿ ಕ್ಯಳಗೆ ಭಾರಿ ಕಬ್ಬಣದ ಅದುರೇ ಇತ್ತಂತೆ. ಅದಕ್ಕೆ ರೆಡ್ಡಿ ಬಾಂಬಾಕಿ ಉಡಾಯಿಸಿದ್ರಂತೆ. ಜನ ಗಲಾಟ ಮಾಡಿದಾಗ ತಿರಗ ಒಂದು ದೇವಸ್ಥಾನ ಕಟ್ಟಿ ಕೊಟ್ಟನಂತೆ. ಆದ್ರು ಅವ್ರುನಿಗೆ ಸಮಾಧಾನ ಆಗಲಿಲ್ಲವಂತೆ. ಯಂಗಾರ ಆಗ್ಲಿ ಅಂತ ದೇವರಿಗೆ ದೇವರಾದ ತಿರುಪ್ತಿ ತಿಮ್ಮಪ್ಪನಿಗೆ ಕಿರೀಟ ಮಾಡಿಸಿಕೊಟ್ಟನಂತೆ."

"ಇರಬಹುದು ಬುಡು"

"ಇರಬವುದೇನು, ಇಟೀಸ್ ಫ್ಯಾಕ್ಟ್. ಇವತ್ತು ಬಳ್ಳಾರಿ ಹುಡುಗರಿಗ್ಯಲ್ಲ ಬೈಕು, ಮೊಬೈಲು ಕೊಡಿಸಿದ್ದರಂತೆ. ಆ ಹುಡುಗ್ರು ಬಳ್ಳಾರಿಗೆ ಯಾರೇ ಬರ್ಲಿ ಅವುರ ಸಂಪೂರ್ಣ ವಾಚ್ ಮಾಡಿ, ಡೀಟ್ಯಲ್ಸನ್ನ ಕಲೆಕ್ಟ್ ಮಾಡಿ, ರೆಡ್ಡಿ ರಾಮುಲುಗೆ ತಿಳುಸ್ತರಂತೆ. ಗಣಿಗಾರಿಕೆ ನಿಂತಮ್ಯಾಲೆ ಆ ಹುಡುಗ್ರು ಕೋಲೆಗಡುಕ್ರಾಯ್ತರೆ. ಅಂತೂ ಗಣಿ ನಿಂತ್ರು ಗಲಾಟಿ ನಿಲ್ಲದಿಲ್ಲ."

"ಅದೇನಾರ ಆಗ್ಲಿ, ಕರ್ನಾಟಕದಲ್ಲಿ ಅವರು ಯಾವ ಮೂಲಿಗೋದ್ರು ವಳ್ಳೆ ಜನ ಬಂದ್ರು ಅಂತ ಯಾರೂ ಅನ್ನದಿಲ್ಲ ಬುಡು."

"ಅದವುರಿಗೆ ಬೇಕಾಗೂ ಇಲ್ಲ ದ್ವಡಪ್ಪ, ಈಗ ನಮ್ಮ ಶಿವರಾಮೇಗೌಡ 'ಹೌದು ನಾನು ಅಂಥೋನೆಯ, ಏನೀಗ' ಅಂತ ರವಿ ಪೂಜಾರಿ ಅನ್ನೊ ರೌಡಿಗೆ ರೈಟ್ ಹ್ಯಾಂಡಾಗ್ಯವುನಂತೆ."

"ಅವ್ನುನ್ಯಾರ್ಲ ರವಿಪೂಜಾರಿ?"


"ತಿಳಕಂಡು ಬಂದು ಹೇಳ್ತಿನಿರು!"



...ಮಜೂರಿ' ಕುರಿತು

ಮೊನ್ನೆ ಗೆಳೆಯರೊಬ್ಬರು ಹೇಳಿದ್ದು ಇದು. ಅವರ ದೊಡ್ಡ ಊರಲ್ಲಿ ಒಂದು ...ಂಬ. ದೂರದಿಂದ ನೋಡಲು ಸುಖವಾಗಿಯೇ ಇದ್ದ ಗಂಡ, ಹೆಂಡತಿ. ಈ ...ತಿ ಎಂಥ ಸುಂದರಿಯೆಂದರೆ, ಜೀವ ಉಕ್ಕಿಸುತ್ತಿದ್ದ ಮೈ; ಎಂಥ ಸ್ನಾಯುವಿಯಾದರೂ ...ಕಣ್ಣು ಸೆರೆಸಿಳೆಯುವ ಮುಖ, ಕಣ್ಣು. ಸಾಮಾನ್ಯವಾಗಿ ಈಕೆ ಮೌನಿ. ...ಮೌನ ಏನೋ ಅನ್ಯಾಯವಾಗಿರುವಂತೆ, ಆಕೆಯ ದೇಹದಲ್ಲಿ ಯಾವುದೋ ...ಾಳಿ ಎದ್ದು ಅದನ್ನು ಆಕೆ ವಿಕ್ಕಿಸುತ್ತಿದ್ದಂತೆ.... ಮದುವೆಯಾಗಿ ಐದು ವರ್ಷವಾದ ...! ಆಕೆ ಅದೇ ರಸ್ತೆಯ ಒಬ್ಬ ತರುಣನನ್ನು ಕಟ್ಟಿಕೊಂಡು ಓಡಿಹೋದಳು. ...ಗಂಡ ನಿರೀಕ್ಷಿಸದೆ ಇದ್ದ ಆಘಾತ. ಐದು ದಿನವಾದ ಮೇಲೆ ಹಿಂದಿರುಗಿದಳು. ...ಸಿಟ್ಟಿನಿಂದ ಏನೋ ಕೇಳಬಂದಾಗ ಹೇಳಿದಳು "ಬಾಯಿಮುಚ್ಚಿಕೊಂಡು ...ರಬೇಕು, ಇಲ್ಲದಿದ್ದರೆ ದೊಡ್ಡ ರಂಪವಾಗುತ್ತೆ" ಆತ ಹೆದರಿಕೊಂಡು ಸುಮ್ಮನಾದ. ...ತಿಂಗಳಿಗೊಮ್ಮೆ, ಎರಡು ತಿಂಗಳಿಗೊಮ್ಮೆ ತನ್ನ ಪ್ರೇಮಿಯೊಂದಿಗೆ ಹೋಗುವುದು ...ಮುಂದುವರಿಯಿತು. ಒಬ್ಬ ಮಗ ಕೂಡಾ ಹುಟ್ಟಿದ. ಈ ಮಗ ಬೆಳೆದಂತೆ ಅವನ ...ರನ್ನು 'ಹಾದರಕ್ಕೆ ಹುಟ್ಟಿದವನು' ಎಂದು ಛೇಡಿಸುತ್ತಿದ್ದರು. ಅವನ ಅಮ್ಮನಿಗೆ ...ಏನೂ ಮಾಡಲಾಗಲಿಲ್ಲ, ಅವಳದು ಯಥಾಪ್ರಕಾರ ಮೌನ. ಒಂದು ...ಹುಡುಗ ಅವಮಾನ ಸಹಿಸಲಾರದೆ ಆತ್ಮಹತ್ಯೆ ಮಾಡಿಕೊಂಡ.

...ಇಲ್ಲಿ ಗೆಳೆಯರಿಂದ ಕೇಳಿದ ಮೇಲೂ ಅಂಬಿಗನಿಗೆ ಮಜೂರಿ ಕೊಡಲೇಬೇಕಾಗುತ್ತದೆ.



ಪುಣ್ಯವಂತರು

ಮೊನ್ನೆ ಮಾಸ್ತಿಯವರ ಆತ್ಮಚರಿತ್ರೆ 'ಭಾವ' ಓದುತ್ತಿದ್ದೆ. ಮಾಸ್ತಿ ತುಂಬ ಸಂಪ್ರದಾಯವಂತರು, ಭಾರತೀಯ ಬದುಕನ್ನು ತಮ್ಮದೇ ಆದ ರೀತಿಯಲ್ಲಿ ಗ್ರಹಿಸಿದವರು. ನಮ್ಮ ಸುತ್ತಣ ವಾತಾವರಣದಲ್ಲೇ ಇರುವ ಗೊಡ್ಡು ನಂಬಿಕೆ, ಮೌಢ್ಯ, ಅಸಮರ್ಥನೀಯ ಭಕ್ತಿ, ಹಸ್ತಸಾಮುದ್ರಿಕೆ ಎಲ್ಲವನ್ನೂ ನಂಬಿದವರು; ಇದೆಲ್ಲ ಜನರನ್ನು ಹೇಗೆ ನಡೆಸುತ್ತದೆ ಎಂದು ಕುತೂಹಲಗೊಳ್ಳುವ ಜೊತೆಗೆ ತಾನೇ ಇದನ್ನೆಲ್ಲ ಒಪ್ಪಿದವರು. ಹೀಗಾಗಿ ಮಾಸ್ತಿ ಪಾಳೆಗಾರಿಕೆ, feudalism ನಿಂದ ಹಿಡಿದು ಸಮಾಜದ ಎಲ್ಲ ಅನ್ಯಾಯವನ್ನೂ ಸಹಿಸುತ್ತಾರೆ; ಇದರಿಂದಾಗಿ ಲೇಖಕರಾಗಿ ಮಿತಗೊಳ್ಳುತ್ತಾರೆ. ಮೇಲ್ನೋಟಕ್ಕೆ ಮಾಂತ್ರಿಕತೆ, ಪವಾಡ ನಂಬಿದವರು ಆಳಕ್ಕೆ ಹೋಗುವುದಿಲ್ಲ, ಹಳ್ಳದ ನೀರು ಎಂಥದಿದ್ದರೂ ಒಪ್ಪಿಕೊಳ್ಳುವ ಭೂಮಿಯಾಳದ ಜಲಕ್ಕಾಗಿ ಪ್ರಯತ್ನಿಸುವುದಿಲ್ಲ. ಹೀಗಾಗಿ ಮಾಸ್ತಿಯವರ ಹಲವಾರು ಬರಹಗಳಿಗೆ ರವಿನ್ಯೂ ಆಫೀಸರನ ಅಥವಾ ಊರ ಪುರೋಹಿತನ ಅಥವಾ ಶಾನುಭೋಗನ ಬರವಣಿಗೆಯಂತೆ ಕಾಣಿಸುತ್ತವೆ.

ನನಗೆ ನಗೆ ಬಂದದ್ದು ಮಾಸ್ತಿ ಶ್ರೀಮಂತರನ್ನು ಪದೇಪದೇ 'ಪುಣ್ಯವಂತರು' ಎಂದು ಕರೆಯುವುದನ್ನು ನೋಡಿ. All property is theft ಎಂದು ಹೇಳುವುದೂ ಅತಿರೇಕವಿರಬಹುದು; ಆದರೆ ಎಲ್ಲ ಹಣವಂತರೂ ಪುಣ್ಯವಂತರೆಂದು ಹೇಳುವುದೂ ಅಷ್ಟೇ ಅತಿರೇಕ. ಜ್ಯೋತಿಷ್ಯ, ಕೈ ಆದುರುವುದು, ಕಣ್ಣು ಹಾರುವುದು, ಹಸ್ತ ಸಾಮುದ್ರಿಕೆ, ದೆವ್ವ, ಭೂತ... ಎಲ್ಲ ಇಲ್ಲಿ ಬರುತ್ತವೆ. ಇದೆಲ್ಲ ಬರುವಾಗ ಲೇಖಕನ ನಗೆ ಕೂಡ ಇರುವುದಿಲ್ಲ, ಇದು ನಿಜಕ್ಕೂ ವಿಚಿತ್ರವೆನ್ನಿಸುತ್ತದೆ.




ಮೇ. 18,1994

ಎಲ್ಲ ಭಗವಂತನ ನಿಯಮ!

ಆಡಳಿತ ಪಕ್ಷಕ್ಕೆ ಕೆಟ್ಟ ಹೆಸರು ತರಲು ಷಡ್ಯಂತ್ರ ರೂಪಿಸುತ್ತಿರುವುದು ಖೇದಕರ ಸಂಗತಿ ಆಗಿದೆ. ಸದ್ಯದ ಪರಿಸ್ಥಿತಿಯಲ್ಲಿ ಅವು ನಿರ್ವಸತಿಕರ ಪುನರ್ವಸತಿ ಕೇಂದ್ರದಲ್ಲಿ ಸಂಭವಿಸಿರುವ ಸಾವನ್ನೇ ಅವಲಂಬಿಸಿವೆ. ಬೇರೆ ಯಾವ ಮಹತ್ವಪೂರ್ಣ ಸಂಗತಿಯೂ ಲಭ್ಯ ಆಗದೇ ಇರುವುದರಿಂದ ಈ ಕ್ಷುಲ್ಲಕ ವಿಷಯವನ್ನೇ ಜಗ್ಗಾಡುವುದು ಅನಿವಾರ್ಯವೋ ಏನೋ!

ಕಾಯಿಲೆ ಕಸಾಲೆಗಳಿಂದ ನರಳ್ತಿರೋ ಮುದುಕರು ಹುಡುಕರೆಲ್ಲ ಭಿಕ್ಷೆ ಬೇಡ್ತಾ ದೇಶದ ಮರ್ಯಾದೇನೆ ಹಾಳು



ಎಚ್.ಎಲ್. ಕೇಶವಮೂರ್ತಿ

ಮಾಡ್ತಿದಾರೆ. 'ಭಿಕ್ಷೆ ಬೇಡುವುದು ಅಪರಾಧ' ಎಂದು ಸರ್ಕಾರ ಘೋಷಿಸಿದರೂ ಅವರು ತಮ್ಮ ಚಾಳಿ ಬಿಟ್ಟಿಲ್ಲ. ಅವರನ್ನ ಹಿಡಿಲೇ ಬಾರ್ದು.. ಛೇಪ್ ಆಗಿ ಭಿಕ್ಷೆ ಬೇಡ್ಕೊಂಡು ಮಜವಾಗಿ ಇರ್ರಯ್ಯ ಅಂತ ಸುಮ್ಮನಿರಾಕಾಯ್ತದ... ಸರ್ಕಾರ ಅನ್ನೋದು ಇರೋದಾದ್ರೂ ಯಾವುದಕ್ಕೆ..... ಅಂತಹವರನ್ನೆಲ್ಲ ಹಿಡಿದು ಹಾಕಿ ವ್ಯಾನಿಗೆ ತುಂಬಿ ತಂದು ಪುನರ್ವಸತಿ ಕೇಂದ್ರದಲ್ಲಿ ಸುರೀಬೇಕಾಯ್ತದೆ. ಹಿಂಗೆ ಸಾರಾಸಗಟಾಗಿ ತಂದಾಗ ಒಂದಿಬ್ಬರು ದುಡಿದು ತಿನ್ನೋರೂ ಇರಬಹುದು. ಅವರು ನಾವು ಭಿಕ್ಷುಕರಲ್ಲ ದುಡಿದು ತಿನ್ನೋರು ಅಂತಾನೂ ಹೇಳಿರಬಹುದು ನಿಜ. ಭಿಕ್ಷುಕರೆಲ್ಲ ಇದೇ ಮಾತ ಹೇಳುವುದರಿಂದ ಇವರ ಮಾತ ಹೆಂಗೆ ನಂಬೋಕಾಯ್ತದೆ ಅಂತಾ ಅವರ್ನೂ ಸೇರಿಸಿ ಕೇಂದ್ರದಲ್ಲಿ ಸುರಿಯೋದು ಅನಿವಾರ್ಯ ಆಗುತ್ತದೆ. ಪ್ರತಿನಿತ್ಯ ಇಂತಿಷ್ಟು ಹೊಸಬರನ್ನು ಕೇಂದ್ರಕ್ಕೆ ತರಲೇಬೇಕು ಅನ್ನೊ ಕಾನೂನು ಇದೆಯೋ ಏನೋ ಯಾರು ಬಲ್ಲರು....

ಕೇಂದ್ರಕ್ಕೆ ಸುರಿದಾಯ್ತಲ್ಲ, ಅಲ್ಲಿ ಅವರಿಗೆ ಉತ್ತಮ ಪರಿಸರ, ಪೌಷ್ಟಿಕ ಆಹಾರ ಒದಗಿಸೋಕೆ ಹಣದ ಕೊರತೆ ಅಂತ ಇಲ್ಲ, ಆರೋಗ್ಯ ಆರೈಕೇನೂ ಮಾಡಬಹುದು. ಹಿಂಗೆ ಮಾಡಿದ್ರೆ ಏನಾಗುತ್ತೆ ಗೊತ್ತ.... ಇರೋಕೆ ಒಳ್ಳೆ ಜಾಗ, ತಿನ್ನೋಕೆ ಅಚ್ಚುಕಟ್ಟಾದ ಊಟ ಸಿಗುತ್ತೆ ಅಂತ ತಿಳಿದರೆ.... ಭಿಕ್ಷುಕರ ಸಂಖ್ಯೆ ಹೆಚ್ಚಾಗುತ್ತೆ! ಈ ದೇಶದಲ್ಲೇನು ಮಸಿ ಬಡವರಿದ್ದಾರಾ... ಎಲ್ಲರ ಕೊನೆಯ ತಂಗುದಾಣ ಇದಾಗುತ್ತೆ! ಅದಕ್ಕೇ ಸರ್ಕಾರ ಅನ್ನೋದು ಏನು ಮಾಡುತ್ತೆ.... ಪುನರ್ವಸತಿ ಕೇಂದ್ರ ಅನ್ನೋ ದೊಡ್ಡೀಲಿ ಕೂಡಾಕಿ, ಹಳಸಿದ್ದೊ ಪಳಸಿದ್ದೊ ಹಾಕಿ 'ಸಮಾಜ ಕಲ್ಯಾಣ' ಮಾಡುತ್ತೆ! ಭಿಕ್ಷಾಟನೆ ನಿರ್ಮೂಲನಕ್ಕೆ ಗಲೀಜು ಪರಿಸರ, ಕೊಳೆತ ಆಹಾರವೇ ಮದ್ದು ಎಂದು ಅದು ನಂಬಿರುವಂತಿದೆ!

ಈ ವಿಷಯಗಳನ್ನೆಲ್ಲ ಅಂತರ್ಗತ ಮಾಡಿಕೊಂಡಿದ್ದ ಸಮಾಜ ಕಲ್ಯಾಣ ಸಚಿವರು 'ಅಲ್ಲಿಗೆ ಬರೋರೆಲ್ಲ ವಯಸ್ಸಾದವರು,ರೋಗಿಷ್ಠರು... ಸತ್ತಿರ್ತಾರೆ' ಎಂದು ಆಗಸ್ಟ್ ಹದಿನೈದರಂದು ಪುನರ್‌ವಸತಿ ಕೇಂದ್ರದ ಹನ್ನೆರಡು ಮಂದಿ ಮರಣ ಹೊಂದಿದ್ದಾರೆ ಎಂಬ ಸುದ್ದಿ ತಿಳಿದಾಗ ನಿರ್ಭಾವುಕರಾಗಿ ನುಡಿದದ್ದು!

ಮಾನ್ಯ ಸಚಿವರು ಇನ್ನು ಒಂದು ವಿಷಯ ಸ್ಪಷ್ಟಪಡಿಸಬಹುದಿತ್ತು, ಸಾವನ್ನಪ್ಪಿದ ಹನ್ನೆರಡೂ ಮಂದಿ ಯಾರು? ಭಿಕ್ಷುಕರು, ಅಂದರೆ ಅಷ್ಟರ ಮಟ್ಟಿಗೆ ಭಿಕ್ಷುಕರ ನಿಯಂತ್ರಣ ಆಯಿತಲ್ಲಾ! ಯಾಕೋ ಅದನ್ನು ಹೇಳಲಿಲ್ಲ, ಇನ್ನೂ ಒಂದು ಪ್ರಶ್ನೆಯನ್ನು ಸಾರ್ವಜನಿಕರ ಮುಖಕ್ಕೆ ಎಸೆಯಬಹುದಾಗಿತ್ತು, ಅದೆಂದರೆ ಪುನರ್ವಸತಿ ಕೇಂದ್ರದಲ್ಲಿ ಜನ ಸಾಯ್ತಾರೆ ಎಂದು ಹುಯಿಲೆಬ್ಬಿಸಲಾಗಿದೆಯಲ್ಲಾ.... ಸಾಯೋರು ಎಲ್ಲಾದ್ರೂ ಸಾಯಿತ್ತಿದ್ದರು. ಆ ದಯಾಮಯನಾದ ಪರಮಾತ್ಮ ಅವರ ಸಾವು ಇಲ್ಲಿ ಆಗಬೇಕೆಂದು ಬಯಸಿದ್ದ, ಅದು ಇಲ್ಲಿ ಆಗಿದೆ. ಹಣೆಬರಹವನ್ನು ಯಾರು ತಿದ್ದಲು ಸಾಧ್ಯವಿಲ್ಲವಲ್ಲಾ, ಅಲ್ಲಿನ ಗುಣಮಟ್ಟ ಸರಿಯಿಲ್ಲ ಅನ್ನುತ್ತಾರಲ್ಲ... ಉತ್ತಮ ಪರಿಸರ, ಪೌಷ್ಟಿಕ ಆಹಾರ ದೊರಕಿಸಿದ್ದರೆ ಅವರು ಸಾಯುತ್ತಾನೇ ಇರಲಿವೆ?

ಅದೂಅಲ್ಲದೆ ಅಲ್ಲಿ ಸತ್ತವರು ಯಾರು? ಭಿಕ್ಷುಕರು. ವಿಳಾಸ ಇಲ್ಲದವರು. ಕೆಲವಕ್ಕೆ ಹೆಸರೇ ಇಲ್ಲವಂತೆ! ಮೂಗ, ಮೂಗಿ ಅನ್ನೋದೆ ಹೆಸರಂತೆ! ಇಂತಹವಕ್ಕೆಲ್ಲ ಓಟು ಅಂತ ಎಲ್ಲಿರುತ್ತೆ, ಓಟೇ ಇಲ್ಲ ಅಂದಮೇಲೆ ರಾಜಕಾರಣಿಗಳಿಗೂ ಅವರಿಗೂ ಸಂಬಂಧ ಇರಲು ಸಾಧ್ಯನೇ ಇಲ್ಲ, ಇಂತಹ ಕಾಂಜಿಪಿಂಜಿಗಳ ಸಾವಿನ ಬಗ್ಗೇನೇ ಚಿಂತಿಸ್ತಾ ಕುಂತ್ರೆ ಸಾಯೋತನಕ ರಾಜಕಾರಣ ಮಾಡೋದು ಬಿಟ್ಟು ಇದನ್ನೇ ಮಾಡ್ತಾ ಕುಂತಿರಬೇಕಾಯ್ತದೆ ಅಷ್ಟೇಯ. ಹಂಗಂತ ಸುಮ್ಮನಿರೋ ಹಂಗೂ ಇಲ್ಲ, ಓಟಿರೋ ಮತದಾರರು ಗಮನಿಸುತ್ತಿರುತ್ತಾರೆ. ಇಂತಹ ಸಂದರ್ಭಗಳಲ್ಲಿ ಚಾಣಾಕ್ಷತನ ಉಪಯೋಗಿಸಬೇಕು. ಒಂದೇ ಆವರಣದಲ್ಲಿ ಒಂದೇ ದಿವಸ ಹನ್ನೆರಡು ಮಂದಿ ಸತ್ತಿದ್ದರೂ ಇದು ಸಹಜ ಸಾವು ಅನ್ನಬೇಕು. ಯಾರು... ವೈದ್ಯರು. ಅವರೇ ತಾನೆ ಮನುಷ್ಯ ಜೀವಂತ ಇದ್ದರೆ ಯಾಕೆ ಜೀವಂತ ಇದಾನೆ, ಸತ್ತರೆ ಯಾಕೆ ಸತ್ತ ಅನ್ನೋದನ್ನ ತಿಳಿಸೋರು. ಬೇಕಾದರೆ ಪೊಲೀಸ್ ವರಿಷ್ಠರಿಂದ ಇದಕ್ಕೆ ಒಪ್ಪಿಗೆ ಮುದ್ರೆ ಹಾಕಿಸಿದರಾಯಿತು. ಎಂತಹ ಅಸಹಜ ಸಾವೂ ಸಹಜ ಸಾವಾಗಿ ಪರಿವರ್ತನೆಗೊಳ್ಳುತ್ತೆ! ಮರಣೋತ್ತರ ಪರೀಕ್ಷೆ ಮಾಡಿಸೋಕೆ 'ಮೈಂಡ್' ಮಾಡಬಾರದು. ಒಂದು ವೇಳೆ ವಿಪರೀತಕ್ಕೆ ಹೋಯಿತು ಎಂದರೆ ಏನು ಮಾಡಬೇಕು ಅಂತ ಯಾರೂ ಹೇಳಿಕೊಡಬೇಕಾಗಿಲ್ಲ, ಭ್ರಷ್ಟ ಅಧಿಕಾರಿ ಅಂತ ಜನ ಕೂಗಾಡಿದಾಗ ಅವನ್ನ ಎತ್ತಿ ಬೇರೆ ಕಡೆಒಗೆಯಲ್ವೆ? ಹಾಗೇನೆ ಮಂತ್ರಿ ಖಾತೆ ಬದಲಾಯಿಸಿದರೆ ಮುಗೀತು! ಮುಖ್ಯಮಂತ್ರಿ ಆದವನಿಗೆ ನಾನು 'ನ್ಯಾಯ ನಿಷ್ಠ' ಅನ್ನಿಸಿಕೋಬೇಕು ಅನ್ನಿಸಿತು ಅನ್ನಿ. 'ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ನಿಷ್ಠುರ ಕ್ರಮ ತೆಗೋತೀನಿ' ಅಂದ್ರೆ ಮುಗೀತು! ಆಮೇಲೆ ಇದರ ಕತೆ ಏನಾಯ್ತು ಅಂತ ಯಾವ ಮಗನೂ ಕೇಳೋಲ್ಲ!



ಅಲ್ಲ ಕ್ರಿಕೆಟ್‌ನಲ್ಲಿ ಬೀಳೋದು ಹತ್ತೇ ವಿಕೆಟ್ಟು, ಇಲ್ಲಿ ಅದನ್ನ ಮೀರಿಸಿದಂತೆ ನೂರರ ಸಂಖ್ಯೆಯಲ್ಲಿ ತಲೆಗಳು ಉರುಳ್ತಿದಾವಲ್ಲ ಅಂದ್ರೆ... ಬೀಳಲಿ. ಜನ ತಾನೆ ಎಷ್ಟು ದಿನ ಅಂತ ಅದೇ ಸುದ್ದಿ ನೋಡ್ತಾರೆ... ಅವರಿಗೂ ಬೋರ್ ಹೊಡೆಯುತ್ತೆ..... ಅಲ್ವಾ.....

ಕ್ಷಮಾಯಾಚನಾ ವಿಭಾಗ

ಪೊಲೀಸರ ದುರ್ನಡತೆ!

ಇದು ಸುದ್ದಿ ಅಲ್ಲ, ಸನ್ನಡತೆ ತೋರಿದರೆ ಅದ[...] ಸುದ್ದಿ!

ಹಾಗಂತ ಸನ್ನಡತೆ ತೋರುವುದೇ ಇಲ್ಲ ಅಂ[...] ಅಲ್ಲ, ತೋರಿಸುತ್ತಾರೆ. ಯಾರಿಗೆ? ಅಧಿಕಾರಸ್ಥರಿಗೆ!

ಆಳುವವರ ಗುಲಾಮರು, ಇತರರಿಗೆ ರಾಕ್ಷಸರು[...]

ಕಂಡೂಕಂಡೂ ಹೆಣ್ಣೋ ಗಂಡು ಅಂದಂಗೆ ಇಂತ[...] ಪೊಲೀಸ್ ವ್ಯವಸ್ಥೆಯಿಂದ ಸನ್ನಡತೆ ನಿರೀಕ್ಷಿಸಿದ್ದರಂ[...] ಮಂಗಳೂರಿನ ಮಾಧ್ಯಮ ಪ್ರತಿನಿಧಿಗಳು. ಪೊಲೀಸ[...] ತನ್ನ ಬುದ್ಧಿ ತೋರಿತು. ಯಡ್ಯೂರಪ್ಪ ಅಲ್ಲಿಗೆ ಹೋಗಿದ್ದಾ[...] ನಡೆದ ಘಟನೆ ಇದು. ಸರಿ. ಮಾಧ್ಯಮದವರಿಂ[...] ಪ್ರತಿಭಟನೆ. ಯಾರು ಯಾರನ್ನೋ ಕಳುಹಿಸಿದರಂತೆ ಅವರಿ[...] ಸಮಾಧಾನ ಮಾಡಲಿ ಅಂತ. ಅವರು ಸೊಪ್ಪು ಹಾಕಲಿ[...] ಯಡ್ಯೂರಪ್ಪನವರೇ ಖುದ್ದು ಹೋದರು. ಪೊಲೀಸ[...] ದುರ್ನಡತೆಗಾಗಿ ಕ್ಷಮೆಯಾಚಿಸಿದರು.

ಇದು ಯಡ್ಯೂರಪ್ಪನವರ 'ಇವತ್ತಿನ ಕ್ಷಮಾಯಾಚನೆ[...] ಆಗಸ್ಟ್ ಹದಿನೈದು.

ಯಾವನೋ ಬೇವಾರ್ಸಿಯೊ[...] ಮಂತ್ರಿ ಬರುತ್ತಿದಾರೆ ಅಂ[...] ಅಲುಗಾಡಲಿಲ್ಲ. ಮಂತ್ರಿವರ್ಯ[...] ಕಾರನ್ನೇ ಓವರ್‌ಟೇಕ್ ಮಾಡಿದ! ಎಂತ[...] ಧೂರ್ತತನ! ರೌದ್ರಾವತಾರ ತಾಳಿದ[...] ಮಂತ್ರಿಗಳು. ಕಾಲಿರುವುದೇ ಒದೆಯ[...] ಅನ್ನೊ ನಂಬಿಕೆ ಅವರದ್ದು. ತಮ[...] ನಂಬಿಕೆಗೆ ಅನುಗುಣವಾಗಿಯೇ ವರ್ತಿ[...]ದರು.

ಮಂತ್ರಿಗಳು ಹೇಳಿದರು ಅಂ[...] ಪೊಲೀಸ್ನೋರು ಕೇಸ್ ಬುಕ್[...] ಮಾಡಿದರು. ಪ್ರತ್ಯಕ್ಷದರ್ಶಿಗಳು ಮಾ[...] ಮಂತ್ರಿಗಳದ್ದೇ ತಪ್ಪು ಅಂದರಂತೆ. ಆದ[...] ಮಂತ್ರಿ ಮುಂದೆ ಜನ ಎಷ್ಟರವರು!

ಸರಿ, ಯಡಿಯೂರಪ್ಪನವರ ಕಿ[...] ಮುಟ್ಟಿತು ವಿಷಯ.

ಮಾನ್ಯರು ಏನು ಮಾಡಿದರು[...] ಉದ್ಧಟ ಮಂತ್ರಿಯನ್ನು ತೆಗೆದು ಹಾಕಿದರೆ[...] ಇಲ್ಲ.... 'ಕ್ಷಮೆಯಾಚಿಸಿ ದರು!'

ಅದೇ ಸ್ವಾತಂತ್ರ್ಯ ಬಂದ ದಿನ[...] ಬೆಂಗಳೂರಿನ ನಿರ್ವಸತಿಗರ ಪುನರ್ವಸ[...] ಕೇಂದ್ರದಲ್ಲಿ ಹನ್ನೆರಡು ಸಾವು. ಮಾಧ್ಯಮಗಳ ಛೀಮಾರಿ[...] ಯಡ್ಯೂರಪ್ಪನವರು 'ಕ್ಷಮೆ ಯಾಚಿಸಿದರು!'


ಅಲ್ಲ ಯಡ್ಯೂರಪ್ಪನವರ ಕ್ಷಮಾಯಾಚನಾ ಭರಾ[...] ನೋಡಿದರೆ ಕ್ಷಮಾಯಾಚನಾ ಖಾತೆ ತೆರೆಯೋದೆ ವಾಸಿ[...] ಅಂತ....

ಪಟ್ಟಾಭಿ ಮತ್ತು ಪಿ.ಎಫ್.ಐ : ಕೆಲವು ಪ್ರಶ್ನೆಗಳು

ಕಳೆದ ವಾರದ ಪತ್ರಿಕೆಯಲ್ಲಿ 'ಪಟ್ಟಾಭಿಯವರಿಂದ ಮಂಗಳೂರು ವಿವಿಗೆ ಆಗುತ್ತಿರುವ ಕಿರಿಕಿರಿ' ಕುರಿತು ಜಿ.ಆರ್‌ರವರು ಬರೆದಿರುವ ಲೇಖನಕ್ಕೆ ಪ್ರತಿಕ್ರಿಯೆ:

ಪಟ್ಟಾಭಿಯವರು ಸಮಾನ ನ್ಯಾಯ, ಸಾಂವಿಧಾನಿಕ ಹಕ್ಕು, ಹದಗೆಟ್ಟಿರುವ ಕಾನೂನು ವ್ಯವಸ್ಥೆಯ ಬಗ್ಗೆ ಮಾತಾಡಿದಾಗೆಲ್ಲಾ ಹಿಂದೂ ಸಂಘಟನೆಗಳ ರೋಷ ಉಕ್ಕೇರಿ, ಚಡಪಡಿಸಿ, ಮಂಗಳೂರು ವಿವಿ ಕಾಲೇಜಿನ ಎಬಿವಿಪಿ ವಿದ್ಯಾರ್ಥಿಗಳು ಪಕ್ಕಾ ಗೂಂಡಾಗಳಂತೆ ಗಲಭೆಯೆಬ್ಬಿಸುವುದು ಆ ಕಾಲೇಜಿನ ಮುಖ್ಯ ಎಕ್ಸ್‌ಟ್ರಾ-ಕರಿಕ್ಯುಲರ್ ಚಟುವಟಿಕೆಯೇ ಆಗಿಬಿಟ್ಟಿದೆಯೆಂದು ಕಾಣುತ್ತದೆ. ಹೀಗೆ ಸದಾ ಗಲಭೆಯೆಬ್ಬಿಸುವ ಹುಡುಗರ ಮೇಲೆ ಕಟ್ಟುನಿಟ್ಟಾದ ಕಾನೂನು ಕ್ರಮ ಕೈಗೊಂಡು ಆಚೆಗೆ ತಳ್ಳುವುದು ಬಿಟ್ಟು, ಪಟ್ಟಾಭಿಗೇ 'ಕಾರಣ ಕೇಳಿ ನೋಟಿಸ್' ಜಾರಿ ಮಾಡುವುದೂ ಮಂಗಳೂರು ವಿವಿಯ ಹಾಸ್ಯಾಸ್ಪದ ನಿಲುವು ಮತ್ತು ಆಡಳಿತಾತ್ಮಕವಾಗಿ ಬೇಜವಾಬ್ದಾರಿ ನಡವಳಿಕೆಯಾಗಿ ಕಂಡುಬರುತ್ತಿದೆ. ಅಲ್ಲಿನ ಉಪನ್ಯಾಸಕರು ಬಹುಶಃ ಹೊಸ ವೇತನ ಪಟ್ಟಿಯ ಪ್ರಕಾರ ತಮಗೆ ಬರಬೇಕಾದ ಬಾಕಿ ಬಗ್ಗೆ ತಲೆ ಕೆಡಿಸಿಕೊಂಡಿರುವುದರಿಂದ ಇದನ್ನೆಲ್ಲಾ ಗಮನಿಸುವ ಸ್ಥಿತಿಯಲ್ಲಿಲ್ಲವೇನೋ.

ಅದಿರಲಿ, ಪಿಎಫ್‌ಐ ಕಾರ್ಯಕ್ರಮದಲ್ಲಿ ಪಟ್ಟಾಭಿ ಆಡಿದ್ದ ಮಾತುಗಳೇನೋ ಸರಿಯಾಗಿವೆ, ಆದರೆ ಮೂಲಭೂತವಾದಿಗಳು ಎಂಬ ಟೀಕೆಗೆ ಒಳಗಾಗಿರುವ ಪಿಎಫ್‌ಐ ಸಂಘಟನೆಯ ಕಾರ್ಯಕ್ರಮದಲ್ಲಿ ಕೇವಲ ಹಿಂದೂ ಉಗ್ರಗಾಮಿತನದ ಬಗ್ಗೆ ಮಾತಾಡಿದರೆ ಸಾಕೆ? ಈ ಸಂಘಟನೆ ನಿಜಕ್ಕೂ ಸೆಕ್ಯುಲರ್, ಡೆಮೊಕ್ರಾಟಿಕ್ ಆಗಿದ್ದರೆ, ಆ ವೇದಿಕೆಯಿಂದ, ಎಲ್ಲ ಟೆರರಿಸ್ಟ್ ಸಂಘಟನೆಗಳ ಮೇಲೂ ಕ್ಷಿಪ್ರ ಕಾನೂನು ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಲು ಪಟ್ಟಾಭಿಯೇ ಬೇಕೆಂದಿಲ್ಲವಲ್ಲ? ಈ ದೇಶದ ಜನರ ಪ್ರಾಣ, ಆಸ್ತಿ ಹಾನಿ ಮಾಡಿ ಸಮಾಜದ ಶಾಂತಿ ಕದಡುವ ಕಸಬ್, ಸಾಧ್ವಿ ಪ್ರಜ್ಞಾ, ಪುರೋಹಿತ್ ಯಾವನೇ/ಳೇ ಆಗಿರಲಿ, ತಪ್ಪಿತಸ್ಥರೆಂದು ಕಂಡುಬಂದರೆ ಮುಲಾಜಿಲ್ಲದೆ ಒದ್ದು ಗಲ್ಲಿಗೇರಿಸಬೇಕಾಗಿರುವುದು, ಕಾನೂನು ಮತ್ತು ನ್ಯಾಯ ವ್ಯವಸ್ಥೆಯ ಕರ್ತವ್ಯ. ಇದನ್ನು ಡಿಮ್ಯಾಂಡ್ ಮಾಡುವುದೂ ಎಲ್ಲ ನಾಗರಿಕರ ಕರ್ತವ್ಯವೂ ಕೂಡಾ.



ಒಬ್ಬ ಹಿಂದೂವಾಗಿರುವ ಪಟ್ಟಾಭಿಯವರನ್ನು ಹಿಂದೂ ಸಮುದಾಯದ 'ಒಳಗಿನ ವಿಮರ್ಶಕನಾಗಿ' ಪಿಎಫ್‌ಐ ತನ್ನ ಮುಖವಾಣಿಯಾಗಿ ಬಳಸಿಕೊಳ್ಳುತ್ತಿದೆಯೇ? ಹಿಂದೂ, ಕ್ರೈಸ್ತ ಧರ್ಮಗಳಲ್ಲಿ ಕಾಲಕಾಲಕ್ಕೆ ಬೇಕಾದಷ್ಟು 'ಇನ್‌ಸೈಡರ್ ಕ್ರಿಟಿಕ್'ಗಳು ಹುಟ್ಟಿ ಬಂದಿದ್ದಾರೆ, ಮುಸ್ಲಿಮ್ ಸಮುದಾಯಗಳಲ್ಲಿ ಇವರ ಸಂಖ್ಯೆ ತುಂಬ ಕಡಿಮೆ ಅಲ್ಲವೇ? ಇನ್ನು, ಸೂಫಿ ಸಂತರನ್ನು ಇಸ್ಲಾಂ ಧಾರ್ಮಿಕ ಶಕ್ತಿ ಕೇಂದ್ರಗಳು ಹೇಗೆ ಕಂಡವೆಂಬ ವಿಷಯ ಇತಿಹಾಸದ ಭಾಗವೇ ಆಗಿದೆ.

ಸ್ವತಃ ಪಟ್ಟಾಭಿಯವರ ನಿಷ್ಠುರ ನೈತಿಕ ಮೌಲ್ಯಗಳು, ಅವರ ಆತ್ಮಸಾಕ್ಷಿ ಹಾಗೂ ಜಾತ್ಯತೀತತೆ ಪ್ರಶ್ನಾತೀತವಾಗಿವೆ ಹಾಗೂ ತನ್ನ ನಿಲುವನ್ನು ಅವರು ಯಾವ ವೇದಿಕೆಯಿಂದಲೂ ನೇರ ಮಾತುಗಳಲ್ಲಿ ಹೇಳುತ್ತಾರೆ ಎಂಬುದರ ಬಗ್ಗೆ ಎರಡು ಮಾತಿಲ್ಲ, ಆದರೆ ಸತ್ಯವೆಂಬುದು ಹೋಗುತ್ತಲೂ ಕುಯ್ಯುವುದು, ಬರುತ್ತಲೂ ಕುಯ್ಯುವುದು ಸಹಜ ಅಲ್ಲವೇ?

ಪಿಎಫ್‌ಐ ಹಿಂದೂ ದಬ್ಬಾಳಿಕೆ ವಿರುದ್ಧ ಧ್ವನಿಯೆತ್ತಿದಷ್ಟೇ ಕ್ರಿಯಾಶೀಲವಾಗಿ, ಮುಸ್ಲಿಂ ಮಹಿಳೆಯರ ದಮನದ ವಿರುದ್ಧ ಕೂಡಾ ಮಾತಾಡಲಿ. ಮುಸ್ಲಿಂ ಮಹಿಳಾ ಸ್ವಾತಂತ್ರ್ಯದ ಬಗ್ಗೆ ಒಂದು ಕಾರ್ಯಕ್ರಮವೇರ್ಪಡಿಸಲಿ. ಅವರ ಧಾರ್ಮಿಕ ಉದಾರವಾದದ ಬಗ್ಗೆ ಸಂವಾದ ಗೋಷ್ಠಿಯೇರ್ಪಡಿಸಲಿ. ನಾವೆಲ್ಲರೂ ಮಹಿಳೆಯರು ಒಟ್ಟಿಗೆ ಬರುತ್ತೇವೆ.

ಮಹಿಳೆಯರ ಮೇಲಿನ ನಿಮ್ಮ ಧಾರ್ಮಿಕ ಸಾಂಪ್ರದಾಯಿಕ ಕಟ್ಟಳೆಗಳನ್ನು ಸಡಲಿಸಲು ಏನು ಕಷ್ಟ ಎಂದು ಪಟ್ಟಾಭಿ ಹಾಗೂ ಅವರಂಥ ಇತರೆ ನಿಷ್ಠುರ ಪ್ರಜಾಪ್ರಭುತ್ವವಾದಿಗಳು ಯಾಕೆ ತಮ್ಮ ಮುಸ್ಲಿಂ ಬಾಂಧವರನ್ನು ನೇರವಾಗಿ ಕೇಳುವುದಿಲ್ಲ? ಬೋಸ್ ಬಗ್ಗೆ ಗಾಂಧಿ ಮತ್ತು ನೆಹರೂಗೆ ಸ್ಥೂಲವಾಗಿ ಇದ್ದ ಆತಂಕವೂ ಅಂಥದೇ: 'ಎಸೆನ್ಷಿಯಲಿ ರೈಟ್, ಬಟ್ ರಾಂಗ್ ಇನ್ ದ ಓವ್ರಾಲ್ ಕಾಂಟೆಕ್ಸ್ಟ್, ಅಂಡ್ ಡೇಂಜರಸ್ ಇನ್ ದ ಹಿಸ್ಟಾರಿಕಲ್ ಕಾಂಟೆಕ್ಸ್ಟ್? - ಎಂದು.


ಗಾಂಧಿ, ಕಾರಂತ, ಕುವೆಂಪು, ತೇಜಸ್ವಿ ಇವರೆಲ್ಲಾ ಧಾರ್ಮಿಕ ಶಠತನ, ತೀವ್ರವಾದ ಯಾವುದೇ ಧರ್ಮದ್ದಾಗಿರಲಿ, ಯಾರನ್ನೇ ಆಗಿರಲಿ ಮುಖಮೂತಿ ನೋಡದೆ ಉಗಿದು ಉಪ್ಪು ಹಾಕುತ್ತಿದ್ದರು. ಜೊತೆಗೆ, ಹೀಗೆ ಒಂದು ವರ್ಗದ ಪ್ರತಿಗಾಮಿ ಸಂಘಟನೆ ಬಗ್ಗೆ ಮಾತ್ರ ಮಾತನಾಡಿ ಇನ್ನೊಂದು ವರ್ಗದ ಮೂಲಭೂತವಾದದ ಬಗ್ಗೆ ಮೌನ ತಾಳುವುದನ್ನು ಒಪ್ಪುತ್ತಿರಲಿಲ್ಲ, ಹಾಗೆ ಮಾಡುವುದು ಕೇವಲ ಪೊಲಿಟಿಕಲೀ ಕರೆಕ್ಟ್ ಆದ ನಿಲುವು ಅಷ್ಟೇ.

ಪಟ್ಟಾಭಿ ಇಸ್ಲಾಮಿನ ಮೂಲಭೂತವಾದ ಮತ್ತು ಮಹಿಳೆಯರ ಮೇಲೆ ಅದರ ದಬ್ಬಾಳಿಕೆಯ ಬಗ್ಗೆಯೂ ಎಚ್ಚರದಲ್ಲಿ ಮಾತಾಡದಿದ್ದರೆ, ಕ್ರಮೇಣ ಅವರು ಜಾದೂಗಾರನ ಮಾತಾಡುವ ಗೊಂಬೆಯಾಗಿ ಕಾಣಿಸುವುದು ಖಂಡಿತ.

ಇಷ್ಟಕ್ಕೂ, ತಮ್ಮ ಸೆಕ್ಯುಲರ್ ನೆಲೆಯಿಂದ, ಎಲ್ಲ ರೀತಿಯ, ಎಲ್ಲ ಧರ್ಮದೊಳಗಿರುವ ಪುರುಷ ಪ್ರಧಾನ ಮೂಲಭೂತವಾದವನ್ನು ಪಟ್ಟಾಭಿ ಖಂಡಿಸುತ್ತಾರೆ ಎಂದು ಪಿಎಫ್‌ಐಗೆ ಅನಿಸಿದ್ದರೆ, ಅವರನ್ನು ಭಾಷಣ ಮಾಡಲು ಕರೆಯುತ್ತಿದ್ದರೇ?!


- ಸುಮಾ ಎಂಬಾರ್, ಮೈಸೂರು

ಯಂದಿರನ್' ಗೆ ತಮಿಳರ ಸವಾಲು!



ಈಗ ಎಲ್ಲೆಡೆ ಸೂಪರ್‌ಸ್ಟಾರ್ ರಜನಿಕಾಂತ್ ಮತ್ತು ... ನಟಿಸಿರುವ 'ಯಂದಿರನ್' ಚಿತ್ರದ್ದೇ ಅಬ್ಬರ.


...ದೇ ತಿಂಗಳ ಇಪ್ಪತ್ನಾಲ್ಕರಂದು ಪ್ರಪಂಚದಾದ್ಯಂತ ...ಮ 'ಯಂದಿರನ್' ಬಿಡುಗಡೆಯಾಗುತ್ತಿದೆ. ಈ ಚಿತ್ರದ ... ತಮಿಳು ಚಿತ್ರರಂಗದಲ್ಲಿ ನಿರ್ಮಾಣಗೊಂಡಿರುವ ...ಗಿನ ಎಲ್ಲ ಚಿತ್ರಗಳ ದಾಖಲೆಯನ್ನೂ ಮುರಿದು ... ಸುಮಾರು ನೂರ ಅರವತ್ತು ಕೋಟಿ ರೂಪಾಯಿಗಳು ...ತ್ರಕ್ಕೆ ಖರ್ಚಾಗಿರಬಹುದು ಎಂದು ಮಾಧ್ಯಮಗಳು ...ವೆ. ಆದರೆ ಸ್ವತಃ ಸನ್ ಪಿಕ್ಚರ್ಸ್‌ನವರು ಈ ಸಿನಿಮಾಕ್ಕೆ ...ರು ಕೋಟಿ ಬಂಡವಾಳ ಹಾಕಿದ್ದೇವೆ ಎಂದು ...ಳ್ಳುತ್ತಿದ್ದಾರೆ.



...ನಿಮಾ ಬಿಡುಗಡೆಗೆ ಮುನ್ನ ಅದರ ಬಗ್ಗೆ ಏನೆಲ್ಲಾ ...ಕ್ರಿಯೇಟ್ ಮಾಡಬೇಕೋ ಅದೆಲ್ಲವನ್ನೂ ನಿರ್ದೇಶಕ ... ಅವರ ಟೀಂ ಮಾಡುತ್ತಿದೆ. ಪ್ರಚಾರದ ವಿಚಾರದಲ್ಲಿ ...ಕೂಡ ತಮ್ಮ ಹಿಂದಿನ ಚಿತ್ರಗಳಿಗಿಂತ ಇದರ ಬಗ್ಗೆ ... ತಲೆಕೆಡಿಸಿಕೊಂಡಿದ್ದಾರೆ. ಮಲೇಷಿಯಾ, ಬಾಂಬೆ, ...ಬಾದ್‌ಗಳಲ್ಲಿ ಮೂರ್ನಾಲ್ಕು ಬಾರಿ ಈ ಚಿತ್ರದ ...ೋ ಬಿಡುಗಡೆ ಮಾಡಿ, ದೊಡ್ಡ ಮಟ್ಟದ ಪ್ರಚಾರ ...ದ್ದಾರೆ. ಆದರೂ ಈ ಸಿನಿಮಾವನ್ನು ಹೇಗೆ ಗೆಲ್ಲಿಸುವುದು ...ಆತಂಕ ಸನ್ ಪಿಕ್ಚರ್ಸ್, ಶಂಕರ್ ಮತ್ತು ರಜನಿ ಎಲ್ಲರನ್ನೂ ...ಟ್ಟಿಗೇ ಕಾಡುತ್ತಿದೆ. ಇದಕ್ಕೆ ಕಾರಣವೂ ಇದೆ.

...ಯಂದಿರನ್'ನನ್ನು ಸೋಲಿಸಬೇಕೆಂದು ಈಗ ಇಡೀ ... ತಮಿಳರು ಬಿಳಿ ಪಂಚೆಯನ್ನು ಮೇಲಕ್ಕೆ ಕಟ್ಟಿ ...ದ್ದಾರೆ. ಅದು ಸೂಪರ್ ಸ್ಟಾರ್ ರಜನಿಯ ಬಗೆಗಿನ ದ್ವೇಷ, ಅಗೌರವಕ್ಕಲ್ಲ, ಬದಲಾಗಿ ತಮಿಳು ನಾಡಿನ ಮುಖ್ಯಮಂತ್ರಿ ಕರುಣಾನಿಧಿ ಮೇಲಿನ ಸೇಡಿಗಾಗಿ!

ಕರುಣಾನಿಧಿಗೆ ತಿರುಗೇಟು...




ಇಷ್ಟು ದೊಡ್ಡ ಬಜೆಟ್‌ನಲ್ಲಿ ನಿರ್ಮಾಣವಾಗಿರುವ 'ಯಂದಿರನ್'ನನ್ನು ಬರೀ ತಮಿಳು ನಾಡಿನ ಸಿನಿಮಾ ಪ್ರೇಕ್ಷಕರು ಮಾತ್ರ ನೋಡಿದರೆ ಅದಕ್ಕೆ ಹಾಕಿದ ಬಂಡವಾಳದಲ್ಲಿ ಅರ್ಧದಷ್ಟೂ ವಾಪಸ್ ಬರುವುದಿಲ್ಲ. ತಮಿಳು ಚಿತ್ರರಂಗ ಇವತ್ತು ಇಡೀ ಪ್ರಪಂಚದಲ್ಲಿ ಮಾರುಕಟ್ಟೆಯನ್ನು ಸ್ಥಾಪಿಸಿಕೊಂಡಿದೆ. ಅಲ್ಲದೇ ಮಲೇಷಿಯಾ, ಸಿಂಗಾಪೂರಗಳಲ್ಲೂ ತಮಿಳು ಚಿತ್ರಗಳು - ಅದರಲ್ಲೂ ರಜನಿ, ಕಮಲ್, ವಿಜಯ್, ಸೂರ್ಯರಂಥ ಸ್ಟಾರ್ ನಟರ ಸಿನಿಮಾಗಳು - ತಿಂಗಳು ಗಟ್ಟಲೆ ಓಡುತ್ತವೆ. ಆ ಮೂಲಕ ಯಥೇಚ್ಛವಾದ ಗಳಿಕೆಯನ್ನೂ ಮಾಡುತ್ತವೆ.

ಹೀಗೆ ಈಗ ತಮಿಳು ಚಿತ್ರರಂಗಕ್ಕೆ ಬೆನ್ನೆಲುಬಾಗಿ ನಿಂತಿರುವ ಪರ ರಾಷ್ಟ್ರಗಳಲ್ಲಿನ ತಮಿಳರೇ ಈಗ ಸನ್ ಪಿಕ್ಚರ್ಸ್‌ನ ವಿರುದ್ಧ ತಿರುಗಿಬಿದ್ದಿರುವುದು. ಜಗತ್ತಿನಾದ್ಯಂತ ಹಬ್ಬಿರುವ ತಮಿಳು ಹುಲಿಗಳೇ ಈಗ ಕರುಣಾನಿಧಿಯ ವಿರುದ್ಧ ಗರ್ಜಿಸಲು ರಜನಿಯ 'ಯಂದಿರನ್'ನನ್ನು ನೆಪ ಮಾಡಿಕೊಂಡಿರುವುದು.



ಇತ್ತೀಚಿಗೆ ಶ್ರೀಲಂಕಾದಲ್ಲಿ ನಡೆದ ಜನಾಂಗೀಯ ಕಗ್ಗೊಲೆಗೆ ಕರುಣಾನಿಧಿಯೇ ಮುಖ್ಯ ಕಾರಣ ಎಂಬುದು ಹೊರ ರಾಷ್ಟ್ರಗಳಲ್ಲಿ ನೆಲೆಸಿರುವ ತಮಿಳು ವಲಸಿಗರ ಮತ್ತು ಎಲ್‌ಟಿಟಿಇ ಪರ ಸಂಘಟನೆಗಳ ವಾದ.

ಶ್ರೀಲಂಕಾದಲ್ಲಿ ನಡೆದ ಈಳಂ ಕಾಳಗದಲ್ಲಿ ಯುದ್ಧಾಪರಾಧ ಎಸಗಲಾಗಿದೆಯೇ ಇಲ್ಲವೇ ಎಂಬ ಸತ್ಯಶೋಧನಾ ವರದಿಯನ್ನು ಪಡೆಯಲು ವಿಶ್ವಸಂಸ್ಥೆ ಮೂರು ಜನರ ಸಮಿತಿಯೊಂದನ್ನು ರಚಿಸಿದೆ. ಶ್ರೀಲಂಕಾದ ಅಧ್ಯಕ್ಷ ರಾಜಪಕ್ಷೆ ನೇತೃತ್ವದಲ್ಲಿ ತಮಿಳು ಪ್ರಜೆಗಳ ತಲೆಗಳು ತರಗೆಲೆಗಳಂತೆ ಉದುರುತ್ತಿದ್ದರೂ ಜಾಣ ಮೌನ ವಹಿಸಿದ ತಮಿಳುನಾಡು ಮುಖ್ಯಮಂತ್ರಿ ಕರುಣಾನಿಧಿಯನ್ನು ಕೂಡಾ ಯುದ್ಧಾಪರಾಧಿ ಸ್ಥಾನದಲ್ಲಿ ನಿಲ್ಲಿಸಿ ವಿಚಾರಣೆ ನಡೆಸಿ ಎಂದು ಸಮಿತಿಯ ಮೇಲೆ ವಿವಿಧ ಸಂಘಟನೆಗಳು ಒತ್ತಡ ಹೇರಿವೆ. ರಾಜಕಪ್ಷೆ ಮಾರಣಹೋಮ ನಡೆಸುತ್ತಿದ್ದಾಗ ಮೂಕಪ್ರೇಕ್ಷಕರಂತೆ ಕುಳಿತಿದ್ದ ತಮಿಳುನಾಡು ರಾಜಕಾರಣಿಗಳ ಮೇಲೆ ಸಾಮಾನ್ಯ ತಮಿಳರಿಗೆ ಸಿಟ್ಟಿರುವುದಂತೂ ಸತ್ಯ.



ಹೀಗಾಗಿ ಶ್ರೀಲಂಕಾದ ತಮಿಳರು ಈಗ ಕರುಣಾನಿಧಿ ಮತ್ತು ಅವರ ಕುಟುಂಬದ ವಿರುದ್ಧ ಬಹಿರಂಗವಾಗೇ ಸಮರ ಸಾರಿದ್ದಾರೆ. ಕರುಣಾನಿಧಿ ಮತ್ತು ಅವರ ಸಂತತಿಯ ವಾಣಿಜ್ಯ ಜಾಲ ಇಂದು ಇಡೀ ಏಷ್ಯಾ ಖಂಡವನ್ನು ಆವರಿಸಿಕೊಂಡಿದೆ. "1968ರಲ್ಲಿ ತಮಿಳಿನ ಖ್ಯಾತ ಹಾಸ್ಯನಟ ಎನ್.ಎಸ್. ಕೃಷ್ಣನ್‌ರಿಂದ 7 ಸಾವಿರ ರೂಪಾಯಿಗೆ ಚೆನ್ನೈನ ಗೋಪಾಲಪುರಂನಲ್ಲಿ ಮನೆ ಖರೀದಿಸಿ ಅದರ ಸಾಲದಲ್ಲಿ ಸಿಲುಕಿದ್ದವರು ಕರುಣಾನಿಧಿ. ಆಗ ಜಯಲಲಿತಾ ಮತ್ತು ಎಂಜಿಆರ್ 'ಎಂಗಳ್ ತಂಗಂ' ಚಿತ್ರದಲ್ಲಿ ನಟಿಸಿ ಅದರಿಂದ ಬಂದ ಸಂಭಾವನೆಯಿಂದ ಕರುಣಾನಿಧಿಯ ಸಾಲ ತೀರಿಸಿದ್ದರು. ಇಂಥ ಕರುಣಾನಿಧಿ ಇವತ್ತು ಸಾವಿರಾರು ಕೋಟಿ ರೂಪಾಯಿಗಳ ಒಡೆಯರಾಗಿದ್ದಾರೆ ಎಂದರೆ ಅವರು ಅದನ್ನೆಲ್ಲ ಅಡ್ಡದಾರಿಯಿಂದಲೇ ಸಂಪಾದಿಸಿದ್ದಾರೆ" ಎನ್ನುವುದು ವಲಸಿಗ ತಮಿಳು ಸಂಘಟನೆಗಳ ಆರೋಪ.

ಹೀಗಾಗಿ ಇನ್ನುಮುಂದೆ ಪ್ರಪಂಚದಾದ್ಯಂತ ಆವರಿಸಿಕೊಂಡಿರುವ ಕರುಣಾನಿಧಿಯವರ ಸಂಸಾರದ ಎಲ್ಲ ವ್ಯಾಪಾರ ವಹಿವಾಟುಗಳನ್ನು ಮೊಟಕುಗೊಳಿಸಬೇಕು, ಅವರ ಬೇರುಗಳು ಬೆಳೆಯದಂತೆ ತಡೆಯೊಡ್ಡಬೇಕು ಎಂದು 'ವಿಶ್ವ ತಮಿಳು ರಕ್ಷಣಾ ನಿರ್ದೇಶನಾಲಯ' ತೀರ್ಮಾನಿಸಿದೆ.

ಇದರ ಮೊದಲ ಹಂತವಾಗಿ 'ಯಂದಿರನ್'ನನ್ನು ಬಗ್ಗುಬಡಿಯಲು ಸಕಲ ಸಿದ್ಧತೆಗಳೂ ನಡೆದಿವೆ. ಮಲೇಶಿಯಾದ ಪಿನಾಂಗ್ ರಾಜ್ಯದ ಉಪಮುಖ್ಯಮಂತ್ರಿಯಾಗಿರುವ ಪಿ. ರಾಮಸ್ವಾಮಿ ಪಳನಿಯಪ್ಪನ್ ಖುದ್ದು ಆದೇಶವೊಂದನ್ನು ಹೊರಡಿಸಿ "ಕರುಣಾನಿಧಿ ಕುಟುಂಬದವರು ನಿರ್ಮಿಸಿರುವ 'ಯಂದಿರನ್' ಚಿತ್ರವನ್ನು ಮಲೇಶಿಯಾದಲ್ಲಿ ಬ್ಯಾನ್ ಮಾಡುತ್ತೇವೆ. ತಮಿಳರ ಪ್ರಾಬಲ್ಯವಿರುವ ಸ್ಥಳಗಳಲ್ಲಿ 'ಯಂದಿರನ್' ಸಿನೆಮಾವನ್ನು ನಿಷೇಧಿಸಬೇಕು. ಹಾಗೊಮ್ಮೆ ಬಿಡುಗಡೆಯಾದರೂ ಎಲ್ಲ ತಮಿಳು ಪ್ರಜೆಗಳು ಆ ಚಿತ್ರವನ್ನು ವೀಕ್ಷಿಸದೇ ಅದನ್ನು ತಿರಸ್ಕರಿಸಿ" ಎಂದು ಫತ್ವಾ ಹೊರಡಿಸಿದ್ದಾರೆ. ವಿಶ್ವ ತಮಿಳು ರಕ್ಷಣಾ ನಿರ್ದೇಶನಾಲಯ ಕೂಡಾ ಇದಕ್ಕೆ ಸಂಪೂರ್ಣ ಬೆಂಬಲ ನೀಡಿದೆ.

ಈ ಎಲ್ಲ ಕಾರಣಗಳಿಂದ 200 ಕೋಟಿಯ 'ಯಂದಿರನ್'ಗೆ ಈಗ ತೊಳ್ಳೆನಡುಕ ಶುರುವಾಗಿದೆ. ಸಾರ್ವಜನಿಕ ಸಭೆಗಳಿಂದ ದೂರವೇ ಉಳಿಯುವುದನ್ನು ಪರಿಪಾಠವನ್ನಾಗಿಸಿಕೊಂಡಿದ್ದ ರಜನಿಕಾಂತ್ ಈಗ ಎಲ್ಲೆಂದರಲ್ಲಿ ಕಾಣಿಸಿಕೊಂಡು 'ಯಂದಿರನ್'ನ ಪ್ರಚಾರದಲ್ಲಿ ತೊಡಗಿದ್ದಾರೆ.

ಒಂದು ಸಿನಿಮಾ, ಒಂದು ಜನಾಂಗೀಯ ಮಾರಣಹೋಮ, ಒಂದು ಕೌಟುಂಬಿಕ ಶ್ರೀಮಂತಿಕೆ... ಹೀಗೆ ಬಹುಮುಖೀ ವೃತ್ತದಲ್ಲಿ ನರಳುತ್ತಿದೆ ರಜನಿಯ 'ಯಂದಿರನ್'...


• ಅರುಣ್ ಕುಮಾರ್.ಜಿ
arunodayagc@gmail.com

ಸಿವಿಲ್ ವಾರ್ ಸೈಡ್ ಎಫೆಕ್ಟ್



ಕಳೆದ ಜೂನ್ ತಿಂಗಳಲ್ಲಿ ಇಂಟರ್‌ನ್ಯಾಷನಲ್ ಇಂಡಿಯನ್ ಫಿಲಂ ಅಕಾಡೆಮಿ (ಐಐಎಫ್‌ಎ) ಶ್ರೀಲಂಕಾದ ರಾಜಧಾನಿ ಕೊಲಂಬೋದಲ್ಲಿ ಬ್ರಹ್ಮಾಂಡವಾದ ಸಿನಿಮಾ ಪ್ರಶಸ್ತಿ ವಿತರಣಾ ಸಮಾರಂಭವೊಂದನ್ನು ಆಯೋಜಿಸಿತ್ತು. ತಮಿಳರನ್ನು ನಿರ್ದಾಕ್ಷಿಣ್ಯವಾಗಿ ಕೊಂದು, ನೆತ್ತರ ಕೋಡಿಯನ್ನು ಹರಿಸಿದ ಶ್ರೀಲಂಕಾದ ಅಧ್ಯಕ್ಷ ರಾಜಪಕ್ಷೆ ತಮ್ಮ ದೇಶಕ್ಕೆ ಭಾರತೀಯ ಚಿತ್ರರಂಗದ ಅತಿರಥ ಮಹಾರಥರನ್ನು ಕರೆಸಿ, ತಾನು ಚೆಲ್ಲಿದ್ದ ರಕ್ತದ ಮೇಲೆ ಚಿತ್ರಲೋಕದ ಬಣ್ಣವನ್ನು ಸುರಿದು ತನ್ನ ಅಪರಾಧವನ್ನು ಮುಚ್ಚಿಹಾಕಲು ಯತ್ನಿಸಿದ್ದನು.

ಐಐಎಫ್‌ಎ ಅವಾರ್ಡ್ ಪಂಕ್ಷನ್‌ಗೆ ಬಿಗ್ ಬಿ ಅಮಿತಾಭ್ ಬಚ್ಚನ್ ಬ್ರಾಂಡ್ ಅಂಬಾಸಡರ್ ಆಗಲು ಒಪ್ಪಿದ್ದರು. ಅಮಿತಾಭ್ ರಾಯಭಾರಿಯಾದ ಮೇಲೆ ಭಾರತದ ಎಲ್ಲ ಸೂಪರ್ ಸ್ಟಾರ್‌ಗಳೂ ಅಲ್ಲಿ ನೆರೆಯುತ್ತಾರೆ ಎಂಬುದು ಶ್ರೀಲಂಕಾ ಸರ್ಕಾರದ ಅಂದಾಜಾಗಿತ್ತು.



ಆದರೆ ಆ ಸಮಾರಂಭ ಮತ್ತು ಅದಕ್ಕೆ ಅತಿಥಿಗಳಾಗಿ ಹೊರಟು ನಿಂತವರ ವಿರುದ್ಧ ಭಾರತ ಸೇರಿದಂತೆ ಪ್ರಪಂಚದ ಅಷ್ಟೂ ತಮಿಳರು ಒಮ್ಮೆಲೇ ಮುರಕೊಂಡು ಬಿದ್ದರು. ಮುಂಬೈನಲ್ಲಿರುವ ಅಮಿತಾಭ್‌ರ 'ಪ್ರತೀಕ್ಷಾ' ಬಂಗಲೆಯೆದುರು ತಮಿಳು ಸಂಘಟನೆಗಳು ಪ್ರತಿಭಟನೆಗೆ ಕುಳಿತವು. ಒಂದು ವೇಳೆ ಅಮಿತಾಭ್ ಶ್ರೀಲಂಕೆಗೆ ಹೋದರೆ ಅವರ ಸೊಸೆ ಐಶ್ವರ್ಯಾ ರೈ ತಮಿಳುನಾಡಿಗೆ ಕಾಲಿರಿಸದಂತೆ ಮಾಡುತ್ತೇವೆ ಎಂದು 'ನಾಮ್ ಮಕ್ಕಳ್ ಇಯಕ್ಕಂ' ಗುಡುಗಿತ್ತು. ಇದರೊಟ್ಟಿಗೆ 'ದಕ್ಷಿಣ ಭಾರದ ಸಿನಿಮಾ ಪತ್ರಕರ್ತರ ಸಭೆ' ಕೂಡಾ ಕೊಲಂಬೋ ಕಾರ್ಯಕ್ರಮವನ್ನು ವಿರೋಧಿಸಿತ್ತು.


ತಮಿಳು ಸಂಘಟನೆಗಳ ವ್ಯಾಪಕ ಪ್ರತಿರೋಧ ಕಂಡು ಬೆಚ್ಚಿಬಿದ್ದ ಅಮಿತಾಭ್ 'ತಮಿಳರ ಮೇಲಿನ ಅಭಿಮಾನಕ್ಕಾಗಿ ನಾನು ಈ ಕಾರ್ಯಕ್ರಮಕ್ಕೆ ರಾಯಭಾರಿಯಾಗಿ ತೆರಳುವುದಿಲ್ಲ' ಎಂದು ಘೋಷಿಸಿಬಿಟ್ಟರು. ಇದಾದ ನಂತರ ಕೊಲಂಬೋದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಲ್ಮಾನ್ ಖಾನ್, ವಿವೇಕ್ ಒಬೆರಾಯ್ ಮತ್ತು ತಮಿಳು ನಟ ಅಸಿನ್ ಮಾತ್ರ ಪಾಲ್ಗೊಂಡಿದ್ದರು. ಅಂದಹಾಗೆ, ಎಲ್ಲ ವಿರೋಧಗಳ ನಡುವೆ ಅಸಿನ್ ಶ್ರೀಲಂಕಾಗೆ ಹೋಗಿದ್ದರ ಫಲವಾಗಿ ಈಗ ಆಕೆ ತಮಿಳು ಚಿತ್ರರಂಗದವರ ನಿರ್ಬಂಧಕ್ಕೆ ಗುರಿಯಾಗಿದ್ದಾಳೆ.

ಈ ಹಿಂದೆ ನಟ ವಿಜಯ್ ನಟಿಸಿದ್ದ ಸಿನಿಮಾಗಳು ಸಿಂಗಾಪೂರ್, ಮಲೇಶಿಯಾಗಳಲ್ಲೂ ಜಯಭೇರಿ ಬಾರಿಸುತ್ತಿದ್ದವು. ಆದರೆ ಈ ಬಾರಿ ಶ್ರೀಲಂಕಾ ರಾಷ್ಟ್ರಗೀತೆಗೆ ಸಂಗೀತ ಸಂಯೋಜಿಸಿರುವ ವಿಜಯ್ ಆಂಟನಿ ಎಂಬಾತನಿಂದಲೇ ನಟ ವಿಜಯ್ ತನ್ನ ಸಿನಿಮಾ 'ವೇಟ್ಟೆಕಾರನ್'ನ ಮ್ಯೂಸಿಕ್ ಮಾಡಿಸಿದ್ದರಿಂದ ಆತನ ಬಗ್ಗೆ ಕುಪಿತಗೊಂಡ ತಮಿಳರು ಆ ಸಿನಿಮಾವನ್ನು ನೋಡದೇ ಪ್ರತಿಭಟಿಸಿದ್ದರು.

ಅದೇ ಗತಿ 'ಯಂದಿರನ್'ಗೂ ಆದರೆ?

ಇವೆಲ್ಲಾ ಶ್ರೀಲಂಕಾದಲ್ಲಿ ನಡೆದ ಸಿವಿಲ್ ವಾರ್‌ನ ಸೈಡ್ ಎಫೆಕ್ಟ್‌ಗಳು....

...ಯಂದಿರನ್ ಕತೆ ಏನಾಗುತ್ತೆ?



...ರಜನಿಯ 'ಯಂದಿರನ್'ಗೆ ಇನ್ನೂರು ಕೋಟಿ ಖರ್ಚಾಗಿರಬಹುದು, ...ತವಾಗಿ ಸಿಕ್ಕಾಪಟ್ಟೆ ಅದ್ದೂರಿಯಾಗಿಯೂ ಮೂಡಿಬಂದಿರಬಹುದು. ಆದರೆ ...ಷ್ಟಾ ಅದ್ದೂರಿತನ, ತಾಂತ್ರಿಕ ಶ್ರೀಮಂತಿಕೆಯನ್ನು ತಮಿಳು ಚಿತ್ರಪ್ರೇಮಿಗಳು ...ತ್ತಾರಾ? ಎನ್ನುವುದೇ ಪ್ರಶ್ನೆ.

...ಂಕರ್ ನಿರ್ದೇಶನದ ಸಿನಿಮಾವೆಂದರೆ ಅದು ಭ್ರಷ್ಟಾಚಾರದ ವಿರುದ್ಧವೇ ...ಹೊಡೆಯುತ್ತವೆ. 'ಯಂದಿರನ್' ಕೂಡಾ ಅದೇ ಸಬ್ಜೆಕ್ಟ್ ಹೊಂದಿದೆಯಂತೆ. ...ಚಾರವನ್ನು ನಿರ್ಮೂಲನೆ ಮಾಡಲು ವಸೀಗರನ್ ಎಂಬ ವಿಜ್ಞಾನಿ ತನ್ನನ್ನು ...ುವ ಒಂದು ರೋಬೋಟ್‌ಅನ್ನು ತಯಾರಿಸುತ್ತಾನೆ. ಆದರೆ ಇದು ದುಷ್ಕರ ...ಕ್ಕು ದುರ್ಬಳಕೆಯಾಗಲು ಆರಂಭವಾಗುತ್ತದೆ. ಅದನ್ನು ಮತ್ತೆ ಆ ವಿಜ್ಞಾನಿ ...ಶಕ್ಕೆ ತೆಗೆದುಕೊಳ್ಳುವಲ್ಲಿ ಏನೇನು ಅವಘಡಗಳು ಸಂಭವಿಸುತ್ತವೆ ಎಂಬುದೇ ...ದಿರನ್' ಚಿತ್ರದ ಕತೆಯಂತೆ.

...ದರೆ ಏಳು ವರ್ಷಗಳ ಹಿಂದೆ ಕನ್ನಡದಲ್ಲಿ ನಿರ್ಮಾಣವಾಗಿದ್ದ 'ಹಾಲಿವುಡ್' ...ಕತೆಯೂ ಹೀಗೆ ಇತ್ತು. ಅದರಲ್ಲೂ ವಿಜ್ಞಾನಿ (ಅನಂತ್ ನಾಗ್) ಉಪೇಂದ್ರನನ್ನು ...ುವ ರೋಬೋಟ್ ತಯಾರಿಸಿ, ಕಡೆಗದು ಅವನಿಗೇ ಕಂಟಕವಾಗುತ್ತದೆ. ...ತ್ರದಲ್ಲಿ ಉಪೇಂದ್ರ ರೋಬೋಟ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದರು. 'ಯಂದಿರನ್' ...ಲ್ಲಿ ರಜನಿ ದ್ವಿಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ.

...ಗೆ ನೋಡಿದರೆ, ಈ ಚಿತ್ರ ಹತ್ತು ವರ್ಷಗಳ ಹಿಂದೆಯೇ ನಿರ್ಮಾಣವಾಗಬೇಕಿತ್ತು ... ಕಾಗನ್‌ರನ್ನು ಮನಸ್ಸಿನಲ್ಲಿಟ್ಟುಕೊಂಡು ಶಂಕರ್ ಈ ಚಿತ್ರದ ಕತೆ ಬರೆದಿದ್ದರು. ...ನಾನಾ ಕಾರಣಗಳಿಂದಾಗಿ ಕಮಲ್ ಈ ಚಿತ್ರದಲ್ಲಿ ನಟಿಸಲು ಸಾಧ್ಯವಾಗಲೇ ...ನಂತರ ಇದೇ ಕತೆಯನ್ನು ಶಾರುಖ್ ಖಾನ್‌ಗೆ ಹೇಳಲಾಗಿತ್ತು, ಕತೆ ಕೇಳಿದ ಶಾರುಖ್ 'ಕಥೆ ಬಗಿಯಾಗಿಲ್ಲ' ಎಂದು ಹೇಳಿ ಸುಮ್ಮನಾಗಿಬಿಟ್ಟಿದ್ದರು. ಅಮೀರ್ ಖಾ ಕೂಡ ಒಲ್ಲೆ ಎಂದಿದ್ದರು. ಕಡೆಗೆ ಅದು ರಜನಿಯ ಬಗಲಿಗೆ ಬಿದ್ದಿತು.

ರಜನಿಯ ಇಮೇಜಿಗೆ ಈ ಕಥೆ ಹೊಂದುತ್ತದಾ ಎಂಬುದೇ ಈಗ ದೊಡ್ಡ ಡೌಟು. ರಜನಿ ಅಭಿಮಾನಿಗಳು ಆಪೇಕ್ಷಿಸುವುದು ಶಿಳ್ಳೆಹೊಡೆಯಲು ಬೇಕಾದ ಲಟಾಪಟಾ ಡೈಲಾಗುಗಳು, ಸರಕ್ ಪರಕ್ ಎನ್ನುವ ರಜನಿ ನಡಿಗೆ. ಆದರೆ ಈ ಬಾರಿ ರೋಬೋಟ್ ಸುತ್ತ ಕಥೆ ರಚಿಸಿ, ಹಾಲಿವುಡ್ ಶೈಲಿಯಲ್ಲಿ ನಿರ್ಮಾಣವಾಗಿರುವ ಈ ಚಿತ್ರವನ್ನು ರಜನಿ ಆರಾಧಕರು ಮೆಚ್ಚುವುದು ಅಷ್ಟು ಸುಲಭವಲ್ಲ.

ಮಕಾಡೆ ಮಲಗುತ್ತಿರುವ ಹೈ ಬಜೆಟ್ ಚಿತ್ರಗಳು

ತಮಿಳುನಾಡಿನಲ್ಲಿ ಈಗ ಹೊಸದೊಂದು ಟ್ರೆಂಡ್ ಆರಂಭವಾಗಿದೆ. ತಾಂತ್ರಿಕ ಶ್ರೀಮಂತಿಕೆಯ ಉತ್ತುಂಗವನ್ನು ಮುಟ್ಟಿರುವ ತಮಿಳಿನಲ್ಲಿ ಈಗ ಬ್ರಿಜ್ ಲೆವೆಲ್ ಮತ್ತು ಆಫ್ ಬೀಟ್ ಸಿನಿಮಾಗಳದ್ದೇ ಕಾರುಬಾರು. ಇತ್ತೀಚೆಗೆ ಕೋಟಿಗಟ್ಟಲೆ ವೆಚ್ಚದಲ್ಲಿ ನಿರ್ಮಾಣವಾದ 'ಶಿವಾಜಿ', 'ರಾವಣ' ತರಹದ ಚಿತ್ರಗಳನ್ನು ಸಾರಾಸಗಟಾಗಿ ತಿರಸ್ಕರಿಸಿದ ತಮಿಳು ಚಿತ್ರದ ಪ್ರೇಕ್ಷಕ ಅವುಗಳ ಬದಲಾಗಿ 'ನಾಡೋಡಿಗಳ್', 'ಸುಬ್ರಮಣ್ಯಪುರಂ', 'ವೆನಿಲಾ', 'ಕಬಡಿ', 'ಕುಳುಂ', 'ಅಂಗಾಡಿ ತೇರು' ತರಹದ ಸಣ್ಣ ಬಜೆಟ್ ಚಿತ್ರಗಳನ್ನು ಸೂಪರ್ ಹಿಟ್ ಮಾಡಿದ್ದಾನೆ. ಗಟ್ಟಿಯಾದ ಕಥೆ ಮತ್ತು ಹರಿತವಾದ ಸಂಭಾಷಣೆ ಇದ್ದರೆ ಸಾಕು ಎಂಬ ಮನೋಭಾವ ತಮಿಳು ಚಿತ್ರದ ಪ್ರೇಕ್ಷಕನ ಅಪೇಕ್ಷೆ ಎಂಬಂತಾಗಿದೆ.

ಹೀಗಿರುವಾಗ ಕೋಟಿಗಳ ಲೆಕ್ಕದಲ್ಲಿ ನಿರ್ಮಾಣವಾದ ಹಾಲಿವುಡ್ ಶೈಲಿಯ 'ಯಂದಿರನ್'ನ ಭವಿಷ್ಯ ಏನಾಗಲಿದೆಯೋ?



ನಿತ್ಯಾನಂದನ ರಿವೇಂಜ್...

"'ಯಂದಿರನ್' ಚಿತ್ರವನ್ನು ನೋಡಬೇಡಿ" - ಇದು ಕಾಮಿ ಸ್ವಾಮಿ ನಿತ್ಯಾನಂದ ತನ್ನ ಭಕ್ತವೃಂದಕ್ಕೆ ನೀಡಿರುವ ಉಪದೇಶ.

ನಟಿ ರಂಜಿತಾಳೊಂದಿಗಿನ ತನ್ನ ರಾಸಲೀಲೆಯನ್ನು, ಖಾವಿ ತೊಟ್ಟು ಕಾಲೆತ್ತಿದ್ದ ದೃಶ್ಯಗಳನ್ನು ಯಥಾವತ್ತಾಗಿ ಪ್ರಸಾರ ಮಾಡಿ, ತನ್ನ ಮಾನ ಮರ್ಯಾದೆಯನ್ನು ಹರಾಜು ಮಾಡಿದ ಸನ್ ಟಿವಿ ವಿರುದ್ಧ ಈ ಕಾಮಿ ಸ್ವಾಮಿ ತಿರುಗಿ ಬಿದ್ದಿದ್ದಾನೆ. ಆದ್ದರಿಂದಲೇ ಸನ್ ಟಿವಿಯ ಮಾಲೀಕರಾದ ಸನ್ ಪಿಕ್ಚರ್ಸ್ ನಿರ್ಮಿಸಿರುವ 'ಯಂದಿರನ್' ವಿರುದ್ಧ ಶ್ರೀಮಾನ್ ನಿತ್ಯಾನಂದ ಮಹಾಸ್ವಾಮಿಗಳು ಪ್ರವಚನ ಮಾಡಲು ಶುರು ಮಾಡಿದ್ದಾರೆ.

ಮೇಲ್ನೋಟಕ್ಕೆ ಇದು ತಮಾಷೆಯಂತೆ ಕಂಡರೂ ಅದನ್ನು ಅಷ್ಟು ಹಗುರವಾಗಿ ಪರಿಗಣಿಸಲು ಸಾಧ್ಯವಿಲ್ಲ. ಜಗತ್ತಿನ ಬೇರೆ ಬೇರೆ ಕಡೆಗಳಲ್ಲಿ ನಿತ್ಯಾನಂದನಿಗೆ 45 ಲಕ್ಷಕ್ಕೂ ಅಧಿಕ ಹಿಂಬಾಲಕರು, ಅನುಯಾಯಿಗಳು, ಭಂಗಿ ಭಕ್ತರೂ ಇದ್ದಾರೆ. ಹೀಗಾಗಿ ತಮ್ಮ ಪರಮ ಗುರುವಿನ ಮಾತು ಉಳಿಸಿಕೊಳ್ಳುವ ಕಾರಣಕ್ಕಾದರೂ ಆ ಭಕ್ತ ಹೃದಯಗಳು 'ಯಂದಿರನ್'ಗೆ ಧಿಕ್ಕಾರ ಹೇಳಬಹುದು...

Regd.No.KA/RNP/BGS/2036/2008-10 Posted at : GPO, Bangalore-01. R B P LANKESH, Kannada Weekly Price Rs. 12/- 8-09-2010

ಈಡೇರದ ರಾಜ್ ಕೊನೇ ಬಯಕೆ

ಡಾ. ರಾಜ್‌ಕುಮಾರ್ ಅವರು ನಿಧನ ಹೊಂದಿ ಮೂರು ವರ್ಷಗಳ ನಂತರ ಅವರ ಜೀವನದ ಕೊನೆಯ ಆಸೆ ಈಡೇರದ ವಿಷಯ ಇದೀಗ ಬಹಿರಂಗವಾಗಿದೆ.

ಸಾವಿನ ನಂತರ ತಮ್ಮ ದೇಹವನ್ನು ಸುಡಬೇಕೆಂದು ಅವರ ಬಯಕೆ ಈಡೇರಲಿಲ್ಲ ಆದರೆ ಅವರ ಇಚ್ಛೆಯಂತೆ ನೇತ್ರದಾನ ಮಾಡಲಾಗಿತ್ತು.

ಅಂದು ಡಾ.ರಾಜ್ ನಿಧನ ಹೊಂದಿದಾಗ ಅವರ ಹಿರಿಯ ಪುತ್ರ ಶಿವರಾಜ್ ಕುಮಾರ್ ಮತ್ತು ಕಿರಿಯ ಪುತ್ರ ಪುನೀತ್ ರಾಜ್‌ಕುಮಾರ್ ದೂರದ ಊರಿನಲ್ಲಿದ್ದರು. ಆ ಸಂದರ್ಭದಲ್ಲಿ ಇಡೀ ಪರಿಸ್ಥಿತಿಯನ್ನು ಏಕಾಂಗಿಯಾಗಿ ನಿಭಾಯಿಸಿದ್ದೇ ರಾಘವೇಂದ್ರ ರಾಜ್‌ಕುಮಾರ್. 'ಡಾ.ರಾಜ್ ನಿಧನ ಹೊಂದಿದ್ದಾರೆ' ಎಂಬ ಸುದ್ದಿ ಕಾಳ್ಗಿಚ್ಚಿನಂತೆ ರಾಜ್ಯಾದ್ಯಂತ ಹರಡುತ್ತಾ ಅಭಿಮಾನಿಗಳು ರೊಚ್ಚಿಗೆದ್ದು ಬೀದಿಗಿಳಿದು ಬೆಂಗಳೂರಿನ ಜನಜೀವನ ಅಸ್ತವ್ಯಸ್ತವಾಗುತ್ತಿದ್ದರೂ ಸಮಯಪ್ರಜ್ಞೆಯನ್ನು ಕಾಪಾಡಿಕೊಂಡ ರಾಘಣ್ಣಾ ಮಾಡಿದ ಮೊದಲ ಕೆಲಸವೆಂದರೆ ನಾರಾಯಣ ನೇತ್ರಾಲಯದ ವೈದ್ಯರನ್ನು ಕರೆಸಿ ಡಾ.ರಾಜ್ ಅವರ ಕಣ್ಣನ್ನು ತೆಗೆಯಲು ಅವಕಾಶ ಮಾಡಿಕೊಟ್ಟದ್ದು. ತಾನು ನಿಧನ ಹೊಂದಿದ ನಂತರ ತನ್ನ ಕಣ್ಣನ್ನು ದಾನ ಮಾಡಬೇಕು ಎಂಬುದು ರಾಜ್ ಅವರ ಆಸೆಯಾಗಿತ್ತು.

ಆದರೆ ಅವರ ಮತ್ತೊಂದು ಆಸೆಯನ್ನು ರಾಜ್ ಕುಟುಂಬಕ್ಕೆ ಪೂರೈಸಲಾಗಿರಲಿಲ್ಲ. ಹಾಗಂತ ಅದು ಪೂರೈಸಲಾಗದಷ್ಟು ದೊಡ್ಡ ವಿಷಯವೂ ಆಗಿರಲಿಲ್ಲ. ಹೀಗಂತ ಆ ವಿಷಯವನ್ನು ಇದೇ ಮೊದಲ ಬಾರಿಗೆ ಮೊನ್ನೆ ರಾಘವೇಂದ್ರ ರಾಜ್‌ಕುಮಾರ್ ಬಹಿರಂಗಪಡಿಸಿದರು.


"ತಾನು ನಿಧನ ಹೊಂದಿದ ನಂತರ ತನ್ನ ದೇಹವನ್ನು ಸುಡಬೇಕು ಎಂದು ಅಪ್ಪಾಜಿ ಬಯಸಿದ್ದರು. ಆ ರೀತಿ ದೇಹ ಸುಡುವ ಮುಖಾಂತರ ಆ ಮಣ್ಣು ಫಲವತ್ತಾಗುತ್ತದೆ. ಆಗ ಆ ಪ್ರದೇಶದಲ್ಲಿ ಬೆಳೆಯುವ ಬೆಳೆ ಚೆನ್ನಾಗಿ ಫಸಲು ನೀಡುತ್ತದೆ.... ಎಂಬುದು ಅಪ್ಪಾಜಿಯ ಸಿದ್ಧಾಂತವೂ ಆಗಿತ್ತು, ಆಸೆಯೂ ಆಗಿತ್ತು. ನಾವು ಸತ್ತ ನಂತರವೂ ಜನರಿಗೆ ಉಪಯೋಗವಾಗಬೇಕು ಎಂಬುದು ಅವರ ಮುಖ್ಯ ಉದ್ದೇಶವಾಗಿತ್ತು. ಅದಕ್ಕೆ ಅವರು 'ನೋಡು ಕಂದಾ, ನಮ್ಮ ತಾಯಿಯ ಮೃತ ದೇಹವನ್ನು ನಾವು ಸುಟ್ಟಿದ್ದು' ಎಂಬ ಉದಾಹರಣೆಯನ್ನು ಮುಂದಿಡುತ್ತಿದ್ದರು" ಎಂದು ರಾಘಣ್ಣ ನೆನಪಿಸಿಕೊಂಡರು.

"ಆದರೆ ನಾವು ಅಂದಿನ ಪರಿಸ್ಥಿತಿಯಲ್ಲಿ ಯಾವುದೇ ಕಾರಣಕ್ಕೂ ಅಪ್ಪಾಜಿಯ ದೇಹವನ್ನು ಸುಡುವ ಪರಿಸ್ಥಿತಿಯಲ್ಲಿರಲಿಲ್ಲ. ಹಾಗೊಂದು ವೇಳೆ ನಾವು ದೇಹವನ್ನು ಸುಟ್ಟಿದ್ದೇ ಆದರೆ ಲಕ್ಷಾಂತರ ಜನರ ಅಭಿಮಾನಿಗಳ ಆಕ್ರೋಶಕ್ಕೆ ಒಳಗಾಗುತ್ತಿದ್ದೆವು. ಅಂದಿನ ಅಭಿಮಾನಿಗಳ ಮನಸ್ಥಿತಿ ಹೇಗಿತ್ತು ಎಂದರೆ ಬಹುಶಃ ಆ ಜನ ನಮ್ಮನ್ನೇ ಸುಟ್ಟು ಹಾಕುತ್ತಿದ್ದರೋ ಏನೋ?" ಎಂದು ರಾಘಣ್ಣ ಅಂದಿನ ಪರಿಸ್ಥಿತಿಯನ್ನು ಅವಲೋಕಿಸಿದರು.



"ಅಪ್ಪಾಜಿಗೆ ಸಮಾಧಿಯ ಮೇಲೆ ನಂಬಿಕೆಯಿರಲಿಲ್ಲ, ಅದಕ್ಕಾಗಿ ಒಂದಿಷ್ಟು ಜಾಗವನ್ನು ವೇಸ್ಟ್ ಮಾಡುವುದನ್ನೂ ಅವರು ಇಷ್ಟಪಡುತ್ತಿರಲಿಲ್ಲ. ಬದುಕಿರುವಾಗಲೇ ಒಂದಿಷ್ಟು ಜಾಗ ಖರೀದಿಸಲು ನಾವು ಅದೆಷ್ಟೋ ಕಷ್ಟಪಡುತ್ತೇವೆ. ಸತ್ತಮೇಲೆ ನೂರಾರು ಎಕರೆ ಪ್ರದೇಶದಲ್ಲಿ ಸಮಾಧಿ ಕಟ್ಟುವ ಅಗತ್ಯವಾದರೂ ಏನಿದೆ? ಅದರ ಬದಲಿಗೆ ಆ ಜಾಗ ಅಗತ್ಯವಿದ್ದವರಿಗೆ ಸಿಕ್ಕಿದರೆ ಒಳ್ಳೆಯದಲ್ಲವೇ? ಎಂದೆಲ್ಲಾ ಅಪ್ಪಾಜಿ ನಮ್ಮ ಮುಂದೆ ವಾದಿಸುತ್ತಿದ್ದರು" ಎಂದರು ರಾಘಣ್ಣಾ.

ರಾಘಣ್ಣ ಹೀಗೆ ನೆನಪಿಗೆ ಶರಣಾಗಲು ಒಂದು ಕಾರಣ ಇತ್ತು. "ಡಾ.ರಾಜ್ ಸಮಾಧಿಯ ಕೆಲಸ ಹೇಗೆ ನಡೆಯುತ್ತಿದೆ? ಇದು ಯಾವಾಗ ಸಂಪೂರ್ಣಗೊಳ್ಳುತ್ತದೆ?" ಎಂದು ಪತ್ರಕರ್ತರು ಪ್ರಶ್ನಿಸಿದ್ದೇ ತಡ ರಾಘಣ್ಣಾ ಕಸಿವಿಸಿಗೊಂಡರು. "ಒಂದು ಸೇತುವೆಯನ್ನೇ ಸರಿಯಾದ ಸಮಯದಲ್ಲಿ ಕಟ್ಟಲಾಗದ ಈ ಸರ್ಕಾರ ಸಮಾಧಿಯನ್ನು ಬೇಗ ಕಟ್ಟಿ ಮುಗಿಸುತ್ತದೆ ಎಂದು ನಾನು ಹೇಗೆ ನಿರೀಕ್ಷಿಸಲಿ? ಮೊದಲು ಈ ಸರ್ಕಾರ ಸೇತುವೆಯನ್ನು ಕಟ್ಟಿ ಜನರಿಗೆ ಸಹಾಯ ಮಾಡಲಿ. ಅನಂತರ ಅವರಿಗೆ ಪುರುಸೊತ್ತಿದ್ದಾಗ ಸಮಾಧಿಯ ಕೆಲಸ ಮಾಡಲಿ" ಎಂದು ವೇದಾಂತಿಯಂತೆ, ಅಷ್ಟೇ ಹತಾಶರಾಗಿಯೂ ರಾಘಣ್ಣ ನುಡಿದರು.



ಆಗಲೇ ರಾಘಣ್ಣ "ಈ ಸಮಾಧಿಯ ಬಗ್ಗೆ ಅಪ್ಪಾಜಿಗೆ ನಂಬಿಕೆಯಿರಲಿಲ್ಲ" ಎಂಬ ಮಾತನ್ನು ಹೊರಗೆಡಹಿದ್ದು. "ಅವರ ಮಾತು ನಮಗೆ ಸರಿ ಅನ್ನಿಸಿದ್ದರೂ ಅವರ ಆ ಕೊನೆಯ ಆಸೆಯನ್ನು ನಾವು ಈಡೇರಿಸಲಾಗದಂತಹ ಪರಿಸ್ಥಿತಿಯಲ್ಲಿದ್ದೆವು" ಎಂದರು.

ಅದೇ ಸಂದರ್ಭದಲ್ಲಿ ರಾಘಣ್ಣಾ ಹೇಳಿದ ಮತ್ತೊಂದು ಮಾತನ್ನು ಇಲ್ಲಿ ನೆನೆಪಿಸಿಕೊಳ್ಳಬೇಕು. "ಅಪ್ಪಾಜಿಗೆ ನೇತ್ರದಾನದ ತರಹ ದೇಹದಾನ ಕೂಡಾ ಮಾಡುತ್ತಾರೆಂದು ಗೊತ್ತಿರಲಿಲ್ಲ. ಅದೇನಾದರೂ ಗೊತ್ತಿದ್ದರೆ ಅಪ್ಪಾಜಿ 'ಈ ದೇಹವನ್ನು ಹೂಳುವುದೂ ಬೇಡ, ಸುಡುವುದೂ ಬೇಡ, ಯಾವುದಾದರೂ ಆಸ್ಪತ್ರೆಗೆ ದಾನ ಮಾಡಿ, ವೈದ್ಯಕೀಯ ವಿದ್ಯಾರ್ಥಿಗಳಿಗೆ ಸಹಾಯವಾಗಲಿ' ಎಂದು ಖಂಡಿತವಾಗಿಯೂ ಹೇಳುತ್ತಿದ್ದರು" ಎಂದು ಹೇಳಿದರು.

ಆದಕ್ಕೆ ಪ್ರತಿಕ್ರಿಯೆಯಾಗಿ "ದೇಹದಾನದ ವಿಷಯ ಅಣ್ಣಾವ್ರಿಗೆ ಗೊತ್ತಿಲ್ಲದೇ ಇದ್ದುದು ಒಳ್ಳೆಯದೇ ಆಯಿತು" ಎಂದು ಪತ್ರಕರ್ತರೊಬ್ಬರು ರಾಘಣ್ಣನಿಗೆ ಹೇಳಿದಾಗ ಅವರು ಆಶ್ಚರ್ಯಪಟ್ಟು, "ಯಾಕೆ?" ಎಂದು ಪ್ರಶ್ನಿಸಿದರು. "ಅಣ್ಣಾವ್ರ ದೇಹ ಯಾವ ಆಸ್ಪತ್ರೆಯಲ್ಲಿ ಇರುತ್ತಿತ್ತೋ ಅಲ್ಲಿ ನಿತ್ಯವೂ ಅಭಿಮಾನಿಗಳು ಜಮಾಯಿಸುತ್ತಿರಲಿಲ್ಲವೇ? ಅವರ ದೇಹವನ್ನು dissect ಮಾಡಲು ವೈದ್ಯರುಗಳಿಗೆ ಅಭಿಮಾನಿಗಳು ಎಲ್ಲಿ ಬಿಡುತ್ತಿದ್ದರು?" ಎಂದು ಹೇಳಿದಾಗ ರಾಘಣ್ಣ ಅಚ್ಚರಿ ವ್ಯಕ್ತಪಡಿಸುವ ಜೊತೆಗೆ ನಕ್ಕುಬಿಟ್ಟರು.

ಬಹುಶಃ ಈ ಕಾರಣಕ್ಕೋ ಏನೋ ಇತ್ತೀಚೆಗೆ ರಾಜ್ ಅವರ ಹಿರಿಯ ಪುತ್ರ ಶಿವರಾಜ್‌ಕುಮಾರ್ ಅವರು ತನ್ನ ನಿಧನಾನಂತರ ದೇಹದಾನ ಮಾಡುವ ಇಚ್ಛೆಯನ್ನು ವ್ಯಕ್ತಪಡಿಸಿದ್ದಾರೆ.

ಡಾ.ರಾಜ್ ನಿಧನ ಹೊಂದಿ ಮೂರು ವರ್ಷಗಳೇ ಸಂದಿವೆ. ಈ ಅವಧಿಯಲ್ಲಿ ಎರಡು ಸರ್ಕಾರಗಳು ಬದಲಾಗಿ ಹೋದವು. ಆದರೂ ಕನ್ನಡಿಗರ ಸಾಂಸ್ಕೃತಿಕ ಪ್ರಜ್ಞೆಯಂತಿದ್ದ ಅಣ್ಣಾವ್ರ ಸಮಾಧಿಯ ಕೆಲಸ ನಿಧಾನವಾಗಿ ಸಾಗುತ್ತಿರುವ ಬಗ್ಗೆ ಯಾರೂ ಅಷ್ಟೊಂದು ಆಸಕ್ತಿ ತೋರಿಸುತ್ತಿಲ್ಲದಿರುವುದು ಖೇದದ ವಿಷಯ.

ಆದರೆ ಬೆಂಗಳೂರಿನಲ್ಲಿ ಇದ್ದಾಗಲೆಲ್ಲಾ ರಾಜ್ ಪುತ್ರರು ಬೆಳಗ್ಗಿನ ಜಾವ ಕಂಠೀರವದಲ್ಲಿರುವ ರಾಜ್ ಸಮಾಧಿಗೆ ಹೋಗಿ ನಮಸ್ಕರಿಸುವುದನ್ನು ಮಾತ್ರ ತಪ್ಪಿಸುವುದೇ ಇಲ್ಲ. ಅವರ ದಿನಚರಿ ಆರಂಭವಾಗುವುದೇ ಅಲ್ಲಿಂದ. ಹಾಗೆಯೇ ನಿತ್ಯವೂ ನೂರಾರು ಅಭಿಮಾನಿಗಳು ಅಲ್ಲಿ ಜಮಾಯಿಸುತ್ತಲೇ ಇರುತ್ತಾರೆ.

ಅದೇನೇ ಇರಲಿ, ಡಾ.ರಾಜ್ ಅವರ ಸಮಾಧಿಯ ಕೆಲಸ ಅರ್ಧ ಈಗಾಗಲೇ ಸಂಪೂರ್ಣಗೊಂಡಿದೆ. ಈ ಸಮಾಧಿ ನಿರ್ಮಾಣ ಕಾರ್ಯ ಮುಗಿದ ನಂತರ ಆ ಸ್ಥಳ ಖಂಡಿತವಾಗಿಯೂ ಒಂದು ಪ್ರೇಕ್ಷಣೀಯ ಕೇಂದ್ರವಾಗಿ ಮಾರ್ಪಾಡಾಗುವುದರಲ್ಲಿ ಸಂಶಯವೇ ಇಲ್ಲ. ಯಾಕೆಂದರೆ ಡಾ.ರಾಜ್ ನಟಿಸಿದ ಚಿತ್ರಗಳ ಸಂಪೂರ್ಣ ವಿವರ, ಅವರ ಜೀವನ ಶೈಲಿ, ಅವರು ನಡೆದುಕೊಂಡು ಬಂದ ಹಾದಿ, ಅವರು ಅನುಸರಿಸುತ್ತಿದ್ದ ಯೋಗಾಸನದ ಕ್ರಮ, ಅಣ್ಣಾವ್ರ ಹಾಡುಗಳು, ರಂಗಭೂಮಿಯ ಅನುಭವ... ಇವೆಲ್ಲವನ್ನೂ ಅಲ್ಲಿ ಪ್ರದರ್ಶಿಸಲಾಗುತ್ತದೆ.

ಹೀಗಾಗಿ ಡಾ.ರಾಜ್ ಸಮಾಧಿ ಸಂಪೂರ್ಣಗೊಂಡ ನಂತರ ಡಾ.ರಾಜ್ ಅವರನ್ನು ಅಲ್ಲಿ ಇನ್ನೂ ಚೆನ್ನಾಗಿ ಅರಿತುಕೊಳ್ಳಲು ಅವಕಾಶವಿರುತ್ತದೆ. ಅಲ್ಲಿಗೆ ರಾಜ್ ಚಿರಾಯುವಾಗುತ್ತಾರೆ.

• ಶೆಣೈ



ಯೋಗಿ, ಸೂರಿ ಒಟ್ಟಿಗೇ ಕಣಕ್ಕೆ...!

ನಿರ್ದೇಶಕ ಯೋಗರಾಜ್ ಭಟ್ ಮತ್ತು ಅವರ ಶಿಷ್ಯ ನಿರ್ದೇಶಕ ಸೂರಿ ನಡುವಿನ ಜುಗಲ್‌ಬಂದಿ ಮುಂದುವರೆದಿದೆ.

ಭಟ್ಟರ 'ಮುಂಗಾರು ಮಳೆ' ಮತ್ತು ಸೂರಿಯ 'ದುನಿಯಾ' ಬಹುತೇಕ ಒಟ್ಟೊಟ್ಟಿಗೆ ಬಿಡುಗಡೆಯಾಗಿದ್ದವು. ಇಬ್ಬರೂ ಬಾಕ್ಸಾಫೀಸ್‌ನಲ್ಲಿ ಭರ್ಜರಿ ಯಶಸ್ಸು ಪಡೆದರು. ಆದಾದ ನಂತರ ಭಟ್ಟರು 'ಗಾಳಿಪಟ' ಹಾರಿಸಿದರೆ, ಸೂರಿ 'ಇಂತಿ ನಿನ್ನ ಪ್ರೀತಿಯ' ಸಿನಿಮಾವನ್ನು ಒಂದೇ ಸಮಯದಲ್ಲಿ ಪ್ರೇಕ್ಷಕರಿಗೆ ನೀಡಿದರು. ಆದರೆ ಆಗ ಭಟ್ಟರು ಮಾತ್ರ ಗೆದ್ದರು, ಸೂರಿ ಸಂಪೂರ್ಣವಾಗಿ ಮುಗ್ಗರಿಸಿದರು. ಆ ನಂತರ ಬಂದದ್ದು 'ಮನಸಾರೆ' ಮತ್ತು 'ಜಂಗ್ಲಿ'. ಆಗ ಯೋಗರಾಜ್ ಭಟ್ ಮತ್ತು ಸೂರಿ ಇಬ್ಬರೂ ಗೆದ್ದರು. ಎರಡೂ ಚಿತ್ರಗಳು ಸಖತ್ತಾಗಿ ಹಣ ಗಳಿಸಿದವು. ಇದೆಲ್ಲ ಇತಿಹಾಸ, ಬಿಡಿ. ಈಗ ಮತ್ತೆ ಭಟ್ಟರ 'ಪಂಚರಂಗಿ' ಮತ್ತು ಸೂರಿಯ 'ಜಾಕಿ' ಬಿಡುಗಡೆಗೆ ಬಹುತೇಕ ಸಿದ್ಧವಾಗಿವೆ. ಇವರಿಬ್ಬರ ಈ ಎರಡು ಚಿತ್ರಗಳೂ ಎಂದಿನಂತೆ ಒಂದೆರಡು ವಾರಗಳ ಅಂತರದಲ್ಲಿ ತೆರೆಕಾಣಲು ಸಜ್ಜಾಗಿವೆ. 'ಪಂಚರಂಗಿ' ಹಾಡುಗಳಂತೆ 'ಜಾಕಿ' ಹಾಡುಗಳೂ ಮಾರುಕಟ್ಟೆಯಲ್ಲಿ ಅಲೆಯೆಬ್ಬಿಸಿವೆ. ಇದೆಲ್ಲವನ್ನು ಕಂಡು ಪ್ರೇಕ್ಷಕರ ಕುತೂಹಲ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ.

ಅಷ್ಟೊಂದು ದೊಡ್ಡ ತಾರಾಗಣದ ಬೆನ್ನು ಹತ್ತದ ಭಟ್ಟರು ತಮ್ಮ ನಾಮಬಲದಲ್ಲೇ ಅಖಾಡಕ್ಕಿಳಿದಿದ್ದಾರೆ. ಆದರೆ ಸೂರಿಗೆ ಈ ಬಾರಿ ವಜ್ರೇಶ್ವರಿ ಕಂಬೈನ್ಸ್‌ನ ಪ್ರಭಾವಳಿ ದೊರೆತಿದೆ. ಜೊತೆಗೆ ಪವರ್‌ಸ್ಟಾರ್ ಪುನೀತ್ ರಾಜ್‌ಕುಮಾರ್ ನಾಯಕನಾಗಿರುವುದರಿಂದ 'ಜಾಕಿ' ಮೇಲೆ ನಿರೀಕ್ಷೆ ದುಪ್ಪಟ್ಟಾಗಿದೆ.

ಈ ಗುರು-ಶಿಷ್ಯರ ಜುಗಲ್‌ಬಂದಿ ನಿಜಕ್ಕೂ ಕುತೂಹಲಕಾರಿಯಾಗಿದೆ. ಗುರು-ಶಿಷ್ಯರಿಬ್ಬರಲ್ಲಿ ಯಾರು ಗೆಲ್ಲುತ್ತಾರೆ ಎಂಬುದು ಮುಖ್ಯವಲ್ಲ, ಗೆಲುವಿನ ಅಂತರ-ಅರ್ಥಾತ್ ಬಾಕ್ಸಾಫೀಸ್ ಗಳಿಕೆ-ಇಲ್ಲಿ ಮುಖ್ಯವಾಗುತ್ತದೆ. ನೋಡೋಣ ಯಾರ ಗಳಿಕೆ ಎಷ್ಟೆಂದು?

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44